Bennett & Coleman
THE TIMES OF INDIA
ಭಾನುವಾರ,24 ಮೇ 2026 | ಪುಟಗಳು: 16 | ಬೆಲೆ: ₹ 5.00 (ವಿಕ ಮನಿ ಜತೆ ₹10.00)
www.vijaykarnataka.com C
ಸಂಪುಟ: 27 | ಸಂಚಿಕೆ: 143

VK

ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ವಿಜಯ ಕರ್ನಾಟಕ

ಮೋದಿ ವಿರುದ್ಧ ಕೀಳು ನುಡಿ: ಯುಪಿ ಕಾಂಗ್ರೆಸ್ ಮುಖ್ಯಸ್ಥ ಅಜಯ್ ರಾಯ್ ವಿರುದ್ಧ ಎಫ್‌ಐಆರ್

ಶಾಲೆ ಅರಳುವ ಸಮಯ
ಲವಲVK ನೋಡಿ

ರುಕ್ಮಿಣಿ ವಸಂತ್ ಡೀಪ್ ಫೇಕ್ ವಿಡಿಯೊ ವೈರಲ್, ನಟಿಯಿಂದ ಕಾನೂನು ಕ್ರಮದ ಎಚ್ಚರಿಕೆ

ಬಿಜೆಪಿ ಕರ್ನಾಟಕ
ಅತ್ಯಂತ ಕಿರಿಯ ವಯಸ್ಸಿಗೆ ಪಕ್ಷದ ಸಾರಥ್ಯ ವಹಿಸಿ,
ಅದ್ಭುತ ಸಂಘಟನಾ ಶಕ್ತಿಯಿಂದ ಪಕ್ಷವನ್ನು ಯಶಸ್ಸಿನ
ಉತ್ತುಂಗಕ್ಕೆ ಕೊಂಡೊಯ್ಯುತ್ತಿರುವ, ಪಶ್ಚಿಮ ಬಂಗಾಳ, ಅಸ್ಸಾಂ,
ಪುದುಚೇರಿ ರಾಜ್ಯಗಳ ಐತಿಹಾಸಿಕ ಗೆಲುವಿನ ನಂತರ
ರಾಜ್ಯಕ್ಕೆ ಪ್ರಥಮ ಬಾರಿಗೆ ಆಗಮಿಸುತ್ತಿರುವ
ನಮ್ಮ ಹೆಮ್ಮೆಯ ರಾಷ್ಟ್ರೀಯ ಅಧ್ಯಕ್ಷರಾದ
ಶ್ರೀ ನಿತಿನ್ ನಬಿನ್
ಅವರಿಗೆ
ಹೃತ್ಪೂರ್ವಕ ಸುಸ್ವಾಗತ
24 ಮೇ 2026
ಭಾನುವಾರ
ಬಿ. ವೈ. ವಿಜಯೇಂದ್ರ
ರಾಜ್ಯಾಧ್ಯಕ್ಷರು, ಬಿ.ಜೆ.ಪಿ ಕರ್ನಾಟಕ
ಶಾಸಕರು, ಶಿಕಾರಿಪುರ ವಿಧಾನಸಭಾ ಕ್ಷೇತ್ರ

Bennett & Coleman
THE TIMES OF INDIA
www.vijaykarnataka.com
ಭಾನುವಾರ,24 ಮೇ 2026 | ಪುಟಗಳು: 16 | ಬೆಲೆ: ₹ 5.00 (ವಿಕ ಮನಿ ಜತೆ ₹10.00)
ಸಂಪುಟ: 27 | ಸಂಚಿಕೆ: 143
ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

ಟ್ರಂಪ್ ಪುತ್ರಿ ಇವಾಂಕಾ ಹತ್ಯೆಗೆ ಸಂಚು ರೂಪಿಸಿದ್ದ ಐಆರ್‌ಜಿಸಿ, ಸ್ಫೋಟಕ ಮಾಹಿತಿ ಬಯಲು P13

₹14,580	₹15,906	₹2,85,000
1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)	1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)	1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಬೆಂಗಳೂರು ದರ

ಕೇರಳ ಮುಖ್ಯ ಚುನಾವಣಾಧಿಕಾರಿ ರತನ್ ಕೇಲ್ಕರ್ ಸಿಎಂ ಕಾರ್ಯದರ್ಶಿಯಾಗಿ ನೇಮಕ, ಬಿಜೆಪಿ ಕಿಡಿ

ವಿಕ ಹೊಂಗಿರಣ

ಜೀವನವು ಧೈರ್ಯವಂತರನ್ನು ಸದಾ ಸಮಸ್ಯೆಗಳ ಮೂಲಕ ಪರೀಕ್ಷೆಮಾಡುತ್ತದೆ.

- ಸನೇಕಾ

SBI
The banker to every Indian
ಎಸ್‌ಬಿಐ ಡಿಜಿಟಲ್ ಎಂಎಸ್‌ಎಂಇ ಸಾಲಗಳು
• ಎಂಎಸ್‌ಎಂಇ ಸಾಲದ ತ್ವರಿತ ಅನುಮೋದನೆ
• 5 ಕೋಟಿವರೆಗಿನ ಸಾಲಗಳು
• ತಕ್ಷಣದ ತಾತ್ವಿಕ ಮಂಜೂರಾತಿ
• ಅವಧಿ: 10 ವರ್ಷಗಳವರೆಗೆ
• ಸಿಜಿಟಿಎಮ್‌ಎಸ್‌ಇ ರಕ್ಷಣೆ
• ಆಕರ್ಷಕ ಬಡ್ಡಿದರಗಳು
ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ
₹110/- ಕೋಲಾರ 107/- ತುಮಕೂರು 107/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹150/-
ಕೋಲಾರ 147/- ತುಮಕೂರು 147/-
ವಿಥ್ ಸ್ಕಿನ್ ₹212/- ಕೋಲಾರ 207/- ತುಮಕೂರು 207/-
ವಿಥೌಟ್ ಸ್ಕಿನ್ ₹242/- ಕೋಲಾರ 237/- ತುಮಕೂರು 237/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಚಾಲಕನ ಮಾನವೀಯತೆ, ಶಿಕ್ಷೆ 1 ದಿನಕ್ಕೆ ಇಳಿಕೆ »02

ಗ್ರೀನ್ ಕಾರ್ಡ್‌ಗೆ ಅಮೆರಿಕ ರೆಡ್ ಸಿಗ್ನಲ್ »08

ಎಸ್‌ಬಿಐ ನೌಕರರ ಮುಷ್ಕರ ಮುಂದೂಡಿಕೆ, ಸೇವೆ ಅಬಾಧಿತ »08

ಮಾರ್ಗಸೂಚಿ ದರ ಪರಿಷ್ಕರಣೆಗೆ ವೈಜ್ಞಾನಿಕ ವಿಧಾನ | ಜುಲೈ 1ರಿಂದ ಪರಿಷ್ಕೃತ ದರ ಜಾರಿ ನಿರೀಕ್ಷೆ

ಆಸ್ತಿ ಮೌಲ್ಯಕ್ಕೆ ಜಿಐಎಸ್

■ **ಎಂ. ಕೀರ್ತಿ ಪ್ರಸಾದ್** ಬೆಂಗಳೂರು
keerthi.prasad@timesofindia.com



AI ಚಿತ್ರ

ಸಂಪನ್ಮೂಲ ಕ್ರೋಡೀಕರಣದ ಭಾಗವಾಗಿ ಅಬಕಾರಿ ಸುಂಕ ನಿಗದಿಗೆ ವೈಜ್ಞಾನಿಕ ವಿಧಾನ ಅಳವಡಿಕೆ ಬೆನ್ನಲ್ಲೇ ರಾಜ್ಯದಲ್ಲಿ ಸ್ಥಿರಾಸ್ತಿಗಳ ಮಾರ್ಗಸೂಚಿ ದರವನ್ನು ವೈಜ್ಞಾನಿಕ ರೀತಿಯಲ್ಲಿ ಪರಿಷ್ಕರಿಸುವ ಪ್ರಕ್ರಿಯೆ ಪ್ರಾರಂಭವಾಗಿದೆ. ಪರಿಷ್ಕೃತ ದರಗಳು ಜುಲೈ 1ರಿಂದ ಜಾರಿಯಾಗುವ ನಿರೀಕ್ಷೆ ಇದೆ.

ಸ್ಥಿರಾಸ್ತಿಗಳ ಮಾರ್ಗಸೂಚಿ ದರವನ್ನು ಶೇ.15ರಿಂದ ಶೇ.20ರಷ್ಟು ಪರಿಷ್ಕರಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆದಿದೆ. 'ಜಿಐಎಸ್' ತಂತ್ರಜ್ಞಾನ ಆಧರಿಸಿ ವೈಜ್ಞಾನಿಕ ರೀತಿಯಲ್ಲಿ ಸೂಕ್ತ ಮೌಲ್ಯ ನಿಗದಿಪಡಿಸುವ ಬಗ್ಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಪರಿಶೀಲನೆ ನಡೆಸಿದ್ದು, ಸ್ಥಿರಾಸ್ತಿಗಳ ನೈಜ ಮೌಲ್ಯ ಆಧರಿಸಿ ದರ ಪರಿಷ್ಕರಿಸಿ ಪ್ರಕಟಿಸಲು ಸಜ್ಜಾಗುತ್ತಿದೆ.

15%-20% ಏರಿಕೆ ಸಾಧ್ಯತೆ

ರಾಜ್ಯದಲ್ಲಿ ನೋಂದಣಿ ಮತ್ತು ಮುದ್ರಾಂಕ ಶುಲ್ಕದಿಂದ ಮಾಸಿಕ 1,800ರಿಂದ 2,000 ಕೋಟಿ ರೂ.ನಷ್ಟು ಆದಾಯ ಸಂಗ್ರಹವಾಗುತ್ತಿದೆ. 2025-26ನೇ ಹಣಕಾಸು ವರ್ಷದಲ್ಲಿ 28,000 ಕೋಟಿ ರೂ. ನಿರೀಕ್ಷಿಸಿದ್ದರೂ ವಾಸ್ತವವಾಗಿ ಸಂಗ್ರಹವಾಗಿದ್ದು, 25,648 ಕೋಟಿ ರೂ. 2026-27ನೇ ಸಾಲಿಗೆ ಮುದ್ರಾಂಕ ಮತ್ತು ನೋಂದಣಿ ಶುಲ್ಕದಿಂದ 29,000 ಕೋಟಿ ರೂ. ಆದಾಯ ನಿರೀಕ್ಷಿಸಲಾಗಿದೆ. ಈ ಗುರಿ ತಲುಪಲು ಪೂರಕವೆಂಬಂತೆ ಸ್ಥಿರಾಸ್ತಿಗಳ ಮಾರ್ಗಸೂಚಿ ದರ ಪರಿಷ್ಕರಣೆಯಾಗಲಿದೆ.

ಈ ಹಿಂದೆ 2019ರಲ್ಲಿ ಮಾರ್ಗಸೂಚಿ ದರ ಪರಿಷ್ಕರಣೆಯಾಗಿತ್ತು. ನಂತರ ಕೋವಿಡ್ ಕಾರಣ ಪರಿಷ್ಕರಣೆಯಾಗಿರಲಿಲ್ಲ. ಬಳಿಕ ಬಂದ ಹೊಸ ಸರಕಾರ 2023ರ ಅ.1ರಂದು ಮಾರ್ಗಸೂಚಿ ದರ ಪರಿಷ್ಕರಿಸಿದ್ದರಿಂದ ರಾಜ್ಯಾದ್ಯಂತ ಸ್ಥಿರಾಸ್ತಿಗಳ ಮಾರ್ಗಸೂಚಿ ದರ ಸರಾಸರಿ ಶೇ.30ರಷ್ಟು ಹೆಚ್ಚಳವಾಗಿತ್ತು. ಎರಡೂವರೆ ವರ್ಷಗಳ ನಂತರ ಮತ್ತೆ ಸ್ಥಿರಾಸ್ತಿ ದರ ಪರಿಷ್ಕರಣೆಗೆ ಪ್ರಯತ್ನ ಆರಂಭವಾಗಿದೆ.

ವೈಜ್ಞಾನಿಕವಾಗಿ ಮೌಲ್ಯ ನಿರ್ಧಾರ: ಸಾಂಪ್ರದಾಯಿಕ ವಿಧಾನಕ್ಕೆ ಬದಲಾಗಿ ವೈಜ್ಞಾನಿಕವಾಗಿ ಸ್ಥಿರಾಸ್ತಿ ಪರಿಷ್ಕರಣೆಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಒತ್ತು ನೀಡಿದೆ. ಜಿಯಾಗ್ರಾಫಿಕ್ ಇನ್‌ಫರ್ಮೇಶನ್ ಸಿಸ್ಟಮ್ (ಜಿಐಎಸ್) ಆಧರಿಸಿ ಸ್ಥಿರಾಸ್ತಿಗಳ ಮೌಲ್ಯ ಪರಿಷ್ಕರಿಸುವ ಪ್ರಕ್ರಿಯೆಯನ್ನು ಅಧಿಕಾರಿಗಳು ನಡೆಸಿದ್ದಾರೆ. ಇದರಿಂದ ಸರಕಾರಿ ಮಾರ್ಗಸೂಚಿ ದರ ಶೇ.15ರಿಂದ ಶೇ.20ರಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಕೆಲವು ರಾಜ್ಯಗಳು ಪ್ರತಿ ವರ್ಷ ಸ್ಥಿರಾಸ್ತಿಗಳ ಮಾರ್ಗ ಸೂಚಿ ದರ ಪರಿಷ್ಕರಿಸುವ ಪರಿಪಾಠ ಅನುಸರಿಸುತ್ತಾ ಬಂದಿವೆ. ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿಗೆ ಅನುಸಾರವಾಗಿ ಆಯಾ ಸರಕಾರಗಳು 2-3 ವರ್ಷಕ್ಕೊಮ್ಮೆ ದರ ಪರಿಷ್ಕರಣೆ ಮೊರೆ ಹೋಗುತ್ತಿವೆ. ಮಾರ್ಗಸೂಚಿ ದರ ಪರಿಷ್ಕರಣೆಯಾದರೆ 2,000 ಕೋಟಿ ರೂ.ನಿಂದ 2,500 ಕೋಟಿ ರೂ. ಹೆಚ್ಚುವರಿ ಆದಾಯ ಸಂಗ್ರಹ ನಿರೀಕ್ಷೆ ಇದೆ.

ಗ್ಯಾರಂಟಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿರುವ ರಾಜ್ಯ ಸರಕಾರ ಸಂಪನ್ಮೂಲ ಹೆಚ್ಚಿಸಿಕೊಳ್ಳುವ ಸಲುವಾಗಿ ನಿವೃತ್ತ ಐಎಎಸ್ ಅಧಿಕಾರಿ ಕೆ.ಪಿ.ಕೃಷ್ಣನ್ ಅಧ್ಯಕ್ಷತೆಯ ಸಂಪನ್ಮೂಲ ಕ್ರೋಡೀಕರಣ ಸಮಿತಿ ರಚಿಸಿತ್ತು. ಈ ಸಮಿತಿಯ ಶಿಫಾರಸು ಆಧರಿಸಿ ಆಲ್ಕೋಹಾಲ್ ಪ್ರಮಾಣಕ್ಕೆ ಅನುಗುಣವಾಗಿ ಅಬಕಾರಿ ಸುಂಕ ವಿಧಿಸುವ ಹೊಸ ವ್ಯವಸ್ಥೆಯನ್ನು ಅಬಕಾರಿ ಇಲಾಖೆ ಇತ್ತೀಚೆಗಷ್ಟೇ ಜಾರಿಗೊಳಿಸಿದೆ. ಸ್ಥಿರಾಸ್ತಿ ಮೌಲ್ಯವನ್ನು ಜಿಐಎಸ್ ಆಧರಿಸಿ ಪರಿಷ್ಕರಿಸುವ ಮೂಲಕ ಹೊಸ ವ್ಯವಸ್ಥೆ ಅಳವಡಿಕೆಗೆ ಸಿದ್ಧತೆ ನಡೆದಿರುವುದು ಕುತೂಹಲ ಉಂಟು ಮಾಡಿದೆ.

ಅನುಕೂಲವೇನು?

- ಏಕರೂಪದ ದರ ಪರಿಷ್ಕರಣೆ ಬದಲಿಗೆ ಜಿಐಎಸ್ ತಂತ್ರಜ್ಞಾನ ಆಧರಿಸಿ ಮೌಲ್ಯ ಪರಿಷ್ಕರಣೆ
- ಇದರಿಂದ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಸ್ಥಿರಾಸ್ತಿಗಳಿಗೆ ನ್ಯಾಯಯುತ ಮೌಲ್ಯ ನಿಗದಿಪಡಿಸಲು ಅನುಕೂಲ
- ವಾಸ್ತವದ ದರಕ್ಕಿಂತಲೂ ಮಾರ್ಗಸೂಚಿ ದರ ಕಡಿಮೆಯಿರುವ ಕಡೆ ದರ ಹೆಚ್ಚಳ
- ಅವಾಸ್ತವಿಕವಾಗಿ ಮಾರ್ಗಸೂಚಿ ದರ ನಿಗದಿಯಾಗಿದ್ದರೂ ಅದರ ಪರಿಷ್ಕರಣೆ

3ನೇ ಬಾರಿ ಇಂಧನ ಶಾಕ್

ಹೊಸದಿಲ್ಲಿ: ಮಧ್ಯಪ್ರಾಚ್ಯ ಬಿಕ್ಕಟ್ಟಿನ ನೆಪದಲ್ಲಿ ದೇಶದ ಜನತೆಗೆ ಕೇಂದ್ರ ಸರಕಾರ 10 ದಿನದಲ್ಲಿ ಮೂರನೇ ಬಾರಿ ಇಂಧನ ಶಾಕ್ ನೀಡಿದೆ. ಪೆಟ್ರೋಲ್, ಡೀಸೆಲ್ ದರವನ್ನು ಮತ್ತೊಮ್ಮೆ ಪ್ರತಿ ಲೀಟರ್‌ಗೆ ಸುಮಾರು 1 ರೂ. ಹೆಚ್ಚಿಸಲಾಗಿದೆ. ಶನಿವಾರ ಬೆಳಗ್ಗೆಯಿಂದಲೇ ಹೊಸ ದರ ಜಾರಿಯಾಗಿದೆ. ಇದರೊಂದಿಗೆ ಕಳೆದ 10 ದಿನದಲ್ಲಿ ಪೆಟ್ರೋಲ್, ಡೀಸೆಲ್ ದರ ಒಟ್ಟು 5 ರೂ. ಹೆಚ್ಚಳವಾದಂತಾಗಿದೆ. ಸಿಎನ್‌ಜಿ ದರವನ್ನೂ ಪ್ರತಿ ಕೆ.ಜಿಗೆ 1 ರೂ. ಹೆಚ್ಚಿಸಲಾಗಿದೆ.

ಪೆಟ್ರೋಲ್, ಡೀಸೆಲ್ ದರ 8 ದಿನದಲ್ಲಿ 5 ರೂ. ತುಟ್ಟಿ

ಪೆಟ್ರೋಲ್ ದರ ಬೆಂಗಳೂರಿನಲ್ಲಿ ಪ್ರತಿ ಲೀಟರ್‌ಗೆ 95 ಪೈಸೆ ಏರಿಕೆಯೊಂದಿಗೆ 108.09 ರೂ. ತಲುಪಿದೆ. ಡೀಸೆಲ್ ದರ 95 ಪೈಸೆ ಹೆಚ್ಚಳದೊಂದಿಗೆ 95.55 ರೂ.ಗೆ ಮುಟ್ಟಿದೆ.

ಇದಕ್ಕೂ ಮುನ್ನ ಮೇ 15ರಂದು ಲೀಟರ್‌ಗೆ ತಲಾ 3 ರೂ., ಮೇ 19ರಂದು ತಲಾ 1 ರೂ. (ಸ್ಥಳೀಯ ತೆರಿಗೆ ಸೇರಿ) ಹೆಚ್ಚಿಸಲಾಗಿತ್ತು. ವಿವರ»08

ಕನಿಷ್ಠ ವೇತನ 60% ಏರಿಕೆ

ಬೆಂಗಳೂರು: ರಾಜ್ಯದ 99 ಅಧಿಸೂಚಿತ ಉದ್ದಿಮೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಕನಿಷ್ಠ ವೇತನವನ್ನು ರಾಜ್ಯ ಸರಕಾರ ನಿಗದಿಪಡಿಸಿದ್ದು, ಸರಾಸರಿ ಶೇ.60ರಷ್ಟು ಹೆಚ್ಚಳ ಮಾಡಿ ಅಧಿಸೂಚನೆ ಹೊರಡಿಸಿದೆ. ಇದರಿಂದಾಗಿ ಸರಣಿ ಬೆಲೆ ಏರಿಕೆಯಿಂದ ತತ್ತರಿಸಿರುವ ರಾಜ್ಯದ ಸುಮಾರು ಒಂದೂವರೆ ಕೋಟಿಗೂ ಅಧಿಕ ಸಂಘಟಿತ, ಅಸಂಘಟಿತ ವಲಯಗಳ ಕಾರ್ಮಿಕರಿಗೆ ಪ್ರಯೋಜನವಾಗಲಿದೆ.

ಕರಡು ಅಧಿಸೂಚನೆ ಹೊರಡಿಸಿ ಒಂದೂವರೆ ವರ್ಷ ಕಳೆದರೂ ಅಂತಿಮಗೊಳಿಸದೆ ಮೀನಮೇಷ ಎಣಿಸುತ್ತಿದ್ದ ಸರಕಾರ ಈಗ ಅದನ್ನು ಅಖೈರುಗೊಳಿಸಿ ಆದೇಶ ಹೊರಡಿಸಿದೆ. ಸುಪ್ರೀಂ ಕೋರ್ಟ್ ನಿರ್ದೇಶನದ ಅನ್ವಯ ರೆಪ್ಟೋಕೋಸ್ ಬ್ರೇಟ್ ಮಾನದಂಡ ಬಳಸಿ ವೈಜ್ಞಾನಿಕವಾಗಿ ವೇತನ ಪರಿಷ್ಕರಣೆ ಮಾಡಿರುವುದರಿಂದ ಕನಿಷ್ಠ ವೇತನವು ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಈ ಹಿಂದೆ 2016-17ರಲ್ಲಿ ಕಾರ್ಮಿಕರ ಕನಿಷ್ಠ ವೇತನ ಪರಿಷ್ಕರಣೆಯಾಗಿತ್ತು. ವಿವರ»14

ADVERTORIAL

ಮಂಡಿ ನೋವಿನ ಉಪಶಮನಕ್ಕೆ ಸರ್ಜರಿ ಇಲ್ಲದೇ ಸುಲಭ ಚಿಕಿತ್ಸೆ

ಸ್ಟೀರಾಯ್ಡ್ ಎಂಬ ಹಾನಿಕಾರಕ ಶಾರ್ಟ್‌ಕಟ್ ಬೇಡ | ಅಲಿವಿಯೇಟ್ ಕ್ಲಿನಿಕ್‌ನಲ್ಲಿದೆ ನೋವಿಗೆ ಸರಳ ಉಪಾಯ

ಬೆಂಗಳೂರು: ಮೊಣಕಾಲಿನ ನೋವು (Knee Pain) ಇಂದು ಅನೇಕ ಜನರ ಜೀವನವನ್ನು ತುಂಬಾ ಕಷ್ಟಕರವಾಗಿಸಿದೆ. ವಯಸ್ಸಾದವರು, ಕ್ರೀಡಾಪಟುಗಳಿಂದ ಹಿಡಿದು ಗೃಹಿಣಿಯರವರೆಗೆ, ಹಲವರು ಗಾಯ, ಕೀಲು ಸವೆತ ಮತ್ತು ಸಂಧಿವಾತದಿಂದ ತೀವ್ರ ನೋವಿನ ಹಿಡಿತದಲ್ಲಿ ನರಳುತ್ತಿದ್ದಾರೆ. ಮೆಟ್ಟಿಲು ಹತ್ತಲು ತೊಂದರೆ, ಸರಳ ಕೆಲಸವೂ ಕಷ್ಟ, ಪೇನ್ ಕಿಲ್ಲರ್ಸ್ ಮೇಲೆ ಅತಿಯಾದ ಅವಲಂಬನೆ, ಕುಳಿತಿದ್ದ ಜಾಗದಿಂದ ಎದ್ದೇಳಲು ಕಷ್ಟಕರ ಇವೆಲ್ಲವೂ ಅಸ್ಥಿ ಸಂಧಿವಾತದ ಲಕ್ಷಣಗಳಾಗಿವೆ.

'ನೋವು' ನಿಮ್ಮ ದೇಹದೊಳಗಿನ ಸಮಸ್ಯೆ ಸೂಚಿಸುವ ಒಂದು ಪ್ರಬಲವಾದ 'ಎಚ್ಚರಿಕೆ ಸಂದೇಶ' ವಷ್ಟೇ.

ನೋವು ಕಂಡಾಗ, ಬೇಗ ಪರಿಹಾರ ಸಿಗಲಿ ಎಂದು ನಾವು ಬಾಮ್ ಹಚ್ಚುತ್ತೇವೆ, ಪೇನ್ ಕಿಲ್ಲರ್ ಮಾತ್ರೆ ನುಂಗುತ್ತೇವೆ ಅಥವಾ ತಾತ್ಕಾಲಿಕ ಪರಿಹಾರ ನೀಡುವ ಅಡ್ಡಪರಿಣಾಮಗಳು ತುಂಬಿಕೊಂಡಿರುವಂತಹ ಸ್ಟೀರಾಯ್ಡ್ ಚುಚ್ಚುಮದ್ದು ಹಾಕಿಸಿಕೊಳ್ಳುತ್ತೇವೆ. ಈ ರೀತಿ ತಾತ್ಕಾಲಿಕ ಪರಿಹಾರಗಳನ್ನು ಬಳಸಿದಾಗ, ನೋವಿನ 'ಎಚ್ಚರಿಕೆ ಸಂದೇಶ' ಕ್ಷಣಿಕವಾಗಿ ನಿಲ್ಲುತ್ತದೆ. ಆದರೆ, ಸಮಸ್ಯೆಯ ಮುಖ್ಯ ಕಾರಣ (ಕೀಲುಗಳ ಹಾನಿ) ಹಾಗೆಯೇ ಉಳಿದು ಬಿಡುತ್ತದೆ. ಇದರಿಂದ ಸಮಸ್ಯೆಯು ಬುಡದಿಂದಲೇ ಸರಿಹೋಗುವುದಿಲ್ಲ.

ಬೆಂಗಳೂರಿನಲ್ಲಿರುವ ಸುಪ್ರಸಿದ್ಧ ಅಲಿವಿಯೇಟ್ ಪೇನ್ ಮ್ಯಾನೇಜ್ಮೆಂಟ್ ಕ್ಲಿನಿಕ್‌ನಲ್ಲಿ ಲಭ್ಯವಿರುವ, ಯಾವುದೇ ಅಡ್ಡ ಪರಿಣಾಮಗಳಿಲ್ಲದ, ನೈಸರ್ಗಿಕವಾಗಿ ನೋವನ್ನು ಕಡಿಮೆ ಮಾಡುವ 'PRP' ಚಿಕಿತ್ಸೆಯನ್ನು ಆರಿಸಿಕೊಳ್ಳುವುದು ಉತ್ತಮ ಆಯ್ಕೆಯಾಗಿದೆ.

PRPಯು ನೋವಿನ ಮೂಲ ಕಾರಣವನ್ನು ಸರಿಪಡಿಸುವ ಒಂದು ದೀರ್ಘಕಾಲೀನ ಪರಿಹಾರದ ಹೂಡಿಕೆ.

ಪಿಆರ್‌ಪಿ ಥೆರಪಿ: ನಿಮ್ಮ ದೇಹದ ಸ್ವಯಂ ಗುಣಪಡಿಕೆಯ ಸಾಮರ್ಥ್ಯ ಉತ್ತೇಜಿಸಿ ನೋವು ಮಾಯ

ಈ ಚಿಕಿತ್ಸೆಯ ವಿಶೇಷತೆ ಮತ್ತು ಅನುಕೂಲ:

- **ಮೂಲಕ್ಕೆ ಚಿಕಿತ್ಸೆ:** ನೋವಿಗೆ ಕಾರಣವಾದ ಅಂಗಾಂಶದ ಹಾನಿಯನ್ನು ಇದು ಸರಿಪಡಿಸುತ್ತದೆ. ಇದರಿಂದ ನೋವಿನ ಸಮಸ್ಯೆ ಬುಡದಿಂದಲೇ ಉಪಶಮಿಸಲು ಸಾಧ್ಯವಾಗುತ್ತದೆ.
- **ನಿಮ್ಮದೇ ದೇಹದ ಶಕ್ತಿ ಬಳಕೆ:** ನಿಮ್ಮ ದೇಹದಿಂದ ತೆಗೆದ ರಕ್ತದಲ್ಲಿರುವ ಪ್ಲೇಟ್‌ಲೆಟ್‌ಗಳು (ಗುಣ ಮಾಡುವ ಶಕ್ತಿಯನ್ನು) ಪ್ರತ್ಯೇಕಿಸಿ, ಚುಚ್ಚುಮದ್ದಿನ ಮೂಲಕ ನೋವಿರುವ ಜಾಗಕ್ಕೆ ತಲುಪಿಸಲಾಗುತ್ತದೆ.
- **ದೀರ್ಘಕಾಲೀನ ಉಪಶಮನ:** ಕೇವಲ ತಾತ್ಕಾಲಿಕ ಆರಾಮಕ್ಕಷ್ಟೇ ಸೀಮಿತವಾಗದೆ, ದೀರ್ಘಕಾಲದ ನೋವು ಮುಕ್ತ ಜೀವನಕ್ಕಾಗಿ ರೂಪಿಸಲಾದ ಸುರಕ್ಷಿತ ಮಾರ್ಗವಿದು.
- **ಆಪರೇಷನ್‌ಗೆ ಸೂಕ್ತ ಪರ್ಯಾಯ:** ಶಸ್ತ್ರಚಿಕಿತ್ಸೆ (ಆಪರೇಷನ್) ಬೇಡ ಎನ್ನುವವರಿಗೆ, ಮತ್ತು ಆಪರೇಷನ್‌ಗೆ ಸೂಕ್ತವಲ್ಲದವರಿಗೆ ಈ ಚಿಕಿತ್ಸೆಯು ಒಂದು ದೊಡ್ಡ ವರದಾನ ವೆಂದೇ ಕರೆಯಬಹುದು.

ಈ ಚಿಕಿತ್ಸೆಯು Day Care Procedure ಆಗಿದ್ದು, ಅಂದರೆ ಚಿಕಿತ್ಸೆ ಪಡೆದ ದಿನವೇ ಡಿಸ್ಚಾರ್ಜ್ ಮಾಡಲಾಗುತ್ತದೆ.

ಪಿಆರ್‌ಪಿ ಚಿಕಿತ್ಸೆಯ ಲಾಭಗಳು
- ಆಸ್ಪತ್ರೆಯಲ್ಲಿ ಉಳಿಯಬೇಕಿಲ್ಲ
- 30-60 ನಿಮಿಷದ ಪ್ರಕ್ರಿಯೆ
- ಸ್ಟೀರಾಯ್ಡ್ ಬಳಕೆ ಇಲ್ಲ
- 48 ಗಂಟೆಯಲ್ಲಿ ಕೆಲಸಕ್ಕೆ ಮರಳಿ

ವಿಳಂಬವಿಲ್ಲದೆ ಇದೀಗಲೇ ಕರೆ ಮಾಡಿ ಡಾಕ್ಟರ್ ಅಪಾಯಿಂಟ್‌ಮೆಂಟ್ ಪಡೆದು, ನೋವುರಹಿತ ಪಯಣಕ್ಕೆ ಹೆಜ್ಜೆ ಇರಿಸಿ!

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಪರಿಣಾಮಕಾರಿ ಚಿಕಿತ್ಸೆಗಳು ಲಭ್ಯವಿವೆ

ಅಲಿವಿಯೇಟ್
ನೋವು ನಿವಾರಣಾ ಕೇಂದ್ರಗಳು
ಬೆಂಗಳೂರಿನಲ್ಲಿ ಇವರ ಕ್ಲಿನಿಕ್ಸ್ ಇಲ್ಲಿವೆ
ಪೀಣ್ಯಾ ದಾಸರಹಳ್ಳಿ
ಸದಾಶಿವನಗರ ಜಯನಗರ
ಇಂದಿರಾನಗರ ವೈಟ್‌ಫೀಲ್ಡ್
080 25256878
080 23614888

Welspun

ಒಂದು ಬಾರಿ ಅಳವಡಿಸಿದರೆ ತಲೆಮಾರುಗಳ ತನಕ ಚಿಂತೆ ಇಲ್ಲಾ.

Sintex Eterno™
50 YEAR WARRANTY^

ಲಾಂಚ್ ಆಫರ್**
Rs.15000/-**
per 1000 LTR tank

*Tested under lab conditions. Refer to www.sintexonline.com/disclaimer
^Terms & Conditions apply. Refer warranty card at www.sintexonline.com/warranty

**Valid till 30th June 2026 or till stocks last. Valid for Karnataka state only. Additional freight charges may apply
**The quoted pricing is subject to change, modification, or withdrawal without prior notice

Sintex Eterno is a trademark of Sintex BAPL Ltd. Welspun is a registered trademark of Welspun Multiventures LLP

Virus Protection*
Germbloc™ Technology
Algae* Virus*
Fungus* Bacteria*
Heavy duty Durable Design

QR ಕೋಡ್ ಸ್ಕ್ಯಾನ್ ಮಾಡಿ, ಮುಂದಿನ ತಲೆಮಾರಿನ ಟ್ಯಾಂಕ್ ಆಕ್ಷನ್ ನಲ್ಲಿ ಹೇಗಿದೆ ನೋಡಿ.

ಬೆಂಗಳೂರಿನಲ್ಲಿ ಅಧಿಕೃತ ಡೀಲರ್‌ಗಳ ಬಳಿ ಲಭ್ಯ
ಡೀಲರ್‌ಶಿಪ್ ಸಂಪರ್ಕಕ್ಕಾಗಿ - 8249505607

A.L. madhu M/s madhu hardware, D cross main road - 9611920111 • Baireshwara electrical & hardware, Bidaragube - 9731206958 • Balaji hardware, Gunjur - 7022564795 • G K enterprises, Nelamangla - 9113235380 • Ganapathi hardware paints, Malleshwaram - 9663381323 • Jai sriyade hardwares, Hosa road - 9739053212 • Kamal traders, Tumkur - 9738144899 • Kaveri hardware & electricals, Attibele - 7019397142 • Krishna paints & sanitarywares, Basaweshwara nagar - 7338134034 • Krishna tiles and sanitaryware, Basaweshwara nagar - 7829438912 • Maa hardware and sanitary, Rajgopalan nagar - 9164736666 • Mahalaxmi enterprise, Jigani - 8792791795 • Mahalaxmi steel, hardware and fabrication, T darshalli - 9620390314 • Mamta hardware, Malleshwaram - 9980075641 • Maruthi vayuputhra, Rajajinagar - 9740319589 • Mataji bath studio, Basvangudhi - 9449578111 • Mathaji hardware, Jakkur main road - 7795516239 • Nagnechi hardware, Anekal - 8951810672 • Nandan enterprises, Tumkur - 9740247455 • Noble hardware, Tumkur - 9845708042 • Omkar hardware, Tumkur - 8722897778 • Padmavathi sanitaryware, Basaweshwara nagar - 8747824778 • Pavan hardware & electrical, Laggere - 9686231241 • Pawan hardware, Electronic city - 8209917939 • S.D.enterprises, Wilson garden - 9482072326 • Saurabh enterprises, Ks garden - 9448161044 • Shankar hardware & paints - new, Malleshwaram - 9535311753 • Slv hardware paints and ceramics - attibele, Attibele - 9108976622 • Sree dhanalakshmi paints and hardwares, Tumkur - 9620398007 • Sri subramanya enterprises, Chamrajpet - 9880927956 • Sri vishnu sanitary center, Kr market - 9844006703 • Varsha paints and hardware, Katigruppe - 9341219366 • Vignesh industries private limited, Attibele - 6369021226

www.sintexonline.com | Toll Free No.: 1800-121-2764

ರಾಷ್ಟ್ರಕ್ಕಾಗಿ ಸೇವಾ ಅವಧಿ ಮೀಸಲಿಡಿ

19ನೇ ರೋಜ್‌ಗಾರ್ ಮೇಳ | 84 ಜನರಿಗೆ ಉದ್ಯೋಗ ನೇಮಕ ಪತ್ರ ವಿತರಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ನಗರದಲ್ಲಿ ನಡೆದ 19ನೇ ರೋಜ್‌ಗಾರ್ ಮೇಳದಲ್ಲಿ ರೈಲ್ವೆ ಹಾಗೂ ಕೇಂದ್ರದ ಇತರೆ ಇಲಾಖೆಗಳ ನಾನಾ ಹುದ್ದೆಗಳಿಗೆ ಆಯ್ಕೆಯಾಗಿರುವ 84 ಅಭ್ಯರ್ಥಿಗಳಿಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಶನಿವಾರ ನೇಮಕಾತಿ ಪತ್ರಗಳನ್ನು ವಿತರಿಸಿದರು.

ನಂತರ ಮಾತನಾಡಿದ ಅವರು, ''ಯುವಕರು ಹೆಚ್ಚಾಗಿ ಸರಕಾರಿ ಸೇವೆಗಳಲ್ಲಿ ತೊಡಗಿಕೊಳ್ಳಬೇಕು. 2027ಕ್ಕೆ ವಿಕಸಿತ ಭಾರತವನ್ನು ನಿರ್ಮಾಣ ಮಾಡುವುದು ಕೇಂದ್ರ ಸರಕಾರದ ಗುರಿಯಾಗಿದೆ. ಹೊಸದಾಗಿ ನೇಮಕಗೊಂಡ ಅಭ್ಯರ್ಥಿಗಳು ತಮ್ಮ ಇಲಾಖೆಗಳಲ್ಲಿ ಬದ್ಧತೆಯಿಂದ ಕೆಲಸ ಮಾಡಬೇಕು. ಎಲ್ಲಾ ನೌಕರರು ತಮ್ಮ 30-35 ವರ್ಷಗಳ ಸೇವಾ ಅವಧಿಯನ್ನು ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಲು ಬಳಸಿಕೊಳ್ಳಬೇಕು,'' ಎಂದು ಸಲಹೆ ನೀಡಿದರು.

''ಈವರೆಗೆ ಒಟ್ಟು 19 ರೋಜ್‌ಗಾರ್ ಮೇಳಗಳನ್ನು ನಡೆಸಲಾಗಿದೆ. ಕಳೆದ 3-4 ವರ್ಷಗಳಲ್ಲಿ 12 ಲಕ್ಷಕ್ಕೂ ಹೆಚ್ಚು ಯುವಕರು ಸರಕಾರಿ ಇಲಾಖೆಗಳಲ್ಲಿ ಸೇವೆಗೆ ಸೇರಿಕೊಂಡಿದ್ದಾರೆ. ಕೆಲಸಕ್ಕೆ ಸೇರ್ಪಡೆಯಾದ ಇಲಾಖೆಯಲ್ಲಿ ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸಬೇಕು. ಆ ಮೂಲಕ ಸಮಾಜಕ್ಕಾಗಿ ತಮ್ಮಿಂದ ಎಷ್ಟು ಒಳ್ಳೆಯದನ್ನು ಮಾಡಲು ಸಾಧ್ಯವೋ, ಅದನ್ನು ಮಾಡಬೇಕು ಮತ್ತು ದೇಶವನ್ನು ಗುರಿಯಾಗಿಟ್ಟುಕೊಂಡು ಕೆಲಸ ಮಾಡಬೇಕು,'' ಎಂದರು.

''ಈ ಹಿಂದೆ ನೇಮಕಾತಿ ಪತ್ರಕ್ಕಾಗಿ ಕಚೇರಿಗಳಿಗೆ ಅಲೆಯಬೇಕಾಗಿತ್ತು. ಆದರೆ ಕಳೆದ 4-5 ವರ್ಷಗಳಲ್ಲಿ ಈ ಪರಿಸ್ಥಿತಿ ಬದಲಾಗಿದೆ. ರೋಜ್‌ಗಾರ್ ಮೇಳದಲ್ಲಿ ಸ್ವತಃ ಪ್ರಧಾನಮಂತ್ರಿಗಳು ಮತ್ತು ಸಚಿವರೇ ಖುದ್ದಾಗಿ ನೇಮಕಾತಿ ಪತ್ರಗಳನ್ನು ನೀಡುತ್ತಿದ್ದಾರೆ,'' ಎಂದು ಹೇಳಿದರು.

ವಿಡಿಯೊ ಕಾನ್ಫರೆನ್ಸ್ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಮಾತನಾಡಿದರು.

ರೈಲ್ವೆ, ಅಂಚೆ ಇಲಾಖೆ, ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ), ಬ್ಯಾಂಕ್ ಆಫ್ ಬರೋಡಾ, ನಿಮ್ಹಾನ್ಸ್ ಮತ್ತು ಇತರ ಕೇಂದ್ರ ಸರಕಾರಿ ಸಂಸ್ಥೆಗಳ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ನೀಡಲಾಯಿತು.

ಬೆಂಗಳೂರಲ್ಲಿ ನಡೆದ 19ನೇ ರೋಜ್‌ಗಾರ್ ಮೇಳದಲ್ಲಿ ರೈಲ್ವೆ ಹಾಗೂ ಕೇಂದ್ರದ ಇತರೆ ಇಲಾಖೆಗಳ ನಾನಾ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಶನಿವಾರ ನೇಮಕ ಪತ್ರಗಳನ್ನು ವಿತರಿಸಿದರು.

'ನಮ್ಮ ತಟ್ಟೆಯಲ್ಲೇ ಅನ್ನವಿಲ್ಲ, ಬೇರೆ ಹಂಚಿಕೆ ಹೇಗೆ?'

ಹೊಸಪೇಟೆ (ವಿಜಯನಗರ): ''ಪರಿಶಿಷ್ಟರಿಗೆ ಮೀಸಲು ನೀಡುವ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಬೇಜವಾಬ್ದಾರಿಯಿಂದ ವರ್ತಿಸುತ್ತಿವೆ. ನಮ್ಮ ತಟ್ಟೆಯಲ್ಲೇ ಅನ್ನವಿಲ್ಲದಂತಾಗಿರುವಾಗ ಹೊಸಬರಿಗೆ ಹಂಚಿಕೆ ಬಗ್ಗೆ ಮಾತನಾಡುವುದು ಎಷ್ಟು ಸರಿ'' ಎಂದು ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಪ್ರಶ್ನಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ''2011ರ ಸಮೀಕ್ಷೆಯ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ ಪರಿಶಿಷ್ಟ ಜಾತಿ 1.25 ಕೋಟಿ (ಶೇ.17.1), ಪರಿಶಿಷ್ಟ ಪಂಗಡ 50 ಲಕ್ಷ (ಶೇ.7), ಹಿಂದುಳಿದ ವರ್ಗಗಳು 2.25 ಕೋಟಿಗೂ ಅಧಿಕ (ಶೇ.32ಕ್ಕಿಂತ ಹೆಚ್ಚು) ಸೇರಿ ರಾಜ್ಯದಲ್ಲಿ ಈ ವರ್ಗಗಳ ಒಟ್ಟು ಜನಸಂಖ್ಯೆ 4 ಕೋಟಿಗೂ ಅಧಿಕವಾಗಿದೆ. 1950ರಲ್ಲಿ ಕೇವಲ 7 ಎಸ್‌ಸಿ ಮತ್ತು 6 ಎಸ್‌ಟಿ ಜಾತಿಗಳಿದ್ದವು. ಆದರೆ, ಈಗ ಎಸ್‌ಸಿ ಪಟ್ಟಿಯಲ್ಲಿ 101 ಹಾಗೂ ಎಸ್‌ಟಿ ಪಟ್ಟಿಯಲ್ಲಿ 51 ಜಾತಿಗಳಿವೆ. ಜನಸಂಖ್ಯೆ ಹೆಚ್ಚಾದಂತೆ ಅದಕ್ಕೆ ಅನುಗುಣವಾಗಿ ಮೀಸಲು ದೊರೆಯಬೇಕು,'' ಎಂದು ಪ್ರತಿಪಾದಿಸಿದರು.

ಮಾನವೀಯತೆಯಿಂದ ಒಂದೇ ದಿನಕ್ಕೆ ಇಳಿದ ಶಿಕ್ಷೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಸ್ತೆ ಅಪಘಾತ ಸಂಭವಿಸಿದ ತಕ್ಷಣ ಸ್ಥಳದಿಂದ ಪರಾರಿಯಾಗದೆ ಗಾಯಾಳುವನ್ನು ಸ್ವತಃ ತನ್ನದೇ ಕಾರಿನಲ್ಲಿ ಆಸ್ಪತ್ರೆಗೆ ದಾಖಲಿಸಿ ಮಾನವೀಯತೆ ಮೆರೆದ ಚಾಲಕನೊಬ್ಬನಿಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಒಂದು ವರ್ಷ ಜೈಲು ಶಿಕ್ಷೆಯನ್ನು ಹೈಕೋರ್ಟ್ ಕೇವಲ ಒಂದು ದಿನಕ್ಕೆ (ಕೋರ್ಟ್ ಕಲಾಪ ಮುಗಿಯುವವರೆಗೆ) ಕಡಿತಗೊಳಿಸಿ ಆದೇಶಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪಕ್ಷಿಕೆರೆಯ ರಿಯಾಜ್ ಅಹ್ಮದ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ. ಶ್ರೀಷಾನಂದ ಅವರಿದ್ದ ಏಕಸದಸ್ಯಪೀಠ ಈ ಆದೇಶ ನೀಡಿದೆ.

ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯ, ಅಜಾಗರೂಕ ಚಾಲನೆಯಿಂದ ವ್ಯಕ್ತಿಯೊಬ್ಬರ ಸಾವಿಗೆ ಕಾರಣನಾಗಿದ್ದ ಚಾಲಕನಿಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ 1 ವರ್ಷದ ಜೈಲು ಶಿಕ್ಷೆಯನ್ನು ಮಾರ್ಪಡಿಸಿದೆ. ಅಪಘಾತದ ನಂತರ ಚಾಲಕ ಸ್ಥಳದಿಂದ ಪರಾರಿಯಾಗದೆ ಸಂತ್ರಸ್ತನನ್ನು ತಕ್ಷಣ ಆಸ್ಪತ್ರೆಗೆ ಸಾಗಿಸಿರುವುದು ಶಿಕ್ಷೆ ಇಳಿಕೆಗೆ ಕಾರಣವಾಗಿದೆ.

ಅಲ್ಲದೆ, ಶಿಕ್ಷೆಗೆ ಗುರಿಯಾಗಿರುವ ರಿಯಾಜ್ ಕೂಡ ನಂತರದ ದಿನಗಳಲ್ಲಿ ಮತ್ತೊಂದು ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದು, ಅವರ ಬಲಗಾಲಿಗೆ ರಾಡ್ ಅಳವಡಿಸಲಾಗಿದೆ. ಇದರಿಂದ ವೃತ್ತಿಪರ ಚಾಲನೆ ಮಾಡಲು ಸಾಧ್ಯವಾಗದೆ ಸಣ್ಣಪುಟ್ಟ ಕೆಲಸ ಮಾಡಿಕೊಂಡಿದ್ದಾರೆ ಎಂಬ ಅಂಶವು ದಾಖಲೆಗಳಿಂದ ತಿಳಿದುಬಂದಿದೆ ಎಂದು ನ್ಯಾಯಾಲಯ ತನ್ನ ಆದೇಶದಲ್ಲಿ ದಾಖಲಿಸಿದೆ.

ರಸ್ತೆ ಅಪಘಾತದಲ್ಲಿ ಗಾಯಗೊಂಡವರನ್ನು ಆಸ್ಪತ್ರೆಗೆ ಸೇರಿಸಿದ್ದ ಚಾಲಕ

''ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯ ಕುಟುಂಬದವರಿಗೆ ಹೆಚ್ಚುವರಿ ಪರಿಹಾರ ನೀಡಲಾಗುವುದು. ಹಾಗಾಗಿ, ಶಿಕ್ಷೆ ಕಡಿತಗೊಳಿಸಬೇಕು,'' ಎಂದು ಅಪಘಾತ ವೆಸಗಿದ ಚಾಲಕನ ಪರ ವಕೀಲರು ಮನವಿ ಮಾಡಿಕೊಂಡರು. ಇದಕ್ಕೆ ಒಪ್ಪಿಗೆ ಸೂಚಿಸಿದ ನ್ಯಾಯಪೀಠವು, ''ಅಂದಿನ ನ್ಯಾಯಾಲಯದ ಕಲಾಪ ಮುಗಿಯುವವರೆಗೆ ಶಿಕ್ಷೆ ವಿಧಿಸಿತು. ಬಳಿಕ ಮೃತರ ಪತ್ನಿ ಮತ್ತು ಪುತ್ರನಿಗೆ 1 ಲಕ್ಷ ರೂ. ಹೆಚ್ಚುವರಿ ಪರಿಹಾರ ನೀಡುವಂತೆ ಆದೇಶಿಸಿತು. ಜತೆಗೆ, ಈ ಮೊತ್ತವನ್ನು ತಲಾ 50,000 ರೂ.ಗಳಂತೆ ಎರಡು ಕಂತುಗಳಲ್ಲಿ ಜೂ.30ರೊಳಗಾಗಿ ಪಾವತಿಸಬೇಕು. ಒಂದು ವೇಳೆ ಈ ಹಣ ಪಾವತಿಸಲು ವಿಫಲವಾದರೆ, ಹಳೆಯ ಒಂದು ವರ್ಷದ ಜೈಲು ಶಿಕ್ಷೆ ತಾನಾಗಿಯೇ ಮರುಸ್ಥಾಪನೆಯಾಗಲಿದೆ,'' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಪ್ರಕರಣದ ಹಿನ್ನೆಲೆ: 2015 ಜು.15ರಂದು ಮಂಗಳೂರು-ಉಡುಪಿ ರಾಷ್ಟ್ರೀಯ ಹೆದ್ದಾರಿ 66ರ ಪಣಂಬೂರು ಬೀಚ್ ರಸ್ತೆ ಬಳಿ ಅರ್ಜಿದಾರ ರಿಯಾಜ್ ಅಹ್ಮದ್ ಚಲಾಯಿಸುತ್ತಿದ್ದ ಕಾರು ಆನಂದ್ ಶೆಟ್ಟಿ ಎಂಬ ಪಾದಚಾರಿಗೆ ಡಿಕ್ಕಿ ಹೊಡೆದಿತ್ತು. ಅಪಘಾತ ನಡೆದ ತಕ್ಷಣ ರಿಯಾಜ್ ಮತ್ತು ಅವರ ಮಗ ಗಂಭೀರವಾಗಿ ಗಾಯಗೊಂಡಿದ್ದ ಆನಂದ್ ಶೆಟ್ಟಿ ಅವರನ್ನು ತಮ್ಮದೇ ಕಾರಿನಲ್ಲಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದರು. ಆದರೆ, ದುರದೃಷ್ಟವಶಾತ್ ಆನಂದ್ ಶೆಟ್ಟಿ ಅವರು ಚಿಕಿತ್ಸೆ ಫಲಕಾರಿಯಾಗದೆ ಮರುದಿನ ಸಾವನ್ನಪ್ಪಿದ್ದರು.

ಈ ಪ್ರಕರಣದ ವಿಚಾರಣೆ ನಡೆಸಿದ್ದ ಮಂಗಳೂರಿನ ಸೆಷನ್ಸ್ ನ್ಯಾಯಾಲಯ ರಿಯಾಜ್‌ಗೆ 1 ವರ್ಷದ ಸಾಧಾರಣ ಜೈಲು ಶಿಕ್ಷೆ ಮತ್ತು 5,000 ರೂ. ದಂಡ ವಿಧಿಸಿತ್ತು. ಆ ಆದೇಶವನ್ನು ಪ್ರಶ್ನಿಸಿ ರಿಯಾಜ್ ಹೈಕೋರ್ಟ್ ಮೆಟ್ಟಿಲೇರಿದ್ದರು.

TIMES interact

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

Connecting People, Connecting Needs.

ಆಸ್ತಿಗಳು PROPERTY

OUTSIDE BANGALORE

TUMKUR

DOBBASPET, House for sale 30X40 @ Siddalingappa Layout, Ground & 1st Floor, Full concrete house Price: 1.50 Cr. Call Owner : 9663338630

PROPERTY ANCILLARIES

PROPERTY WANTED

ನಮ್ಮ ಕ್ಲೈಂಟ್‌ಗೆ ಹೊಸಕೋಟೆ ಬಳಿ 30 ಎಕರೆ ಕೈಗಾರಿಕಾ ಅಥವಾ ಕೃಷಿ ಭೂಮಿ ತುರ್ತಾಗಿ ಅಗತ್ಯವಿದೆ. ಸ್ಪಷ್ಟ ದಾಖಲೆಗಳೊಂದಿಗೆ ನೇರ ಮಾಲೀಕರು ದಯವಿಟ್ಟು ತಕ್ಷಣ ಸಂಪರ್ಕಿಸಿ: 9513006669 , 9513007776 ಬ್ಲೂ ಮೆಟ್ರೋ ರಿಯಾಲ್ಟಿ, ಬೆಂಗಳೂರು

ಉದ್ಯೋಗ RECRUITMENT

SITUATION VACANT

ACADEMIC

TEACHER

TEACHER'S wanted to teach All Subjects for English Medium High School and LKG to 7th Std. Qualification :Any degree, DEd/BEd/CPEd /BPEd with good fluency in English. Contact immediately NBN Vidyamandira, Weavers Colony, Bannerugatta Road. Ph: 9341247744.

INFOMATICS CBSE techno school & PU college Yelahanka, Rajanukunte, is hiring NTT, PGT, PRT teachers for Maths, Science, English, Art & craft, PT, CS/Robotics,Wardens etc. Send your resume to 7760729861

REQUIRED: TEACHER'S for Nursery, Primary, High school for Sri Annapurna Vidyaaniketan, Opposite PES University Veerabhadranagar, BSK 3rd stage, B.lore-85. Call- 7348894111

GURUKUL High School requires a passionate, qualified English Teacher B.A, B.ED. Interested call 8971626364 gurukulschool8@gmail.com

ACCOUNTS

ACCOUNTANT

WANTED Senior / Junior Accountants Female/ Male. Experience 3- 5 years in any MSME.Qualification BCom.Tally/Expense Accounting TDS/GST . Location Rajajinagar 6th block/ Jigani Industrial area. mail your resume to : sudarshangroupjob@gmail.com

ADMINISTRATION

EXECUTIVES

ಪಾರ್ಟ್ ಟೈಮ್ ಕೆಲಸ ಬಯಸುವವರು ನೀವು ಇರುವಲ್ಲಿ 1 ಗಂಟೆ ಕೆಲಸ ಮಾಡಿ ಪ್ರತಿದಿನ 500ಗಳಿಂದ ಸಾವಿರ ರೂ ಹಣ ಗಳಿಸುವ ಅವಕಾಶ ಸಂಪರ್ಕಿಸಿ: 97433 09498

MARKETING, ADVERTISING & SALES

Tele Caller

"REQ, Experienced / Fresher Telecallers, Team Leaders, For Bank Loan collection. Salary + Incentive 7019700755 / 9620206754

MARKETING

WANTED marketing executives in karnataka for Chennai based company Ct 9380154100

MEDICAL

LAB TECHNICIANS

REQD experienced lab technician with 2-3 yrs experience walk in interview at S G HOSPITAL,ITTAMADU MAIN ROAD.PH-8197859588

MEDICAL

ಬೇಕಾಗಿದ್ದಾರೆ ಮೆಡಿನೋವಾ ಹೆಲ್ತ್ ಕೇರ್ ಸರ್ವೀಸ್ ಸ್ಟಾಫ್ ನರ್ಸ್ ಪೇಷಂಟ್ ಕೇರ್ ಟೇಕರ್ ಬೇಬಿ ಕೇರ್ ಹಾಗೂ ಸೇವಕಿ ಬೇಕು. ಸಂ: 94823 35223. 93596 89132

OTHER VACANCIES

DRIVERS

WANTED DRIVERS 4 wheeler
A LEADING Pharma Distributor Company near Kengeri. Contact immediately : 9513306536 9916902503

30 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ, ಮಾನ್ಯ ಎಲ್‌ಎಂವಿ ಪರವಾನಗಿ ಹೊಂದಿರುವ ಅನುಭವಿ ಚಾಲಕ ಬೇಕಾಗಿದ್ದಾರೆ. ಕಂಪನಿ ಒಡೆತನದ ವಾಹನದಲ್ಲಿ ಕೆಲಸ ಮಾಡಲು. ಆಸಕ್ತ ಅಭ್ಯರ್ಥಿಗಳು ಮೊಬೈಲ್ ಸಂಖ್ಯೆ: 9901345791 ಅನ್ನು ಸಂಪರ್ಕಿಸಿ.ರಾಜಾನುಕುಂಟೆ ಮತ್ತು ಯಲಹಂಕ ಪ್ರದೇಶಗಳಿಗೆ ಆದ್ಯತೆ ನೀಡಲಾಗುವುದು.

GENERAL

OFFICE ADMINISTRATOR: Graduate, age group-30+ required for a firm in Chamrajpet, Bengaluru for invoicing, filing, documentation, followup works and other related clerical jobs. To have good computer knowledge and experience in ERP. Call : 080-26603729 for an interview. E-mail: admin@mahendraperfumery.com

ಬೇಕಾಗಿದ್ದಾರೆ: ಡ್ರೈವರ್ಸ್ 25 ರಿಂದ 45 ವರ್ಷ. ಸರ್ಕಾರಿ ಕಚೇರಿಗೆ 18000/- ಸಂಬಳ, ESI ಹಾಗೂ PF ಇರುತ್ತದೆ. ಬೆಂಗಳೂರು ಗಾಂಧಿನಗರ ಸುತ್ತಮುತ್ತ ಅದ್ಯತೆ. ಸಂಪರ್ಕಿಸಿ: 9164993307

TIMES TRIBUTE
PAYING HOMAGE TO THE DEPARTED SOUL
ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್/ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ/ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ನರಸಿಂಹ ಕುಲಕರ್ಣಿ–99160 79232
narasinha.kulkarni@timesofindia.com

ನೇಮಕಾತಿ CNC ಮೆಂಟೆನೆನ್ಸ್ ಟೆಕ್ನಿಷಿಯನ್ ಸ್ಥಳ :ಮಾರತ್ತಹಳ್ಳಿ ಬೆಂಗಳೂರು ನಾವು ITI ಅಥವಾ ಡಿಪ್ಲೊಮಾ ಅರ್ಹತೆ ಹೊಂದಿರುವ CNC ಮೆಂಟೆನೆನ್ಸ್ ಟೆಕ್ನಿಷಿಯನ್ ನೇಮಕ ಮಾಡುತ್ತಿದ್ದೇವೆ 2 ರಿಂದ 3 ವರ್ಷಗಳ CNC ಮೆಷಿನ್ ಮೆಂಟೆನೆನ್ಸ್ ಟ್ರಬಲ್‌ಶೂಟಿಂಗ್ ಮತ್ತು ಬ್ರೇಕ್‌ಡೌನ್ ಹ್ಯಾಂಡ್ಲಿಂಗ್ ಅನುಭವ ಇರಬೇಕು ವೇತನ: 25000 ರಿಂದ 35000 ಪ್ರತಿ ತಿಂಗಳು ಅಪ್ಲೈ: jobs@hpehyd.com ಸಂಪರ್ಕ: 7893250928

ರಾಜಾಜಿನಗರ 6ನೇ ಬ್ಲಾಕ್‌ನಲ್ಲಿರುವ ಆಫೀಸಿಗೆ 10ನೇ ತರಗತಿವರೆಗೆ ಓದಿರುವ ಸಹಾಯಕಿ ಹುಡುಗಿ ಬೇಕಾಗಿದ್ದಾರೆ. ರಾಜಾಜಿನಗರ 6ನೇ ಬ್ಲಾಕ್‌ನ ಸುತ್ತ ಮುತ್ತ ಇರುವವರಿಗೆ ಆದ್ಯತೆ ಸಂಪರ್ಕಿಸಿ: ಸುದರ್ಶನ್ ಗ್ರೂಪ್, 6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10. ರಂಜನ್ ಮೊ - 8884870791

MULTIPLE VACANCIES

WANTED
A Leading Layouts Real Estate developer is looking for 100% Experienced / Retired / Senior / Independent capacity &100% Dedicated
1) Revenue/Liaison
2) Civil Advocate
full time candidates for Bangalore office. Good salary will be given.
Please Mail detailed resume to
developersdirector@gmail.com

WE Are Hiring Industrial Marketing Executives / Tele callers / Service technicians TATA Power, Location:Rajajinagar, Bangalore. Contact : Nagesh Kulkarni 7760493235 or 7892620714

ಎಚ್ಚರಿಕೆ ನೋಟೀಸು
ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು /ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

RETIRED PERSONS

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

TECHNICAL

ENGINEERS

CALIBRE UPS, Inverters & Batteries Near Yeshwanthpur Requires, Technicians with ITI/ Diploma Electrical/ Electronics, Male SSLC for Field work Contact: 9845034531

JOB WANTED

WANTED Helpers & Sales Man for Ready made Blouse Show Room in Chickpet Age: 18-35 in Showroom activities Manoj Bafna Call: 9448121073

ವ್ಯಾಪಾರ BUSINESS

FOR SALE

BUSINESS for Sale in Uttarahalli, Manufacturing unit of Snacks & Savories running business incl goodwill & customers. All machines are 1yr old & excellent condition. Price 12L (Neg). Cont: 8884253229

ಪ್ರವಾಸ TRAVEL

PACKAGE TOURS

ಶ್ರೀ ಮಹದೇಶ್ವರ ಟೂರ್ಸ್ & ಟ್ರಾವೆಲ್ಸ್, 10 ದಿನಗಳ ಅಮರನಾಥ ಯಾತ್ರೆ, 14 ದಿನಗಳ ಚಾರ್ಧಮ್ ಯಾತ್ರೆ, ಸಂಪರ್ಕಿಸಿ: 9611801143, 9742810701.

TOURS & TRAVELS

05-06-2026 1 ದಿನ ಕೊಟ್ಟಿಯೂರ್ 11-6-26 3 ದಿನ ಕೊಟ್ಟಿಯೂರು, ವೈನಾಡು, 17-6-26 5 ದಿನ ಪಳನಿ, ರಾಮೇಶ್ವರಂ, ಕನ್ಯಾಕುಮಾರಿ ಇತ್ಯಾದಿ ಶ್ರೀವಿನಾಯಕ ಟ್ರಾವಲ್ಸ್9972500645

ಸೇವೆಗಳು SERVICES

REPAIRS/ WATERPROOFING

WATER PROOFING HERE IS THE SOLUTION FOR LEAKAGE ... LEAKAGE ...
OLD/NEW BUILDING, Sump, Bathroom, Terrace Wallcrack Skylight, Water proofing done by New Technology. Ph: 9880916988

personal

CHANGE OF NAME

I, Chandini S, W/o Sathish Kumar N, R/o# 01, Allamma complex, 1st Main Road, MAGADI main Road, Kottigepalya, Viswaneedam P.o. Bengaluru 560091 have changed my minor daughter's name from Hanvitha S to Hasini Shetty S

I, Martina Mary Martin D/o Leon Anthony D Monte R/o No 80, G 1, Bhanu Pride Apart ment, Kacharakanahalli, St Thomas Town Post, Bengaluru 560084. Have Changed My Name to Martina Mary D Monte for All Purposes.

I, Akshitha Venkat Babu, w/o Abhishek Bilithalu Manjunath, R/o No-33 3rd Cross Govinyakanahalli 2nd Stage Kumaraswamy Layout Bengaluru-560078 Have Changed my name to Akshitha for all Purposes.

I, SHANKAR P, residing at # 305, Muthyalamma Temple Street, Dommasandra, Anekal, Bengaluru – 562125, have changed my name to SHANKARAPPA P vide affidavit dated 23.05.2026 before notary V. Anjanappa, B'lore

I, Pranav SA alias Pranav S A S/o Shailendra Kumar R/o No 230, 8th B Main Road, 2nd D Cross Road, HRBR Layout, 1st Block, Banaswadi, Kalyananagar, Bengaluru-560043, have changed my name to Pranav S A.

I, Aijaz Pasha, s/o Mohammed Ameer, R/o No-A831 3rd Floor 2nd Stage BDA Layout, Austin Town, Bengaluru-560047 Have Changed my name to Mohammed Aijaz Ahmed for all Purposes.

I, Vanshika Jiten Sukhrani, R/O of B1101, Oak Wing, Adarsh Greens, Kogilu, Bangalore - 560064 has changed my name to Vanshika Sukhrani for all purposes.

I, Rajive Jain S/o Kamal Chand jain R/o #641,8th B Main Saneguruvanahalli Rajajinagar B'lore-560079 have changed my name to Rajeev Kumar jain .

LOST & FOUND

I, Chandrakala W/o. Late. Chandramohan B.P. R/a #93, 2nd cross, 3rd phase, 5th block, Banashankari 3rd stage Bangalore- 85. have lost my Property's Original Allotment Letter and Original Possession Certificate, Property Situated Site No. 192/Y, 12th Main Road, Rajajinagar 3rd Block, Bangalore-10. Above documents lost while Travelling on 12.03.2026 at Banashankari. Lost Report No. 2106688/2026 Bangalore. If anybody found please call: 9916820908/ near police station

I, BABU, office address at Kalyan Nagar, have lost Original Sale Deed's, No. 8231 and 8232 dated 23.12.2006 on 20.05.2026 near between Indira Nagar to Kalyan Nagar. Finders please contact: 9538490009

ಜೀವನ ಸಂಗಾತಿ
Love finds it's match.



WANTED BRIDES



WANTED GROOMS

ವೈವಾಹಿಕ MATRIMONIALS

WANTED BRIDES

BY CASTE

BRAHMIN

2ನೇ ಸಂಬಂಧಕ್ಕೆ ವಧು ಬೇಕಾಗಿದ್ದಾರೆ. 58 ವರ್ಷ ಬ್ರಾಹ್ಮಣ ವರನಿಗೆ, 35 ರಿಂದ 50 ವರ್ಷ ಒಳಗಿನ ವಯಸ್ಸಿನ ಕನಿಷ್ಠ ಎಸ್.ಎಸ್.ಎಲ್.ಸಿ ವಿದ್ಯಾರ್ಹತೆಯ ಬ್ರಾಹ್ಮಣ ವಧು ಬೇಕಾಗಿದೆ. ಮೊ.ನಂ.: 88616 25673.

VOKKALIGA

ವಧು ಬೇಕಾಗಿದೆ: M.Tech ಪದವಿ ಪಡೆದು ಕನ್ಸಲ್‌ಟೆಂಟ್ ಹುದ್ದೆ ಜೊತೆಗೆ 20 ಎಕರೆ ಅಡಿಕೆ/ಕಬ್ಬಿನ ತೋಟ ಹೊಂದಿರುವ ಗೌರವಾನ್ವಿತ ಕುಟುಂಬದ 40 ವರ್ಷ ವಯಸ್ಸಿನ ಒಕ್ಕಲಿಗ ಸಮುದಾಯದ ವರನಿಗೆ ವಧು ಬೇಕಾಗಿದೆ. ಸಂಪರ್ಕಿಸಿ: 9448220651

ವಧು ಬೇಕಾಗಿದೆ. ಒಕ್ಕಲಿಗ 45 ವರ್ಷ, ಎಂಎಸ್ಸಿ, ಎಂಟೆಕ್, 5.8' ಮಕ್ಕಳಿಲ್ಲದ ವಿಚ್ಛೇದಿತ ಅನುಕೂಲವಂತ ವ್ಯಾಪಾರ ಮಾಡುವ ವರನಿಗೆ ವಧು ಬೇಕಾಗಿದೆ. ಸಂ : 8095732067.

BY PROFESSION

OTHER PROFESSIONALS

ವಧು ಬೇಕಾಗಿದೆ: 45ರಿಂದ 50 ವರ್ಷದ ವಿಧವೆ ವಧು ಕೆಳ ಕಾಣಿಸಿದ ವರನಿಗೆ ಬೇಕಾಗಿದೆ. ಆಸಕ್ತಿ ಇದ್ದವರು direct ಕರೆ ಮಾಡಿ 7019393233. No Broker.

BY RELIGION

CHRISTIAN

SYRIAN Catholic bridegroom, 1986, 174 cm fair, B.Tech MBA, MNC Bangalore. A fair good-looking qualified bride needed. 99720 05190.

HINDU

HINDU Besta, Kannada, June'84/Pune Born/5'8",Graduate, Never Married, good-looking, Job in RBI Press, Mysore, 20LPA seeks Hindu, Never Married, good-looking bride(34-41), 5'-5'8", Educated, Working, mother tongue Kannada/ Marathi/ Tulu/ Konkani/ others preferred. Caste no bar. Call/WA 7899402978

ಮಂಡ್ಯ ಜಿಲ್ಲೆ, 40 ವರ್ಷ, ಭಾವಸಾರ ಕ್ಷತ್ರಿಯ, ಅನುಕೂಲಸ್ಥ ವಿಧುರ 2ನೇ ವಿವಾಹಕ್ಕೆ ಹಿಂದೂ ಹೆಣ್ಣು ಬೇಕಾಗಿದೆ. ವಿಧವೆ, ವಿಚ್ಛೇದಿತೆ ಪರವಾಗಿಲ್ಲ. 9844951315, 90363 89925

GENERAL

CASTE NO BAR

54 ವರ್ಷದ ಪುರುಷನಿಗೆ ಸಸ್ಯಹಾರಿ ಆಗಿದ್ದು, ಸಮ ವಯಸ್ಸಿನ / ಕೆಳಗಿನ ವಯಸ್ಸಿನವರಾಗಿದ್ದು, ಯಾವುದೇ ಜಾತಿಯ ಮದುವೆಯಾಗದ, ವಿಧವೆ, ವಿಚ್ಛೇದಿತೆ ಆಗಿರುವಂತ ವಧು ಬೇಕಾಗಿರುತ್ತದೆ. ಸಂಪರ್ಕಿಸಿ: 9742354919.

28 ವರ್ಷದ ವಿಧುರನಿಗೆ ವಧು ಬೇಕಾಗಿದೆ ಸ್ವಂತ ಉದ್ಯೋಗ, ಜಾತಿ ಅಭ್ಯಂತರವಿಲ್ಲ ನೇರವಾಗಿ ಸಂಪರ್ಕಿಸಿ:- 8548042722

SC/ST

ಸರವಣ (42 ವರ್ಷ, ವಿಕಲಚೇತನ) ಆದ ನನಗೆ ವಧು ಬೇಕಾಗಿದೆ. ಎಸ್‌ಸಿ ಸಮುದಾಯದವನಾಗಿದ್ದು, ಬೆಂಗಳೂರಿನಲ್ಲಿ ಸ್ವಂತ ಮನೆಯಿದೆ. ಮಾಸಿಕ 40 ಸಾವಿರ ಆದಾಯ. ಸಂ. 78299 87450.

MARRIAGE BUREAUS

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧು-ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ
ಡಾ. ಹಿರೇಮಠ್ ಗುರೂಜಿ
94482 29184
78996 25268

ನಮ್ಮಲ್ಲಿ ಇರುವ ಬ್ರಾಹ್ಮಣ ವರಗಳಿಗೆ ವಧುಗಳು, ವಿಧವೆ, ವಿಚ್ಛೇದಿತೆ, ಅವಿವಾಹಿತೆ ತಕ್ಷಣ ಬೇಕಾಗಿದೆ. ವ್ಯವಹರಿಸಿ: ಪಿ.ಎಸ್. ಗುರುರಾಜ, ವಿಳಾಸ: 359 "ಶ್ರೀನಿಧಿ" 11ನೇ ಮೇನ್, ಪೂರ್ಣಪ್ರಜ್ಞಾ ನಗರ, ಉತ್ತರಹಳ್ಳಿ, ಬೆಂಗಳೂರು 560061 ವಾಟ್ಸಾಪ್ ನಂ. 94483 68257.

WANTED GROOMS

BY CASTE

BRAHMIN

ಬ್ರಾಹ್ಮಣ ವಧುವಿನ, 'ಕನ್ಯೆಯ' ವಯಸ್ಸು 24, SSLC ಕಲಿತಿರುವ / ವಯಸ್ಸು 28, PUC / ವಯಸ್ಸು 32, SSLC ಕಲಿತಿರುವ ವಧುವಿಗೆ ವರ ಬೇಕಾಗಿದೆ. ಬ್ರಾಹ್ಮಣ ವಧು-ವರರಿಗಾಗಿ ಸಂಪರ್ಕಿಸಿ. (ಮ್ಯಾರೇಜ್ ಬ್ಯೂರೋ), (M) 9483385177.

GENERAL

CASTE NO BAR

2ನೇ ಸಂಬಂಧಕ್ಕೆ ವರ ಬೇಕಾಗಿದ್ದಾರೆ. ವಯಸ್ಸು 35 ವರ್ಷ ಜಾತಿ ಭೋವಿ, ನೇರವಾಗಿ ಸಂಪರ್ಕಿಸಿ 9148290400. ಜಾತಿ ವಯಸ್ಸು ಅಭ್ಯಂತರವಿಲ್ಲ.

CAUTION
This newspaper does not vouch or subscribe to the claims and representations made by the advertisers regarding the particulars of status, age and income of the brides/ bridegrooms.
ADVERTISEMENT MANAGER

GET NOTICED

JAIN INDUSTRIAL CORPORATION
BUYER OF ALL TYPES OF INDUSTRIAL STEEL AND SCRAP

• Ferrous & Non-Ferrous Scrap
• Factory Scrap Lifting & Bulk Procurement
Bommasandra | Hosur | Peenya
Ph: 9886222290, 9743466448
jainindustrialcorp@gmail.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು

GALLERIA

BHARATH EDUCATION SOCIETY®
BES Pre-University College of Science, Commerce & Arts
27, Sahakara Rathna B.L. Lakke Gowda Road, 16th Main, Jayanagar 4th Block, Bengaluru-560011
Email: principalas018@gmail.com
Website: www.besinstitutions.com
080-26637018 / 98863 52466



Sahakara Rathna B.L. Lakke Gowda
Founder
B.E.S Institutions

Free Integrated Course NEET, JEE, K-CET, COMED-K
Affordable Fee for I & II PUC Science

Sri S.T. Somashekhar
Hon. President, Bharath Education Society
MLA, Yeshwanthpura Constituency,
Former Minister, Govt of Karnataka

COURSES OFFERED FOR : 2026-27
PUC: PCMB | PCMC | HEBA | SEBA | CEBA | HEPS
Languages Offered: English, Kannada, Hindi & Sanskrit
BES EVENING PU COLLEGE OF COMMERCE & ARTS
080-26533736 / 95387 98956 Email: beseveningpucollege@gmail.com
PUC: HEBA | HEPS
Sri Nirmal Kumar K.R., President, Bharath Education Society
Prof N.S. Vijaya, Secretary, Bharath Education Society
Prof Srinivasa C., Principal, BES PU College
Sri Suresh, Principal, BES Evening PU College
BES-26708

ADMISSION NOTICE

IMPACT GROUP OF INSTITUTIONS
ಇಂಪ್ಯಾಕ್ಟ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್
IMPACT CAMPUS SAKAHARA NAGAR SOUTH, BANGALORE-560092
ISO 9001:2015 CERTIFIED
IIMS IMPACT INSTITUTE OF MANAGEMENT STUDIES
Affiliated to BCU-Approved by AICTE
UG PROGRAMS - 3 Years
BCA - Fullstack Development
B.Com - With CA Foundation
BBA - Digital Marketing Certification
B.Sc - Interior Design and Decoration
PG PROGRAM- 2 Years
MBA - Dual Specialization
SPECIAL SCHOLARSHIPS
For Meritorious, SC/ST and Economically Deserving Students
Apply Now
100% Placement Assistance
Contact Us: +91 8050011866, 8880810015, 8050011855
Special Fees for * BCom, BBA and BSc (IDD) is ₹40000 per year.
* BCA is ₹50000 per year. This fee is valid only till 31st May 2026.
ROUNAQH

Published for the Proprietors, Metropolitan Media Company Limited, by Lokesh KV at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.
RNI No. 71653/99
Vol. 27 Issue No.143

ಮೇ 25ರಿಂದ ಸಿಇಟಿ ಸೀಟು ಹಂಚಿಕೆ ಮಂಥನ

■ **ವಿಕ ಸುದ್ದಿಲೋಕ** ಬೆಂಗಳೂರು

ಸಿಇಟಿ ಕೌನ್ಸೆಲಿಂಗ್ ಪ್ರಕ್ರಿಯೆ ಕುರಿತು ಜಾಗೃತಿ ಮೂಡಿಸಲು ರಾಜ್ಯದ 65 ಸರಕಾರಿ ಎಂಜಿನಿಯರಿಂಗ್, ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ ಮೇ 25ರಿಂದ 30ರವರೆಗೆ ಸಿಇಟಿ ಸೀಟು ಹಂಚಿಕೆ ಮಂಥನ ಕಾರ್ಯಾಗಾರ ಆಯೋಜಿಸಿದ್ದು, ಇದಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಮೇ 28ರಂದು ಹೊರತುಪಡಿಸಿ ಎಲ್ಲಾ ದಿನಗಳಲ್ಲಿ ನಿತ್ಯ ಎರಡು ಅವಧಿಯಲ್ಲಿ (ಬೆಳಿಗ್ಗೆ 10 ರಿಂದ 12, ಮಧ್ಯಾಹ್ನ 2 ರಿಂದ ಸಂಜೆ 4 ಗಂಟೆವರೆಗೆ) ಕಾರ್ಯಾಗಾರ ನಡೆಯಲಿದ್ದು, ನುರಿತ ಹಾಗೂ ಕೆಇಎಯಿಂದ ತರಬೇತಿ ಪಡೆದ ಸಂಪನ್ಮೂಲ ವ್ಯಕ್ತಿಗಳು ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಸಿಇಟಿ ಸೀಟು ಹಂಚಿಕೆ ಮಂಥನ ಕಾರ್ಯಾಗಾರದಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ಹಾಗೂ ಪೋಷಕರು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿರುವ ಲಿಂಕ್ ಬಳಸಿ ಸಮಯ ಹಾಗೂ ಕಾರ್ಯಕ್ರಮ ನಡೆಯುವ ಕಾಲೇಜನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಮಂಥನದಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಸ್ಲಾಟ್ ಬುಕ್ ಮಾಡಿಕೊಂಡು ಭಾಗಿಯಾಗಬೇಕು ಎಂದು ಪ್ರಾಧಿಕಾರ ತಿಳಿಸಿದೆ. ಹಲವು ಬಾರಿ ವಿದ್ಯಾರ್ಥಿಗಳಿಗೆ ಉತ್ತಮ ರ್‍ಯಾಂಕ್ ಬಂದಿದ್ದರೂ ಆಯ್ಕೆ ದಾಖಲಿಸುವಾಗ ಆಗುತ್ತಿದ್ದ ಸಣ್ಣಪುಟ್ಟ ತಪ್ಪುಗಳಿಂದ ಇಷ್ಟದ ಕಾಲೇಜುಗಳು ಕೈತಪ್ಪಿ ಹೋಗುತ್ತಿದ್ದವು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕಳೆದ ವರ್ಷ ಸಿಇಟಿ ಸೀಟು ಹಂಚಿಕೆ ಮಂಥನ ಆರಂಭಿಸಿದ್ದ ಕೆಇಎ, ಈ ಬಾರಿ ಕೂಡ ಜಾಗೃತಿ ಮೂಡಿಸಲು ಮುಂದಾಗಿದೆ.

ಏನೆಲ್ಲ ಮಾಹಿತಿ ಲಭ್ಯ?

ಸೀಟು ಹಂಚಿಕೆ ಪ್ರಕ್ರಿಯೆ ಹೇಗೆ ನಡೆಯುತ್ತದೆ, ಆಯ್ಕೆ ದಾಖಲಿಸುವುದು ಹೇಗೆ, ಸೀಟು ಹಂಚಿಕೆ ಬಳಿಕ ಚಾಯ್ಸ್ ಆಯ್ಕೆ ಮಾಡಿಕೊಳ್ಳುವುದು ಹೇಗೆ ಎಂಬುದರ ಜತೆಗೆ, ಉತ್ತಮ ಕಾಲೇಜಿನ ನಿರೀಕ್ಷೆಯಿದ್ದರೆ ಏನು ಮಾಡಬೇಕು, ಶುಲ್ಕ ಪಾವತಿ ಹೇಗೆ ಎಂಬ ಮಾಹಿತಿಗಳನ್ನು ಮಂಥನ ಕಾರ್ಯಾಗಾರದಲ್ಲಿ ವಿವರಿಸಲಾಗುತ್ತದೆ.

ನೈಜ ಭಾರತೀಯರಿಗೇ ಮತದಾನದ ಹಕ್ಕು ಕೊಡಲು ಎಸ್ಐಆರ್

■ **ವಿಕ ಸುದ್ದಿಲೋಕ** ಬೆಂಗಳೂರು

''ದೇಶದ ಮತದಾರರಲ್ಲದವರಿಗೆ ಮತ ನಿರಾಕರಿಸಿ, ನೈಜ ಭಾರತೀಯರಿಗಷ್ಟೇ ಮತದಾನದ ಅವಕಾಶ ಕೊಡುವ ಪ್ರಕ್ರಿಯೆ ಎಸ್ಐಆರ್,'' ಎಂದು ಬಿಜೆಪಿ ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ.

ಶನಿವಾರ ಮಾತನಾಡಿದ ಅವರು, ''ದಾಖಲೆ ಕೊಡದವರಿಗೆ ಭಾರತೀಯರೆಂದು ಖಾತರಿಪಡಿಸುವ ದಾಖಲೆ ಸಲ್ಲಿಸುವಂತೆ ನೋಟಿಸ್ ನೀಡಲಾಗುತ್ತದೆ. ವಿದೇಶದಿಂದ ಬಂದು ಅಕ್ರಮವಾಗಿ ನೆಲೆಸಿದವರು, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ತರುವವರಿಗೆ ಮತ ನಿರಾಕರಿಸುವುದು ಇದರ ಮೂಲ ಉದ್ದೇಶಗಳಲ್ಲಿ ಒಂದು. ಕಾಂಗ್ರೆಸ್‌ನವರು ಎಸ್ಐಆರ್ ಸ್ವಾಗತಿಸಬೇಕೆ ಹೊರತು ಅಪಪ್ರಚಾರ ಮಾಡಬಾರದು,'' ಎಂದು ಹೇಳಿದರು.



ನಿತ್ಯ ಭವಿಷ್ಯ

ರಾಜಗುರು ದ್ವಾರಕನಾಥ್

ಪ್ರಶ್ನೆ: ಖರ್ಚು ಅಧಿಕವಾಗಿದೆ. ಏಕೆ ಹೀಗಾಗುತ್ತಿದೆ? ಪರಿಹಾರ ತಿಳಿಸಿಕೊಡಿ ಗುರೂಜಿ.

ಜನ್ಮ ದಿನಾಂಕ: 13.04.1985 **ನಕ್ಷತ್ರ:** ಅನುರಾಧ

ಪರಿಹಾರ: ಖರ್ಚು-ವೆಚ್ಚಗಳಿಗೆ ಕಡಿವಾಣ ಹಾಕುವುದು ನಿಮ್ಮ ಕೈಯ್ಯಲ್ಲಿಯೇ ಇದೆ. ಖರ್ಚು ನಿಯಂತ್ರಿಸಲೇಬೇಕು. ವೆಚ್ಚ ನಿಯಂತ್ರಿಸದಿದ್ದರೆ ಬದುಕು ಬಿರುಗಾಳಿಗೆ ಸಿಲುಕಿದಂತೆ ಆಗಬಹುದು. ದೈವ ಶಕ್ತಿಯ ನೆರವಿನಿಂದ ನಿಮ್ಮನ್ನು ನೀವು ಕಾಪಾಡಿಕೊಳ್ಳುವ ಸಮಯ ಬಂದಿದೆ. ಲಕ್ಷ್ಮೀನಾರಾಯಣನನ್ನು ಪೂಜಿಸಿ.

ನೀವೂ ಪ್ರಶ್ನೆ ಕೇಳಬಹುದು...
ವಾಟ್ಸ್ಆ್ಯಪ್ ಸಂಖ್ಯೆ: 6366422240

ಪಂಚಾಂಗ 24-05-2026

ಪರಾಭವ ನಾಮ ಸಂವತ್ಸರ
ಆಯನ: ಉತ್ತರಾಯಣ.
ಋತು: ಗ್ರೀಷ್ಮ. **ಮಾಸ:** ಅಧಿಕ ಜ್ಯೇಷ್ಠ. **ಪಕ್ಷ:** ಶುಕ್ಲ. **ಮಳೆ ನಕ್ಷತ್ರ:** ಕೃತ್ತಿಕಾ. **ನಿತ್ಯನಕ್ಷತ್ರ:** ಪೂರ್ವಫಾಲ್ಗುಣ. **ತಿಥಿ:** ನವಮಿ.
ಯೋಗ: ಹರ್ಷಣ. **ಕರಣ:** ಬಾಲವ. **ವಾರ:** ಭಾನುವಾರ.

ರಾಹು ಕಾಲ: ಸಂ. 4.30 - 6.00
ಗುಳಿಕ ಕಾಲ: ಮ. 3.00-4.30
ಯಮಗಂಡ ಕಾಲ: ಮ. 12.00-1.30
ಸೂರ್ಯ ಉದಯ: ಬೆ. 5.54
ಸೂರ್ಯ ಅಸ್ತ: ಸಂ. 6.39

ಕನ್ನಡ ಶಾಲೆ ಉಳಿವಿಗೆ ದೇಮ ಸೂತ್ರ

ಸ್ಪೋಕನ್ ಇಂಗ್ಲಿಷ್‌ಗೆ ಆದ್ಯತೆ ನೀಡಿ | ಅಲೆಮಾರಿ ಮಕ್ಕಳಿಗೆ ವಸತಿ ಶಾಲೆ | ದೇವನೂರ ಮಹಾದೇವ ಸಲಹೆ

■ **ವಿಕ ಸುದ್ದಿಲೋಕ** ಮೈಸೂರು

ಶಿಕ್ಷಣ ಎಂದರೆ ಕೇವಲ ಪಠ್ಯಪುಸ್ತಕಗಳ ಅಕ್ಷರ ಜ್ಞಾನವಲ್ಲ, ಅದು ಸಮಾಜದ ಆತ್ಮವನ್ನು ರೂಪಿಸುವ ಪ್ರಕ್ರಿಯೆ. ಹಾಗಾಗಿ ಅಳಿವಿನಂಚಿನಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸಬೇಕಿದೆ ಎಂದು ಹಿರಿಯ ಸಾಹಿತಿ ದೇವನೂರ ಮಹಾದೇವ ಸರಕಾರಕ್ಕೆ ಸಲಹೆ ನೀಡಿದ್ದಾರೆ.

ದೇವನೂರ ಮಹಾದೇವ ಅವರ ಕುವೆಂಪುನಗರದ ನಿವಾಸಕ್ಕೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಶನಿವಾರ ಭೇಟಿ ನೀಡಿ ಶಿಕ್ಷಣದ ಹಲವು ವಿಚಾರಗಳನ್ನು ಚರ್ಚಿಸಿದರು. ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಫಲಿತಾಂಶ ಸುಧಾರಣೆ, ಕೆಪಿಎಸ್ ಶಾಲೆಗಳಲ್ಲಿ ಜಾರಿಗೆ ತರಲು ರೂಪಿಸಿರುವ ನಾನಾ ಯೋಜನೆಗಳು, ಸರಕಾರಿ ಶಾಲಾ-ಕಾಲೇಜುಗಳ ಶೈಕ್ಷಣಿಕ ಗುಣಮಟ್ಟ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಸಮಾಲೋಚನೆ ನಡೆಸಿದರು.

''ಮಾತೃಭಾಷೆ ಕನ್ನಡ ಅಳಿವಿನಂಚಿನಲ್ಲಿದ್ದು, ಪ್ರಾಣಿ, ಪಕ್ಷಿಗಳ ಬಾಯಿಗೆ ಆಹಾರವಾದಂತಾಗಿದೆ. ಇಂತಹ ಸಂದರ್ಭದಲ್ಲಿ ಕನ್ನಡ ಶಿಕ್ಷಣ ಮಾಧ್ಯಮವನ್ನು ಉಳಿಸಬೇಕಿರುವುದು ಎಲ್ಲರ ಜವಾಬ್ದಾರಿ,'' ಎಂದು ದೇವನೂರ ಮಹಾದೇವ ಪ್ರತಿಪಾದಿಸಿದರು.

''ರಾಜ್ಯ ಸರಕಾರ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಆರಂಭದ ಜತೆಗೆ ಎಲ್ಲಿ ಮಕ್ಕಳ ಸಂಖ್ಯೆ ಹೆಚ್ಚು ಇರುತ್ತದೆಯೊ ಅಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣವನ್ನು ಕೊಡಬೇಕಿದೆ. ಕನ್ನಡ ರಾಜ್ಯ ಭಾಷೆಯೂ ಆಗಿರುವುದರಿಂದ ಗ್ರಾಮೀಣ ಹಾಗೂ ಗಡಿ ಭಾಗದಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಉದ್ಯೋಗದಲ್ಲಿ ಶೇ. 10ರಷ್ಟು ಕೃಪಾಂಕ ಕೊಡಬಹುದೆ,'' ಎಂದು ಪ್ರಶ್ನಿಸಿದರು.

ಶಾಲೆ ಮುಚ್ಚಬೇಡಿ

''ಕೆಲವು ಶಾಲೆಗಳಲ್ಲಿ ಒಬ್ಬ ವಿದ್ಯಾರ್ಥಿ, ಒಬ್ಬ ಶಿಕ್ಷಕ, ಇಬ್ಬರು ಅಡುಗೆಯವರು ಇರುವುದನ್ನು ಗಮನಿಸಿದ್ದೇನೆ. ಇದು ಶಿಕ್ಷಣವಲ್ಲ, ಇದೊಂದು ರೀತಿ ಶಿಕ್ಷೆ. ಇಂತಹ ಸಂದರ್ಭದಲ್ಲಿ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಆರಂಭ ಉತ್ತಮ ಬೆಳವಣಿಗೆ. ಆದರೆ, ಶಾಲೆಗಳನ್ನು ಮುಚ್ಚುತ್ತೇವೆ ಎಂದು ಎಲ್ಲಿಯೂ ಹೇಳಬೇಡಿ. ಒಬ್ಬ ಮಗುವೂ ಶಿಕ್ಷಣದಿಂದ ವಂಚಿತವಾಗಬಾರದು,'' ಎಂದರು.

''ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ್ ಕಲಿಸುವ ಕೆಲಸವಾಗಬೇಕು. ಹೀಗಾಗಿ ಸ್ಪೋಕನ್ ಇಂಗ್ಲಿಷ್‌ಗೆ ಆದ್ಯತೆ ನೀಡಬೇಕು. ಅಲ್ಲಿ ಮಕ್ಕಳಿಗೆ ಬರಹ ಮತ್ತು ಓದುವುದನ್ನು ಹೇಳಿ ಕೊಡಬಾರದು. ಮಾತನಾಡುವುದನ್ನು ಮಾತ್ರ ಹೇಳಿ ಕೊಡಬೇಕು. ಇಂಗ್ಲಿಷ್ ಕಲಿತರೆ ಮಕ್ಕಳಿಗೂ ಆತ್ಮವಿಶ್ವಾಸ ಬರುತ್ತದೆ. ಇದಕ್ಕೆ ಅತಿಥಿ ಅಥವಾ ವಿಶೇಷ ಶಿಕ್ಷಕರನ್ನಾಗಿ ನೇಮಿಸಿಕೊಂಡು ಮಕ್ಕಳಿಗೆ ಇಂಗ್ಲಿಷ್ ಕಲಿಸಿ,'' ಎಂದು ಕಿವಿಮಾತು ಹೇಳಿದರು.

''ಆದಿವಾಸಿ ಮಕ್ಕಳಿಗೆ ಆಶ್ರಮ ಶಾಲೆಗಳಿವೆ. ಆದರೆ, ಕಾಡಂಚಿನ ಮಕ್ಕಳಿಗೆ, ಅಲೆಮಾರಿ ಮತ್ತು ಗುಳೆ ಹೋಗುವ ಮಕ್ಕಳಿಗೆ ಸರಿಯಾದ ಶಾಲೆಗಳಿಲ್ಲ, ಹಾಗಾಗಿ ಅವರಿಗೆ ವಿಶೇಷ ವಸತಿ ಶಾಲೆಗಳನ್ನು ಆರಂಭಿಸಬೇಕು. ಅಲೆಮಾರಿ ಮಕ್ಕಳು ಎಲ್ಲಿಯೇ ಹೋದರೂ ಅವರಿಗೆ ಆಶ್ರಯ ಕೊಡಬೇಕು,'' ಎಂದು ಸಲಹೆ ನೀಡಿದರು.

ದೇವನೂರ ಸೂತ್ರಗಳು

- ಸರಕಾರಿ ಶಾಲೆಗಳಲ್ಲಿ ಸಮುಚ್ಚಯ ಎನ್ನುವ ಪರಿಕಲ್ಪನೆ ಜಾರಿಗೆ ತನ್ನಿ.
- ಮಕ್ಕಳಿಗೆ ಕಲೆಯ ಜತೆಗೆ ನಾಟಕವನ್ನೂ ಕಲಿಸಿ
- ಅತಿಥಿ ಶಿಕ್ಷಕರ ನೇಮಿಸುವಾಗ ಮೀಸಲು ಕೊಡಿ
- ಸರಕಾರಿ ಶಾಲೆಗಳನ್ನು ಖಾಸಗಿಯವರೊಂದಿಗೆ ವಿಲೀನ, ಮಾರಾಟ ಮಾಡಬೇಡಿ
- ಕನ್ನಡ ಅಕ್ಷರ ಮತ್ತು ಕಾಗುಣಿತವನ್ನು ವಿಶೇಷ ಪರಿಕಲ್ಪನೆಯಲ್ಲಿ ಕಲಿಸಿ

ಕೇಂದ್ರೀಯ ವಿದ್ಯಾಲಯದ ನಿಯಮ ಪಾಲನೆ: ಮಧು ಬಂಗಾರಪ್ಪ

ಹಿಜಾಬ್ ಸಮಾನತೆ ಸಂಕೇತ, ಕೇಸರಿ ಧರಿಸಿ ಬಂದ್ರೆ ಕ್ರಮ

■ **ವಿಕ ಸುದ್ದಿಲೋಕ** ಮೈಸೂರು

ಹಿಜಾಬ್ ನಮಗೆ ಸಮಾನತೆ ಸಂಕೇತ. ರಾಜ್ಯ ಸರಕಾರದ ಶಾಲೆಗಳಿಗೆ ಕೇಸರಿ ಶಾಲಿಗೆ ಅವಕಾಶವಿಲ್ಲ, ಯಾರಾದರೂ ಅದನ್ನು ಉಲ್ಲಂಘಿಸಿದರೆ ಕಾನೂನು ಪ್ರಕಾರ ಕ್ರಮ ಜರುಗಿಸುತ್ತೇವೆ ಎಂದು ಶಿಕ್ಷಣ ಸಚಿವ ಮಧುಬಂಗಾರಪ್ಪ ಎಚ್ಚರಿಕೆ ನೀಡಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ''ಕೇಂದ್ರೀಯ ವಿದ್ಯಾಲಯದಲ್ಲಿ ಇರುವ ನಿಯಮಗಳನ್ನೇ ನಮ್ಮ ಶಾಲೆಗಳಲ್ಲೂ ಜಾರಿಗೆ ತರಲಾಗಿದೆ,'' ಎಂದು ಸಮರ್ಥಿಸಿಕೊಂಡರು.

''ಸಮವಸ್ತ್ರ ವಿಷಯದಲ್ಲಿ ಕೇಂದ್ರೀಯ ವಿದ್ಯಾಲಯ, ಮಹಾರಾಷ್ಟ್ರ ಹಾಗೂ ಕರ್ನಾಟಕಕ್ಕೆ ಪ್ರತ್ಯೇಕ ನಿಯಮ ಇದೆಯೇ? ರಾಜ್ಯದ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ. 95ರಷ್ಟು ಹಿಂದೂಗಳಿದ್ದಾರೆ. ಟೀಕೆ ಮಾಡುವವರೆಲ್ಲರೂ ಆ ಮಕ್ಕಳ ಕಾಲಡಿಗೆ ನುಗ್ಗಲಿ. ಆಗ ಬುದ್ಧಿ ಬರುತ್ತದೆ,'' ಎಂದು ಟೀಕಿಸಿದರು.

ಸರಕಾರಿ ನೌಕರರ ಮಕ್ಕಳನ್ನು ಕಡ್ಡಾಯವಾಗಿ ಸರಕಾರಿ ಶಾಲೆಗಳಿಗೆ ಸೇರಿಸುವ ವಿಚಾರವಾಗಿ ಪ್ರತಿಕ್ರಿಯಿಸಿ, ''ಇದನ್ನು ಕಡ್ಡಾಯ ಮಾಡುವುದು ಸಾಧ್ಯವಿಲ್ಲ, ಯಾವ ಶಾಲೆಗೆ ಸೇರಿಸಬೇಕು ಎಂಬುದು ಪೋಷಕರು ಹಾಗೂ ಮಕ್ಕಳ ಹಕ್ಕು. ಈ ಬಗ್ಗೆ ಸುಪ್ರೀಂ ಕೋರ್ಟ್ ಸ್ಪಷ್ಟ ಅಭಿಪ್ರಾಯ ನೀಡಿದೆ,'' ಎಂದು ಹೇಳಿದರು. ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ವಿಚಾರವಾಗಿ ಮಾತನಾಡಿ, ''ಕೇಂದ್ರ ಸರಕಾರಕ್ಕೆ ಒಂದು ಪರೀಕ್ಷೆಯನ್ನು ಮಾಡುವ ಯೋಗ್ಯತೆ ಇಲ್ಲ, ಮೂರು ವರ್ಷದಿಂದ ನನ್ನ ಇಲಾಖೆಯಲ್ಲಿ ಒಂದೇ ಒಂದು ಪ್ರಶ್ನೆ ಪತ್ರಿಕೆ ಸೋರಿಕೆಯಾಗಿಲ್ಲ, ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಬಗ್ಗೆ ಉತ್ತರ ಕೊಡಬೇಕಾಗುತ್ತದೆ ಎಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಒಂದು ವಾರ ಓಡಿ ಹೋಗಿದ್ದರು. ಧರ್ಮೇಂದ್ರ ಪ್ರಧಾನ್ ನನ್ನ ಬಳಿಗೆ ಬಂದರೆ, ಪ್ರಶ್ನೆಪತ್ರಿಕೆ ಸೋರಿಕೆಯಾಗದ ರೀತಿಯಲ್ಲಿ ಪರೀಕ್ಷೆ ಮಾಡುವುದು ಹೇಗೆ ಎಂಬುದನ್ನು ಹೇಳಿಕೊಡುತ್ತೇನೆ,'' ಎಂದರು.

ಕನ್ನಡ ಬರೆಯಲು ಬರುವುದಿಲ್ಲ

''ನನ್ನ ಶೈಕ್ಷಣಿಕ ಹಿನ್ನೆಲೆ ಬಗ್ಗೆ ಗೇಲಿ ಮಾಡುವವರು ಮೊದಲು ಪ್ರಧಾನಿ ನರೇಂದ್ರ ಮೋದಿ ಅವರ ಡಿಗ್ರಿ ಪ್ರಮಾಣಪತ್ರದ ಬಗ್ಗೆ ಮಾತನಾಡಲಿ. ನಾನು ಕನ್ನಡದಲ್ಲಿ ಚೆನ್ನಾಗಿ ಮಾತನಾಡುತ್ತೇನೆ. ಆದರೆ, ಕನ್ನಡ ಭಾಷೆಯಲ್ಲಿ ಬರೆಯಲು ಬರುವುದಿಲ್ಲ, ನನಗೆ ಶಿಕ್ಷಣಕ್ಕಿಂತ ಮನುಷ್ಯತ್ವ ಇದೆ,'' ಎಂದರು.

ಎಸ್ಐಆರ್: ಇಂದು ಕಾಂಗ್ರೆಸ್ ಮಹತ್ವದ ಸಭೆ

■ **ವಿಕ ಸುದ್ದಿಲೋಕ** ಬೆಂಗಳೂರು

ಚುನಾವಣಾ ಆಯೋಗ ರಾಜ್ಯದಲ್ಲೂ ಕೈಗೆತ್ತಿಕೊಂಡಿರುವ ಮತದಾರರ ಪಟ್ಟಿಯ ವಿಶೇಷ ತುರ್ತು ಪರಿಷ್ಕರಣೆಯಿಂದ (ಎಸ್ಐಆರ್) ಪಕ್ಷದ ಮತಬ್ಯಾಂಕ್‌ಗೆ ಅಪಾಯ ಸೃಷ್ಟಿಯಾಗುವ ಆತಂಕದಲ್ಲಿರುವ ಆಡಳಿತಾರೂಢ ಕಾಂಗ್ರೆಸ್, ಈ ಸಂಬಂಧ ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಭಾನುವಾರ (ಜೂ.24) ತೀರ್ಮಾನಿಸಲಿದೆ.

- ಮುನ್ನೆಚ್ಚರಿಕೆ ಕ್ರಮ ವಹಿಸುವ ಬಗ್ಗೆ ಚರ್ಚೆ
- ಸಚಿವ, ಶಾಸಕ, ಮುಖಂಡರು ಭಾಗಿ

ದೇವನಹಳ್ಳಿ ಸಮೀಪದ ಖಾಸಗಿ ರೆಸಾರ್ಟ್‌ನಲ್ಲಿ ಸಂಜೆ 4 ಗಂಟೆಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಮಹತ್ವದ ಸಭೆ ಏರ್ಪಾಟಾಗಿದೆ. ಎಲ್ಲ ಸಚಿವರು, ಸಂಸದರು, ಶಾಸಕರು, ಎಂಎಲ್ಸಿಗಳು, 2023ರ ವಿಧಾನಸಭೆ ಮತ್ತು 2024ರ ಲೋಕಸಭೆ ಚುನಾವಣೆಯ ಪರಾಜಿತ ಅಭ್ಯರ್ಥಿಗಳು, ಡಿಸಿಸಿ ಅಧ್ಯಕ್ಷರು, ಮುಂಚೂಣಿ ಘಟಕಗಳ ಪ್ರಮುಖರು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಎಸ್ಐಆರ್ ಪ್ರಕ್ರಿಯೆ ವೇಳೆ ಪ್ರತಿ ಬೂತ್ ಮಟ್ಟದಲ್ಲಿ ಪಕ್ಷದ ಪ್ರತಿನಿಧಿಗೆ ಜವಾಬ್ದಾರಿ ನೀಡಿ, ಅರ್ಹರು ಮತದಾರರ ಪಟ್ಟಿಯಿಂದ ಕೈಬಿಟ್ಟುಹೋಗದಂತೆ ಎಚ್ಚರ ವಹಿಸಬೇಕು. ಈ ಕಾರ್ಯದಲ್ಲಿ ಸ್ಥಳೀಯ ಶಾಸಕರು, ಪರಾಜಿತ ಅಭ್ಯರ್ಥಿಗಳು ಹಾಗೂ ಎಲ್ಲ ಮುಖಂಡರು ನಿಗಾ ವಹಿಸಬೇಕು ಎಂದು ಸ್ಪಷ್ಟ ನಿರ್ದೇಶನಗಳನ್ನು ನೀಡಲು ಉದ್ದೇಶಿಸಲಾಗಿದೆ. ಪಕ್ಷದ ಸಭೆಯಲ್ಲಿ ಸಮಾಲೋಚನೆ ಬಳಿಕ ಎಸ್ಐಆರ್ ವಿಚಾರದಲ್ಲಿ ಸ್ಪಷ್ಟ ನಿಲುವಿಗೆ ಬರಲು ಕ್ಯಾಬಿನೆಟ್ ಬಯಸಿತ್ತು. ಹಾಗಾಗಿ, ಭಾನುವಾರದ ಈ ಸಭೆ ಮಹತ್ವ ಪಡೆದುಕೊಂಡಿದೆ.

ಸಿಎಂ ಚಿತ್ರದುರ್ಗ ಪ್ರವಾಸ ರದ್ದು: ಇತ್ತೀಚೆಗೆ ನಿಧನರಾದ ಸಚಿವ ಡಿ.ಸುಧಾಕರ್ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಭಾಗಿಯಾಗಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಚಿತ್ರದುರ್ಗಕ್ಕೆ ತೆರಳಬೇಕಿತ್ತು. ಪಕ್ಷದ ಸಭೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ತಮ್ಮ ಪೂರ್ವನಿಗದಿತ ಚಿತ್ರದುರ್ಗ ಪ್ರವಾಸವನ್ನು ರದ್ದುಗೊಳಿಸಿದ್ದಾರೆ.

ತುಮಕೂರು ಮೆಟ್ರೊಗೆ ₹20 ಸಾವಿರ ಕೋಟಿ ಮುಂದಿನ ಕ್ಯಾಬಿನೆಟ್‌ನಲ್ಲಿ ಡಿಪಿಆರ್ ಚರ್ಚೆ

■ **ವಿಕ ಸುದ್ದಿಲೋಕ** ಬೆಂಗಳೂರು

ನಮ್ಮ ಮೆಟ್ರೊ ಮಾದಾವರದವರೆಗೆ ತಲುಪಿದ್ದು ತುಮಕೂರುವರೆಗೆ ಮೆಟ್ರೊ ರೈಲು ಯೋಜನೆ ವಿಸ್ತರಣೆ ಮಾಡುವ ಸಂಬಂಧ ಸಮಗ್ರ ಯೋಜನಾ ವರದಿ (ಡಿಪಿಆರ್) ಬಂದಿದ್ದು, ಮುಂದಿನ ಸಂಪುಟ ಸಭೆಯಲ್ಲಿ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ''ಈ ಪ್ರಸ್ತಾಪದ ಬಗ್ಗೆ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸುವುದಾಗಿ ಹಿಂದಿನ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು. ಅಂತೆಯೇ ಹೈದರಾಬಾದ್ ಮೂಲದ ಸಂಸ್ಥೆಯು ವರದಿ ಸಿದ್ಧಪಡಿಸಿದೆ. ಸುಮಾರು ಮೂರೂವರೆ ಕೋಟಿ ರೂ ವೆಚ್ಚ ಮಾಡಿ ಡಿಪಿಆರ್ ತಯಾರಿಸಲಾಗಿದೆ,'' ಎಂದು ಹೇಳಿದರು.

''ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಮಾದಾವರ-ತುಮಕೂರು ಮೆಟ್ರೊ ಕಾರ್ಯಸಾಧುವಾಗಿದೆ ಎಂದು ಡಿಪಿಆರ್ ವರದಿಯಲ್ಲಿ ಹೇಳಿದ್ದು, ಯೋಜನೆಗೆ 20 ಸಾವಿರ ಕೋಟಿ ರೂ. ವೆಚ್ಚವನ್ನು ಅಂದಾಜಿಸಲಾಗಿದೆ,'' ಎಂದು ತಿಳಿಸಿದರು.

ದರ್ಶನ್ ಆತ್ಮಹತ್ಯೆ ಯತ್ನ ಸುಳ್ಳು: ''ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿರುವ ನಟ ದರ್ಶನ್ ಆತ್ಮಹತ್ಯೆಗೆ ಪ್ರಯತ್ನ ನಡೆಸಿದ್ದಾರೆ ಎಂಬುದು ಸುಳ್ಳು. ಈ ವದಂತಿ ಬಗ್ಗೆ ಅಧಿಕಾರಿಗಳಿಂದ ವಿವರಣೆ ಪಡೆದಿದ್ದು, ಅಂತಹ ಯಾವುದೇ ಘಟನೆ ನಡೆದಿದೆ ಎಂಬ ಸ್ಪಷ್ಟನೆ ಸಿಕ್ಕಿದೆ,'' ಎಂದು ಪರಮೇಶ್ವರ್ ಸ್ಪಷ್ಟಪಡಿಸಿದರು.

ಸಿದ್ದರಾಮಯ್ಯನವರು ತೆರಿಗೆ ಇಳಿಸಲಿ: ಬಿಜೆಪಿ

■ **ವಿಕ ಸುದ್ದಿಲೋಕ** ಬೆಂಗಳೂರು

ಅನಿವಾರ್ಯ ಕಾರಣಕ್ಕೆ ಕೇಂದ್ರ ಸರಕಾರ ತೈಲ ಬೆಲೆ ಹೆಚ್ಚಿಸಿದೆ. ರಾಜ್ಯದಲ್ಲಿ ಅನಗತ್ಯವಾಗಿ ಹೆಚ್ಚಿಸಿದ ಬೆಲೆಯನ್ನು ಸಿಎಂ ಸಿದ್ದರಾಮಯ್ಯ ಇಳಿಸಲಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದರು.

ರಾಜ್ಯ ಬಿಜೆಪಿ ಕಚೇರಿಯಲ್ಲಿ ಶನಿವಾರ ಮಾತನಾಡಿ,''ಜಾಗತಿಕ ಮಟ್ಟದ ಬೆಳವಣಿಗೆಯಿಂದ ಅನಿವಾರ್ಯವಾಗಿ ಕೇಂದ್ರ ಸರಕಾರ ತೈಲ ಬೆಲೆ ಏರಿಸಿದ್ದು, ಇಷ್ಟವಿಲ್ಲದಿದ್ದರೂ ದರ ಏರಿಕೆಯಂತಹ ಕಠಿಣ ನಿರ್ಧಾರ ಕೈಗೊಂಡಿದೆ. ಸಿಎಂ ಸಿದ್ದರಾಮಯ್ಯ ಅವರು ಈ ಹಿಂದೆ ತೈಲ ಬೆಲೆಯಲ್ಲಿ 10 ರೂ. ಕಡಿಮೆ ಮಾಡುವುದಾಗಿ ಹೇಳಿದ್ದರು. ರಾಜ್ಯದ ಜನರ ಒಳಿತಿಗಾಗಿ ತೈಲದ ಮೇಲಿನ ಮಾರಾಟ ತೆರಿಗೆ ಇಳಿಕೆ ಮಾಡಲಿ,'' ಎಂದು ಆಗ್ರಹಿಸಿದರು.



''ಸಚಿವ ಪ್ರಿಯಾಂಕ್ ಖರ್ಗೆ ಅವರು ಬಿಜೆಪಿಗೆ ಬುದ್ಧಿ ಹೇಳುವುದನ್ನು ಬಿಟ್ಟು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಹೆಚ್ಚುವರಿ ತೆರಿಗೆಯನ್ನು ಅವರ ಸರಕಾರದಿಂದ ಇಳಿಕೆ ಮಾಡಿ ದೇಶಕ್ಕೆ ಮಾದರಿಯಾಗುವ ಕೆಲಸ ಮಾಡಿಸಲಿ,'' ಎಂದು ಟಾಂಗ್ ನೀಡಿದರು.

ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್,''ಪೆಟ್ರೋಲ್, ಡೀಸೆಲ್ ದರ ಹೆಚ್ಚಳದಿಂದ ಕೇಂದ್ರ ಸರಕಾರಕ್ಕೆ ಹೆಚ್ಚುವರಿಯಾಗಿ ನಯಾಪೈಸೆ ತೆರಿಗೆ ಬರುವುದಿಲ್ಲ, ಆದರೆ ರಾಜ್ಯ ಸರಕಾರಕ್ಕೆ ವಾರ್ಷಿಕವಾಗಿ ಸುಮಾರು 7,000 ಕೋಟಿ ರೂ. ಆದಾಯ ಬರಲಿದೆ. ಕಾಂಗ್ರೆಸ್ ಸರಕಾರಕ್ಕೆ ಜನರ ಬಗ್ಗೆ ಗೌರವವಿದ್ದರೆ ಹೆಚ್ಚುವರಿ ಆದಾಯ ಕೈಬಿಡಲು ಸಿದ್ಧವಿರುವುದಾಗಿ ಹೇಳಬೇಕು. ಅದನ್ನು ಬಿಟ್ಟು ಕೇಂದ್ರ ಸರಕಾರದ ವಿರುದ್ಧ ಆರೋಪಿಸುವುದು ಸರಿಯಲ್ಲ, ಯುದ್ಧ ನಡೆಯುತ್ತಿರುವುದರಿಂದ ಎಲ್ಲ ದೇಶಗಳಲ್ಲಿ ತೈಲ ದರ ಹೆಚ್ಚಳವಾಗಿದೆ. ಕಾಂಗ್ರೆಸ್ ಸರಕಾರಕ್ಕೆ ಬರುತ್ತಿರುವ ತೆರಿಗೆ ಹಣದಲ್ಲಿ ಕಡಿತ ಮಾಡಲಿ,'' ಎಂದು ಒತ್ತಾಯಿಸಿದರು.

ದೇವೇಗೌಡ ಆಯ್ಕೆ ಬಿಜೆಪಿ ವಿರೋಧಿಸಿಲ್ಲ

''ರಾಜ್ಯಸಭೆ ಚುನಾವಣೆಗೆ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಚರ್ಚೆಯಾಗಿದೆ. ಒಬ್ಬರ ಆಯ್ಕೆಗಷ್ಟೇ ಅವಕಾಶವಿದೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರನ್ನು ರಾಜ್ಯಸಭೆಗೆ ಕಳಿಸಲು ಬಿಜೆಪಿ ವಿರೋಧಿಸಿಲ್ಲ, ದೇವೇಗೌಡರಿಗೆ ಅವಕಾಶ ನೀಡುವ ನಿರ್ಧಾರ ರಾಷ್ಟ್ರೀಯ ನಾಯಕರದ್ದು. ಈ ಸಂಬಂಧ ಯಾವುದೇ ಸೂಚನೆ ಸಿಕ್ಕಿಲ್ಲ,'' ಎಂದು ವಿಜಯೇಂದ್ರ ಸ್ಪಷ್ಟಪಡಿಸಿದರು.

ಬಿಜೆಪಿ ರಾಷ್ಟ್ರಾಧ್ಯಕ್ಷರಿಂದ ಮಹತ್ವದ ಸಭೆ ಇಂದು

■ **ವಿಕ ಸುದ್ದಿಲೋಕ** ಬೆಂಗಳೂರು

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಮೊದಲ ಬಾರಿಗೆ ಬೆಂಗಳೂರಿಗೆ ಆಗಮಿಸಿದ್ದು, ಮಹತ್ವದ ಸಭೆ, ಕೋರ್ ಕಮಿಟಿ ಸಭೆಗಳಲ್ಲಿ ಪಾಲ್ಗೊಳ್ಳಲಿರುವುದು ಕುತೂಹಲ ಮೂಡಿಸಿದೆ.

ಭಾನುವಾರ ಬೆಳಗ್ಗೆ ಮಾಜಿ ಸಿಎಂ ಯಡಿಯೂರಪ್ಪ ಅವರ ನಿವಾಸಕ್ಕೆ ಭೇಟಿ ನೀಡಿ ಉಪಾಹಾರ ಸೇವಿಸಲಿದ್ದು, ಬಳಿಕ ಮಲ್ಲೇಶ್ವರದ ಕಾಡು ಮಲ್ಲೇಶ್ವರ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ ಬಿಜೆಪಿ ಕಚೇರಿಗೆ ತೆರಳಲಿದ್ದಾರೆ. ರಾಜ್ಯದ ಬಿಜೆಪಿ ಸಂಸದರು, ಶಾಸಕರು, ಪದಾಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ರಾಜ್ಯದಲ್ಲಿನ ರಾಜಕೀಯ ಸ್ಥಿತಿಗತಿ, ಇತ್ತೀಚಿನ ವಿದ್ಯಮಾನಗಳು, ಮುಂಬರುವ ಚುನಾವಣೆಗಳಿಗೆ ಸಿದ್ಧತೆ ಕುರಿತಂತೆ ಸಮಾಲೋಚನೆ ನಡೆಸಲಿದ್ದಾರೆ. ಆ ಬಳಿಕ ರಾಜ್ಯ ಕೋರ್ ಕಮಿಟಿ ಸಭೆ ನಡೆಸಲಿದ್ದಾರೆ. ಈ ವೇಳೆ ರಾಜ್ಯದಲ್ಲಿ ಕೈಗೊಂಡ ಪ್ರಮುಖ ಸಂಘಟನಾತ್ಮಕ ಚಟುವಟಿಕೆಗಳು, ರಾಜ್ಯ ಸರಕಾರದ ವಿರುದ್ಧ ನಡೆಸಿದ ಹೋರಾಟಗಳು, ಅದರ ಪರಿಣಾಮಗಳ ಕುರಿತಂತೆ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ರಾಷ್ಟ್ರೀಯ ಅಧ್ಯಕ್ಷರಿಗೆ ವರದಿ ಸಲ್ಲಿಸುವ ನಿರೀಕ್ಷೆ ಇದೆ ಎಂದು ಮೂಲಗಳು ಹೇಳಿವೆ.

ಸಂಜೆ ಯಲಹಂಕದಲ್ಲಿ ನಡೆಯಲಿರುವ ಬೆಂಗಳೂರು ಉತ್ತರ ಜಿಲ್ಲೆಯ ಪ್ರಶಿಕ್ಷಣ ವರ್ಗದಲ್ಲಿ ಸಮಾರೋಪ ಭಾಷಣ ಮಾಡಲಿದ್ದಾರೆ. ಜತೆಗೆ ಎಸ್ಐಆರ್ ಕುರಿತಂತೆಯೂ ಪ್ರಮುಖರೊಂದಿಗೆ ಸಮಾಲೋಚನೆ ನಡೆಸುವ ಸಾಧ್ಯತೆ ಇದೆ. ಒಟ್ಟಾರೆ, ಬಿಎಸ್‌ವೈ ಅಭಿಮಾನೋತ್ಸವ ಯಶಸ್ವಿನ ಸಂಭ್ರಮದಲ್ಲಿರುವ ಕಾರ್ಯಕರ್ತರಿಗೆ ರಾಷ್ಟ್ರೀಯ ಅಧ್ಯಕ್ಷರ ರಾಜ್ಯ ಭೇಟಿಯು ಹುರುಪು ಹೆಚ್ಚಿಸುವ ನಿರೀಕ್ಷೆ ಮೂಡಿಸಿದೆ.

ರಾಷ್ಟ್ರೀಯ ಅಧ್ಯಕ್ಷರ ಭೇಟಿ ಕುರಿತಂತೆ ಪ್ರತಿಕ್ರಿಯಿಸಿರುವ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ''ರಾಷ್ಟ್ರೀಯ ಅಧ್ಯಕ್ಷರ ಪ್ರವಾಸ, ಪ್ರಶಿಕ್ಷಣದಲ್ಲಿ ಭಾಗವಹಿಸುತ್ತಿರುವುದು ಕಾರ್ಯಕರ್ತರಿಗೆ ಸ್ಫೂರ್ತಿ ತರಲಿದೆ,'' ಎಂದು ಹೇಳಿದರು.

ಬಸ್ ಟಿಕೆಟ್ ದರ ಏರಿಕೆ ಖಚಿತ: ಶ್ರೀನಿವಾಸ್

ತುಮಕೂರು: ಡೀಸೆಲ್ ದರ ಏರಿಕೆಯಿಂದ ಬಸ್ ಟಿಕೆಟ್ ದರ ಏರಿಸಬೇಕಿದೆ. ದರ ಖಂಡಿತ ಏರಿಕೆ ಆಗುತ್ತದೆ ಎಂದು ಕೆಎಸ್ಆರ್‌ಟಿಸಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ಎಸ್.ಆರ್. ಶ್ರೀನಿವಾಸ್ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ''ಡೀಸೆಲ್ ದರ ಒಂದು ಸಲ 3.75 ರೂ. ಹೆಚ್ಚಳ ಮಾಡಿದ್ದರು. ಈಗ 90 ಪೈಸೆ ಜಾಸ್ತಿ ಮಾಡಲಾಗಿದೆ. ಬಸ್‌ಗಳನ್ನು ನೀರಿನಿಂದ ಓಡಿಸೋಕೆ ಆಗುತ್ತಾ,'' ಎಂದು ಪ್ರಶ್ನಿಸಿದ ಅವರು, ''ತೈಲ ಬೆಲೆ ಏರಿಕೆ ವಿಚಾರದ ಬಗ್ಗೆ ಪ್ರಧಾನಿ ಮೋದಿ ಅವರನ್ನೇ ಕೇಳಬೇಕು,'' ಎಂದರು. ''ತುಮಕೂರನ್ನು ಬೆಂಗಳೂರು ಉತ್ತರಕ್ಕೆ ಸೇರಿಸುವ ವಿಚಾರವನ್ನು ನಾನು ಒಪ್ಪಲ್ಲ,'' ಶ್ರೀನಿವಾಸ್ ಹೇಳಿದರು.

ಆಳಂದ ಕೇಸ್ ವಾಪಸ್ ಸಂವಿಧಾನ ವಿರೋಧಿ ನಡೆ

■ **ವಿಕ ಸುದ್ದಿಲೋಕ** ಬೆಂಗಳೂರು

ಕಲಬುರಗಿಯ ಆಳಂದದಲ್ಲಿ ಕೋಮುಗಲಭೆ ನಡೆಸಿದವರ ವಿರುದ್ಧದ ಪ್ರಕರಣ ಹಿಂಪಡೆದು ಕಾಂಗ್ರೆಸ್ ಸರಕಾರವು ಮತ್ತೆ ಮತಬ್ಯಾಂಕ್ ರಾಜಕಾರಣ ನಡೆಸಿದ್ದು, ಆ ಮೂಲಕ ರಾಜ್ಯದ ಭದ್ರತೆಗೆ ಅಪಾಯ ತಂದೊಡ್ಡಿದೆ ಎಂದು ಬಿಜೆಪಿ ನಾಯಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜ್ಯ ಬಿಜೆಪಿ ಕಚೇರಿಯಲ್ಲಿ ಶನಿವಾರ ಮಾತನಾಡಿದ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್, ''ಸಂವಿಧಾನಕ್ಕೆ ವಿರುದ್ಧವಾಗಿ ಆಳಂದದ ಲಾಡ್ಲೆ ಮಶಾಕ್ ದರ್ಗಾ ಬಳಿ ಪೊಲೀಸರ ಮೇಲೆ ಹಲ್ಲೆ ನಡೆಸಿದವರು, ಸಚಿವರ ಕಾರಿನ ಮೇಲೆ ದಾಳಿ ಮಾಡಿದವರು, ದರ್ಗಾ ಹೆಸರಲ್ಲಿ ಕೋಮುಗಲಭೆ ನಡೆಸಿದವರ ವಿರುದ್ಧದ ಪ್ರಕರಣಗಳನ್ನು ಸರಕಾರ ಹಿಂಪಡೆದಿದೆ. ಈ ಪ್ರಕರಣದಲ್ಲಿ ಪಾಪ್ಯುಲರ್ ಫ್ರಂಟ್‌ನವರು ಸೇರಿದಂತೆ 150 ಮಂದಿ ವಿರುದ್ಧದ ಪ್ರಕರಣಗಳನ್ನು ಕೈಬಿಟ್ಟು ವೋಟ್ ಬ್ಯಾಂಕ್ ರಾಜಕೀಯ ಮಾಡಲಾಗಿದೆ,'' ಎಂದು ಕಿಡಿ ಕಾರಿದರು.

''ಬಾಂಗ್ಲಾ ಪ್ರಜೆಗಳು ದೇಶದೊಳಗೆ ನುಗ್ಗಿ ದೇಶದ್ರೋಹಿ ಕೆಲಸಗಳನ್ನು ಮಾಡುತ್ತಿದ್ದಾರೆ. ಇದೇ ಮಾದರಿಯಲ್ಲಿ ಕೆಲವರು ಕೋಮುಗಲಭೆ ಮಾಡುತ್ತಿದ್ದಾರೆ. ಈ ಕ್ರಮದಿಂದ ಹಿಂದೆ ಸರಿಯದಿದ್ದರೆ ಬಿಜೆಪಿ ಹೋರಾಟ ಮಾಡಲಿದೆ. ಇತ್ತೀಚೆಗೆ ಶಾಲಾ ಕಾಲೇಜುಗಳಲ್ಲಿ ಹಿಜಾಬ್‌ಗೆ ಅವಕಾಶ, ಮುಸ್ಲಿಂ ಸಮುದಾಯದವರ ಕಲ್ಯಾಣಕ್ಕೆ 600 ಕೋಟಿ ರೂ. ಅನುದಾನ ನೀಡಲಾಗಿದೆ. ಕೇವಲ ಮತಕ್ಕಾಗಿ ಮುಸ್ಲಿಮರಿಗೆ ಬಂಪರ್ ಕೊಡುಗೆ ನೀಡಿ ಓಲೈಸುತ್ತಿರುವುದು ಬಹುಸಂಖ್ಯಾತರಿಗೆ ಬಗೆದ ದ್ರೋಹ,'' ಎಂದು ಆಕ್ಷೇಪಿಸಿದರು.

ಹೋರಾಟದ ಎಚ್ಚರಿಕೆ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ,''ತುಷ್ಟೀಕರಣದ ಎಲ್ಲ ಮಿತಿಗಳನ್ನು ದಾಟಿ ಅಲ್ಪಸಂಖ್ಯಾತರ ಓಲೈಕೆ ಇಳಿದಿರುವ ಹಿಂದೂ ವಿರೋಧ ಕಾಂಗ್ರೆಸ್ ಸರಕಾರದ ವಿರುದ್ಧ ಬೀದಿಗಿಳಿದು ಹೋರಾಟ ನಡೆಸಲಾಗುವುದು,'' ಎಂದು ಎಚ್ಚರಿಕೆ ನೀಡಿದರು. ''ಆಳಂದ ಗಲಭೆ ಪ್ರಕರಣವನ್ನು ಕೈಬಿಡಲು ಸಂಪುಟ ಸಭೆ ತೀರ್ಮಾನಿಸಿರುವುದು ಖಂಡನೀಯ. ಕಾಂಗ್ರೆಸ್ ತನ್ನ ಓಟ್ ಬ್ಯಾಂಕ್ ಭದ್ರಪಡಿಸಿಕೊಳ್ಳುತ್ತಿದೆ,'' ಎಂದು ದೂರಿದರು.

● ಕನ್ನಡ, ರೈತ ಹಾಗೂ ಹಿಂದು ಹೋರಾಟಗಾರರ ನೆಪದಲ್ಲಿ ಮತಾಂಧ ಶಕ್ತಿಗಳ ವಿರುದ್ಧದ ಪ್ರಕರಣಗಳನ್ನು ಹಿಂಪಡೆಯುವ ಮೂಲಕ ತುಷ್ಟೀಕರಣದಲ್ಲಿ ತೊಡಗಿರುವ ಕಾಂಗ್ರೆಸ್ ಮುಸ್ಲಿಂ ಲೀಗ್ ಪಕ್ಷವಾಗಿ ಮಾರ್ಪಾಡುತ್ತಿದೆ. ಹಿಂಪಡೆದಿರುವ 52 ಪ್ರಕರಣಗಳಲ್ಲಿ ತೋರಿಕೆಗೆ ಮಾತ್ರ ಇತರೆ ಕೆಲ ಪ್ರಕರಣಗಳನ್ನು ಸೇರಿಸಲಾಗಿದೆ.
-ಪ್ರಹ್ಲಾದ ಜೋಶಿ ಕೇಂದ್ರ ಸಚಿವ

● ಕುಕ್ಕರ್ ಬಾಂಬರ್, ಠಾಣೆಗೆ ಬೆಂಕಿ ಹಾಕುವರು, ಹಿಂದು ಭಕ್ತರಿಗೆ ಅಪಮಾನ ಮಾಡುವವರು, ಸಮಾಜದ್ರೋಹಿ ಕೃತ್ಯ ನಡೆಸಿದವರ ಪ್ರಕರಣ ಹಿಂದೆ ಪಡೆಯುವುದು ಸರಕಾರದ ಅಜೆಂಡಾವಾಗಿದೆ.
-ಕೋಟ ಶ್ರೀನಿವಾಸ ಪೂಜಾರಿ, ಸಂಸದ

ಶೀಘ್ರದಲ್ಲೆ ಸಚಿವ ಸಂಪುಟ ಪುನಾರಚನೆ

ರಾಜ್ಯಸಭೆ ಚುನಾವಣೆ ಅಡ್ಡಿ ಬರುವುದಿಲ್ಲ ಎಂದ ಸಚಿವ ಪರಮೇಶ್ವರ್

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯ ಸಚಿವ ಸಂಪುಟ ಪುನಾರಚನೆ ಶೀಘ್ರದಲ್ಲೇ ನಡೆಯಲಿದ್ದು, ಇದಕ್ಕೆ ರಾಜ್ಯಸಭಾ ಚುನಾವಣೆ ಅಥವಾ ಬೇರೊಂದು ಕಾರಣ ಅಡ್ಡಿಯಾಗುವುದಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ,''ಬಹಳಷ್ಟು ಹಿರಿಯ ಸಚಿವರನ್ನು ಕೈಬಿಟ್ಟು, ಹೊಸಬರಿಗೆ ಸಂಪುಟದಲ್ಲಿ ಅವಕಾಶ ನೀಡುವ ಸಾಧ್ಯತೆಗಳಿವೆ,'' ಎಂದು ತಿಳಿಸಿದ್ದಾರೆ. ''ಸಂಪುಟ ಪುನಾರಚನೆ ಮಾಡಿ ಸುಮಾರು 15ರಷ್ಟು ಹೊಸಬರ ಸೇರ್ಪಡೆಗೆ ಪಕ್ಷದ ಮಟ್ಟದಲ್ಲಿ ಚಿಂತನೆ ಇದ್ದು, ಯಾರನ್ನು ಬಿಡಬೇಕು ಮತ್ತು ಯಾರಿಗೆ ಹೊಸದಾಗಿ ಕ್ಯಾಬಿನೆಟ್‌ನಲ್ಲಿ ಅವಕಾಶ ಕಲ್ಪಿಸಬೇಕು ಎಂಬುದು ಹೈಕಮಾಂಡ್ ನಾಯಕರ ವಿವೇಚನೆಗೆ ಬಿಟ್ಟ ವಿಚಾರ,'' ಎಂದರು.

ಖಾತೆ ಬದಲಾವಣೆ ಕೇಳಿಲ್ಲ: ಸಂಪುಟ ಪುನಾರಚನೆಯಾದರೆ ಖಾತೆ ಬದಲಾವಣೆ ಸಾಧ್ಯತೆ ಕುರಿತು ಪ್ರತಿಕ್ರಿಯಿಸಿ, ''ಈವರೆಗೆ ಒಟ್ಟು ಎಂಟು ವರ್ಷ ಗೃಹ ಖಾತೆ ನಿಭಾಯಿಸಿದ್ದೇನೆ. ಖಾತೆ ಬದಲಾವಣೆ ಕೇಳಿಲ್ಲ ಮತ್ತು ಸದ್ಯದ ಖಾತೆ ಬಗ್ಗೆ ಅಸಮಾಧಾನವೂ ಇಲ್ಲ. ಒಂದು ವೇಳೆ, ಬೇರೆ ಖಾತೆ ಕೊಟ್ಟರೂ ನಿರ್ವಹಿಸುತ್ತೇನೆ,'' ಎಂದು ಹೇಳಿದರು. ''ಮುಖ್ಯಮಂತ್ರಿ ಸ್ಥಾನ ಕೊಟ್ಟರೂ ನಿಭಾಯಿಸುವ ಸಾಮರ್ಥ್ಯ ನನಗಿದೆ,'' ಎಂದು ಪ್ರಶ್ನೆಯೊಂದಕ್ಕೆ ಸ್ಪಷ್ಟಪಡಿಸಿದರು.

ಗೊಂದಲ ಸರಿಹೋಗಬೇಕು

ಬಾಗಲಕೋಟೆಯಲ್ಲಿ ಮಾತನಾಡಿದ ಸಚಿವ ಸತೀಶ ಜಾರಕಿಹೊಳಿ,''ಸಿಎಂ ಸ್ಥಾನದ ಕುರಿತು ಇರುವ ಗೊಂದಲ ಸರಿಹೋಗಬೇಕು ಎನ್ನುವುದು ನಮ್ಮ ಅಭಿಪ್ರಾಯ. ಈ ಬಗ್ಗೆ ಹೈಕಮಾಂಡ್ ನಿರ್ಧಾರ ಕೈಗೊಳ್ಳುತ್ತದೆ'' ಎಂದು ಲೋಕೋಪಯೋಗಿ ಹೇಳಿದರು. ''ಅಧಿಕಾರಿಗಳು ಶಾಸಕರ ಮಾತು ಕೇಳುತ್ತಿಲ್ಲ ಎನ್ನುವುದೆಲ್ಲ ಸುಳ್ಳು,'' ಎಂದರು.

ಬಿಜೆಪಿ ವಿಚಲಿತ:''ಕಾಕ್ರೋಚ್ ಜನತಾ ಪಾರ್ಟಿಯ ವಿಷಯದಲ್ಲಿ ಎಲ್ಲರೂ ಒಂದೇ ವೇದಿಕೆಯಲ್ಲಿ ಬರಲಿದ್ದಾರೆ. ಜನರಿಗೆ ಏನು ಬೇಕು ಎಂಬ ಬಗ್ಗೆ ಕೇಂದ್ರ ಸರಕಾರ ಗಮನಿಸಿ ಕಾರ್ಯಕ್ರಮ ರೂಪಿಸಬೇಕು. ಹೊಸ ಪಾರ್ಟಿಯಿಂದ ಬಿಜೆಪಿ ವಿಚಲಿತವಾಗಿದೆ,'' ಎಂದರು. ''ಬಿಜೆಪಿ ಯಾವಾಗಲೂ ಬಲಿಷ್ಠವಾಗಿರಲು ಸಾಧ್ಯವಿಲ್ಲ, ಜನರ ಭಾವನೆಗೆ ಸ್ಪಂದಿಸದಿದ್ದರೆ ಬುದ್ಧಿ ಕಲಿಸುತ್ತಾರೆ'' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ದಿಲ್ಲಿ ತಲುಪಿದ ಕೈ ಯುವಶಕ್ತಿ ಬಡಿದಾಟ ಪ್ರಕರಣ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಎಚ್.ಎಸ್.ಮಂಜುನಾಥ್‌ಗೌಡ ಹಾಗೂ ಉಪಾಧ್ಯಕ್ಷೆ ದೀಪಿಕಾರೆಡ್ಡಿ ಬಣಗಳ ನಡುವಿನ ಬಡಿದಾಟ ಪ್ರಕರಣ ದಿಲ್ಲಿ ತಲುಪಿದೆ. ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಉದಯ್ ಭಾನು ಚಿಬ್ ಅವರು ಎರಡೂ ಗುಂಪಿನವರನ್ನು ದಿಲ್ಲಿಗೆ ಕರೆಸಿಕೊಂಡು ವಿವರಣೆ ಪಡೆದಿದ್ದಾರೆ.

ಮಂಜುನಾಥ್‌ಗೌಡ ಹಾಗೂ ದೀಪಿಕಾ ರೆಡ್ಡಿ ಬಣಗಳು ರಾಷ್ಟ್ರೀಯ ಅಧ್ಯಕ್ಷರ ಎದುರಲ್ಲೂ ಪರಸ್ಪರ ದೋಷಾರೋಪಗಳನ್ನು ಮಾಡಿವೆ. ಹಾಗಾಗಿ, ಎರಡು ಗುಂಪಿನ ನಡುವಿನ ಕಿತ್ತಾಟದ ಕಾರಣ, ದೂರುಗಳು ಹಾಗೂ ತಪ್ಪುಗಳ ಬಗ್ಗೆ ಸತ್ಯಾಸತ್ಯತೆ ಪರಿಶೀಲಿಸಲು ಸಮಿತಿಯೊಂದನ್ನು ರಚಿಸಲಾಗಿದೆ.



ಯುವ ಕಾಂಗ್ರೆಸ್ ಉಪಾಧ್ಯಕ್ಷೆ ದೀಪಿಕಾ ರೆಡ್ಡಿ ಸೇರಿದಂತೆ 15 ಪದಾಧಿಕಾರಿಗಳನ್ನು ಇತ್ತೀಚೆಗೆ ಅಮಾನತುಪಡಿಸಲಾಗಿತ್ತು. ಈ ಬೆಳವಣಿಗೆ ನಡುವೆ ನೀಟ್ ಪ್ರಶ್ನೆಪತ್ರಿಕೆ ಬಹಿರಂಗ ಪ್ರಕರಣದ ವಿರುದ್ಧ ಪ್ರತಿಭಟನಾ ರ್‍ಯಾಲಿ ನಡೆಸುವ ಸಂಬಂಧ ಸಿದ್ಧತೆಗಾಗಿ ಕಳೆದ ವಾರ ಕೆಪಿಸಿಸಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಈ ವಿಚಾರ ಪ್ರಸ್ತಾಪವಾಗಿತ್ತು. ಮಂಜುನಾಥ್‌ಗೌಡ ಮತ್ತು ದೀಪಿಕಾ ರೆಡ್ಡಿ ಗುಂಪುಗಳ ನಡುವೆ ಸಭೆಯಲ್ಲಿ ಪರಸ್ಪರ ವಾಗ್ವಾದ ನಡೆದು ಹೊಡೆದಾಡಿಕೊಂಡಿದ್ದರು.

4.26 ಕೋಟಿ ಫಲಾನುಭವಿಗಳಿಗೆ ಆಹಾರ ಭದ್ರತೆ | 'ಹಸಿವು ಮುಕ್ತ ಕರ್ನಾಟಕ'ದ ಕನಸು ನನಸು

ದಾಸೋಹ ಪರಂಪರೆಯ ಆಧುನಿಕ ರೂಪ ಅನ್ನಭಾಗ್ಯ

ಗ್ಯಾರಂಟಿ ವಾರ್ತೆ

ಬೆಂಗಳೂರು: 'ಆಸೆ ಇಚ್ಛೆಗೆನ್ನ ಗಾಸಿ ಮಾಡದಿರಯ್ಯಾ, ದಾಸೋಹಿಯಾಗಿರ್ಪ ದಾಸನಾಗಿರಿಸೆನ್ನ ಕೂಡಲಸಂಗಮದೇವಾ, ನಿಮ್ಮ ಧರ್ಮ'- ಜಗಜ್ಯೋತಿ ಬಸವಣ್ಣನವರ ಈ ಅಮರ ವಚನದ ಸಾಲುಗಳು ಮನುಷ್ಯನಲ್ಲಿರಬೇಕಾದ ಕರುಣೆ ಮತ್ತು ದಾಸೋಹದ ನಿಜವಾದ ಪರಿಕಲ್ಪನೆಯನ್ನು ಎತ್ತಿಹಿಡಿಯುತ್ತವೆ. ಶರಣರ ಈ ಕಲ್ಯಾಣದ ಆಶಯವೇ ಕರ್ನಾಟಕ ಸರ್ಕಾರದ 'ಅನ್ನಭಾಗ್ಯ' ಯೋಜನೆಯಾಗಿ ನಾಡಿನಲ್ಲಿ ಸಾಕಾರಗೊಂಡಿದೆ. 2023ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಪ್ರಕಟಿಸಿದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ 'ಅನ್ನಭಾಗ್ಯ' ಅತ್ಯಂತ ಪ್ರಮುಖ ಹಾಗೂ ತಳಮಟ್ಟದ ಜನರನ್ನು ತಲುಪಿದ ಯೋಜನೆಯಾಗಿ ಯಶಸ್ಸನ್ನೂ ಸಾಧಿಸಿದೆ.

ರಾಜ್ಯದ ಬಡತನ ರೇಖೆಗಿಂತ ಕೆಳಗಿರುವ (BPL) ಮತ್ತು ಅಂತ್ಯೋದಯ ಕಾರ್ಡ್ ಹೊಂದಿರುವ ಕುಟುಂಬಗಳ ಪ್ರತಿಯೊಬ್ಬ ಸದಸ್ಯನಿಗೆ ತಿಂಗಳಿಗೆ ಒಟ್ಟು 10 ಕೆಜಿ ಆಹಾರ ಧಾನ್ಯವನ್ನು ನೀಡುವ ಉದ್ದೇಶದೊಂದಿಗೆ ಈ ಯೋಜನೆಗೆ ಚಾಲನೆ ನೀಡಲಾಗಿತ್ತು. ಕೇಂದ್ರ ಸರ್ಕಾರವು ಬೇಡಿಕೆಯಷ್ಟು ಅಕ್ಕಿಯನ್ನು ಪೂರೈಸಲು ವಿಫಲವಾದಾಗ, ರಾಜ್ಯ ಸರ್ಕಾರವು ಕೈಕಟ್ಟಿ ಕೂರದೆ, ಹೆಚ್ಚುವರಿಯಾಗಿ ಘೋಷಿಸಿದ 5 ಕೆಜಿ ಅಕ್ಕಿಯ ಬದಲಾಗಿ, ಪ್ರತಿ ಕೆಜಿಗೆ 34 ರೂಪಾಯಿಯಂತೆ 2024ರ ಡಿಸೆಂಬರ್‌ವರೆಗೆ ಫಲಾನುಭವಿಗಳ ಬ್ಯಾಂಕ್ ಖಾತೆಗೆ 11,821 ಕೋಟಿ ರೂ. ನೇರವಾಗಿ ನಗದು ವರ್ಗಾವಣೆ (Direct Benefit Transfer - DBT) ಮಾಡುವ ಮೂಲಕ 'ನುಡಿದಂತೆ ನಡೆದ ಸರ್ಕಾರ' ಎಂಬ ಘೋಷವಾಕ್ಯವನ್ನು ಉಳಿಸಿಕೊಂಡಿತ್ತು. ಕಳೆದ ಮೂರು ವರ್ಷಗಳಲ್ಲಿ 4.26 ಕೋಟಿ ಬಡ ಕುಟುಂಬಗಳ ಹಸಿವು ನೀಗಿಸಿರುವ 'ಅನ್ನಭಾಗ್ಯ'ವು, ಮುಖ್ಯಮಂತ್ರಿ ಸಿದ್ದರಾಮಯ್ಯನವರ 'ಹಸಿವು ಮುಕ್ತ ಕರ್ನಾಟಕ'ದ ಕನಸನ್ನು ನನಸಾಗಿಸಿದೆ.

ದಿನಗೂಲಿ ನೌಕರರು, ಆಟೋ ಚಾಲಕರು, ಕೃಷಿ ಕಾರ್ಮಿಕರು ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಕುಟುಂಬಗಳಿಗೆ ಅನ್ನಭಾಗ್ಯ ಯೋಜನೆಯಿಂದಾಗಿ ಪ್ರತಿ ತಿಂಗಳು ಆಹಾರಕ್ಕಾಗಿ ವ್ಯಯಿಸುತ್ತಿದ್ದ ಸಾವಿರಾರು ರೂಪಾಯಿಗಳು ಉಳಿತಾಯವಾಗುತ್ತಿವೆ. ಒಂದು ವರ್ಷಗಳವರೆಗೆ ಬ್ಯಾಂಕ್ ಖಾತೆಗೆ ನೇರವಾಗಿ ಜಮೆಯಾದ ನಗದು ಹಣವನ್ನು ಬಡ ಕುಟುಂಬಗಳು ಬೇಳೆಕಾಳು, ಎಣ್ಣೆ, ತರಕಾರಿ ಸೇರಿದಂತೆ ಇನ್ನಿತರ ಪೌಷ್ಟಿಕ ಆಹಾರ ಪದಾರ್ಥಗಳ ಖರೀದಿಗೆ ಹಾಗೂ ಮಕ್ಕಳ ವಿದ್ಯಾಭ್ಯಾಸದ ಖರ್ಚಿಗೆ ಬಳಸಿಕೊಂಡಿದ್ದಾರೆ. ಈ ಯೋಜನೆಯು ರಾಜ್ಯದಲ್ಲಿ ಅಪೌಷ್ಟಿಕತೆಯನ್ನು ನಿವಾರಿಸುವಲ್ಲಿ ಮತ್ತು ಗ್ರಾಮೀಣ ಭಾಗದ ಆರ್ಥಿಕತೆಗೆ ಚೇತರಿಕೆ ನೀಡುವಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದೆ.

ಕೋಟ್ಯಂತರ ಫಲಾನುಭವಿಗಳು: ಸರ್ಕಾರದ ಅಂಕಿ-ಅಂಶಗಳ ಪ್ರಕಾರ, ಅನ್ನಭಾಗ್ಯ ಯೋಜನೆಯಡಿ ರಾಜ್ಯದ 4.26 ಕೋಟಿಗೂ ಅಧಿಕ ಫಲಾನುಭವಿಗಳು ನಿರಂತರವಾಗಿ ಈ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ. 2023- 24ರವರೆಗೆ ಡಿಬಿಟಿಯಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ನೇರವಾಗಿ ಬಡವರ ಖಾತೆಗೆ ವರ್ಗಾಯಿಸುವ ಮೂಲಕ ಪಾರದರ್ಶಕತೆಯನ್ನು ಕಾಯ್ದುಕೊಂಡಿದೆ. ಪಡಿತರ ವಿತರಣಾ ವ್ಯವಸ್ಥೆಯನ್ನು (PDS) ಇನ್ನಷ್ಟು ಬಲಪಡಿಸಲಾಗಿದ್ದು, ಯಾವುದೇ ಸೋರಿಕೆಯಿಲ್ಲದೆ ಅರ್ಹರಿಗೆ ಸೌಲಭ್ಯ ತಲುಪುವಂತೆ ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಸಿಕೊಳ್ಳಲಾಗಿದೆ.

ದೇಶದಲ್ಲೇ ಮಾದರಿ: ಕರ್ನಾಟಕದ 'ಅನ್ನಭಾಗ್ಯ' ಯೋಜನೆಯು ಕೇವಲ ಉಚಿತ ಪಡಿತರ ನೀಡುವುದಕ್ಕೆ ಸೀಮಿತವಾಗಿರದೆ, ಬಡವರ ಆಹಾರದ ಹಕ್ಕನ್ನು ಎತ್ತಿಹಿಡಿದಿದೆ. ದೇಶದ ಯಾವುದೇ ರಾಜ್ಯದಲ್ಲೂ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಉಚಿತ ಆಹಾರ ಧಾನ್ಯ ಮತ್ತು ನಗದು ವರ್ಗಾವಣೆಯ ಸೌಲಭ್ಯವನ್ನು ನೀಡಿದ ಉದಾಹರಣೆಯಿಲ್ಲ. ಕರ್ನಾಟಕದ ಈ ಹಸಿವು ಮುಕ್ತ ಮತ್ತು ಪೌಷ್ಟಿಕ ಭದ್ರತೆಯ ಮಾದರಿಯನ್ನು ಇಂದು ದೇಶದ ಇತರೆ ರಾಜ್ಯಗಳು ಹಾಗೂ ಸಾಮಾಜಿಕ ತಜ್ಞರು ಮುಕ್ತಕಂಠದಿಂದ ಶ್ಲಾಘಿಸುತ್ತಿದ್ದಾರೆ.

'ಇಂದಿರಾ ಕಿಟ್' ಶೀಘ್ರ ಅನುಷ್ಠಾನ

'ಅನ್ನಭಾಗ್ಯ' ಯೋಜನೆಯಡಿ ಹೆಚ್ಚುವರಿ 5 ಕೆ.ಜಿ ಅಕ್ಕಿ ಬದಲಾಗಿ 'ಇಂದಿರಾ' (Integrated Nutrition And Dietary Initiative for Revitalizing Annabhagya Beneficiaries) ಆಹಾರ ಕಿಟ್ ವಿತರಿಸುವ ಕುರಿತು ಈಗಾಗಲೇ ಸಂಪುಟದಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈ ಯೋಜನೆಯಡಿ ಕುಟುಂಬದ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಐದು ಕೆಜಿ ಅಕ್ಕಿ ಬದಲಾಗಿ ತೊಗರಿ ಬೇಳೆ, ಸೂರ್ಯಕಾಂತಿ ಎಣ್ಣೆ, ಸಕ್ಕರೆ, ಉಪ್ಪು ನೀಡಲಾಗುವುದು. ಇದಕ್ಕಾಗಿ ಪ್ರತಿ ತಿಂಗಳು ಒಟ್ಟು 18,628 ಮೆ.ಟನ್ ತೊಗರಿ ಬೇಳೆ ಮತ್ತು ತಲಾ 12,419 ಮೆ.ಟನ್ ಸೂರ್ಯಕಾಂತಿ ಎಣ್ಣೆ, ಸಕ್ಕರೆ ಮತ್ತು ಉಪ್ಪು ಅಗತ್ಯ ಎಂದು ಅಂದಾಜಿಸಲಾಗಿದೆ. ಆಹಾರ ಕಿಟ್‌ನಲ್ಲಿ ಪೌಷ್ಟಿಕಾಂಶಗಳಿಂದ ಕೂಡಿರುವ ತೊಗರಿ ಬೇಳೆ ಗರಿಷ್ಠ ಪ್ರಮಾಣದಲ್ಲಿ ನೀಡಲು ಈಗಾಗಲೇ ಮುಖ್ಯಮಂತ್ರಿಗಳು ಸೂಚನೆ ನೀಡಿದ್ದು, ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿಯೂ ಸಹ ಕ್ಯೂಆರ್ ಸ್ಕ್ಯಾನ್ ಮಾಡಬಹುದಾದ ತಂತ್ರಾಂಶವನ್ನು ಅಳವಡಿಸಿ ಅದರ ಆಧಾರದ ಮೇಲೆ ಪಡಿತರ ಚೀಟಿದಾರರಿಗೆ 'ಇಂದಿರಾ' ಫುಡ್ ಕಿಟ್ ವಿತರಣೆ ಮಾಡಲಾಗುತ್ತದೆ.

'ಅನ್ನರಾಮಯ್ಯ'ರಾದ ಸಿದ್ದರಾಮಯ್ಯ!

2013ರಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಕೆಲವೇ ಗಂಟೆಗಳಲ್ಲಿ ಸಿದ್ದರಾಮಯ್ಯನವರು ಘೋಷಿಸಿದ ಮೊದಲ ಐತಿಹಾಸಿಕ ಯೋಜನೆ 'ಅನ್ನಭಾಗ್ಯ'. ಅಂದು ಕೇವಲ 1 ರೂಪಾಯಿಗೆ ಅಕ್ಕಿ ನೀಡಿ, ನಂತರ ಅದನ್ನು ಸಂಪೂರ್ಣ ಉಚಿತಗೊಳಿಸಿ ಬಡವರ ಹೊಟ್ಟೆ ತಣಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅಂದಿನಿಂದಲೇ ಕರ್ನಾಟಕದ ಜನತೆ ಅವರನ್ನು ಪ್ರೀತಿಯಿಂದ 'ಅನ್ನರಾಮಯ್ಯ' ಎಂದು ಕರೆಯಲಾರಂಭಿಸಿದರು.

ಅಂದು 2013 ರಲ್ಲಿ ಜಾರಿಗೆ ಬಂದ ಅನ್ನಭಾಗ್ಯ ಯೋಜನೆ, 2023 ರ ನಂತರ 'ಪಂಚ ಗ್ಯಾರಂಟಿ'ಗಳಲ್ಲಿ ಒಂದಾಗಿ ಮತ್ತಷ್ಟು ಶಕ್ತಿಶಾಲಿಯಾಗಿ ಮರುಜನ್ಮ ಪಡೆಯಿತು. ಅಂದು ರಾಜಕೀಯ ಇಚ್ಛಾಶಕ್ತಿಯಿಂದ ಆರಂಭವಾದ ಯೋಜನೆ, ಇಂದು ರಾಜ್ಯದ ಕೋಟ್ಯಂತರ ಬಡವರ ಪಾಲಿಗೆ ಬದುಕಿನ ಭರವಸೆಯಾಗಿದೆ.

ಅಂಕಿ-ಅಂಶ

4.26 ಕೋಟಿಗೂ ಅಧಿಕ ಒಟ್ಟು ಫಲಾನುಭವಿಗಳು

₹18,897 ಕೋಟಿಗೂ ಅಧಿಕ ಈವರೆಗೆ 'ಅನ್ನಭಾಗ್ಯ'ಕ್ಕೆ ವ್ಯಯಿಸಲಾದ ಅನುದಾನ

ಯಾರ ಮೇಲೂ ಅವಲಂಬಿಸದೇ ಬದುಕಬೇಕೆಂಬ ನನ್ನ ಕನಸಿಗೆ 'ಅನ್ನಭಾಗ್ಯ' ಯೋಜನೆ ಭದ್ರ ಆಸರೆಯಾಗಿದೆ. ಇದರಿಂದಾಗಿ ಹೊಟ್ಟೆಯ ಪಾಡಿನ ಆತಂಕವಿಲ್ಲದೆ, ಎಲ್ಲಾ ಗ್ಯಾರಂಟಿಗಳಿಂದ ಉಳಿತಾಯವಾದ ಹಣದಿಂದ ಒಂದು ಹಸು ಖರೀದಿಸಿ ಹೈನುಗಾರಿಕೆ ಆರಂಭಿಸಲು ಸಾಧ್ಯವಾಯಿತು. ಇಂದು ದಿನಾ ಹಾಲು ಮಾರಿ ಬರುವ ಆದಾಯದಲ್ಲಿ ನನ್ನ ಬದುಕು ಸ್ವಾಭಿಮಾನದಿಂದ ಸಾಗುತ್ತಿದೆ.
ನೀಲಮ್ಮ, ಬೆಳ್ತಂಗಡಿ



ನನ್ನ ಗಂಡನ ನಿಧನದ ನಂತರ ಬಂಡವಾಳದ ಕೊರತೆಯಿಂದಾಗಿ ನಮ್ಮ ಸಾಂಪ್ರದಾಯಿಕ ಕುಂಬಾರಿಕೆ ಉದ್ಯಮ ನಡೆಸಲಾಗದೆ ಕಂಗಾಲಾಗಿದ್ದೆ. ಆ ಸಮಯದಲ್ಲಿ ಕುಟುಂಬ ನಿರ್ವಹಣೆಗೆ ದೊಡ್ಡ ಆಸರೆಯಾಗಿ ನಿಂತಿದ್ದು 'ಅನ್ನಭಾಗ್ಯ' ಯೋಜನೆ. ಸರ್ಕಾರದ ಉಚಿತ ಅಕ್ಕಿ ಮತ್ತು ದಿನಸಿ ನನ್ನ ಕುಟುಂಬದ ಮೂರೊತ್ತಿನ ಊಟದ ಆತಂಕವನ್ನು ಸಂಪೂರ್ಣವಾಗಿ ದೂರ ಮಾಡಿದೆ.
ಮಹಾದೇವಿ, ಇಂಡಿ



ನನ್ನ ಮಗನಿಗೆ ಆಕ್ಸಿಡೆಂಟ್ ಆಗಿ ಮನೇಲೇ ಇದ್ದಾನೆ. ನಾನೊಬ್ಬಳೇ ದುಡಿದು ಮನೆ ನಡೆಸಬೇಕಾಗಿದೆ. ಮೊದಲೆಲ್ಲಾ ಊಟ ಇಲ್ಲದಿದ್ದಾಗ, ಬರಿ ಕಾಲಲ್ಲೇ ನಡೆದುಕೊಂಡು ಹೋಗಿ ಕಾಡಿನ ಹಣ್ಣು ತಿಂದು ಬದುಕ್ತಿದ್ವಿ. ಈಗ 'ಅನ್ನಭಾಗ್ಯ'ದಿಂದ ಅಕ್ಕಿ ಸಿಗ್ತಿದೆ. ನಮ್ಮಪ್ಪ ಸಿದ್ದರಾಮಯ್ಯ ಪುಣ್ಯಾತ್ಮನಿಂದಾಗಿ ನೆಮ್ಮದಿಯಾಗಿ ಜೀವನ ಮಾಡ್ತಾ ಇದ್ದೀವಿ.
ಜಡೆಮಾದಮ್ಮ, ಚಾಮರಾಜನಗರ

ಬಡತನದ ವಿರುದ್ಧದ ಹೋರಾಟ

ಬಡತನದ ಹಸಿವು ಹೇಗಿರುತ್ತದೆ ಎಂದು ನನಗೆ ಗೊತ್ತು. ಅದಕ್ಕಾಗಿಯೇ ನಾನು ಮುಖ್ಯಮಂತ್ರಿಯಾದ ಮೊದಲ ದಿನವೇ ಅನ್ನಭಾಗ್ಯ ಯೋಜನೆಗೆ ಸಹಿ ಹಾಕಿದ್ದೆ. ರಾಜ್ಯದ ಯಾವುದೇ ವ್ಯಕ್ತಿ ಹಸಿವಿನಿಂದ ಮಲಗಬಾರದು ಎಂಬುದೇ ನನ್ನ ಆಶಯವಾಗಿತ್ತು. ಅಂದು ಆರಂಭವಾದ ಆ ಪವಿತ್ರ ಕಾರ್ಯ ಇಂದು 'ಗ್ಯಾರಂಟಿ'ಯಾಗಿ ಕೋಟ್ಯಂತರ ಮನೆ ತಲುಪಿದೆ ಎನ್ನುವುದೇ ನನಗೆ ತೃಪ್ತಿ.
– ಸಿದ್ದರಾಮಯ್ಯ, ಮುಖ್ಯಮಂತ್ರಿಗಳು



'ಹಸಿವು ಮುಕ್ತ ಸಮಾಜ' ನವ ಕರ್ನಾಟಕದ ಅಡಿಪಾಯ

ಜನರ ಕಷ್ಟಗಳಿಗೆ ಸ್ಪಂದಿಸುವುದು ನಮ್ಮ ಆದ್ಯ ಕರ್ತವ್ಯ. ಹಸಿವು ಮುಕ್ತ ಸಮಾಜದ ನಿರ್ಮಾಣವೇ ನವ ಕರ್ನಾಟಕದ ಅಡಿಪಾಯ. 'ಅನ್ನಭಾಗ್ಯ' ಮತ್ತು 'ಪಂಚ ಗ್ಯಾರಂಟಿ' ಯೋಜನೆಗಳ ಮೂಲಕ ಕರ್ನಾಟಕವನ್ನು ದೇಶದಲ್ಲೇ ಅತ್ಯಂತ ಪ್ರಗತಿಪರ ಹಾಗೂ ಕಲ್ಯಾಣ ರಾಜ್ಯವನ್ನಾಗಿ ಮಾಡುವುದೇ ನಮ್ಮ ಸರ್ಕಾರದ ಸಂಕಲ್ಪ.
– ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು



ಕೊನೆಯ ಪ್ರಜೆಗೂ ಅನ್ನ ಸಿಕ್ಕಿದೆ

ಮುಖ್ಯಮಂತ್ರಿಗಳ ದೂರದರ್ಶಿತ್ವದ 'ಅನ್ನಭಾಗ್ಯ' ಯೋಜನೆಯನ್ನು ಅತ್ಯಂತ ಪಾರದರ್ಶಕವಾಗಿ ಅರ್ಹ ಫಲಾನುಭವಿಗಳಿಗೆ ತಲುಪಿಸುವ ಜವಾಬ್ದಾರಿಯನ್ನು ನಮ್ಮ ಇಲಾಖೆ ಯಶಸ್ವಿಯಾಗಿ ನಿಭಾಯಿಸಿದೆ. ರಾಜ್ಯದ ಕಟ್ಟಕಡೆಯ ವ್ಯಕ್ತಿಗೂ ಆಹಾರ ಭದ್ರತೆ ಸಿಗುವಂತೆ ಮಾಡಲು ನಮ್ಮ ಆಹಾರ ಇಲಾಖೆ ಸದಾ ಬದ್ಧವಾಗಿದೆ.
– ಕೆ.ಎಚ್. ಮುನಿಯಪ್ಪ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು

ಕರ್ನಾಟಕ ವಾರ್ತೆ

20 ಹೊಸ ಶಿಶುವಿಹಾರ ಕೇಂದ್ರ ಆರಂಭ

ಉದ್ಯೋಗಸ್ಥ ಮಹಿಳೆಯರಿಗೆ ಅನುಕೂಲ | ಪ್ರತಿ ಕೇಂದ್ರದಲ್ಲಿ 25 ಮಕ್ಕಳಿಗೆ ಆಶ್ರಯ

■ **ವಿಕ ಸುದ್ದಿಲೋಕ** ಬೆಂಗಳೂರು

ಉದ್ಯೋಗಸ್ಥ ಮಹಿಳೆಯರ ಮಕ್ಕಳ ಪಾಲನೆಗಾಗಿ 'ಕ್ರಿಚ್' ಯೋಜನೆಯಡಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆರಂಭಿಸಿರುವ ಶಿಶು ವಿಹಾರ ಕೇಂದ್ರಗಳಿಗೆ ಬೇಡಿಕೆ ಹೆಚ್ಚಿರುವ ಹಿನ್ನೆಲೆಯಲ್ಲಿ ಹೊಸದಾಗಿ 20 ಕೇಂದ್ರಗಳನ್ನು ತೆರೆಯಲು ನಿರ್ಧರಿಸಲಾಗಿದೆ. ಬೆಂಗಳೂರಿನಲ್ಲಿ ಮೂರು ಕೇಂದ್ರಗಳಿದ್ದು, ಹೊಸದಾಗಿ ಇನ್ನೂ ಮೂರು ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಜತೆಗೆ ರಾಜ್ಯಾದ್ಯಂತ ಆಯ್ದ ಸ್ಥಳಗಳಲ್ಲಿ ಶಿಶುವಿಹಾರ ಕೇಂದ್ರಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ.

ಉದ್ಯೋಗಸ್ಥ ಮಹಿಳೆಯರು ಗರ್ಭ ಧರಿಸುತ್ತಿದ್ದಂತೆ ಕೆಲಸಕ್ಕೆ ವಿದಾಯ ಹೇಳುತ್ತಾರೆ. ಮಕ್ಕಳ ಜವಾಬ್ದಾರಿ ಹೆಗಲೇರುವ ಕಾರಣದಿಂದ ವೃತ್ತಿ ಜೀವನದಿಂದ ವಿಮುಖರಾಗುತ್ತಾರೆ. ಮಗುವಿನ ಪಾಲನೆ ಜತೆ ಕೆಲಸ ಮಾಡಬೇಕೆನ್ನುವ ಮಹಿಳೆಯರಿಗೆ ನ್ಯಾಷನಲ್ ಕ್ರಿಚ್ ಯೋಜನೆಯು ನೆರವಾಗುತ್ತಿದೆ. ಮಕ್ಕಳಾದ ನಂತರ ಪಾಲಕರ ಜವಾಬ್ದಾರಿ ಹೆಚ್ಚುತ್ತದೆ. ಅದರಲ್ಲೂ ವಿಶೇಷವಾಗಿ ಮಹಿಳೆಗೆ ಮನೆ ಹಾಗೂ ಉದ್ಯೋಗ ಎರಡನ್ನೂ ನೋಡಿಕೊಳ್ಳುವುದು ಕಷ್ಟ. ಮಕ್ಕಳ ಪಾಲನೆ ಮಹಿಳೆಯರ ಮೊದಲ ಆದ್ಯತೆಯಾಗುತ್ತದೆ. ಮಕ್ಕಳ ಪಾಲನೆಗೆ ಜನರಿಲ್ಲ ಎನ್ನುವ ಕಾರಣಕ್ಕೆ ಅನೇಕ ಮಹಿಳೆಯರು ಕೆಲಸ ತೊರೆಯುತ್ತಾರೆ. ಭಾರತದಲ್ಲಿ ಮದುವೆಯಾದ ನಂತರ ಹಾಗೂ ಮಕ್ಕಳಾದ ಬಳಿಕ ಕೆಲಸ ಬಿಡುವ ಮಹಿಳೆಯರ ಸಂಖ್ಯೆ ಹೆಚ್ಚಿದೆ. ಮಹಿಳೆಯರ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರಕಾರವು ರಾಷ್ಟ್ರೀಯ ಶಿಶುವಿಹಾರ ಯೋಜನೆಯನ್ನು ಜಾರಿಗೆ ತಂದಿದೆ.

ಬಡ ಉದ್ಯೋಗಸ್ಥ ಮಹಿಳೆಯರು ಮಕ್ಕಳನ್ನು ಖಾಸಗಿ ಡೇ ಕೇರ್ ಸೆಂಟರ್‌ಗಳಿಗೆ ಸೇರಿಸಲು 10-15 ಸಾವಿರ ಶುಲ್ಕ ಪಾವತಿಸಬೇಕಿದೆ. ಹೀಗಾಗಿ, ಬಹುತೇಕರು ದುಡಿದ ಹಣವನ್ನು ಡೇ ಕೇರ್ ಸೆಂಟರ್‌ಗಳಿಗೆ ಪಾವತಿಸುವ ಬದಲು, ಕೆಲಸ ತೊರೆಯುವುದೇ ಲೇಸು ಎಂದು ಭಾವಿಸುತ್ತಾರೆ. ಈಗ ಸರಕಾರವೇ ತೆರೆದಿರುವ ಈ ಶಿಶುವಿಹಾರ ಕೇಂದ್ರಗಳಲ್ಲಿ ತಮ್ಮ ಮಕ್ಕಳನ್ನು ಬಿಟ್ಟು ನಿಶ್ಚಿಂತೆಯಿಂದ ಕೆಲಸ ಮಾಡಬಹುದಾಗಿದೆ. ಇದರಿಂದ ಹಣವೂ ಉಳಿಯುತ್ತದೆ. ಉದ್ಯೋಗದಿಂದ ಆರ್ಥಿಕವಾಗಿ ಸಬಲರಾಗಬಹುದು.

ರಾಷ್ಟ್ರೀಯ ಶಿಶುವಿಹಾರ ಯೋಜನೆಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದಿಂದ ಜಾರಿಗೊಳಿಸಲಾದ ಕೇಂದ್ರ ಪ್ರಾಯೋಜಿತ ಯೋಜನೆಯಾಗಿದೆ. 2017ರ ಜ.1ರಿಂದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಯೋಜನೆ ಜಾರಿಗೆ ಬಂದಿದೆ. ಈ ಯೋಜನೆಯನ್ನು ಮೊದಲು ರಾಜೀವ್ ಗಾಂಧಿ ರಾಷ್ಟ್ರೀಯ ಶಿಶುವಿಹಾರ ಯೋಜನೆ ಎಂದು ಹೆಸರಿಸಲಾಗಿತ್ತು. ಈಗಲೂ ಅದು ಮುಂದುವರಿದಿದೆ.

ಆರು ವರ್ಷದೊಳಗಿನ ಮಕ್ಕಳಿಗೆ ಅವಕಾಶ: ಆರು ತಿಂಗಳಿಂದ 6 ವರ್ಷದೊಳಗಿನ ಮಕ್ಕಳನ್ನು ಈ ಶಿಶುವಿಹಾರ ಕೇಂದ್ರಗಳಿಗೆ [illegible] ಆರೈಕೆ (ಡೇ-ಕೇರ್) [illegible] ಸೌಲಭ್ಯವಿರುತ್ತದೆ. 3 [illegible] ಪ್ರಾಥಮಿಕ ಉತ್ತೇಜನ [illegible] ಮಕ್ಕಳಿಗೆ ಶಾಲಾಪೂರ್ವ [illegible] ಮಂದಿರಗಳಲ್ಲಿ ನೀಡಲಾಗು[illegible]

ಈ ಯೋಜನೆಯು [illegible] ಅಭಿವೃದ್ಧಿ ಸಚಿವಾಲಯ [illegible] ಸರಕಾರದ ಸಹಯೋಗ[illegible] ಗೊಳ್ಳುತ್ತದೆ. ಕೇಂದ್ರ [illegible] ಶೇ. 50ರ ಅನುಪಾತ[illegible] ಕೇಂದ್ರಗಳಲ್ಲಿ ಮಕ್ಕಳಿಗೆ [illegible] ನೀಡಲಾಗುತ್ತದೆ. ಪ್ರತಿ ಕೇ[illegible] ಮಕ್ಕಳಿಗೆ ಆಶ್ರಯ ಕಲ್ಪಿಸಲಾ[illegible]

ಬೆಂಗಳೂರಿನಲ್ಲಿ 3 ಕೇಂದ್ರಗಳು: ಎಂ.ಎಸ್. ಬಿಲ್ಡಿಂಗ್, ಸಿಐಡಿ ಕಚೇರಿ, [illegible] ಪೊಲೀಸ್ ಕಚೇರಿ ಬಳಿ [illegible] ನಿರ್ವಹಿಸುತ್ತಿವೆ. ಈಗ [illegible] ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಲೋಕೋಪಯೋಗಿ ಇಲಾಖೆ ಕಚೇರಿ ಆವರಣ, ಅಂಬೇಡ್ಕರ್ ವೀದಿಯಲ್ಲಿರುವ ಸರ್ ಎಂ. ವಿಶ್ವೇಶ್ವರಯ್ಯ ಗೋಪುರ, ಕೆಪಿಟಿಸಿಎಲ್ ಕಾರ್ಪೊರೇಟ್ ಕಚೇರಿಯಲ್ಲಿ ಕೇಂದ್ರಗಳನ್ನು ತೆರೆಯಲು ನಿರ್ಧರಿಸಲಾಗಿದೆ.

● ರಾಜ್ಯಾದ್ಯಂತ ಕೋರ್ಟ್ ಆವರಣಗಳು, ತಹಸೀಲ್ದಾರ್/ಜಿಲ್ಲಾಧಿಕಾರಿ ಕಚೇರಿಗಳು, ಕಲಬುರಗಿ ವಿವಿ, ವಿಜಯನಗರ ಜಿಲ್ಲೆಯ ಹೊಸಪೇಟೆ ಜಿಲ್ಲಾ ಸಾರ್ವಜನಿಕ ಆಸ್ಪತ್ರೆ ಆವರಣ ಸೇರಿದಂತೆ ಹೊಸದಾಗಿ 20 ಕಡೆ ಶಿಶುಪಾಲನಾ ಕೇಂದ್ರಗಳನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದೆ.
-ಎನ್.ಮಹೇಶ್‌ಬಾಬು ನಿರ್ದೇಶಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಕಾಕ್ರೋಚ್ ಪಾರ್ಟಿಯಿಂದ ಕಾಂಗ್ರೆಸ್ ವಿಚಲಿತ: ಜೋಶಿ

[illegible] ಬಿಜೆಪಿ ವಿಚಲಿತಗೊಂಡಿಲ್ಲ, ವಿಚಲಿತಗೊಳ್ಳುವುದೂ ಇಲ್ಲ, ಅದರಿಂದ ಕಾಂಗ್ರೆಸ್ ಪಕ್ಷ ನಿಜವಾಗಿಯೂ ವಿಚಲಿತಗೊಂಡಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು. ''ಈಗಾಗಲೇ ದೇಶದ ಭೂಪಟದಿಂದಲೇ ಕಾಂಗ್ರೆಸ್ ಸಂಪೂರ್ಣ ಕಳೆದು[illegible] ಎನ್ನುವ ಭಯ ಆ ಪಕ್ಷಕ್ಕೆ ಕಾಡುತ್ತಿರುವುದರಿಂದಲೇ ಅದು ವಿಚಲಿತ ಆಗಿರುವುದು ಸ್ಪಷ್ಟ. ಯಾವುದೇ ಮೂಲಗಳಿಂದ ದೇಶದ ಭದ್ರತೆಗೆ ಮತ್ತು ಕಾನೂನು ಸುವ್ಯವಸ್ಥೆಗೆ, ನಾಗರಿಕರಿಗೆ ಧಕ್ಕೆಯಾದರೆ ಸರಕಾರ ಕ್ರಮ ಕೈಗೊಂಡಿದೆ'' ಎಂದು ತಿಳಿಸಿದರು.

● [illegible] ಆಮ್ ಆದ್ಮಿ ಪಕ್ಷದವರ ಕುತಂತ್ರದ ರಾಜಕಾರಣ. ಇದು, ಕೆಲಸವಿಲ್ಲದ ಕಾಂಗ್ರೆಸ್ ಹಾಗೂ ಅಧಿಕಾರವಿಲ್ಲದ 'ಆಪ್' ಸೇರಿ ಮಾಡುತ್ತಿರುವ ಅವಾಂತರವಾಗಿದೆ.
-ಆರ್.ಅಶೋಕ್ ಪ್ರತಿಪಕ್ಷ ನಾಯಕ

ವೈರಾಗ್ಯವೆಂದರೆ ಏನು? ವೈರಾಗ್ಯದಿಂದ ಸಂತೋಷ ಹೊಂದಬಹುದೇ? ಈ ಕುರಿತು ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರಿಂದ ಚಿಂತನ.
ಸಂಚಿಕೆಯಲ್ಲಿ ತಪ್ಪದೇ ಓದಿ!
ಬೋಧಿ ವೃಕ್ಷ
ಅತಿ ಹೆಚ್ಚು ಪ್ರಸಾರ ಸಂಖ್ಯೆ ಹೊಂದಿರುವ ಕನ್ನಡದ ಏಕೈಕ ಆಧ್ಯಾತ್ಮಿಕ ವಾರಪತ್ರಿಕೆ
ಪತ್ರಿಕೆಗಾಗಿ ಸಂಪರ್ಕಿಸಿ
72594 58080
ಪತ್ರಿಕೆಗಾಗಿ ಸ್ಕ್ಯಾನ್ ಮಾಡಿ ನಿಮ್ಮ ವಿಳಾಸ ಬರೆದು submit ಮಾಡಿ

ಕೆ.ಎಸ್.ಗಣೇಶ್

ಮಲಬಾರ್ ದೈತ್ಯ ಅಳಿಲು ಎಂದು ಕರೆಯಲಾಗುವ ವಿಶಿಷ್ಟ ಅಳಿಲು ಕೊಡಗು ಜಿಲ್ಲೆಯ ಗೋಣಿಕೊಪ್ಪ ಕಾಡಿನಲ್ಲಿ ಶನಿವಾರ ಕಂಡುಬಂತು. ವಿಶ್ವದ ಅತಿದೊಡ್ಡ ಅಳಿಲುಗಳಲ್ಲಿ ಒಂದಾದ ಇದು, ಉದ್ದವಾದ ಪೊದೆಯಂತಹ ಬಾಲವನ್ನು ಒಳಗೊಂಡಂತೆ 3 ಅಡಿವರೆಗೆ ಬೆಳೆಯಬಲ್ಲದು.

ಹೆಜ್ಜೇನು ಹುಳುಗಳ ದಾಳಿಗೆ ರೈತ ಸಾವು

ಹಗರಿಬೊಮ್ಮನಹಳ್ಳಿ (ವಿಜಯನಗರ): ತಾಲೂಕಿನ ತಂಬ್ರಹಳ್ಳಿಯಲ್ಲಿ ಹೆಜ್ಜೇನು ಹುಳುಗಳ ದಾಳಿಗೊಳಗಾಗಿ ತೀವ್ರ ಗಾಯಗೊಂಡ ರೈತರೊಬ್ಬರು ಚಿಕಿತ್ಸೆಗೆ ಸ್ಪಂದಿಸದೇ ಶುಕ್ರವಾರ ಮೃತಪಟ್ಟಿದ್ದಾರೆ.

ಗ್ರಾಮದ ತಳವಾರ ಹನುಮಂತಪ್ಪ(70) ಎಂಬುವರೇ ಮೃತರು. ಬಂಡೆ ರಂಗನಾಥೇಶ್ವರ ದೇಗುಲದ ಬಳಿಯ ಜಮೀನಿನಲ್ಲಿ ಮೇ 19ರಂದು ಕೃಷಿ ಚಟುವಟಿಕೆ ಕೈಗೊಂಡಾಗ ಹೆಜ್ಜೇನು ಹುಳುಗಳು ಅವರ ಮೇಲೆ ಹಠಾತ್ ದಾಳಿ ನಡೆಸಿದ್ದವು. ಗಾಯಗೊಂಡಿದ್ದ ಅವರಿಗೆ ಪಟ್ಟಣದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಧಾರವಾಡದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಿಸಲಿಲ್ಲ, ತಂಬ್ರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

500 ವರ್ಷಗಳ ಹಿಂದೆಯೇ ಸ್ವಚ್ಛ ಭಾರತ್!

ಹಂಪಿಯಲ್ಲಿ ವಿಜಯನಗರ ಅರಸರ ಕಾಲದ ಚರಂಡಿ ವ್ಯವಸ್ಥೆ | ಉತ್ಖನನದ ವೇಳೆ ಪತ್ತೆ

■ **ಜಯಪ್ಪ ರಾಥೋಡ್**
ಹೊಸಪೇಟೆ (ವಿಜಯನಗರ)
rathodjayakumar92@gmail.com

ಆಧುನಿಕ ಜಗತ್ತು ಹೆಮ್ಮೆಯಿಂದ ಆಚರಿಸುತ್ತಿರುವ ಸ್ವಚ್ಛ ಭಾರತ್ ಚಿಂತನೆ ಮತ್ತು ಅಚ್ಚುಕಟ್ಟಾದ ನಗರ ಯೋಜನೆಯ ಕಲ್ಪನೆ ವಿಜಯನಗರ ಸಾಮ್ರಾಜ್ಯದ ಅರಸರಿಗೆ ಐನೂರು ವರ್ಷಗಳ ಹಿಂದೆಯೇ ಕರಗತವಾಗಿತ್ತು ಎಂಬುದಕ್ಕೆ ವಿಶ್ವ ಪಾರಂಪರಿಕ ತಾಣ ಸಾಕ್ಷಿ ನುಡಿಯುತ್ತಿದೆ.

ಇಂದಿನ ಎಂಜಿನಿಯರ್‌ಗಳಿಗೂ ಸವಾಲು ಹಾಕುವಂತಹ ಅಪ್ರತಿಮ ಜಲ ನಿರ್ವಹಣಾ ತಂತ್ರಜ್ಞಾನ ಮತ್ತು ಸುಸಜ್ಜಿತ ಒಳಚರಂಡಿ ವ್ಯವಸ್ಥೆ ಹಂಪಿಯಲ್ಲಿ ಕೈಗೊಂಡಿರುವ ಉತ್ಖನನ ವೇಳೆ ಪತ್ತೆಯಾಗಿದೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪಿಯ ಪ್ರಸಿದ್ಧ ಹಜಾರ ರಾಮ ದೇವಸ್ಥಾನದ ಆವರಣದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ನಡೆಸುತ್ತಿರುವ ವೈಜ್ಞಾನಿಕ ಉತ್ಖನನದಲ್ಲಿ ಭಾರಿ ಯಶಸ್ಸು ಸಿಕ್ಕಿದೆ. ದೇವಸ್ಥಾನದ ಸಂಕೀರ್ಣದಲ್ಲಿ ವಿಜಯನಗರ ಕಾಲದ ಅತ್ಯಂತ ಸುಸಜ್ಜಿತ ಹಾಗೂ ಪ್ರಾಚೀನ ಚರಂಡಿ ವ್ಯವಸ್ಥೆ ಬೆಳಕಿಗೆ ಬಂದಿದೆ. ಈ ಹಿಂದೆ ವಿರೂಪಾಕ್ಷೇಶ್ವರ ದೇಗುಲದ ಬೀದಿಯಲ್ಲಿ ನದಿಗೆ ಸಂಪರ್ಕ ಹೊಂದಿರುವಂತೆ ಚರಂಡಿ ವ್ಯವಸ್ಥೆಯೊಂದು ಪತ್ತೆಯಾಗಿದ್ದನ್ನು ಸ್ಮರಿಸಬಹುದು.

ಎಂಜಿನಿಯರ್‌ಗಳ ಕೌಶಲ: ಮಳೆಗಾಲದಲ್ಲಿ ನೀರು ಸರಾಗವಾಗಿ ಹರಿದು ಹೋಗಲು ಮತ್ತು ಗರ್ಭಗುಡಿಯಿಂದ ಹೊರಭಾಗಕ್ಕೆ ದೇವತಾ ಮೂರ್ತಿಗಳ ಅಭಿಷೇಕದ ಪವಿತ್ರ ಜಲವನ್ನು ಸಾಗಿಸಲು ಈ ಬೃಹತ್ ಕಲ್ಲಿನ ಚಾನೆಲ್ ಅನ್ನು ವಿನ್ಯಾಸಗೊಳಿಸಲಾಗಿತ್ತು ಎನ್ನುವುದು ತಜ್ಞರ ಅಭಿಪ್ರಾಯ. ಶತಮಾನಗಳ ಕಾಲ ಮಣ್ಣು ಮತ್ತು ಅವಶೇಷಗಳ ಅಡಿ ಹೂತುಹೋಗಿದ್ದ ಈ ಅಪರೂಪದ ಎಂಜಿನಿಯರಿಂಗ್ ಕೌಶಲವು ಈಗ ಬೆಳಕಿಗೆ ಬಂದಿದೆ. ಹಜಾರ ರಾಮ ದೇವಸ್ಥಾನದಲ್ಲಿ ನಿರಂತರವಾಗಿ ಪತ್ತೆಯಾಗುತ್ತಿರುವ ಆಳ್ವಾರ್ ಶಿಲ್ಪಗಳು, ಜೈನ ಧರ್ಮದ ಅವಶೇಷಗಳು ಮತ್ತು ವಿಸ್ತಾರವಾದ ಚರಂಡಿ ಜಾಲವು ಹಂಪಿಯ ಐತಿಹಾಸಿಕ ಪ್ರಾಮುಖ್ಯತೆಯನ್ನು ಮತ್ತಷ್ಟು ಹೆಚ್ಚಿಸಿದೆ. ಮಧ್ಯಕಾಲೀನ ದಕ್ಷಿಣ ಭಾರತದ ದೇವಾಲಯಗಳಲ್ಲಿ ಅಳವಡಿಸಿಕೊಳ್ಳಲಾಗಿದ್ದ ವಾಸ್ತುಶಿಲ್ಪ ಯೋಜನೆ, ನೀರಿನ ಸಂವಹನ ಮತ್ತು ಧಾರ್ಮಿಕ ಆಚರಣೆಗಳ ಬಗ್ಗೆ ಆಳವಾದ ಒಳನೋಟಗಳನ್ನು ಪಡೆಯಲು ಈ ಶೋಧನೆ ಸಹಕಾರಿಯಾಗಲಿದೆ. ವಿಜಯನಗರ ಸಾಮ್ರಾಜ್ಯದ ವೈಭವ ಕೇವಲ ಯುದ್ಧ ಮತ್ತು ಕಲೆಗೆ ಸೀಮಿತವಾಗಿರದೆ, ನಾಗರಿಕ ಜೀವನದ ಅತ್ಯಗತ್ಯ ಅಂಗವಾದ ನೈರ್ಮಲ್ಯ ಹಾಗೂ ಜಲ ವಿಜ್ಞಾನದಲ್ಲೂ ಅತ್ಯುನ್ನತ ಮಟ್ಟದಲ್ಲಿತ್ತು ಎಂಬುದನ್ನು ಈ ಹೊಸ ಶೋಧನೆ ಜಗತ್ತಿಗೆ ಸಾರುತ್ತಿದೆ.

ಹಂಪಿ ಹಜಾರ ರಾಮ ದೇಗುಲದ ಆವರಣದಲ್ಲಿ ಪತ್ತೆಯಾಗಿರುವ ಪ್ರಾಚೀನ ಕಾಲದ ಬೃಹತ್ ಚರಂಡಿ.

ಮತ್ತೆರಡು ಆಳ್ವಾರ್ ಶಿಲ್ಪ ಪತ್ತೆ

ಕಳೆದ ಕೆಲವು ವಾರಗಳಿಂದ ಈ ಭಾಗದಲ್ಲಿ ಉತ್ಖನನ ಪ್ರಗತಿಯಲ್ಲಿದೆ. ಇತ್ತೀಚೆಗಷ್ಟೇ ಎರಡು ಆಳ್ವಾರ್ ವಿಗ್ರಹಗಳು ಪತ್ತೆಯಾಗಿದ್ದವು. ಈಗ ಮುಂದುವರಿದ ಉತ್ಖನನದಲ್ಲಿ ಮತ್ತೆರಡು ಆಳ್ವಾರ್ ಶಿಲ್ಪಗಳು ಕಂಡುಬಂದಿವೆ. ವೈಜ್ಞಾನಿಕ ಸ್ವಚ್ಛತಾ ಕಾರ್ಯದ ವೇಳೆ ಜೈನ ದೇವಾಲಯದ ಚಾವಣಿಯ ಶೈಲಿ ಹೋಲುವ ವಿನ್ಯಾಸ ಹಾಗೂ ಜೈನ ಧರ್ಮಕ್ಕೆ ಸಂಬಂಧಿಸಿದ ಅವಶೇಷಗಳು ಸಹ ಇಲ್ಲಿ ಪತ್ತೆಯಾಗಿವೆ.



● ಹಂಪಿಯಲ್ಲಿ ದೊರಕಿರುವ ಚರಂಡಿ ವ್ಯವಸ್ಥೆಯು ವಿಜಯನಗರ ಕಾಲದ ಅತ್ಯಾಧುನಿಕ ಜಲ ನಿರ್ವಹಣೆ ಮತ್ತು ಧಾರ್ಮಿಕ ಆಚರಣೆಯ ವ್ಯವಸ್ಥೆಯ ಭಾಗವಾಗಿದೆ. ನುಣುಪಾಗಿ ಕೆತ್ತಲಾದ ಗ್ರಾನೈಟ್ ಕಲ್ಲಿನ ಚಪ್ಪಡಿಗಳನ್ನು ಬಳಸಿ ಇದನ್ನು ನಿರ್ಮಿಸಲಾಗಿದ್ದು, ಒಟ್ಟು 23 ಮೀಟರ್ ಉದ್ದ ಇದೆ.
-ಕೆ.ರಾಮಕೃಷ್ಣನ್ ರೆಡ್ಡಿ ಪುರಾತತ್ವ ಅಧೀಕ್ಷಕರು, ಎಎಸ್ಐ ಹಂಪಿ ವೃತ್ತ

Courses offered

B.B.A Aviation Management — with IATA Certification in association with Orient Flight Aviation Academy
BCA Bachelor of Computer Application
B.B.A* Bachelor of Business Administration
B.COM Bachelor of Commerce
M.COM Master of Commerce
M.C.A* Master of Computer Applications
*subject to approval

AWARD-WINNING INSTITUTION
Skill Development Initiative Award | Top & Most Trusted Degree College | Quality Education Award | Ranked No 1 Emerging BBA Institute | Best Private Under Graduate College | Quality Education Award

CA/CS Foundation coaching offered
Value-added courses & industrial visits
Well-equipped labs
Focus on sports & cultural activities
Experienced faculty from industry & academia
Placement & training support
Hostel & transportation provided

Top Placements: AIR INDIA SATS, IndiGo, QATAR, Infosys, accenture, EXCELSOFT, rProcess, PAYCHEX, KRIYA

Merit Scholarships offered
www.hindustancollege.in
+91 7795737070 | 7795727070 | 7022256465
0821-2480346, 0821-2970345
College Code 1084

ಸಮುದ್ರೋಲ್ಲಂಘನ ಸಮರ್ಥರು ಬೇಕಾಗಿದ್ದಾರೆ!

ರಾಜ್ಯಕಾರಣ
ಶಶಿಧರ ಹೆಗಡೆ
shashidhar.nandikal@timesofindia.com

ದೇಶದಲ್ಲೆಲ್ಲ ವಿಜಯಯಾತ್ರೆ ನಡೆಸುವ ಬಿಜೆಪಿಗೆ ಕರ್ನಾಟಕವೇ ಸವಾಲು. ಇಲ್ಲಿ ಪಕ್ಷಕ್ಕೆ ನೆಲೆಯಿದ್ದರೂ ತಕ್ಕುದಾದ ದೊಡ್ಡ ಗೆಲುವು ದಕ್ಕುತ್ತಿಲ್ಲ. ಸಾಗರೋಲ್ಲಂಘನ ಮಾಡಬಲ್ಲ ಶಕ್ತಿವಂತರನ್ನು ಗುರುತಿಸುವಲ್ಲಿ ಹೈಕಮಾಂಡ್‌ಗೂ ಸ್ಪಷ್ಟತೆಯಿಲ್ಲ. ಒಟ್ಟಿನಲ್ಲಿ ಬೆಳಕಿನ ಕಿಂಡಿ ಕಾಣಿಸುತ್ತಿಲ್ಲ

ಶತಯೋಜನ ವಿಸ್ತೀರ್ಣದ ಸಮುದ್ರೋಲ್ಲಂಘನ ಮಾಡುವವರು ಯಾರು ಎಂಬ ಪ್ರಶ್ನೆ ಎದುರಾದಾಗ ಕಪಿ ನಾಯಕರೆಲ್ಲ ಬಾಲ ಮುದುರಿಕೊಂಡು ನೆಲ ನೋಡುತ್ತಿದ್ದರು. ಒಂದು ಯೋಜನವೆಂದರೆ ಹತ್ತಾರು ಮೈಲು ದೂರ. ಅಂದರೆ ಈಗಿನ ಕಿಲೋಮೀಟರಿನ ಅಳತೆಯಲ್ಲಿ ಎಷ್ಟು ಉದ್ದವೆಂದು ಲೆಕ್ಕ ಹಾಕಿಕೊಳ್ಳಿ. ಸೀತಾನ್ವೇಷಣೆಗಾಗಿ ಯಾರಾದರೂ ಒಬ್ಬರು ಸಾಗರವನ್ನು ದಾಟಲೇಬೇಕಿತ್ತು. ಕಪಿ ಸೈನ್ಯ ಧೈರ್ಯಗೆಟ್ಟಿತ್ತು. ಅವರಲ್ಲೊಬ್ಬ ಮಾತ್ರ ತಪ್ಪಿಸಿಕ್ಕೆ ತಾನೇ ಮಾತ್ರ ಮಾಡಬಲ್ಲೆನೆಂದು ಅರಿತಿದ್ದ ಜಾಂಬವಂತ. 'ಇಲ್ಲಿರುವ ಕಪಿ ವೀರರಲ್ಲಿ ನೀನೊಬ್ಬನೇ ಸಮರ್ಥನವಂತ. ಈ ಸಾಗರವನ್ನು ಲೀಲಾಜಾಲವಾಗಿ ದಾಟಬಲ್ಲೆ' ಎಂದು ಹನುಮಂತನನ್ನು ಬಡಿದೆಬ್ಬಿಸುತ್ತಾನೆ. ಜಾಂಬವ ಅಷ್ಟು ಹೇಳಿದ ಮರುಕ್ಷಣವೇ ಜಾಡ್ಯವನ್ನು ತೊರೆದೆದ್ದ ಅಂಜನಾ ದೇವಿಯ ಗರ್ಭ ಸಂಜಾತ ಅಂಜನೇಯ ಸಾಗರೋಲ್ಲಂಘನಕ್ಕೆ ಸಿದ್ಧನಾಗುತ್ತಾನೆ. ನೋಡ ನೋಡುತ್ತಿದ್ದಂತೆ ಮಹೇಂದ್ರಾಚಲದ ಎತ್ತರಕ್ಕೆ ಬೆಳೆದು ನಿಲ್ಲುತ್ತಾನೆ.

ರಾಮಾಯಣದ ಈ ಕಥೆ ಗೊತ್ತಿರುವಂಥದ್ದೇ. ಶತಯೋಜನದಷ್ಟು ದೂರದ ಸಾಗರವನ್ನು ಕ್ರಮಿಸಿದ ದೃಷ್ಟಾಂತದಲ್ಲಿ ಸಾರ್ವಕಾಲಿಕವಾದ ನೀತಿಬೋಧೆಯಿದೆ. ಮಹಾಸಾಗರ ದಾಟುವ ಶಕ್ತಿ ಹನುಮಂತನಲ್ಲಿ ಇದ್ದಿತ್ತಾದರೂ ಅದು ಅವನಿಗೇ ಗೊತ್ತಿರಲಿಲ್ಲ. ಈ ಕಾರ್ಯ ಕೈಗೊಳ್ಳಲು ಹನುಮನಿಗೆ ಉದ್ದೀಪಿಸಿದವ ಜಾಂಬವಂತ. ಅನೇಕರಿಗೆ ತಮ್ಮಲ್ಲಿನ ವಿಶೇಷ ಗುಣದ ಬಗ್ಗೆ ಅರಿವಿರುವುದಿಲ್ಲ. ಆತ್ಮೀಯರ್ಯಾರೋ ಬೆನ್ನು ತಟ್ಟಿದಾಗಲೇ ಅಂಥವರು ಜಾಗೃತರಾಗುತ್ತಾರೆ ಮತ್ತು ಹನುಮನಂತೆ ಶಕ್ತಿಯನ್ನು ಆವಾಹಿಸಿಕೊಂಡು ಕಾರ್ಯೋನ್ಮುಖರಾಗುತ್ತಾರೆ.

ರಾಮನ ಜಪ ಮಾಡಿಕೊಂಡೇ ಬೆಳೆದು ಬಂದಿರುವ ಪಕ್ಷ ಬಿಜೆಪಿ. ಕೋಮುವಾದಿ ಬಿಜೆಪಿ ದೇಶದಲ್ಲಿ ಯಾವತ್ತೂ ಅಧಿಕಾರಕ್ಕೆ ಬರುವುದಿಲ್ಲವೆಂದು ಜಾತ್ಯತೀತವಾದಿಗಳು ಪುನರಪಿ ಪುನರಪಿ ಹೇಳಿದ್ದೇ ಹೇಳಿದ್ದು. ಆದರೆ, ಅಟಲ್ ಬಿಹಾರಿ ವಾಜಪೇಯಿ ಅವರ ವರ್ಚಸ್ಸು ಮತ್ತು ಲಾಲ್‌ಕೃಷ್ಣ ಆಡ್ವಾಣಿ ಅವರ ಸಂಘಟನೆಯಿಂದ ದಿಲ್ಲಿಯ ಗದ್ದುಗೆವರೆಗೆ ಬಿಜೆಪಿ ತಲುಪಿತು. ವಾಜಪೇಯಿ ನೇತೃತ್ವದ ಎನ್‌ಡಿಎ ಸರಕಾರ ಯಶಸ್ವಿಯಾಗಿ ಆಡಳಿತ ನಡೆಸಿತ್ತು. ಸುಶಾಸನ ಮತ್ತು ವಿಕಾಸಕ್ಕೆ ಒತ್ತು ಕೊಟ್ಟವರು ವಾಜಪೇಯಿ. ಪರಿಣಾಮ ದೇಶದಲ್ಲಿ ಬಿಜೆಪಿ ರೆಂಬೆಕೊಂಬೆಗಳು ಬಲಿಯುತ್ತ ಹೋದವು.

ವಾಜಪೇಯಿ-ಆಡ್ವಾಣಿ ಕಾಲಖಂಡದ ಬಿಜೆಪಿಗೆ ಸಂಸತ್‌ನಲ್ಲಿ ಬಹುಮತವಿರಲಿಲ್ಲ. ಮಿತ್ರಪಕ್ಷಗಳನ್ನು ಸಂಭಾಳಿಸದೆ ವಿಧಿಯಿರಲಿಲ್ಲ. ನರೇಂದ್ರ ಮೋದಿ ಅವಧಿಯ ಬಿಜೆಪಿಯದ್ದು ಸುವರ್ಣ ಯುಗ. ಮೋದಿ ಮೊದಲ ಬಾರಿ ಪ್ರಧಾನಿಯಾಗುವಾಗಲೇ ಬಹುಮತದೊಂದಿಗೆ ಲೋಕಸಭೆ ಪ್ರವೇಶಿಸಿದ್ದರು. ಅವರು ಎರಡನೇ ಬಾರಿಗೆ ಪ್ರಧಾನಿಯಾದಾಗ ಬಿಜೆಪಿಯ ಸಂಖ್ಯಾಬಲ 300ರ ಗಡಿ ದಾಟಿತ್ತು. 2024ರಲ್ಲಿ ಹಿನ್ನಡೆ ಅನುಭವಿಸಿದರೂ ಎನ್‌ಡಿಎ ಮೈತ್ರಿಕೂಟದ ಬಲದಿಂದ ನರೇಂದ್ರ ಮೋದಿ ಅಧಿಕಾರ ಪರ್ವ ಮುಂದುವರಿದಿದೆ. ಸೆಕ್ಯೂಲರಿಸಮ್‌ನ ಗುತ್ತಿಗೆ ಹಿಡಿದಂತೆ ವರ್ತಿಸುವವರು ಅದೇ ಕೋಮುವಾದಿ ಪಕ್ಷವೆಂಬ ರಾಗವೆಳೆಯುತ್ತಿದ್ದಾರೆ. ಇದರ ನಡುವೆ ಅಧಿಕಾರದ ಓಟದಲ್ಲಿ ಬಿಜೆಪಿ ಗಾವುದ ದೂರ ಸಾಗಿಯಾಗಿದೆ. ಬಲಿಷ್ಠ ಪರ್ಯಾಯ ರಂಗವಿಲ್ಲದ ಕಾರಣ ಎದುರಾಳಿಗಳೇ ಇಲ್ಲದ ಆಖಾಡದಲ್ಲಿ ಬಿಜೆಪಿ ಗೆದ್ದು ಬೀಗುತ್ತಿದೆ. ಗಮನಿಸಬೇಕಾದ ಅಂಶವೆಂದರೆ, ಕಳೆದ ಲೋಕಸಭೆ ಚುನಾವಣೆ ಬಳಿಕ ನಾನಾ ರಾಜ್ಯಗಳಿಗೆ ನಡೆದ ಚುನಾವಣೆಗಳಲ್ಲಿ ಬಿಜೆಪಿಯದ್ದೇ ಮೇಲುಗೈ. ಬಿಜೆಪಿಯ ಪಾಲಿಗೆ ಅಕ್ಷರಶಃ ಮರಭೂಮಿಯಾಗಿದ್ದ ಪಶ್ಚಿಮ ಬಂಗಾಳದಲ್ಲೂ ಕಮಲವರಳಿದೆ. ಹಾಗಾಗಿ ಅಸಾಧ್ಯವಾದುದು ಯಾವುದೂ ಇಲ್ಲ ಎಂಬ ಧೋರಣೆಯೊಂದಿಗೆ ಬಿಜೆಪಿ ಮುನ್ನುಗ್ಗುತ್ತಿರುವುದು ಸ್ಪಷ್ಟ.

2014ರಿಂದ ಪ್ರಾರಂಭವಾಗಿ ಸಾಲುಸಾಲು ಚುನಾವಣೆಗಳಲ್ಲಿ ಬಿಜೆಪಿ ಗೆಲುವು ದಾಖಲಿಸುತ್ತಿರುವುದಕ್ಕೆ ಪಕ್ಷದ ಕೇಂದ್ರ ನಾಯಕತ್ವದ ಭೂಮಿಕೆಯದ್ದೇ ಸಿಂಹಪಾಲು. ರಾಜ್ಯಗಳ ವಿಚಾರಕ್ಕೆ ಬಂದಾಗ ಸ್ಥಳೀಯ ನಾಯಕರನ್ನು ಸಮರ್ಥವಾಗಿ ಮತ್ತು ಅಗತ್ಯಾನುಸಾರ ಬಳಸಿಕೊಳ್ಳಲಾಗುತ್ತಿದೆ. ವಿರೋಧ ಪಕ್ಷಗಳಲ್ಲಿನ ಅತೃಪ್ತರನ್ನು ಸೆಳೆದು ಅಂಥವರ ಯೋಗ್ಯತೆಯ ಅನುಸಾರ ಸ್ಥಾನಮಾನ ಕಲ್ಪಿಸಲು ಹಿಂದೇಟು ಹಾಕುತ್ತಿಲ್ಲ. ದೀದಿ ಮಮತಾ ಬ್ಯಾನರ್ಜಿಯ ಒಂದು ಕಾಲದ ಪರಮ ಶಿಷ್ಯ ಸುವೇಂದು ಅಧಿಕಾರಿ ಪಶ್ಚಿಮ ಬಂಗಾಳದಲ್ಲಿ ಈಗ ಬಿಜೆಪಿಯ ಮುಖ್ಯಮಂತ್ರಿ. ದೀದಿಯ ಅವಕೃಪೆಗೆ ಒಳಗಾಗಿದ್ದ ಸುವೇಂದು ಅಧಿಕಾರಿಗೆ ಕೆಂಪು ಹಾಸು ಹಾಕಿದವರು ಅಮಿತ್ ಶಾ. 2021ರಲ್ಲಿ ಎಲ್ಲ ಕಸರತ್ತಿನ ನಡುವೆಯೂ ದೀದಿ ಗೆದ್ದಾಗ ಟಿಎಂಸಿಯಿಂದ ಬಿಜೆಪಿಗೆ ಬಂದಿದ್ದ ಹಲವರು ಶಸ್ತ್ರಕೆಳಗಿಟ್ಟಿದ್ದರು. ದೀದಿಯ ಭಯದಿಂದ ಮತ್ತೆ ಟಿಎಂಸಿ ಪಾಳಯ ಸೇರಿದ್ದರು. ಸುವೇಂದು ಮಾತ್ರ ಯುದ್ಧರಂಗದಿಂದ ಹಿಂದಡಿ ಇಡಲಿಲ್ಲ. ಅರ್ಥಾತ್ ಜಾಂಬವಂತನಂತೆ ಸುವೇಂದುಗೆ ಬೇಕಾದ ಸ್ಥೈರ್ಯ ತುಂಬಿದವರು ಅಮಿತ್ ಶಾ. ಹಾಗಾಗಿ ಇವತ್ತು ಪಶ್ಚಿಮ ಬಂಗಾಳದಲ್ಲಿ ಐತಿಹಾಸಿಕ ವಿಜಯದೊಂದಿಗೆ ಬಿಜೆಪಿ ಸರಕಾರ ರಚಿಸಿದೆ.

ಅಸ್ಸಾಂನ ಹಿಮಂತ ಬಿಸ್ವಾ ಶರ್ಮಾ ಕೂಡ ಕಾಂಗ್ರೆಸ್‌ನಿಂದ ಬಿಜೆಪಿಗೆ ಬಂದು ಮುಖ್ಯಮಂತ್ರಿಯಾದವರು. ನರೇಂದ್ರ ಮೋದಿ, ಅಮಿತ್ ಶಾ ಪ್ರೋತ್ಸಾಹದಿಂದ ಈಶಾನ್ಯ ಭಾರತದಲ್ಲಿ ಪಕ್ಷದ ಬಲವರ್ಧನೆಗೆ ಹಿಮಂತ ಬಿಸ್ವಾ ಶ್ರಮಿಸುತ್ತಿದ್ದಾರೆ. ಯೋಗಿ ಆದಿತ್ಯನಾಥ್ ಹೆಸರೆತ್ತಿದರೆ ಬಿಜೆಪಿ ಸಮರ್ಥಕರ ವಲಯದಲ್ಲಿ ಮಿಂಚಿನ ಸಂಚಾರವಾಗುತ್ತದೆ. ಮಹಾರಾಷ್ಟ್ರದಂಥ ಪ್ರಮುಖ ರಾಜ್ಯದಲ್ಲಿ ದೇವೇಂದ್ರ ಫಡ್ನವೀಸ್ ರನ್ ಪೇರಿಸುತ್ತಿದ್ದಾರೆ. ಬಿಜೆಪಿ ಸತತ ಜಯ ಕಾಣುತ್ತಿರುವ ಗುಜರಾತ್, ಮಧ್ಯ ಪ್ರದೇಶ ಇನ್ನಿತರ ರಾಜ್ಯಗಳಲ್ಲಿ ನಿಶ್ಚಿಂತೆಯಿದೆ.

ಇಷ್ಟೆಲ್ಲ ಹೇಳಿದ ಮೇಲೆ ಕರ್ನಾಟಕದತ್ತ ಬಾರದಿದ್ದರೆ ಅಪಚಾರವಾಗುತ್ತದೆ. ಚರ್ವಿತ ಚರ್ವಣ ಹೋಲಿಕೆ ಎನ್ನಿಸಿದರೂ ಬಿಜೆಪಿ ಮಟ್ಟಿಗೆ ಕರ್ನಾಟಕವೇ ದಕ್ಷಿಣ ಭಾರತದ ಹೆಬ್ಬಾಗಿಲು ಎನ್ನುವುದು ವಾಸ್ತವ. ಕೇರಳ, ತಮಿಳುನಾಡು, ಆಂಧ್ರ ಪ್ರದೇಶ, ತೆಲಂಗಾಣ ಈ ನಾಲ್ಕು ರಾಜ್ಯಗಳಲ್ಲಿ ಎಲ್ಲಾದರೂ ಒಂದು ಕಡೆ ಪಕ್ಷ ಅಧಿಕಾರಕ್ಕೆ ಬಂದಾಗ 'ಬಿಜೆಪಿಗೆ ದಕ್ಷಿಣ ಭಾರತದ ಹೆಬ್ಬಾಗಿಲು ಕರ್ನಾಟಕ' ಎಂಬ ಹೋಲಿಕೆಯನ್ನು ಬರಖಾಸ್ತುಗೊಳಿಸಬಹುದು! ಅದೇನೇ ಇರಲಿ. ಕರ್ನಾಟಕದಲ್ಲಿ ಪಕ್ಷ ಆಡಳಿತ ನಡೆಸಿದ್ದರೂ ಒಮ್ಮೆಯೂ ಬಹುಮತ ಪ್ರಾಪ್ತವಾಗಿಲ್ಲ. ಬಿ.ಎಸ್.ಯಡಿಯೂರಪ್ಪನವರ ನಾಯಕತ್ವದಲ್ಲಿ ಎರಡು ಬಾರಿ ನೂರರ ಗಡಿ ದಾಟಿರುವುದು ರಾಜ್ಯ ಬಿಜೆಪಿಯ ಗರಿಷ್ಠ ಸಾಧನೆ. ಬಿಎಸ್‌ವೈ ನಿವೃತ್ತಿ ಬಳಿಕ ಪರಿಸ್ಥಿತಿ ಅಯೋಮಯವಾಗಿದೆ. ಸದ್ಯ ಬಿಎಸ್‌ವೈ ಪುತ್ರ ಬಿ.ವೈ. ವಿಜಯೇಂದ್ರ ಬಳಿಯೇ ರಾಜ್ಯ ಬಿಜೆಪಿಯ ಸಾರಥ್ಯವಿದೆ. ಇತ್ತೀಚೆಗೆ ಚಿತ್ರದುರ್ಗದಲ್ಲಿ ನಡೆಸಲಾದ 'ಬಿಎಸ್‌ವೈ ಅಭಿಮಾನೋತ್ಸವ' ಬಿಜೆಪಿಗೆ ಶಕ್ತಿ ತಂದು ಕೊಡಲಿದೆ. ವಿಶೇಷವಾಗಿ ವಿಜಯೇಂದ್ರ ನಾಯಕತ್ವವನ್ನು ಗಟ್ಟಿಗೊಳಿಸಲಿದೆ ಎಂದು ಭಾವಿಸಲಾಗಿದೆ. ಅಥವಾ ಬಿವೈವಿ ಬೆಂಬಲಿಗರು ಹಾಗೆ ಬಿಂಬಿಸಿಕೊಳ್ಳುತ್ತಿದ್ದಾರೆ.

ಈ ನಡುವೆಯೂ ವಿಜಯೇಂದ್ರ ಅಧ್ಯಕ್ಷ ಪಟ್ಟದ ವಾಯಿದೆ ಎಲ್ಲಿವರೆಗೆ ಎಂಬುದರ ಖಾತರಿಯಿಲ್ಲ. ಬಿಎಸ್‌ವೈ ನಂತರದಲ್ಲಿ ಪಕ್ಷದ ರಾಜ್ಯ ಘಟಕವನ್ನು ಇಡಿಯಾಗಿ ಆವರಿಸಿಕೊಳ್ಳಬಲ್ಲ ನಾಯಕನ ಶೋಧದಲ್ಲಿ ಹೈಕಮಾಂಡ್ ಇನ್ನೂ ತೊಡಗಿಕೊಂಡಿದೆ ಎನ್ನುವುದೇ ಅರ್ಥ. ಜಾಂಬವಂತನ ಸ್ಥಾನದಲ್ಲಿದ್ದು ಚಚ್ಚುಮದ್ದು ಕೊಡುವುದಕ್ಕೇನೋ ಅಮಿತ್ ಶಾ ತಯಾರಿದ್ದಾರೆ. ಆದರೆ, ಬಾಲ ಬಿಚ್ಚಿ ಲಂಕೆಗೆ ಹಾರುವ ಕಸುವುಳ್ಳವರು ಯಾರೆನ್ನುವುದೇ ಪ್ರಶ್ನೆಯಾಗಿದೆ. ಇದಕ್ಕುತ್ತರವಾಗಿ ವಿಜಯೇಂದ್ರ ನೆಗೆಯಬಲ್ಲರೇ? ಅಥವಾ ಇನ್ಯಾರೋ ಮೈಕೊಡವಿ ಎದ್ದು ನಿಲ್ಲಲಿದ್ದಾರೆಯೇ? ಎನ್ನುವುದು ಸದ್ಯದ ಕೌತುಕ. ಒಂದಂತೂ ಸತ್ಯ. ನಿದ್ರಾವನಿತೆಯ ಸೆರಗಿನ ಮರೆಯಿಂದ ರಾಜ್ಯ ಬಿಜೆಪಿ ಆಚೆ ಬಾರದಿದ್ದರೆ ನೂರು ಜಾಂಬವರು ಪ್ರತ್ಯಕ್ಷರಾದರೂ ಆಂಜನೇಯನ ಮಡುಕಾಟ ಕಷ್ಟವಾಗಲಿದೆ. ■

ಡಾಕ್ಟರು ಕೊಟ್ಟ ಹೂಗೊಂಚಲ ಉಡುಗೊರೆ

ತಿಳಿಜಲ
ಪ್ರೊ.ಎಂ. ಕೃಷ್ಣೇಗೌಡ
editor@vijaykarnataka.com

ಕೆಲವು ದಿನಗಳ ಹಿಂದೆ ಮೈಸೂರಿನ ಸುಪ್ರಖ್ಯಾತ ಮೂಳೆ ಡಾಕ್ಟರೂ ನನ್ನ ಗೌರವದ ಮಿತ್ರರೂ ಆದ ಡಾ. ಬಿ. ಜಿ. ಸಾಗರ್ ನನಗೊಂದು ಫೋನ್ ಕರೆ ಮಾಡಿ, ''ಸರ್, ಈವತ್ತ ಸಂಜಿ ಕೊಂಚ ಸಿಗತೀರಾ? ನಿಮಗೊಂದು ಛಂದ ಉಡುಗೊರೆ ಕೊಡೂದೈತಿ,'' ಅಂದರು. ನನಗೆ ಅವರು ಉಡುಗೊರೆ ಕೊಡುವುದಕ್ಕೆ ಆಗ ಏನೂ ಸಂದರ್ಭ ಇರಲಿಲ್ಲ, ನನಗೆ ತುಂಬಾ ಕುತೂಹಲವಾಯಿತು. ''ಸರ್, ಈಗ ಯಾವ ಉಡುಗೊರೆ? ಯಾತಕ್ಕೆ?'' ಅಂದೆ. ''ಸರ್, ಕೊಟ್ಟ ಮ್ಯಾಲೆ ನಿಮಗ ಗುರುತಾಗ್ತದ. ಇದರಿಂದ ನಿಮಗ ತುಂಬಾ ಸಂತೋಷ ಆಗತದ. ಇದನ್ನ ಯಾವಾಗ ಕೊಟ್ಟರೂ ನಡೀತದ, ಆದರ, ಇದನ್ನ ನಾನು ನಿಮಗ ಕೊಟ್ಟಾಗ ನಿಮಗ ಭಾರೀ ಸಂತೋಷ ಆಗತದಲ್ಲ, ಅದನ್ನ ಇವತ್ತ ನೋಡಬೇಕನ್ನಿಸ್ತದ ನನಗ. ಅದಕ್ಕ ನಿಮಗ ವ್ಯಾಳಿ ಇತ್ತಂದ್ರ ಇವತ್ತ ಸಂಜೀನ ಸಿಗೋಣು,'' ಅಂದರು. ನನ್ನ ಕುತೂಹಲ ಮತ್ತೂ ಹೆಚ್ಚಾಯಿತು. ಅದೇ ದಿನ ಸಂಜೆ ಮೈಸೂರಿನ ಒಂದು ಹೋಟೆಲ್‌ನಲ್ಲಿ ಇಬ್ಬರೂ ಭೇಟಿಯಾದೆವು. ಡಾಕ್ಟರ್ ಕೈಯಲ್ಲಿ ಒಂದು ಪುಟ್ಟ ಬಟ್ಟೆಯ ಕೈಚೀಲ ಇತ್ತು. ಅದರೊಳಗೆ ಏನಿರಬಹುದು? ತಕ್ಷಣ ಅವರು ಅದನ್ನು ನನಗೆ ಕೊಡಲಿಲ್ಲ, ಅದೂ ಇದೂ ಮಾತಾಡುತ್ತಾ ಇಬ್ಬರೂ ದೋಸೆ ತಿಂದು ಕಾಫಿ ಕುಡಿದೆವು. ನನಗೆ ಕುತೂಹಲ ತಡೆಯಲಾಗುತ್ತಿಲ್ಲ, ಆ ಕೈಚೀಲದಲ್ಲಿ ನನಗೆ ಭಾರೀ ಸಂತೋಷ ಆಗುವಂಥ ಉಡುಗೊರೆ ಏನಿಟ್ಟಿರಬಹುದು ಡಾಕ್ಟರು? ನನ್ನ ಕುತೂಹಲ ಹೆಚ್ಚು ಮಾಡುವುದಕ್ಕೆ ಅಂತ ಅವರು ಆ ಕೈಚೀಲವನ್ನು ತೆಗೆದು ಮೇಜಿನ ಮೇಲಿಟ್ಟರು. ಆಮೇಲೆ, ''ಸರ್, ಈ ಉಡುಗೊರೆ ಏನದಲ್ಲ, ನಿಮಗ ಆಗದೀ ಸಂತೋಷ ಆಗತದ. ತಗೊಳ್ಳಿ, ಚೀಲದಾಗಿಂದ ನೀವ ತಗದು ನೋಡಿ,'' ಅಂತ ಕೈಗಿಟ್ಟರು. ಆತುರಾತುರವಾಗಿ ತೆಗೆದು ನೋಡಿದೆ. ಆಹ್! ತುಂಬಾನೇ ಸಂತೋಷವಾಯಿತು. ಡಾಕ್ಟರು ಕೊಟ್ಟ ಉಡುಗೊರೆ ನಮ್ಮ ಕಾಲದ ಎಸ್ಸೆಸ್ಸೆಲ್ಸಿ ಕನ್ನಡ ಪಠ್ಯಪುಸ್ತಕ - ಹೂಗೊಂಚಲು!!

ಹೌದು, ಆ ಪಠ್ಯಪುಸ್ತಕದ ಹೆಸರು 'ಹೂಗೊಂಚಲು'. ಕನ್ನಡದ ಒಳ್ಳೆಯ ಲೇಖನ ಪದ್ಯಗಳ ಹೂಗೊಂಚಲು ಅದು. ಅದರ ಮೇಲಿನ ರಟ್ಟಿನ ಹಾಳೆ ಇರಲಿಲ್ಲ, ಹರಿದು ಹೋಗಿತ್ತು. ಆದರೆ ನನ್ನ ಸ್ಮೃತಿಕೋಶದಲ್ಲಿ ಅದಿನ್ನೂ ಇದೆ. ಕುದುರೆಬಣ್ಣದ ಸಾದಾ ರಟ್ಟಿನ ಹಾಳೆ. ಅದರ ಮೇಲೆ ದಪ್ಪಕ್ಷರಗಳಲ್ಲಿ ಹೂಗೊಂಚಲು ಅಂತ ಬರೆದಿತ್ತು. ನಾವಿಬ್ಬರೂ ಒಂದರ್ಧ ಶತಮಾನಕ್ಕೂ ಹೆಚ್ಚು ಹಿಂದಿನ ಕಾಲಕ್ಕೆ ಜಾರಿಹೋದೆವು. ಹೂಗೊಂಚಲನ್ನು ಕೈಯಲ್ಲಿ ಹಿಡಿದು ಬಾಲ್ಯದ ಆ ಸುಂದರ ಉದ್ಯಾನದಲ್ಲಿ ಇಬ್ಬರೂ ಅದೆಷ್ಟು ಹೊತ್ತು ಓಡಾಡಿದೆವೋ! ನಮ್ಮ ಶಾಲೆ, ಆ ಕೊಠಡಿಗಳು, ಅಲ್ಲಿಯ ಡೆಸ್ಕು, ಮೇಷ್ಟರು ಕೂರುತ್ತಿದ್ದ ಮರದ ಕುರ್ಚಿ, ಮೇಜು, ಗೋಡೆಯ ಮೇಲಿದ್ದ ಕಪ್ಪು ಹಲಗೆ, ನಮ್ಮ ಸಹಪಾಠಿ ಹುಡುಗ ಹುಡುಗಿಯರು... ಎಲ್ಲದರ ನೆನಪಿನ ಸುರುಳಿ ಬಿಚ್ಚಿಕೊಂಡೆವು. ಅವರು ಓದಿದ್ದು ಧಾರವಾಡದಲ್ಲಿ, ನಾನು ಓದಿದ್ದು ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ. ಅವರ ಲೀಲಾವತಿ ಹಟ್ಟಿಮೇಡಂ, ಸದಾನಂದ ಕನವಳ್ಳಿ ಮೇಷ್ಟ್ರು, ನನ್ನ ಡಿ.ಆರ್.ಜಿ ಮತ್ತು ಚಂದ್ರಶೇಖರಯ್ಯ ಮೇಷ್ಟ್ರುಗಳು ಸ್ವರ್ಗದಿಂದಿಳಿದು ಎದುರಿಗೆ ಬಂದು ನಿಂತರು. ನಮಗಂತೂ ಪುಸ್ತಕದ ಪುಟ ತೆರೆಯುವ ಮೊದಲೇ ಅದರೊಳಗಿನ ಅದೆಷ್ಟೋ ಪಾಠಗಳು ಇಬ್ಬರ ನಾಲಿಗೆಗಳ ಮೇಲೂ ಹರಿದಾಡತೊಡಗಿದವು. ಅದರ ಮೊದಲ ಪಾಠವೇ



ಹಳಗನ್ನಡದಲ್ಲಿದ್ದ ದುರ್ಗಸಿಂಹನ ಪಂಚತಂತ್ರದ ಕಥೆ - ಪರಮವಿಭೂತಿ ಶಿವಭೂತಿ. ಆ ಪುಟ ನೆನಪಾಗುತ್ತಿದ್ದಂತೆ ಇಬ್ಬರೂ ಏಕಕಾಲದಲ್ಲಿ ಅದರ ಮೊದಲ ಸಾಲುಗಳನ್ನು ಹೇಳತೊಡಗಿದೆವು. ''ಒಂದು ಮಹಾಟವಿಯೊಳ್ ಕಂಬಳಕನೆಂಬ ಬೇಡನೊಂದು ಪುಲಿ ತನ್ನನಟ್ಟುವರೆ ಪ್ರಾಣಭಯದಿಂ ದೆಸೆಗಾಣದೆ ಪುರಾಣಕೂಪದೊಳ್ ಬಿರ್ದಂ...'' ಅದರ ಮುಂದೆರಡು ಸಾಲಿನಲ್ಲಿ ಒಂದು ಶಬ್ದ ಬರುತ್ತದೆ. 'ತಡಿಪಿಡಿದೆಳಲುತ್ತಿರ್ದ' ಅಂತ, ಇದನ್ನು ಓದಲು ನಮ್ಮ ಹಳ್ಳಿಯ ಹುಡುಗರ ನಾಲಿಗೆ ತಿರುಗದೆ ಅವರು ಒದ್ದಾಡುತ್ತಿದ್ದುದನ್ನು ನಾನು ಹೇಳಿ ನಕ್ಕರೆ ಡಾ. ಸಾಗರ್ ''ನಮ್ ಸಾಲಿಯಾಗ ಸೈತ ಇದನ್ನ ಹೇಳೋಕಾಗದೆ ನಮ್ಮ ಹುಡುಗರೂ ಕಷ್ಟಪಡುತ್ತಿದ್ದರು ಸರ್,'' ಅಂತ ಹೇಳಿ ಮತ್ತಷ್ಟು ಜೋರಾಗಿ ನಗತೊಡಗಿದರು. ಆದಾದ ಮೇಲೆ ಹರಿಹರನ ಗದ್ಯಶೈಲಿಯ ಉತ್ತಮ ಉದಾಹರಣೆಯಾದ ಹರಕರುಣೋದಯ ಪಾಠವನ್ನು ಮೊನ್ನೆ ತಾನೇ ಕಂಠಪಾಠ ಮಾಡಿದವರಂತೆ ಇಬ್ಬರೂ ಹೇಳಿದೆವು. ಹಾಗೆಯೇ ಮುದ್ದಣ ಮನೋರಮೆಯರ ರಾಮಾಶ್ವಮೇಧದ ಸರಸ ಸಂಭಾಷಣೆ ಕೂಡಾ ನೆನಪಾಯಿತು. ಕೊಡಗಿನ ಗೌರಮ್ಮನವರು ವರದಕ್ಷಿಣೆಯ ಪಿಡುಗಿನ ಬಗ್ಗೆ ಬರೆದಿದ್ದ 'ಆಹುತಿ' ಕತೆ ಆ ಕಾಲದಲ್ಲಿ ನಮ್ಮ ಕಣ್ಣೀರು ತರಿಸಿದ್ದನ್ನು ಮೆಲುಕು ಹಾಕಿದೆವು. ದೇಜಗೌ ಅವರು ಬರೆದಿದ್ದ 'ಮೇಡಂ ಕ್ಯೂರಿ' ಪಾಠ, ತರಾಸು ಅವರ 'ನೃಪತುಂಗ' ಎಂಬ ಕಾದಂಬರಿಯಿಂದ ಆಯ್ದುಕೊಂಡಿದ್ದ 'ಕ್ಷಮಾದಾನ' ಎಂಬ ಹೃದಯಸ್ಪರ್ಶಿ ಪ್ರಸಂಗ, ಹಾ. ಮಾ. ನಾಯಕರ 'ಮಕ್ಕಳ ಮನಸ್ಸು' ಎಂಬ ಸುಂದರ ಪ್ರಬಂಧ ಎಲ್ಲವನ್ನೂ ನಮ್ಮ ಸ್ಮೃತಿಯಿಂದ ಹೊರಗೆಳೆದು ಚಪ್ಪರಿಸಿದೆವು.

ಮತ್ತೊಂದು ಕಪ್ ಕಾಫಿ ತರಿಸಿ ಈಗ ಪದ್ಯಗಳ ಕಡೆಗೆ ಹೊರಳಿಕೊಂಡೆವು. ಎಂತೆಂಥಾ ಅದ್ಭುತ ಪದ್ಯಗಳು! 'ಕಾವೇರಿಯಿಂದಮಾ ಗೋದಾವರಿವರೆಗಿರ್ದ...' ಎಂದು ಪ್ರಾರಂಭವಾಗುವ ಕವಿರಾಜಮಾರ್ಗದ ಪ್ರಸಿದ್ಧ ಪದ್ಯ, ಪಂಪನ 'ಚಾಗದ ಭೋಗದಕ್ಕರದ... ತೆಂಕಣ ಗಾಳಿ ಸೋಂಕಿದೊಡಂ ಒಳ್ನುಡಿಗೇಳ್ದೊಡಂ...', ನಾಗವರ್ಮನ 'ಚಪಳೆ ಸೊಡರ ಕುಡಿಯಂ ಪೋಲ್ವಳ್', ಜನ್ನನ 'ಯಶೋಧರ ಚರಿತೆ'ಯ 'ಅಭಯರುಚಿ ಅಭಯಮತಿ' ಪ್ರಸಂಗ, ಚಾಮರಸನ 'ಪ್ರಭುಲಿಂಗಲೀಲೆ'ಯ ಒಂದು ಭಾಗ, ಕುಮಾರವ್ಯಾಸನ 'ಕೃಷ್ಣ ಸಂಧಾನ'ದ ಭಾಗ, ಕುವೆಂಪು ಅವರ 'ದೇಶ ನನ್ನದು', ಪಂಜೆಯವರ 'ಎದ್ದೇಳು' ಪದ್ಯ, ಬೇಂದ್ರೆಯವರ 'ವಿಶ್ವಮಾತೆಯ ಗರ್ಭ ಕಮಲಜಾತ ಪರಾಗ...' ಸಿದ್ದಯ್ಯ ಪುರಾಣಿಕರ 'ನಾ ಕರಿಯಳೆಂದು ನೀ ಜರಿಯಬೇಡ ಬಿಳಿಗೆಳತಿ ಗರ್ವದಿಂದ...' ಇವೆಲ್ಲಾ ಪದ್ಯಗಳನ್ನೂ ನಾವಿಬ್ಬರೂ ನೆನಪಿಸಿಕೊಂಡು ಅದೆಷ್ಟು ಸಂಭ್ರಮಪಟ್ಟೆವೋ!

ಡಾ. ಸಾಗರ್ ಮತ್ತು ನನಗೆ ಆ ಸಂಜೆ ಒಂದು ಈ ಕಾರಣಕ್ಕಾಗಿ ಒಂದು ಸ್ಮರಣೀಯ ಸಂಜೆಯಾಯಿತು.

ನಮ್ಮ ಹೈಸ್ಕೂಲಿನ ಒಂದು ಕನ್ನಡ ಪಠ್ಯ ನಮಗೆ ಇಷ್ಟೊಂದು ಆಸ್ವಾದ್ಯವಾಗಲು ಕಾರಣ ಬಹುಶಃ ಆ ಕಾಲದ ನಮ್ಮ ಮುಗ್ಧಸುಂದರ ಮನಸ್ಸು, ಆ ಪಾಠಗಳೇ ನಮ್ಮ ಭಾವಕೋಶದ ಅಡಿಯ ಪದರಗಳು. ನಾವು ಈಗ ಏನಾಗಿದ್ದೇವೋ ಆ ಸಂತೋಷಕ್ಕಿಂತಲೂ ಆಗ ನಾವು ಏನಾಗಿದ್ದೆವು ಅನ್ನುವುದೇ ಅದೆಷ್ಟು ಸಂತೋಷ ಕೊಡುತ್ತದೆ ನೋಡಿ. ಆಗ ನಾವು ಇಷ್ಟು ಸುಂದರ ಮನೆಗಳಲ್ಲಿರಲಿಲ್ಲ, ನಮ್ಮ ಕಾಲಿಗೆ ಇಷ್ಟು ದುಬಾರಿಯಾದ ಚಪ್ಪಲಿ ಬೂಟುಗಳಿರಲಿಲ್ಲ, ನಮ್ಮ ಬಳಿ ಕಾರುಗಳಿರಲಿಲ್ಲ, ಸ್ಕೂಲ್ ಬಸ್ಸುಗಳಿರಲಿಲ್ಲ, ನಮ್ಮ ನಾಲಿಗೆಗಳಿಗೆ ಮುದ್ದೆ, ಅನ್ನ ಸಾರು ರೊಟ್ಟಿ ದೋಸೆ ಬಿಟ್ಟು ಮಂಚೂರಿ, ಪಾನಿಪೂರಿ, ಪಿಜ್ಜಾ ಬರ್ಗರ್‌ಗಳ ಪರಿಚಯವಿರಲಿಲ್ಲ, ದುಡ್ಡು ಅನ್ನುವುದಕ್ಕೆ ಇಷ್ಟೊಂದು ದುರಹಂಕಾರವಿರಲಿಲ್ಲ. ಮೇಷ್ಟ್ರುಗಳು ನಮಗೆ ಆದರ್ಶವಾಗಿದ್ದರು. ಅಪ್ಪ ಅವ್ವಂದಿರಿಗೆ ನಮ್ಮ ಭವಿಷ್ಯದ ಬಗ್ಗೆ ಆತಂಕಗಳಿರಲಿಲ್ಲ, ಆಗ ಯಾರೂ ಕೂಡಾ ಈಗಿನವರಷ್ಟು 'ಬುದ್ಧಿವಂತ'ರಾಗಿರಲಿಲ್ಲ.

ಸರಳತೆಯಲ್ಲೂ ಒಂದು ದೈವಿಕವಾದ ಸುಖವಿರುತ್ತದೆ ಎಂಬುದನ್ನು ನೆನಪಿಸಿಕೊಳ್ಳುವುದಕ್ಕಾದರೂ ನಾವು ನಮ್ಮ ಬಾಲ್ಯದ ಪಠ್ಯಪುಸ್ತಕಗಳನ್ನು, ಕಾಪಿ ಪುಸ್ತಕಗಳನ್ನು, ಜಾಮಿಟ್ರಿ ಬಾಕ್ಸುಗಳನ್ನು ಮುಟ್ಟಿ ಮಾತಾಡಿಸಿಕೊಂಡು ಬರಬೇಕು! ■

ಒಂದು ರೂಪಾಯಿಯ ಶಾಂಪೂ ಪೌಚ್‌ನಿಂದ ಕೋಟಿ ಕನಸುಗಳ ತನಕ

ಭಾರತದ FMCG ಲೋಕವನ್ನೇ ಬದಲಿಸಿದ ಸಿ.ಕೆ. ರಂಗನಾಥನ್

ವಿಕ ಟರ್ನಿಂಗ್ ಪಾಯಿಂಟ್
ಹ.ಚ. ನಟೇಶ ಬಾಬು
nateshababu.hc@timesofindia.com

ಸಂಕಷ್ಟವೇ ಕೆಲವೊಮ್ಮೆ ಮನುಷ್ಯನೊಳಗಿನ ದೊಡ್ಡ ಶಕ್ತಿಯನ್ನು ಹೊರತೆಗೆಯುತ್ತದೆ. ಚೆನ್ನೈನ ಒಂದು ಸಣ್ಣ ಮನೆಯಲ್ಲಿ ಆ ದಿನ ಭಾರೀ ಮೌನ ಆವರಿಸಿತ್ತು. ಮನೆಯ ಯಜಮಾನ ಇಲ್ಲವಾಗಿದ್ದರು. ಕುಟುಂಬ ದುಃಖದಲ್ಲಿತ್ತು. ಆ ಮನೆಯ ಯುವಕನ ಮನಸ್ಸಿನಲ್ಲಿ ಅಪ್ಪನನ್ನು ಕಳೆದುಕೊಂಡ ನೋವು, ಇದರ ಜತೆಗೆ ಇನ್ನೊಂದು ಭಯವೂ ಬೆಸೆದುಕೊಂಡಿತ್ತು. ''ಇಷ್ಟು ದಿನ ಮನೆಯನ್ನು ಅಪ್ಪ ಹೇಗೋ ನಡೆಸಿದರು... ಇನ್ನು ಮುಂದೆ ಕುಟುಂಬ ನಿರ್ವಹಣೆ ಹೇಗೆ ನಡೆಯುತ್ತದೆ? ಮನೆಯ ಜವಾಬ್ದಾರಿಯನ್ನು ನಾನು ಹೇಗೆ ನಿಭಾಯಿಸಬೇಕು?'' ಇಂಥ ಆಲೋಚನೆಗಳ ಅಲೆಗಳು. ಆ ಯುವಕ ಮುಂದೆ ಮನೆಯನ್ನಷ್ಟೇ ಅಲ್ಲ, ಒಂದು ದೊಡ್ಡ ಉದ್ಯಮವನ್ನೂ ಯಶಸ್ವಿಯಾಗಿ ನಿಭಾಯಿಸಿದ. ಇದು ಭಾರತದ ಎಫ್‌ಎಂಸಿಜಿ ಜಗತ್ತಿನಲ್ಲಿ ಕ್ರಾಂತಿ ತಂದ ಸಿ.ಕೆ. ರಂಗನಾಥನ್ ಅವರ ಬದುಕಿನ ಕಥನ.

ಅಪ್ಪ ನಿಧನರಾದ ಆ ಸಮಯದಲ್ಲಿ ಅವರ ಕುಟುಂಬದ ಬಳಿ ದೊಡ್ಡ ಕಾರ್ಖಾನೆ ಇರಲಿಲ್ಲ, ಕೋಟ್ಯಂತರ ರೂಪಾಯಿ ಹೂಡಿಕೆಯೂ ಇರಲಿಲ್ಲ, ತಂದೆ ನಡೆಸುತ್ತಿದ್ದ ಸಣ್ಣಮಟ್ಟದ ಶಾಂಪೂ ವ್ಯವಹಾರ ಮಾತ್ರ ಉಳಿದಿತ್ತು. ಅದರಲ್ಲಿ ಹೇಳಿಕೊಳ್ಳುವಂಥ ಲಾಭವೇನೂ ಇರಲಿಲ್ಲ. ಬಹುತೇಕ ಜನರು ಅಂಥ ಪರಿಸ್ಥಿತಿಯಲ್ಲಿ ಸುರಕ್ಷಿತ ಉದ್ಯೋಗ ಹುಡುಕುತ್ತಿದ್ದರು. ಆದರೆ ರಂಗನಾಥನ್ ಬೇರೆ ರೀತಿಯಲ್ಲಿ ಯೋಚಿಸಿದರು. ಅವರು ಮಾರುಕಟ್ಟೆಯನ್ನು ಗಮನಿಸಿದರು. ಆ ಕಾಲದಲ್ಲಿ ಶಾಂಪೂ ಅಂದರೆ ಐಷಾರಾಮಿ ವಸ್ತು. ದೊಡ್ಡ ಬಾಟಲ್‌ಗಳಲ್ಲಿ ಮಾತ್ರ ಸಿಗುತ್ತಿತ್ತು. ಮಧ್ಯಮ ವರ್ಗ ಮತ್ತು ಬಡ ಕುಟುಂಬಗಳು ಸಾಮಾನ್ಯವಾಗಿ ಸಾಬೂನು, ಸೀಗೆಪುಡಿ ಬಳಸಿಯೇ ತಲೆಸ್ನಾನ ಮಾಡುತ್ತಿದ್ದರು. ಕೂದಲು ತೊಳೆಯಲು ಶಾಂಪೂ ಬಳಸುವುದೆಂದರೆ, ಅದೊಂದು ವೈಭೋಗ ಅನ್ನುವಂಥ ಪರಿಸ್ಥಿತಿ. ''ನಾವೂ ಒಂದು ದಿನ ಶಾಂಪೂ ಬಳಸಬೇಕು,'' ಎಂಬುದು ಹಲವರಿಗೆ ಕನಸೇ ಆಗಿತ್ತು.

ಆ ಹೊತ್ತಿನಲ್ಲಿ ರಂಗನಾಥನ್ ಮನಸ್ಸಿನಲ್ಲಿ ''ಬಡವ, ಮಧ್ಯಮವರ್ಗದವರಿಗೂ ಬ್ರಾಂಡೆಡ್ ಬಳಸುವ ಹಕ್ಕಿಲ್ಲವೇ?'' ಎಂಬ ಪ್ರಶ್ನೆ ಹುಟ್ಟಿತು. ಅದೇ ಪ್ರಶ್ನೆ ಮುಂದೆ ಒಂದು ಮಹಾ ವ್ಯವಹಾರ ತಂತ್ರವಾಗಿ ರೂಪುಗೊಂಡಿತು. ಅವರು ದೊಡ್ಡ ಬಾಟಲ್‌ಗಳ ಬದಲು ಚಿಕ್ಕ ಪೌಚ್‌ಗಳಲ್ಲಿ ಶಾಂಪೂ ಮಾರಲು ಆರಂಭಿಸಿದರು. ಬೆಲೆ ಕೇವಲ ಒಂದು ರೂಪಾಯಿ! ಐಡಿಯಾವನ್ನು ಕೇಳಿ ಹಲವರು ನಕ್ಕರು. ಆ ಕಾಲಕ್ಕೆ ಅದು ಹುಚ್ಚು ಸಾಹಸವೇ ಸರಿ. ದೊಡ್ಡ ಕಂಪನಿಗಳು ವ್ಯಂಗ್ಯವಾಗಿ ನೋಡಿದವು. ''ಒಂದು ರೂಪಾಯಿ ವಸ್ತುವಿನಿಂದ ವ್ಯವಹಾರ ನಡೆಯುತ್ತದೆಯಾ? ಇಷ್ಟು ಕಡಿಮೆ ಬೆಲೆಯಲ್ಲಿ ಬ್ರಾಂಡ್ ಕಟ್ಟಲು ಸಾಧ್ಯವೇ? ದೊಡ್ಡ ಕಂಪನಿಗಳ ನಡುವೆ ನೀನು ಉಳಿಯಲಾರೆ,'' ಎನ್ನುವ ಮಾತುಗಳೂ ಕೇಳಿಬಂದವು. ಆದರೆ, ರಂಗನಾಥನ್ ದೊಡ್ಡ ಕಂಪನಿಗಳ ಲೆಕ್ಕ ನೋಡಲಿಲ್ಲ, ಅವರು ಸಾಮಾನ್ಯ ಜನರ ಜೇಬು ನೋಡಿದರು. ದಿನಗೂಲಿ ಕಾರ್ಮಿಕನಿಗೆ ದೊಡ್ಡ ಶಾಂಪೂ ಬಾಟಲ್ ಖರೀದಿಸಲು ಆಗದಿರಬಹುದು. ಆದರೆ, ಒಂದು ರೂಪಾಯಿ ಖರ್ಚು ಮಾಡಬಲ್ಲ, ಗ್ರಾಮೀಣ ಮಹಿಳೆಯು ತಿಂಗಳ ಖರ್ಚಿನಲ್ಲಿ ಸ್ವಲ್ಪ ಉಳಿಸಿ ಶಾಂಪೂ ಪೌಚ್ ಖರೀದಿಸಬಹುದು ಎಂದು ರಂಗನಾಥನ್ ಯೋಚಿಸಿದರು. ಅದೇ ಅವರ ಗೆಲುವಿನ ಆರಂಭ. ಇಷ್ಟಕ್ಕೂ ರಂಗನಾಥನ್ ಅವರು ತಮ್ಮ ಬಿಸಿನೆಸ್‌ಗೆ ಶ್ರೀಮಂತರು, ಮಹಾನಗರಗಳನ್ನು ಗುರಿಯಾಗಿ ಇಟ್ಟುಕೊಂಡಿರಲಿಲ್ಲ, ಭಾರತದ ಸಾಮಾನ್ಯ ಜನರನ್ನೇ ತಮ್ಮ ಗ್ರಾಹಕರನ್ನಾಗಿಸಿಕೊಂಡರು. ಅವರ ಐಡಿಯಾ ಕ್ಲಿಕ್ ಆಯಿತು. ಭಾರತವೆಂದರೆ ಕೇವಲ ಮೆಟ್ರೊ ನಗರಗಳಲ್ಲ, ಲಕ್ಷಾಂತರ ಹಳ್ಳಿಗಳೂ ಇವೆ ಎಂಬುದನ್ನು ಅವರು ಬಹಳ ಬೇಗ ಅರ್ಥ ಮಾಡಿಕೊಂಡಿದ್ದರು. ಜನರ ನಾಡಿಮಿಡಿತ ಚೆನ್ನಾಗಿ ಗೊತ್ತಿತ್ತು. ಗ್ರಾಮಗಳಲ್ಲಿ, ಬಸ್ ನಿಲ್ದಾಣದ ಅಂಗಡಿಗಳಲ್ಲಿ, ಸಣ್ಣ ಪೇಟೆಗಳಲ್ಲಿ, ಟೀ ಅಂಗಡಿ ಮತ್ತು ಚಿಕ್ಕ

ಕಿರಾಣಿ ಅಂಗಡಿಗಳಲ್ಲಿ ಚಿಕ್ಕ ಶಾಂಪೂ ಪೌಚ್‌ಗಳ ಸರಗಳು ತೂಗತೊಡಗಿದವು. ಜನರು ಮೊದಲ ಬಾರಿಗೆ ಬ್ರಾಂಡೆಡ್ ಶಾಂಪೂ ಬಳಸಲು ಆರಂಭಿಸಿದರು. ಅವರ 'ಚಿಕ್ ಶಾಂಪೂ' ಕೇವಲ ಉತ್ಪನ್ನವಾಗಿರಲಿಲ್ಲ, ಅದು 'ಬ್ರಾಂಡ್‌ಗಳು ಶ್ರೀಮಂತರಿಗಷ್ಟೇ' ಎಂಬ ಕಲ್ಪನೆಯನ್ನು ಒಡೆದ ಚಳವಳಿ. ಅನೇಕ ಬಾರಿ ಅವರಿಗೆ ಸಂಕಷ್ಟ ಎದುರಾಯಿತು. ಹಣದ ಕೊರತೆ, ಮಾರುಕಟ್ಟೆಯ ಒತ್ತಡ, ದೊಡ್ಡ ಕಂಪನಿಗಳ ಸ್ಪರ್ಧೆ ಎಲ್ಲವನ್ನೂ ನೋಡಬೇಕಾಯಿತು. ಆದರೆ, ಅವರು ಒಂದು ವಿಷಯ ಮರೆಯಲಿಲ್ಲ - 'ಗ್ರಾಹಕರ ವಿಶ್ವಾಸವೇ ವ್ಯವಹಾರದ ನಿಜವಾದ ಬಂಡವಾಳ'.

ಮುಂದೆ ಅವರು ಕಟ್ಟಿದ ಕೆವಿನ್‌ಕೇರ್, ದೇಶದ ಪ್ರಮುಖ ಎಫ್‌ಎಂಸಿಜಿ ಕಂಪನಿಗಳಲ್ಲಿ ಒಂದಾಗಿ ಬೆಳೆಯಿತು. ಕೇವಲ ಶಾಂಪೂ ಅಲ್ಲ, ವೈಯಕ್ತಿಕ ಆರೈಕೆ, ಡೇರಿ, ಕಾಸ್ಮೆಟಿಕ್ಸ್ ಹೀಗೆ ಅನೇಕ ಕ್ಷೇತ್ರಗಳಲ್ಲಿ ವಿಸ್ತಾರಗೊಂಡಿತು. ಆದಾಗ್ಯೂ, ರಂಗನಾಥನ್ ಅವರ ನಿಜವಾದ ಗೆಲುವು ಹಣದಲ್ಲಿರಲಿಲ್ಲ. ''ಗ್ರಾಹಕರ ಜೇಬಿನ ಗಾತ್ರ ಚಿಕ್ಕದಿರಬಹುದು. ಆದರೆ ಅವರ ಕನಸು ಚಿಕ್ಕದಿರೋದಿಲ್ಲ,'' ಎಂದು ಒಮ್ಮೆ ಅವರು ಹೇಳಿದ್ದ ಮಾತು ಬಹಳ ಪ್ರಸಿದ್ಧಿಯಾಯಿತು. ಅದೇ ಕಾರಣಕ್ಕೆ ಅವರು ಕೇವಲ ಉದ್ಯಮಿ ಮಾತ್ರವಲ್ಲ, ಸಾಮಾನ್ಯ ಜನರ ಮನಸ್ಸು ಓದಿದ ವ್ಯಕ್ತಿ.

ಇಂದು ಭಾರತದಲ್ಲಿ 'ಸ್ಯಾಚೆಟ್ ಮಾರ್ಕೆಟಿಂಗ್' ಬಗ್ಗೆ ಮಾತನಾಡುವಾಗ ರಂಗನಾಥನ್ ಹೆಸರನ್ನು ಗೌರವದಿಂದ ಉಲ್ಲೇಖಿಸಲಾಗುತ್ತದೆ. ಅನೇಕ ಬಿಸಿನೆಸ್ ಶಾಲೆಗಳಲ್ಲಿ 'ಸ್ಯಾಚೆಟ್ ಮಾರ್ಕೆಟಿಂಗ್' ಬಗ್ಗೆ ಹೇಳುವಾಗ ಅವರ ಹೆಸರನ್ನು ಉದಾಹರಣೆಯಾಗಿ ಹೇಳಲಾಗುತ್ತದೆ. ಏಕೆಂದರೆ ಅವರು ಕೇವಲ ತಮ್ಮ ಶಾಂಪೂವನ್ನು ಮಾತ್ರ ಮಾರಲಿಲ್ಲ, ಮಾರುಕಟ್ಟೆಯಲ್ಲಿ ಒಂದು ಹೊಸ ಅವಕಾಶವನ್ನು ಸೃಷ್ಟಿಸಿದರು. ಆ ಮೂಲಕ ಭಾರತದ ಸಾಮಾನ್ಯ ಜನರ ಕನಸುಗಳಿಗೆ ಬ್ರಾಂಡ್ ರೂಪ ನೀಡಿದರು.

ಒಂದು ರೂಪಾಯಿಯ ಪೌಚ್ ಭಾರತಕ್ಕೆ ದೊಡ್ಡ ಪಾಠವನ್ನೇ ಕಲಿಸಿದೆ. ಯಶಸ್ಸು ಯಾವಾಗಲೂ ದೊಡ್ಡ ಮೊತ್ತದ ಹಣದಿಂದ ಬರುವುದಿಲ್ಲ, ಕೆಲವೊಮ್ಮೆ ಅದು ಜನರ ಸಣ್ಣ ಸಮಸ್ಯೆಯನ್ನು ಅರ್ಥ ಮಾಡಿಕೊಂಡ ಮನಸ್ಸಿನಿಂದ ಬರುತ್ತದೆ. ಇಂದು ಅನೇಕ ಯುವ ಉದ್ಯಮಿಗಳು ಸ್ಟಾರ್ಟಪ್ ಆರಂಭಿಸುವ ಮೊದಲು ಕೋಟ್ಯಂತರ ರೂಪಾಯಿಯ ಹೂಡಿಕೆ ಬಗ್ಗೆ ಯೋಚಿಸುತ್ತಾರೆ. ಆದರೆ ರಂಗನಾಥನ್ ಅವರ ಕತೆ ಬೇರೆ ಸಂದೇಶವನ್ನೇ ನೀಡುತ್ತದೆ. ಜನರ ಜೀವನಕ್ಕೆ ಹತ್ತಿರವಾದ ವ್ಯವಹಾರ ಎಂದಿಗೂ ವಿಫಲವಾಗುವುದಿಲ್ಲ ಎಂಬ ನಂಬಿಕೆಯನ್ನು ಅವರು ಎತ್ತಿ ಹಿಡಿದರು. ಒಂದು ಸಾಮಾನ್ಯ ಕುಟುಂಬದ ಹುಡುಗ, ಭಾರತದ ದೊಡ್ಡ ಕಂಪನಿಗಳಿಗೆ ಸವಾಲು ಹಾಕಿ ಗೆದ್ದ ಈ ಕತೆ, ಇಂದು ಕೋಟ್ಯಂತರ ಜನರ ಕೋಟ್ಯಂತರ ಕನಸುಗಳಿಗೆ ಇಂಧನ. ■

ಕೃತಿ ಬರೆದು ಮುಗಿದ ಮೇಲೆ...

ಮುಗಿಲ ಹಕ್ಕಿ
ವಿದ್ಯಾರಶ್ಮಿ ಪೆಲತ್ತಡ್ಕ
vidyarashmi.bhat@timesofindia.com

ನಟಿ ಕಲ್ಪನಾ ಅವರು 'ಶರಪಂಜರ' ಸಿನಿಮಾದ ಚಿತ್ರೀಕರಣದಲ್ಲಿ ತೊಡಗಿದ್ದ ಸಮಯ. ಮಾನಸಿಕ ಅಸ್ವಸ್ಥತೆಯುಳ್ಳ ಪಾತ್ರ, ಅಭಿನಯಿಸುವುದು ಕೊಂಚ ಕಷ್ಟವೇ. ಪಾತ್ರವೊಂದರಲ್ಲಿ ನಟಿಸಬೇಕೆಂದರೆ ಅದರಲ್ಲಿ ಸಂಪೂರ್ಣ ತಾನು ಒಳಕ್ಕಿಳಿದು ಬಳಿಕ ನಟಿಸುವುದು ಕಲ್ಪನಾ ಅವರ ರೀತಿ. ಜೊತೆಗೆ ಅವರು ಕೊಂಚ ಭಾವುಕರು ಕೂಡ. ಹೀಗಾಗಿಯೇ ಆ 'ಕಾವೇರಿ' ಯಂಥ ಪಾತ್ರದಲ್ಲಿ ನಟಿಸಿದ ಬಳಿಕ ಅದರಿಂದ ಹೊರಬರುವುದಕ್ಕೇ ಅವರು ತೆಗೆದುಕೊಳ್ಳುತ್ತಿದ್ದ ಸಮಯ ಏಳೆಂಟು ಗಂಟೆ!

ಕಲ್ಪನಾ ಅವರಿಗೇ ಅಂತಲ್ಲ, ಹಲವು ನಟನಟಿಯರಿಗೆ ಮಹತ್ವದ- ಬೃಹತ್ತಾದ ಪಾತ್ರಗಳನ್ನು ನಿಭಾಯಿಸಿದ ಬಳಿಕವೂ ಅದರಿಂದ ಹೊರಬರುವುದು ಸುಲಭವಲ್ಲ, ಅಥವಾ ಆ ಪಾತ್ರವೇ ಪರೋಕ್ಷವಾಗಿ ನಟರ ಮೇಲೇನೋ ಪ್ರಭಾವ ಬೀರಲೂಬಹುದು. ಸಾಮಾನ್ಯ ಪ್ರೇಕ್ಷಕರಾದ ನಾವೇ ಕೆಲವೊಂದು ಸಿನಿಮಾವನ್ನೋ ನಾಟಕವನ್ನೋ ಎರಡ್ಮೂರು ಗಂಟೆ ನೋಡಿ ಹೊರಬಂದ ಬಳಿಕ ಅದೇ ಗುಂಗಿನಲ್ಲಿರುತ್ತೇವಲ್ಲ... ಸ್ವಲ್ಪ ಹೊತ್ತು ಆ ಪಾತ್ರವಾಗಿ ನಟಿಸುವ ನಟರು, ಅದನ್ನು ನೋಡುವ ಪ್ರೇಕ್ಷಕರನ್ನು ಕಥೆಯೋ ಪಾತ್ರವೋ ಅಷ್ಟೆಲ್ಲ ಕಾಡುತ್ತದಾದರೆ ಅದನ್ನು ಸೃಷ್ಟಿಸಿದ ಲೇಖಕರ ಕಥೆ ಹೇಗಿರಬಹುದು? ಕಾದಂಬರಿಯ ಎಳೆಯೊಂದು ಮೂಡಿ, ಪಾತ್ರಗಳು ಸೃಷ್ಟಿಯಾಗಿ ಅವಕ್ಕೊಂದೊಂದು ಹೆಸರಿಟ್ಟು, ಘಟನೆಗಳನ್ನು ಬರೆದು... ಹೀಗೆ ದಿನಗಟ್ಟಲೆ, ಕೆಲವೊಮ್ಮೆ ವರುಷಗಟ್ಟಲೆ ಅದರೊಂದಿಗಿದ್ದು ಕೊನೆಗೆ ಎಲ್ಲ ಬರೆದೆನೆಂದು ಮುಗಿಸಿದಾಗ ಲೇಖಕರಲ್ಲಿ ಮೂಡುವ ಭಾವ ಹೇಗಿರಬಹುದು? ಅದು ನಿರ್ವಾತವಾ, ಬಿಡುಗಡೆಯಾ, ಏನದು? ಇದನ್ನು ಹಲವು ಲೇಖಕರು ಅಲ್ಲಲ್ಲಿ ದಾಖಲಿಸಿದ್ದಾರೆ ಕೂಡ.

ಕಾದಂಬರಿಯಂತಹ ಬೃಹತ್ ಕೃತಿ ರಚಿಸುವುದು ಬುದ್ಧಿ-ಮನಸ್ಸುಗಳಿಗೆ ಬಹಳ ತ್ರಾಸದಾಯಕ. ಅಲ್ಲಿ ಕೆಲವೊಮ್ಮೆ ಬುದ್ಧಿ ಮತ್ತು ಮನಸ್ಸುಗಳ ನಡುವೆ ತಾಕಲಾಟವೂ ನಡೆಯುತ್ತಿರುತ್ತದೆ. ಮನಸ್ಸು ಭಾವನಾತ್ಮಕವಾಗಿ ಯಾವುದೋ ಒಂದು ಪಾತ್ರವನ್ನು ಬಹಳವಾಗಿ ನೆಚ್ಚಿಕೊಂಡಿರಬಹುದು ಅಥವಾ ಆ ಪಾತ್ರ ತಾನೇ ಆಗಿರಬಹುದು. ಕಥೆಯ ಪರಿಪಿನಲ್ಲಿ ಇಂಥ ಪಾತ್ರಕ್ಕೆ ಕಷ್ಟದ ಪರಿಸ್ಥಿತಿಯೊಂದು ಬರಬಹುದು, ಕಷ್ಟ ಕೊಡುವಂತೆ ಬರೆ ಎಂದು ಬುದ್ಧಿ ಹೇಳಬಹುದು. ಅದನ್ನು ಬರೆದಾಗ ಮನಸ್ಸಿಗೆ ಕಷ್ಟವಾಗಬಹುದು. ಇಲ್ಲಿ ಬುದ್ಧಿಯ ಕೊಡುಗೆ ಎಷ್ಟು- ಮನಸ್ಸಿನದು ಎಷ್ಟೆಂದು ಲೆಕ್ಕಹಾಕಲಾಗುವುದಿಲ್ಲ, ಆದರೆ ಎರಡೂ ಸೇರಿ ಕೃತಿ ರಚನೆಯಾಗುವುದು ನಿಜ. ಅದು ಬರಹಗಾರರಲ್ಲಿ ಭಾವಗಳ ಅಲೆಯೆಬ್ಬಿಸುವುದೂ ಸತ್ಯವೇ. ಇದನ್ನೇ ಲೇಖಕ ವಸುಧೇಂದ್ರ ಹೇಳುತ್ತಾರೆ: 'ನನ್ನ ಕಾದಂಬರಿಗಳು ಐತಿಹಾಸಿಕ ವಸ್ತು ಹೊಂದಿರುವುದರಿಂದ ಅವುಗಳಲ್ಲಿನ ಪಾತ್ರಗಳೆಲ್ಲ ನನ್ನ ಹಿರಿಯರೆಂದೇ ನನಗೆ ಭಾಸವಾಗುತ್ತದೆ. ನನ್ನೊಳಗಿನ ಕತೆಗಾರ ಕತೆಯ ರಸಕ್ಕೆ ತಕ್ಕಂತೆ ಪಾತ್ರಗಳನ್ನು ಬೇರೆ ಬೇರೆ ಅವಸ್ಥೆಗೆ ಒಡ್ಡುತ್ತಲೇ ಹೋಗುತ್ತಾನೆ. ಅದು ನನ್ನ ನಿಯಂತ್ರಣ ಮೀರಿದ್ದು. ಆದರೆ ಅದರಿಂದಾಗಿ ಏನೆಲ್ಲಾ ಅವಸ್ಥೆಗಳನ್ನು ಈ ಹಿರಿಯರು ಪಡೆಯಬೇಕಾಯಿತಲ್ಲ ಎನ್ನುವ ಅಳುಕು ಇರುತ್ತದೆ.'

20ನೇ ಶತಮಾನದ ಇಂಗ್ಲಿಷ್ ಕಾದಂಬರಿಕಾರ್ತಿ ವರ್ಜೀನಿಯಾ ವೂಲ್ ಪ್ರಜ್ಞಾಪ್ರವಾಹ ತಂತ್ರದಲ್ಲಿ ಕಾದಂಬರಿ ರಚಿಸಿದವರು. ಕೃತಿ ರಚನೆಯಲ್ಲಿ ಅವರ ಬುದ್ಧಿ-ಭಾವಗಳು ಅದೆಷ್ಟು ತೊಡಗಿರುತ್ತಿದ್ದವೆಂದರೆ ಬರೆದು ಮುಗಿಸಿದ ಬಳಿಕ ಅವರಿಗೆ ಖಿನ್ನತೆಯೇ ಎದುರಾಗಿಬಿಡುತ್ತಿತ್ತು. ಕಾದಂಬರಿಯ ಲೋಕದಿಂದ ಮನಸ್ಸು ವಾಸ್ತವಕ್ಕೆ ಬರಲಾರೆನೆಂದು ಮುಷ್ಕರ ಹೂಡುವ ಈ ಸ್ಥಿತಿ ಪೋಸ್ಟ್-ಬುಕ್ ಡಿಪ್ರೆಷನ್ (ಪುಸ್ತಕ ಬರೆದಾದ ಬಳಿಕದ ಖಿನ್ನತೆ). ಬರೆದು ಮುಗಿಸಿದ ಕೂಡಲೇ ಒಂದು ಅನಿರ್ವಚನೀಯ ಖುಷಿಯೂ, ಅದರ ಬೆನ್ನಿಗೇ ಬರುವ ಖಿನ್ನತೆಯೂ... ವಿಕ್ಟೋರಿಯನ್ ಯುಗದ ಶ್ರೇಷ್ಠ ಕಾದಂಬರಿಕಾರ ಚಾರ್ಲ್ಸ್ ಡಿಕನ್ಸ್‌ಗೂ ಈ ಮಿಶ್ರ ಭಾವ ಕಾಡುತ್ತಿತ್ತು. ತನ್ನ 'ಡೇವಿಡ್ ಕಾಪರ್‌ಫೀಲ್ಡ್' ಕಾದಂಬರಿ ಮುಗಿಸುವ ಸಮಯ ಭಾವನೆಯನ್ನು ಗೆಳೆಯನೊಬ್ಬನಿಗೆ ಬರೆದ ಪತ್ರದಲ್ಲಿ ತಿಳಿಸಿದ್ದ: 'ನಾನು ದಂಡೆಯ ಮೂರು ಪುಟಗಳಷ್ಟೇ ಹತ್ತಿರದಲ್ಲಿದ್ದೇನೆ... ಓಹ್, ನನ್ನ ಪ್ರೀತಿಯ ವೈಟ್, ಇದರಲ್ಲಿ ಯಾವುದು ಹೆಚ್ಚು ನಿಜ? ... ನಾನು ತೀವ್ರವಾಗಿ ಗೊಂದಲಕ್ಕೊಳಗಾಗಿದ್ದೇನೆ... ಮತ್ತು ಆನಂದ ಹಾಗೂ ದುಃಖದ ನಡುವಿನ ಒಂದು ವಿಚಿತ್ರವಾದ ಭಾವನೆ ನನ್ನನ್ನು ಆವರಿಸಿದೆ.' ಎಷ್ಟೆಲ್ಲ ಕಷ್ಟ ಈ ಬರೆಯುವವರಿಗೆ... ಇವನ್ನೆಲ್ಲ ಅವರು ತಾವೇ ಅನುಭವಿಸಬೇಕು, ತಾವೇ ಸಂಭಾಳಿಸಬೇಕು, ಅದರಿಂದ ಹೊರಬರಬೇಕು, ಸಾಮಾನ್ಯರಂತೆ ಇರಬೇಕು. ನಮ್ಮ ಜೊತೆಗೇ ಇಂಥ ಬರಹಗಾರರು ಇರುತ್ತಾರಲ್ಲ, ಅವರ ಒಳಗೂ ಈ ಬಗೆಯ ಅದೆಷ್ಟು ಬರಹದ ಸಂದರ್ಭದ- ಮುಗಿದ ಬಳಿಕದ ತಲ್ಲಣಗಳಿವೆಯೋ...

ಹೀಗಾಗಿಯೇ ಈ ಬರಹಗಾರರ ಜೊತೆಗಿರುತ್ತಾರಲ್ಲ, ಅವರು ಸಾಮಾನ್ಯರೇ ಆಗಿದ್ದರೂ ಅರ್ಥಮಾಡಿಕೊಳ್ಳುವ ಸೂಕ್ಷ್ಮತೆಯೊಂದು ಇದ್ದರೆ ಚೆನ್ನ. ಮಹಾನ್ ಕಾದಂಬರಿಕಾರ ಗೇಬ್ರಿಯಲ್ ಗಾರ್ಸಿಯಾ ಮಾರ್ಕೆಝ್ ತಮ್ಮ ನೊಬೆಲ್ ಪುರಸ್ಕೃತ ಕೃತಿ 'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್' ಕಾದಂಬರಿಯನ್ನು ಸತತ 18 ತಿಂಗಳ ಕಾಲ ಏಕಾಂತದಲ್ಲಿದ್ದು ಬರೆದರಂತೆ. ಒಮ್ಮೆ ಮಾರ್ಕೆಝ್ ಬರೆಯುವ ಕೋಣೆಯಲ್ಲಿ ತಾನೊಬ್ಬನೇ ಕುಳಿತು ಅಳುತ್ತಿರುವುದು ಅವರ ಪತ್ನಿಗೆ ಕಾಣಿಸಿತಂತೆ. ವಿಚಾರಿಸಿದರೆ, ಈ ಕೃತಿಯಲ್ಲಿ ಮಾರ್ಕೆಝ್ ತಮ್ಮ ಪ್ರಿಯ ಪಾತ್ರ ಕರ್ನಲ್ ಔರೆಲಿಯಾನೋನ ಸಾವನ್ನು ಬರೆದಿದ್ದರು, ಆ ಪಾತ್ರ ಸತ್ತಿದ್ದಕ್ಕೆ ಅಳುತ್ತಿದ್ದರು... ಇಷ್ಟೇ ಅಲ್ಲ, ಆ ಕೃತಿಯನ್ನು ಮುದ್ರಣಕ್ಕೆಂದು ಪ್ರಕಾಶಕರಿಗೆ ಕಳುಹಿಸಿದ ಬಳಿಕ ಮಾರ್ಕೆಝ್‌ಗೆ ತಾನೇ ಅನಾಥನಾದಂತೆ ಅನಿಸಿ, ಏನು ಮಾಡುವುದಕ್ಕೂ ತೋಚದೆ ಮನೆಯ ಸುತ್ತ ಸುಮ್ಮನೇ ತಿರುಗಾಡುತ್ತಿದ್ದರಂತೆ. ಈ ಸಂದರ್ಭಗಳಲ್ಲೆಲ್ಲ ಅವರನ್ನು ಸಂಭಾಳಿಸಿದವರು ಅವರ ಪತ್ನಿ ಮರ್ಸಡಿಸ್ ಬರ್ಚಾ.

ಕೆಲವೊಮ್ಮೆ ಕೃತಿ ಬರವಣಿಗೆಯ ಈ ಹಾದಿ ಲೇಖಕರನ್ನೇ ಬದಲಿಸಬಹುದು. ಭೈರಪ್ಪನವರ 'ಪರ್ವ' ಕಾದಂಬರಿ ಬರಿಯ ಪುರಾಣವನ್ನು ವಾಸ್ತವದ ದೃಷ್ಟಿಯಿಂದ ಬರೆದ ಕಾದಂಬರಿಯಲ್ಲ. ಅದನ್ನು ಬರೆಯುತ್ತ ಬರೆಯುತ್ತ ಅವರು ಆಧ್ಯಾತ್ಮದ ದಾರಿಯಲ್ಲಿ ನಡೆದಿದ್ದರು. ಈ ಸೃಷ್ಟಿ, ಮಾನವನ ಹುಟ್ಟು-ಸಾವುಗಳ ಔಚಿತ್ಯ ಎಲ್ಲವನ್ನೂ ಯೋಚಿಸಿದ್ದರು. ಫಲವಾಗಿಯೇ ಅವರೊಳಗೊಂದು ಹೊಸ ಬೆಳಕು ಮೂಡಿದಂತಾಯಿತು. ಅದಕ್ಕೇ ಅವರು ಬರೆದುಕೊಂಡುದು: 'ನನ್ನೊಳಗೆ ಗರ್ಭ ಧರಿಸಿದ್ದ ಕಾದಂಬರಿ, ಕಾಲಕಾಲಕ್ಕೆ ನಾನು ಅಂದುಕೊಂಡಿದ್ದಕ್ಕಿಂತ ವಿಭಿನ್ನವಾದ ರೂಪ ಮತ್ತು ಅರ್ಥವನ್ನು ಪಡೆದುಕೊಂಡು ಹೊರಬಂತು. 'ಪರ್ವ' ಬರೆದ ಅನುಭವ ನನಗೆ ಎಲ್ಲದರ ಬಗ್ಗೆಯೂ ಒಂದು ಹೊಸ ದೃಷ್ಟಿಕೋನವನ್ನು, ಹೊಸ ಜನ್ಮವನ್ನು ನೀಡಿತು...' ಕುವೆಂಪು ಅವರದಂತೂ 'ಶ್ರೀರಾಮಾಯಣ ದರ್ಶನಂ' ಬರೆಯುವ ದಿಸೆಯಲ್ಲಿ ಒಂಬತ್ತು ವರ್ಷಗಳ ಮಹಾಪಯಣ. ಈ ಕೃತಿಯ ರಚನೆ ತಮ್ಮೊಳಗಿನ ಅಹಂಭಾವವನ್ನೆಲ್ಲ ಇಲ್ಲವಾಗಿಸಿದೆ ಎಂದನಿಸಿತ್ತು ಅವರಿಗೆ. 'ಓ ನನ್ನ ಚೇತನ, ಆಗು ನೀ ಅನಿಕೇತನ' ಎಂಬ ಅವರ ಸಾಲಿಗೆ ಅವರ ಮನವೇ ಕನ್ನಡಿಯಾದ ಹೊತ್ತು ಅದು. ಒಂದು ಕೃತಿ ಬರೆದಾಗುವ ಈ ಪ್ರಕ್ರಿಯೆಯಲ್ಲಿ ಆರಂಭದಲ್ಲಿದ್ದ ವ್ಯಕ್ತಿ ಬದಲಾಗುವ ಈ ಆಂತರಿಕ ಪರಿವರ್ತನೆಯ ಒಳಪಯಣ ಎಷ್ಟು ಸೋಜಿಗದ್ದು ಅಲ್ಲವೇ? ಇದನ್ನೇ, 'ಜೀವರತಿ' ಕಾದಂಬರಿಯ ಲೇಖಕಿ ಜ.ನ.ತೇಜಶ್ರೀ ಅವರು ಅಭಿವ್ಯಕ್ತಿಸುವುದು ಹೀಗೆ: 'ಬದುಕು ಎಷ್ಟು ಸಮೃದ್ಧ, ಎಷ್ಟು ಅನಿರೀಕ್ಷಿತ ದಾರಿಗಳಿಗೆ ನಮ್ಮನ್ನು ಒಯ್ಯುತ್ತದೆ, ಆ ನಿಯತಿಗೆ ಒಡ್ಡಿ ಕೊಳ್ಳುವುದರಲ್ಲಿಯೇ ನಮ್ಮ ಸೃಜನಶೀಲ ಮನಸ್ಸಿನ ಸಾಧ್ಯತೆಗಳು ಗೋಚರಿಸುವುದು ಅಂತ ಅರಿವಾಯಿತು.'

ಕೆಲವೊಮ್ಮೆ ಒಂದು ಕಾವ್ಯ ಬರೆದು ಮುಗಿಸಿದ ಬಳಿಕವೂ ಏನೋ ಅತೃಪ್ತಿ ಕಾಡಬಹುದು, ಇನ್ನೇನೋ ಹೇಳಬೇಕಾದ್ದು ಇದೆ ಅನಿಸಬಹುದು. ಮಹಾಭಾರತ ಬರೆದ ಬಳಿಕ ವೇದವ್ಯಾಸರಿಗೆ ಧರ್ಮದ ಮಹತ್ತನ್ನು ಎಷ್ಟೇ ಹೇಳಿದರೂ ಜನರು ಅಳವಡಿಸಿಕೊಳ್ಳುತ್ತಿಲ್ಲವಲ್ಲ ಎಂದನಿಸಿತಂತೆ. ಜೊತೆಗೆ ಕೃಷ್ಣನನ್ನು ಈ ಕೃತಿಯ ತುಂಬ ವ್ಯಾಪಿಸುವಂತೆ ರಚಿಸಲಿಕ್ಕಾಗಲಿಲ್ಲ ಎಂಬ ಕೊರತೆ ಕಾಡಿದ್ದರೂ ಇರಬಹುದು. ಪರಿಣಾಮವೇ 'ಭಾಗವತ'ದ ರಚನೆ. ಆದರೆ, ಲೇಖಕರಿಗೆ ಹೀಗೆ ಅತೃಪ್ತಿ ಕಾಡಿದರೆ ಸಾಹಿತ್ಯಲೋಕಕ್ಕೂ ಒಂದು ಲಾಭವುಂಟು, ಅವರಿಂದ ಇನ್ನೊಂದು ಒಳ್ಳೆಯ ಕೃತಿ ರಚನೆಯಾಗಬಹುದಲ್ಲ... ■

32 ಬಾರಿ ಎವರೆಸ್ಟ್ ಏರಿದ ಸಾಹಸಿ ಶೆರ್ಪಾ!

ವ್ಯಕ್ತಿಗನ್ನಡಿ
ರವಿರಾಜ್ ಆರ್.ಗಲಗಲಿ
editor@vijaykarnataka.com

''ನನ್ನ ನಂತರ ಎರಡನೇ ಬಾರಿ ಮೌಂಟ್ ಎವರೆಸ್ಟ್ ಏರಿದವರು ಯಾರು ಎಂಬುದನ್ನು ಯಾರೂ ನೆನಪಿಟ್ಟುಕೊಳ್ಳುವುದಿಲ್ಲ'' - ಇದು ವಿಶ್ವದ ಅತಿ ಎತ್ತರದ ಮೌಂಟ್ ಎವರೆಸ್ಟನ್ನು ಮೊದಲ ಬಾರಿಗೆ ಯಶಸ್ವಿಯಾಗಿ ಆರೋಹಣ ಮಾಡಿದ ಸರ್ ಎಡ್ಮಂಡ್ ಹಿಲರಿಯವರ ಪ್ರಸಿದ್ಧ ಉಕ್ತಿ.

ಆದರೆ, ಹಿಮಾಲಯವನ್ನೇ ಉಸಿರಾಗಿಸಿಕೊಂಡ ನೇಪಾಳದ ಕಾಮಿ ರೀತಾ ಶೆರ್ಪಾ ಅವರ ವಿಷಯದಲ್ಲಿ ಈ ಮಾತು ಸುಳ್ಳಾಗಿದೆ. ಅವರು ಎರಡು ಬಾರಿಯಷ್ಟೇ ಅಲ್ಲ, ಬರೋಬ್ಬರಿ 32 ಬಾರಿ ಎವರೆಸ್ಟ್ ಏರಿ ಜಗತ್ತೇ ನಿಬ್ಬೆರಗಾಗುವಂಥ ಐತಿಹಾಸಿಕ ದಾಖಲೆ ಬರೆದಿದ್ದಾರೆ. ಮಾತ್ರವಲ್ಲ, ''ನನ್ನ ದೇಹದಲ್ಲಿ ಶಕ್ತಿಯಿರುವವರೆಗೂ ನಾನು ಎವರೆಸ್ಟ್ ಏರುತ್ತಲೇ ಇರುತ್ತೇನೆ. ನನ್ನ ನಿಘಂಟಿನಲ್ಲಿ ನಿವೃತ್ತಿ ಎಂಬ ಪದವೇ ಇಲ್ಲ'' ಎನ್ನುವ ಅವರ ಅದಮ್ಯ ಆತ್ಮವಿಶ್ವಾಸವೂ ಬೆರಗುಗೊಳಿಸುವಂತಿದೆ.

ಕಡಿದಾದ ಕಣಿವೆಗಳು, ಕ್ಷಣಕ್ಷಣಕ್ಕೂ ಕರಗುವ ಮಂಜುಗಡ್ಡೆ, ಆಗಾಗ ಬೆದರಿಸುವ ಹಿಮಪಾತ, ಮೇಲೆ ನೋಡಿದರೆ ಆಕಾಶಕ್ಕೆ ಸಮೀಪವಿರುವ ಪರ್ವತದ ತುದಿ, ಕೆಳಗೆ ನೋಡಿದರೆ ಪಾತಾಳದಂತಹ ಪ್ರಪಾತ ..! ಇಂತಹ ಭೀಕರ ವೈಚಿತ್ರ್ಯಗಳಿಂದಾಗಿ ಮೌಂಟ್ ಎವರೆಸ್ಟ್ ಎಂದರೆ ಪರ್ವತಾರೋಹಿಗಳ ಪಾಲಿಗೆ ಸದಾ ಮುಗಿಯದ ಕುತೂಹಲ. 'ಜೀವನದಲ್ಲಿ ಒಮ್ಮೆಯಾದರೂ ಈ ಪರ್ವತ ಏರಿಬಿಟ್ಟರೆ ಸಾಕು, ಜನ್ಮ ಸಾರ್ಥಕ' ಎನ್ನುವುದು ಜಗತ್ತಿನಾದ್ಯಂತ ಇರುವ ಸಾಹಸಿಗಳ ಭಾವನೆ.

ಶಿಖರ ಏರಿದವರು ಸಾವಿರಾರು: ನೇಪಾಳ ಮತ್ತು ಟಿಬೆಟ್ ಭಾಗದಿಂದ ಎವರೆಸ್ಟ್ ಆರೋಹಣ ನಡೆಯುತ್ತದೆ. ಪ್ರತಿ ವರ್ಷ ನೂರಾರು ಸಾಹಸಿಗಳು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಈ ಸಾಹಸಕ್ಕೆ ಹೆಸರು ನೋಂದಾಯಿಸುತ್ತಾರೆ. 1953ರಿಂದ ಈವರೆಗೆ ಯಶಸ್ವಿಯಾಗಿ ಎವರೆಸ್ಟ್ ಶಿಖರ ತಲುಪಿದವರ ಸಂಖ್ಯೆ 7,563. ಆದರೆ, ಈ ಹಾದಿ ಅಷ್ಟು ಸುಲಭವಲ್ಲ. ಆಮ್ಲಜನಕದ ತೀವ್ರ ಕೊರತೆ, ಅಪಾಯಕಾರಿ ಕಣಿವೆಗಳು ಮತ್ತು ಪ್ರತಿಕೂಲ ಹವಾಮಾನದ ಕಾರಣದಿಂದಾಗಿ ಈವರೆಗೆ 345ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ. ದುರಂತವೆಂದರೆ, ಆರೋಹಣಕ್ಕೆ ತೆರಳಿ ನಾಪತ್ತೆಯಾದ 200ಕ್ಕೂ ಹೆಚ್ಚು ಜನರ ಶವಗಳೂ ಇಂದಿಗೂ ಪತ್ತೆಯಾಗಿಲ್ಲ. ದೂರದಿಂದ ಅತ್ಯಂತ ಸುಂದರವಾಗಿ ಕಾಣುವ ಈ ಬಿಳಿ ಶಿಖರ, ವಾಸ್ತವದಲ್ಲಿ ಮೃತ್ಯುಕೂಪವೇ ಸರಿ.



ಕಾಮಿ ರೀತಾ ಶೆರ್ಪಾ

ಇಂತಹ ಅಪಾಯಕಾರಿ ಹಾದಿಯಲ್ಲಿ ಕಾಮಿ ಪ್ರತಿ ಬಾರಿಯೂ ನೇಪಾಳದ ಬೇಸ್ ಕ್ಯಾಂಪ್‌ನಿಂದ ಪರ್ವತದ ಅತ್ಯುನ್ನತ ತುದಿಯನ್ನು ಯಶಸ್ವಿಯಾಗಿ ತಲುಪಿದ್ದಾರೆ. ವೃತ್ತಿಯಿಂದ ಪರ್ವತಾರೋಹಿಗಳಿಗೆ ಸಹಾಯಕ ಮತ್ತು ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುವ ಅವರಿಗೆ, ಪ್ರತಿ ಬಾರಿಯ ಆರೋಹಣವೂ ಹೊಸ ಸವಾಲಿನಂತೆ ಕಾಣಿಸುತ್ತದೆ.

ದಾಖಲೆಯ ವೀರ: 2026ರ ಮೇ 17ರಂದು 32ನೇ ಬಾರಿ ಎವರೆಸ್ಟ್ ಶಿಖರದ ತುತ್ತತುದಿಯಲ್ಲಿ ನೇಪಾಳದ ಧ್ವಜ ಹಾರಿಸಿದ ಕಾಮಿ, ಎಂದಿನಂತೆ ತಮ್ಮ ಮುಖದಲ್ಲಿ ಕಿರುನಗೆ ಬೀರಿದರು. ಆ ಮೂಲಕ 30 ಬಾರಿ ಎವರೆಸ್ಟ್ ಏರಿದ್ದ ನೇಪಾಳದ ಮತ್ತೊಬ್ಬ ಖ್ಯಾತ ಪರ್ವತಾರೋಹಿ ಪಸಾಂಗ್ ದಾವಾ ಶೆರ್ಪಾ ಅವರ ದಾಖಲೆಯನ್ನು ಮುರಿದಿದ್ದಾರೆ. ಗೌರಿಶಂಕರ ಮಾತ್ರವಲ್ಲ, ಚೋಯು ಪರ್ವತ, ಲ್ಹೊತ್ಸೆ ಪರ್ವತ, ಕೆ2 ಪರ್ವತ, ಮಾನಸ್ಲು ಪರ್ವತದ ಘಟ್ಟದಲ್ಲೂ ಕಾಮಿಯವರ ಹೆಜ್ಜೆಗುರುತುಗಳಿವೆ.

56 ವರ್ಷದ ಕಾಮಿ ನೇಪಾಳದ ಥಾಮೆ ಎಂಬ ಪುಟ್ಟ ಗ್ರಾಮದವರು. ವಿಶೇಷವೆಂದರೆ, ಹಿಲರಿಯವರೊಂದಿಗೆ ಮೊದಲ ಬಾರಿಗೆ ಎವರೆಸ್ಟ್ ಏರಿದ ನೇಪಾಳ ಮೂಲದ ಭಾರತದ ತೆಂಜಿಂಗ್ (ತೇನ್‌ಸಿಂಗ್) ನಾರ್ಗೆ ಕೂಡ ಇದೇ ಊರಿನವರು. ಕಾಮಿ ಅವರ ತಂದೆಯೂ ಪರ್ವತಾರೋಹಿಗಳಿಗೆ ಹೆಗಲು ಕೊಡುವ ಸಹಾಯಕರಾಗಿದ್ದರು. ಹೀಗಾಗಿ ಕಾಮಿ ಅವರಿಗೆ ಬಾಲ್ಯದಲ್ಲೇ ಹಿಮಾಲಯದ ಪರಿಚಯವಿತ್ತು.

ತಂದೆಯ ಕನಸು ನನಸು: ಕೇವಲ 12ನೇ ವಯಸ್ಸಿನಲ್ಲಿ ಪರ್ವತಾರೋಹಿಗಳ ಸಾಮಗ್ರಿ ಸಾಗಿಸುವ ಮತ್ತು ಹಗ್ಗ ಕಟ್ಟುವ ಕಠಿಣ ಕೆಲಸಕ್ಕೆ ಕಾಮಿ ಇಳಿದರು. ಇವರ ತಂದೆ ಪರ್ವತಾರೋಹಿಗಳಿಗೆ ಎಷ್ಟೇ ನೆರವಾಗಿದ್ದರೂ, ಅವರಿಗೆ ಒಮ್ಮೆಯೂ ಎವರೆಸ್ಟ್ ತುತ್ತತುದಿ ಮುಟ್ಟಲು ಸಾಧ್ಯವಾಗಿರಲಿಲ್ಲ. ತಂದೆಯ ಆ ಅಪೂರ್ಣ ಕನಸನ್ನು ತಮ್ಮ 24ನೇ ವಯಸ್ಸಿನಲ್ಲಿ ನನಸು ಮಾಡಿದವರು ಇವರು.

ಕಾಮಿ ಅವರು ನೇಪಾಳದ ವಿಶಿಷ್ಟ ಬುಡಕಟ್ಟು ಸಮುದಾಯವಾದ ಶೆರ್ಪಾ ಜನಾಂಗಕ್ಕೆ ಸೇರಿದವರು. ಅವರ ಪಾಲಿಗೆ ಪರ್ವತಗಳು ಕೇವಲ ಕಲ್ಲು-ಮಣ್ಣಿನ ರಾಶಿಯಲ್ಲ, ಅವು ದೇವರ ಪ್ರತಿರೂಪ. ಹೀಗಾಗಿ ಯಾವುದೇ ಪರ್ವತವನ್ನು ಏರುವ ಮುನ್ನ ಅವರು ಪ್ರಕೃತಿ ಮಾತೆಗೆ ವಿಶೇಷ ಪೂಜೆ (ಪೂಜಾ ವಿಧಿ) ನೆರವೇರಿಸಿ, ಕ್ಷಮೆ ಕೇಳಿ ಆಶೀರ್ವಾದ ಪಡೆದ ನಂತರವೇ ಆರೋಹಣ ಆರಂಭಿಸುವುದು ಇವರ ಪರಂಪರೆ.

ಇಂದು ಕಾಮಿ ರೀತಾ ಶೆರ್ಪಾ ಅವರು ಗೈಡ್ ಆಗಿ ಮಾತ್ರ ಉಳಿದಿಲ್ಲ, ಅವರ ಜಾಗತಿಕ ಸಾಧನೆಯನ್ನು ಗುರುತಿಸಿ ಹಲವು ಅಂತಾರಾಷ್ಟ್ರೀಯ ಕಂಪನಿಗಳು ತಮ್ಮ ಪ್ರಚಾರ ರಾಯಭಾರಿಯನ್ನಾಗಿ (brand ambassador) ಮಾಡಿಕೊಂಡಿವೆ. 'ಎವರೆಸ್ಟ್ ಮ್ಯಾನ್' ಎಂಬ ಖ್ಯಾತಿ ಅವರಿಗಿದೆ. ಪತ್ನಿ ಲಕಪಾ ಜಂಗ್ಮಿ ಹಾಗೂ ಇಬ್ಬರು ಮಕ್ಕಳೊಂದಿಗೆ ಸುಖಿ ಜೀವನ ನಡೆಸುತ್ತಿರುವ ಕಾಮಿಯವರು ಇಷ್ಟೊಂದು ದಾಖಲೆ ಬರೆದರೂ ಎವರೆಸ್ಟ್ ಆರೋಹಣಕ್ಕೆ ವಿದಾಯ ಹೇಳುವ ಯೋಚನೆಯನ್ನೇ ಮಾಡಿಲ್ಲ. ಎರಡು ಅಥವಾ ಮೂರನೇ ಮಹಡಿ ಏರಬೇಕಾದರೆ ಏದುಸಿರು ಬಿಡುವವರ ಮಧ್ಯೆ ಸಮುದ್ರ ಮಟ್ಟದಿಂದ 8,848.86 ಮೀಟರ್ ಎತ್ತರ ಇರುವ ಈ ಪರ್ವತವನ್ನು ಒಂದಲ್ಲ, ಎರಡಲ್ಲ ಮೂವತ್ತೆರಡು ಬಾರಿ ಏರಿರುವುದು ದಾಖಲೆಯೇ ಸರಿ. ಅವರ ಈ ಆತ್ಮವಿಶ್ವಾಸ ವಿಶ್ವದ ಕೋಟ್ಯಂತರ ಯುವಕರಿಗೆ ಯಾವುದೇ ಕಠಿಣ ಗುರಿಯನ್ನು ತಲುಪಲು ಸ್ಫೂರ್ತಿಯಾಗಿದೆ. ■

ಬಯಲು ಸೀಮೆ ಅಭಿವೃದ್ಧಿಗಿಲ್ಲ ವೇಗ

ಆರು ವರ್ಷ ಕಳೆದರೂ 2,460ಕ್ಕೂ ಹೆಚ್ಚು ಕಾಮಗಾರಿಗಳಿಗೆ ಆರಂಭ ಭಾಗ್ಯ ಇಲ್ಲ

■ **ಸಲೀಮ್ ಬಳಬಟ್ಟಿ** ಗದಗ
saleem.balabatti@timesofindia.com

ರಾಜ್ಯದ ಬರಪೀಡಿತ ಬಯಲು ಸೀಮೆ ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ ಸ್ಥಾಪಿತವಾಗಿರುವ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ನಿಧಾನಗತಿಯ ಕಾರ್ಯವೈಖರಿ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತವಾಗುತ್ತಿದೆ.



ರಾಜ್ಯದ 56 ಹಿಂದುಳಿದ ತಾಲೂಕುಗಳ ಅಭಿವೃದ್ಧಿಗಾಗಿ ಈ ಮಂಡಳಿ ರಚಿಸಲಾಗಿದೆ. ಆದರೆ ಕಳೆದ ಆರು ವರ್ಷಗಳಲ್ಲಿ ಒಟ್ಟಾರೆ 284 ಕೋಟಿ ರೂ.ಗೂ ಅಧಿಕ ಮೊತ್ತದ ಅಂದಾಜು ವೆಚ್ಚಕ್ಕೆ ಸಂಬಂಧಿಸಿದಂತೆ 2,464ಕ್ಕೂ ಅಧಿಕ ಕಾಮಗಾರಿಗಳು ಇನ್ನೂ ಆರಂಭವನ್ನೇ ಕಂಡಿಲ್ಲ. ಹಿಂದುಳಿದ ತಾಲೂಕುಗಳನ್ನು ರಾಜ್ಯದ ಇನ್ನಿತರ ಮುಂದುವರಿದ ತಾಲೂಕುಗಳ ಮಟ್ಟಕ್ಕೆ ತರುವ ಸದಾಶಯದೊಂದಿಗೆ ಕೋಟ್ಯಂತರ ರೂಪಾಯಿ ಅನುದಾನ ಮೀಸಲಿದ್ದರೂ ಮಂಡಳಿಯ ಯೋಜನೆಗಳು ಆಮೆಗತಿಯಲ್ಲಿ ಸಾಗುತ್ತಿರುವುದು ಹಿಂದುಳಿದ ಜಿಲ್ಲೆಗಳ ಜನರ ಅಸಮಾಧಾನಕ್ಕೆ ಕಾರಣವಾಗಿದೆ.

ಮಹಾ ಎಡವಟ್ಟು

ಆರಂಭದಿಂದಲೂ ಮಂಡಳಿ ನಿಧಾನಗತಿಯ ಕಾಮಗಾರಿಗೆ ಕುಖ್ಯಾತಿಯಾಗಿದೆ. 2025-26ರ ಸಾಲಿನಲ್ಲಿ 269 ಕಾಮಗಾರಿಗಳ ಪೈಕಿ ಕೇವಲ ಒಂದು ಕಾಮಗಾರಿ ಪೂರ್ಣಗೊಂಡಿದ್ದು, 19.48 ಕೋಟಿ ರೂ. ಅಂದಾಜಿನಲ್ಲಿ 12.25 ಕೋಟಿ ರೂ. ಬಿಡುಗಡೆಯಾಗಿದ್ದರೂ ಫಲಿತಾಂಶ ಶೂನ್ಯವಾಗಿದೆ.

ಈಗಲೂ ಮಂಡಳಿ ಹಿಂದಿನ ವರ್ಷಗಳ ಕಾಮಗಾರಿಗಳಿಗೆ ಮಂಜೂರಾತಿ ಪಡೆಯುವಲ್ಲಿಯೇ ಹೆಣಗಾಡುತ್ತಿರುವುದರಿಂದ ಮುಂದಿನ ವರ್ಷದ ಕಾಮಗಾರಿಗಳು ನಿಧಾನವಾಗಲು ಪ್ರಮುಖ ಕಾರಣವಾಗಿದೆ.

ಏನಿದು ಮಂಡಳಿ?

1995 ಜನವರಿ 26ರಿಂದ ಜಾರಿಗೆ ಬರುವಂತೆ ಸ್ಥಾಪನೆಯಾದ ಈ ಮಂಡಳಿಯು ರಾಜ್ಯದ ಪ್ರಮುಖ 14 ಜಿಲ್ಲೆಗಳ (ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ಚಿತ್ರದುರ್ಗ, ಧಾರವಾಡ, ದಾವಣಗೆರೆ, ಗದಗ, ಹಾವೇರಿ, ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟೆ) ಒಟ್ಟು 56 ಬರಪೀಡಿತ ತಾಲೂಕುಗಳನ್ನು ಒಳಗೊಂಡಿದೆ. ಸದ್ಯ ಚಿತ್ರದುರ್ಗದಲ್ಲಿ ಮಂಡಳಿಯ ಕಚೇರಿ ಕಾರ್ಯನಿರ್ವಹಿಸುತ್ತಿದೆ.

ಜಲ ಸಂಪನ್ಮೂಲಗಳ ಪುನರುಜ್ಜೀವನ, ಮಳೆ ಆಧಾರಿತ ಕೃಷಿ ಪದ್ಧತಿ, ಜಲಸಂರಕ್ಷಣೆ, ತೋಟಗಾರಿಕೆ, ಪಶುಸಂಗೋಪನೆ ಹಾಗೂ ಕೃಷಿ ಪೂರಕ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು ಈ ಮಂಡಳಿಯ ಮುಖ್ಯ ಗುರಿಯಾಗಿದೆ. ಸಂಸದರು, ಶಾಸಕರು, ಜಿಲ್ಲಾಧಿಕಾರಿಗಳು ಸೇರಿದಂತೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ದಂಡೇ ಈ ಮಂಡಳಿಯಲ್ಲಿದ್ದರೂ, ಯೋಜನೆಗಳ ಅನುಷ್ಠಾನದಲ್ಲಿ ಭಾರಿ ಉದಾಸೀನ ಎದ್ದು ಕಾಣುತ್ತಿದೆ.

ಆರು ವರ್ಷಗಳ ಕಾಮಗಾರಿಗಳ ಮಾಹಿತಿ

ವರ್ಷ	ಕಾಮಗಾರಿ	ಅಂದಾಜು (ಕೋಟಿ ರೂ. ಗಳಲ್ಲಿ)	ಒಟ್ಟು ವೆಚ್ಚ (ಕೋಟಿ ರೂ. ಗಳಲ್ಲಿ)	ಪೂರ್ಣ	ಪ್ರಗತಿ	ಶುರುವಾಗದ ಕಾಮಗಾರಿ
2020-21	106	9.75	5.63	38	18	50
2021-22	259	27.28	14.99	135	75	49
2022-23	2,181	192.43	42.78	80	383	1,718
2023-24	156	12.64	7.06	0	22	134
2024-25	336	23.21	15.32	2	70	264
2025-26	269	19.48	12.25	1	19	249
ಒಟ್ಟು	**3,307**	**284.79**	**98.03**	**256**	**587**	**2,464**

2022-23ನೇ ಸಾಲಿನಲ್ಲಿ ಭಾರಿ ಸಂಖ್ಯೆಯ ಕೆಲಸಗಳಿಗೆ ಅನುಮೋದನೆ ನೀಡಿರುವುದು ಮತ್ತು ತಾಂತ್ರಿಕ ಸಮಸ್ಯೆಗಳು ಕಾಮಗಾರಿಗಳ ವಿಳಂಬಕ್ಕೆ ಕಾರಣವಾಗಿದೆ. ಕಾಮಗಾರಿಗಳನ್ನು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಮಂಡಳಿ ಪ್ರಯತ್ನ ನಡೆಸುತ್ತಿದೆ.

-ಕೃಷ್ಣಾನಾಯಕ ಕಾರ್ಯದರ್ಶಿ, ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ

ಸರಕಾರವೇ ಹೊಣೆ

ಬಯಲುಸೀಮೆ ಅಭಿವೃದ್ಧಿ ಮಂಡಳಿ ಬಗ್ಗೆ ಸರಕಾರಕ್ಕೆ ಕಾಳಜಿ ಇಲ್ಲ. ಬಿಡುಗಡೆಯಾಗುವ ಅನುದಾನವನ್ನು ವಿಧಾನಸಭೆ ಕ್ಷೇತ್ರವಾರು ಹಂಚಿಕೆ ಮಾಡಿದರೆ ಒಂದು ವಿಧಾನಸಭೆ ಕ್ಷೇತ್ರಕ್ಕೆ ಸಿಗುವ ಅನುದಾನ 3ರಿಂದ 4 ಲಕ್ಷ ರೂ. ಮಾತ್ರ. ಇಷ್ಟು ಸಣ್ಣ ಮೊತ್ತದ ಕೆಲಸಗಳ ಬಗ್ಗೆ ಯಾರೂ ಆಸಕ್ತಿ ತೋರುವುದಿಲ್ಲ. ಸಹಜವಾಗಿ ಕೆಲಸಗಳು ನಿಧಾನವಾಗುತ್ತಿವೆ ಎನ್ನುತ್ತಾರೆ ಹೆಸರು ಹೇಳಲು ಇಚ್ಛಿಸದ ಹಿರಿಯ ಅಧಿಕಾರಿಯೊಬ್ಬರು.

ಮೆಸ್ಕಾಂನ ಇಬ್ಬರು ಎಂಜಿನಿಯರ್ ಅಮಾನತು

ಶಿವಮೊಗ್ಗ: ಕರ್ತವ್ಯ ಲೋಪ ಎಸಗಿದ ಆರೋಪದ ಮೇಲೆ ಮೆಸ್ಕಾಂನ ಸೊರಬ ಉಪವಿಭಾಗದ ಉಳವಿ ಶಾಖೆಯ ಸಹಾಯಕ ಎಂಜಿನಿಯರ್ ಎನ್.ಇಬ್ರಾಹಿಂ ಮತ್ತು ತಾಳಗುಪ್ಪ ಶಾಖೆಯ ಕಿರಿಯ ಎಂಜಿನಿಯರ್ ಎಚ್.ನಿರಂಜನ್ ಅವರನ್ನು ಅಮಾನತುಗೊಳಿಸಲಾಗಿದೆ.

ಎನ್.ಇಬ್ರಾಹಿಂ ವಿರುದ್ಧ ಗ್ರಾಹಕರ ಬೇಡಿಕೆಗೆ ಸ್ಪಂದಿಸಿಲ್ಲ, ಸಿಬ್ಬಂದಿ ಹಾಜರಿ ಪುಸ್ತಕ, ಕೆಲಸ ಹಂಚಿಕೆ ಪುಸ್ತಕ ನಿರ್ವಹಣೆ ಮಾಡಿಲ್ಲ, ಏ.25ರಂದು ಮಳೆ ಗಾಳಿಯಿಂದ 25ಕ್ಕೂ ಹೆಚ್ಚು ಕಂಬಗಳು ಮುರಿದು ಅನಾಹುತ ಸಂಭವಿಸಿ 24 ಗಂಟೆಯಾದರೂ ಸ್ಥಳಕ್ಕೆ ಭೇಟಿ ನೀಡದೆ ನಿರ್ಲಕ್ಷ್ಯ ತೋರಿದ ಆರೋಪಗಳಿವೆ.

ಎಚ್.ನಿರಂಜನ್ ವಿರುದ್ಧ ಕಚೇರಿಯಲ್ಲಿ ಇಲ್ಲದಿರುವುದು, ವಿದ್ಯುತ್ ಬಿಲ್ ಪಾವತಿಗೆ ಬಂದ ಗ್ರಾಹಕರಿಗೆ ರಶೀದಿ ಪುಸ್ತಕ ಇಲ್ಲವೆಂದು ವಾಪಸು ಕಳುಹಿಸಿದ್ದು, ಗ್ರಾಹಕರ ಸಮಸ್ಯೆಗಳಿಗೆ ಸ್ಪಂದಿಸದಿರುವ ಆರೋಪಗಳಿವೆ. ಈ ಇಬ್ಬರು ಅಧಿಕಾರಿಗಳ ವಿರುದ್ಧ ಇಲಾಖೆ ವಿಚಾರಣೆಯನ್ನು ಕಾಯ್ದಿರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ ಎಂದು ಮೆಸ್ಕಾಂ ಅಧೀಕ್ಷಕ ಎಂಜಿನಿಯರ್ ಜಯದೇವಪ್ಪ ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಜೂ.1ಕ್ಕೆ ಕೃಷಿ ಮರು ಪರೀಕ್ಷೆ

ಹಿರಿಯೂರು (ಚಿತ್ರದುರ್ಗ): ಯುಜಿಸಿಇಟಿ-2026ರ ಕೃಷಿಕರ ಕೋಟಾದ ಅಭ್ಯರ್ಥಿಗಳಿಗೆ ಹಿರಿಯೂರು ತೋಟಗಾರಿಕೆ ಮಹಾವಿದ್ಯಾಲಯ ಕೇಂದ್ರದಲ್ಲಿ ಮರು ಕೃಷಿ ಪ್ರಾಯೋಗಿಕ ಪರೀಕ್ಷೆ ಜೂನ್ 1ರಂದು ನಡೆಯಲಿದೆ.

ಹಿರಿಯೂರು ತೋಟಗಾರಿಕೆ ಮಹಾವಿದ್ಯಾಲಯ ಕೇಂದ್ರದಲ್ಲಿ ಕೃಷಿ ಪ್ರಾಯೋಗಿಕ ಮರು ಪರೀಕ್ಷೆಯನ್ನು ಮೇ 26ರಂದು ನಡೆಸಲು ನಿರ್ಧರಿಸಲಾಗಿತ್ತು, ಆದರೆ ಮೇ 11ರಿಂದ 31ರವರೆಗೆ ಸಿಯುಇಟಿ-ಐಸಿಎಆರ್ ಯುಜಿ ಪರೀಕ್ಷೆ ಇರುವ ಕಾರಣ ಮರು ಪರೀಕ್ಷೆ ದಿನಾಂಕವನ್ನು ಜೂ.1ಕ್ಕೆ ಮುಂದೂಡಲಾಗಿದೆ ಎಂದು ಶಿವಮೊಗ್ಗ ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿವಿ ಕುಲಸಚಿವರು ಹೇಳಿದ್ದಾರೆ.

ಮೇ 25ರಿಂದ 29ರವರೆಗೆ ಪ್ರವೇಶ ಪತ್ರಗಳನ್ನು ಡೌನ್‌ಲೌಡ್ ಮಾಡಿಕೊಳ್ಳಬೇಕು, ಜೂನ್ 1ರ ಬೆಳಗ್ಗೆ 9 ಗಂಟೆಗೆ ಪ್ರಾಯೋಗಿಕ ಮರು ಪರೀಕ್ಷೆ ಆರಂಭವಾಗಲಿದೆ. ಪರೀಕ್ಷೆ ಪೂರ್ಣಗೊಂಡ ನಂತರ ಕೀ ಉತ್ತರ ಪ್ರಕಟ ಆಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 10ರಂದು ಕೃಷಿ ವಿಜ್ಞಾನ ಕೋರ್ಸ್‌ಗಳ ಆಯ್ಕೆಗಾಗಿ ರಾಜ್ಯಾದ್ಯಂತ 17 ಪರೀಕ್ಷೆ ಕೇಂದ್ರಗಳಲ್ಲಿ ಪ್ರಾಯೋಗಿಕ ಪರೀಕ್ಷೆ ನಡೆದಿತ್ತು. ಹಿರಿಯೂರು ಪರೀಕ್ಷೆ ಕೇಂದ್ರ ಒಂದರಲ್ಲೇ 74 ವಿದ್ಯಾರ್ಥಿಗಳು 200ಕ್ಕೆ 200 ಅಂಕ ಪಡೆದಿದ್ದು ಅಕ್ರಮದ ಆರೋಪ ಕೇಳಿಬಂದಿತ್ತು. ಆ ಕಾರಣ ಈ ಕೇಂದ್ರದಲ್ಲಿ ಮರುಪರೀಕ್ಷೆಗೆ ಆದೇಶಿಸಲಾಗಿದೆ.

ಧ್ರುವೀಕರಣದಿಂದ ನೆಮ್ಮದಿ ಹಾಳು

ಬೆಳಗಾವಿ: ಇಂದಿನ ಸಮಾಜದಲ್ಲಿ ಜಾತಿ ಮತ್ತು ಧರ್ಮ ಆಧಾರಿತ ಧ್ರುವೀಕರಣ ದಿನೇದಿನೆ ಹೆಚ್ಚುತ್ತಿದೆ. ಇದರೊಂದಿಗೆ ಆತ್ಮರತಿ ಹಾಗೂ ಅಹಂಕಾರದ ಉಡಾಫೆತನವೂ ವೃದ್ಧಿಯಾಗಿದೆ. ಇದರಿಂದಾಗಿ ಸಮಾಜದ ಸ್ವಾಸ್ಥ್ಯ ಕೆಡುತ್ತಿದ್ದು, ಈ ಸಾಮಾಜಿಕ ಪಿಡುಗು ಎದುರಿಸಲು ಹೊಸ ತಲೆಮಾರಿನ ಬರಹಗಾರರು ಮತ್ತು ಕಲಾವಿದರು ಸಜ್ಜಾಗಬೇಕಿದೆ ಎಂದು ಹಿರಿಯ ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ಕರೆ ನೀಡಿದರು.

ನಗರದಲ್ಲಿ ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆಯ ಜಿಲ್ಲಾ ಘಟಕ 'ಬಂಡಾಯ ಸಾಹಿತ್ಯ: ಹೊಸ ತಲೆಮಾರು' ಅಭಿಯಾನದ ಅಂಗವಾಗಿ ಶನಿವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ''ಸಮಾಜದಲ್ಲಿ ಏನಾಗುತ್ತಿದೆಯೋ ಅದರ ಪ್ರತಿಬಿಂಬ ಸಿನಿಮಾದಲ್ಲೂ ಕಾಣುತ್ತದೆ. ಸಮಾಜದಲ್ಲಿ ರೌಡಿಸಂ ಹೆಚ್ಚಾದಂತೆ ಸಿನಿಮಾಗಳಲ್ಲೂ ಅದೇ ಪ್ರವೃತ್ತಿ ಹೆಚ್ಚಾಗಿದೆ,'' ಎಂದರು.

4 ಸಭಾಭವನ ಲೋಕಾರ್ಪಣೆ

ಲ್ಯಾಂಡ್ ಲಿಂಕ್ಸ್ ಸಂಸ್ಥೆ ನಿರ್ಮಾಣ | ಪಾಲೆಮಾರ್ ಸಭಾಭವನ ಸಾಮರಸ್ಯ ಬಲಪಡಿಸುವ ಕೇಂದ್ರಗಳಾಗಲೆಂದ ಆಂಧ್ರ ರಾಜ್ಯಪಾಲ ನಜೀರ್

■ **ವಿಕ ಸುದ್ದಿಲೋಕ** ಮಂಗಳೂರು

''ಪಾಲೆಮಾರ್ ಸಭಾಭವನಗಳಲ್ಲಿ ಬೌದ್ಧಿಕ ಚರ್ಚೆಗಳು, ಸಾಂಸ್ಕೃತಿಕ ಉತ್ಸವಗಳು, ನಾಗರಿಕ ಸಂವಾದಗಳು, ಕೌಶಲಾಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಸಾಮಾಜಿಕ ಸಾಮರಸ್ಯ ಬಲಪಡಿಸುವ ಚಟುವಟಿಕೆಗಳು ನಡೆದು, ಯುವಜನತೆಗೆ ಪ್ರೇರಣೆಯ ಕೇಂದ್ರಗಳಾಗಿ ಹೊರಹೊಮ್ಮಲಿ,'' ಎಂದು ಆಂಧ್ರಪ್ರದೇಶದ ರಾಜ್ಯಪಾಲ, ನಿವೃತ್ತ ನ್ಯಾಯಮೂರ್ತಿ ಎಸ್.ಅಬ್ದುಲ್ ನಜೀರ್ ಆಶಿಸಿದರು.

ಮಂಗಳೂರಿನಲ್ಲಿ ಶನಿವಾರ ಪಾಲೆಮಾರ್ ಕನ್ವೆನ್ಷನ್ ಸೆಂಟರನ್ನು ಆಂಧ್ರಪ್ರದೇಶ ರಾಜ್ಯಪಾಲ, ನಿವೃತ್ತ ನ್ಯಾ.ಎಸ್.ಅಬ್ದುಲ್ ನಜೀರ್ ಉದ್ಘಾಟಿಸಿದರು.

ಮಂಗಳೂರಿನ ಮೇರಿಹಿಲ್‌ನಲ್ಲಿರುವ ಪಾಲೆಮಾರ್ ಕನ್ವೆನ್ಷನ್ ಸೆಂಟರ್‌ನಲ್ಲಿ ಶನಿವಾರ ಲ್ಯಾಂಡ್ ಲಿಂಕ್ಸ್ ಸಂಸ್ಥೆಯ ಅಧ್ಯಕ್ಷ ಜೆ.ಕೃಷ್ಣ ಪಾಲೆಮಾರ್ ನಿರ್ಮಿಸಿರುವ ನಾಲ್ಕು ನೂತನ ಪಾಲೆಮಾರ್ ಕನ್ವೆನ್ಷನ್ ಸೆಂಟರ್, ಪಾಲೆಮಾರ್ ಗಾರ್ಡನ್, ಪಾಲೆಮಾರ್ ಫಾರ್ಮ್ಸ್ ಮತ್ತು ನೇತ್ರಾವತಿ ಸಭಾಭವನಗಳನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

''ಮಕ್ಕಳ ವಿದ್ಯಾರ್ಜನೆಗೆ ಸಹಕಾರ ನೀಡಿದರೆ, ವೈಯಕ್ತಿಕ ಪ್ರಗತಿ, ಗೌರವದ ಉದ್ಯೋಗ, ಸಮಾಜದ ಸಶಕ್ತೀಕರಣ, ಕೌಶಲ ವರ್ಧನೆ, ತಂತ್ರಜ್ಞಾನದ ಪ್ರಗತಿ ಮೂಲಕ ದೇಶದ ಆರ್ಥಿಕ ಸ್ಥಿರತೆ ಸಾಧ್ಯ,'' ಎಂದರು.

ಅನ್ನಪೂರ್ಣ ಡೈನಿಂಗ್ ಹಾಲ್ ಉದ್ಘಾಟಿಸಿದ ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಮಾತನಾಡಿ, ''ಬೆಂಗಳೂರಿನ ಬಳಿಕ ಅತೀ ವೇಗದಲ್ಲಿ ಬೆಳೆಯುತ್ತಿರುವ ಕರಾವಳಿಯ ಸೌಂದರ್ಯಕ್ಕೆ ಕಿರೀಟ ರೂಪದಲ್ಲಿ ಪಾಲೆಮಾರ್ ಕನ್ವೆನ್ಷನ್ ಸೆಂಟರ್ ತಲೆ ಎತ್ತಿದೆ. ಇದು ನಮ್ಮೂರಿನ ಪ್ರವಾಸೋದ್ಯಮ, ಆರ್ಥಿಕ ಅಭಿವೃದ್ಧಿಗೆ ಪೂರಕವಾಗಲಿದೆ,'' ಎಂದರು.

ಕೇಂದ್ರ ಸಚಿವ ವಿ.ಸೋಮಣ್ಣ ಮಾತನಾಡಿ, ''ಕಠಿಣ ಪರಿಶ್ರಮದ ಮೂಲಕ ಸಾಧನೆ ಮಾಡಿ, ಆದರಿಂದ ಬಂದ ಲಾಭದಲ್ಲಿ ಹೆಚ್ಚಿನ ಪ್ರಮಾಣವನ್ನು ಸಮಾಜಮುಖಿ ಕೆಲಸಗಳಿಗೆ ಖರ್ಚು ಮಾಡುವ ಮೂಲಕ ಪಾಲೆಮಾರ್ ಒಳ್ಳೆಯ ಸಂದೇಶ ನೀಡಿದ್ದಾರೆ. ಅವರು ಸ್ವಂತ ಬದುಕು ಕಟ್ಟುವ ಜತೆಗೆ, ಹಲವರ ಬದುಕು ಕಟ್ಟಿದ್ದಾರೆ. ಅವರ ಬದುಕು ಎಲ್ಲರಿಗೂ ಮಾದರಿ,'' ಎಂದರು.

ಅಧ್ಯಕ್ಷತೆ ವಹಿಸಿದ್ದ ಲ್ಯಾಂಡ್ ಲಿಂಕ್ಸ್ ಸಂಸ್ಥೆಯ ಅಧ್ಯಕ್ಷ, ಮಾಜಿ ಸಚಿವ ಜೆ.ಕೃಷ್ಣ ಪಾಲೆಮಾರ್ ಮಾತನಾಡಿ, ''ಸರ್ವ ಜನರ ಪ್ರೀತಿ, ವಿಶ್ವಾಸದಿಂದ ನಮ್ಮ ಉದ್ಯಮ ಯಶಸ್ಸಿನ ಜತೆಗೆ, ಭವ್ಯ ಸಭಾಂಗಣಗಳ ನಿರ್ಮಾಣ ಸಾಧ್ಯವಾಗಿದೆ. ಇದರ ಆದಾಯದಲ್ಲಿ ಹೆಚ್ಚಿನ ಭಾಗ ಶಿಕ್ಷಣ ಕ್ಷೇತ್ರಕ್ಕೆ ಖರ್ಚು ಆಗಲಿದ್ದು, ಇದರಲ್ಲಿ ಪಾಲ್ಗೊಂಡ ಪ್ರತಿಯೊಬ್ಬರಿಗೂ ಅದರ ಪುಣ್ಯ ಸಿಗಲಿದೆ,'' ಎಂದರು.

ಪಾಲೆಮಾರ್ ಕನ್ವೆನ್ಷನ್ ಸೆಂಟರ್‌ನ ವ್ಯಾಲಿ ವ್ಯೂ ವಿಭಾಗವನ್ನು ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಮೋರ್ಗನ್ಸ್ ಗೇಟ್ ಸಮೀಪದ ಪಾಲೆಮಾರ್ ಗಾರ್ಡನ್ ಅನ್ನು ಶಾಸಕ ಡಾ.ವೈ. ಭರತ್ ಶೆಟ್ಟಿ, ಜೆಪ್ಪಿನಮೊಗರಿನ ನೇತ್ರಾವತಿ ಸಭಾಂಗಣವನ್ನು ಶಾಸಕ ಎ.ಉಮಾನಾಥ ಕೋಟ್ಯಾನ್ ಮತ್ತು ಪಾಲೆಮಾರ್ ಫಾರ್ಮ್ಸ್ ಅನ್ನು ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಉದ್ಘಾಟಿಸಿದರು. ಲ್ಯಾಂಡ್ ಲಿಂಕ್ಸ್ ಉಪಾಧ್ಯಕ್ಷ ಜೆ.ಪ್ರದೀಪ್ ಪಾಲೆಮಾರ್ ಉಪಸ್ಥಿತರಿದ್ದರು.

ಉದ್ಘಾಟನೆಗೊಂಡ ಅದ್ದೂರಿ ಸಭಾಂಗಣಗಳು

- ಪಾಲೆಮಾರ್ ಕನ್ವೆನ್ಷನ್ ಸೆಂಟರ್
- ಪಾಲೆಮಾರ್ ಗಾರ್ಡನ್
- ಪಾಲೆಮಾರ್ ಫಾರ್ಮ್ಸ್
- ನೇತ್ರಾವತಿ ಸಭಾಭವನ

ಕೃಷ್ಣ ಪಾಲೆಮಾರ್ ಅವರದ್ದು ಬಹುಮುಖ ಪ್ರತಿಭೆ. ಉದ್ಯಮ, ಶಿಕ್ಷಣ ಸಂಸ್ಥೆಗಳ ಮೂಲಕ ಅವರು ಮಾಡುತ್ತಿರುವ ಅನಾಥ, ದುರ್ಬಲ ವರ್ಗಗಳ ಜನರ ಸೇವೆ ಶ್ಲಾಘನೀಯ. ಅವರ ಜೀವನ ಸ್ಫೂರ್ತಿದಾಯಕ.

-ನಿವೃತ್ತ ನ್ಯಾ.ಎಸ್.ಅಬ್ದುಲ್ ನಜೀರ್ ಆಂಧ್ರಪ್ರದೇಶ ರಾಜ್ಯಪಾಲ

ಸಾಮಾಜಿಕ ನ್ಯಾಯ, ದೇಶದಲ್ಲಿ ಸೌಹಾರ್ದ ಬಯಸುವ ನಿವೃತ್ತ ನ್ಯಾ.ಅಬ್ದುಲ್ ನಜೀರ್ ಅವರು ರಾಷ್ಟ್ರಪತಿ ಆಗಬೇಕು. ಆಗ ನಮ್ಮ ಕರಾವಳಿ ಭಾಗದ ಗೌರವ ಇನ್ನಷ್ಟು ಹೆಚ್ಚಲಿದೆ.

-ಕೃಷ್ಣ ಜೆ.ಪಾಲೆಮಾರ್ ಲ್ಯಾಂಡ್ ಲಿಂಕ್ಸ್ ಸಂಸ್ಥೆ ಅಧ್ಯಕ್ಷ

ಚೆಯರ್, ಭರವಸೆ ತಂದಿದೆ ಚಿಯಾ

■ **ಗಜಾನನ ಹೆಗಡೆ** ಬೆಳಗಾವಿ
gajanan.hegde@timesofindia.com

ಕಬ್ಬು ಸೇರಿ ತೋಟಗಾರಿಕೆ ಬೆಳೆಗಳೊಂದಿಗೆ ಅಂತರಬೆಳೆ ಅಥವಾ ಉಪಬೆಳೆಯಾಗಿ ಬೆಳೆಯುವ, ಅಲ್ಪ ಅವಧಿಯಲ್ಲಿ ಕೊಯ್ಲಿಗೆ ಬರುವ 'ಚಿಯಾ' ಗಿಡ ಜಿಲ್ಲೆಯ ರೈತರಲ್ಲಿ ಹೊಸ ಭರವಸೆ ಮೂಡಿಸಿದೆ.

ಐಸಿಎಆರ್ ಕೆಎಲ್‌ಇ ಕೃಷಿ ವಿಜ್ಞಾನ ಕೇಂದ್ರದಿಂದ ಕಳೆದ ಹಿಂಗಾರು ಹಂಗಾಮಿನಲ್ಲಿ ಚಿಯಾ ಬೀಜವನ್ನು ಉಚಿತವಾಗಿ ವಿತರಿಸಿ ಬೆಳೆ ಬೆಳೆಯುವ ಮಾಹಿತಿ ನೀಡಲಾಗಿತ್ತು. ಅಲ್ಲದೇ ರೈತರು ಬೆಳೆದ ಚಿಯಾ ಫಸಲನ್ನು ಮಾರುಕಟ್ಟೆ ದರದಲ್ಲಿ ಖರೀದಿಸುವ ಒಪ್ಪಂದವನ್ನೂ ಮಾಡಿಕೊಳ್ಳಲಾಗಿತ್ತು. ಜಿಲ್ಲೆಯ 10 ರೈತರನ್ನು ಮೈಸೂರಿಗೆ ಕರೆದೊಯ್ದು ಅಲ್ಲಿನ ತಜ್ಞರಿಂದ ಕೊಯ್ಲೋತ್ತರ ಸಂಸ್ಕರಣೆ ಮಾಹಿತಿ ನೀಡಲಾಗಿತ್ತು. ಜಿಲ್ಲೆಯ ಬೈಲಹೊಂಗಲ, ಚಿಕ್ಕೋಡಿ ಮತ್ತು ಸವದತ್ತಿ ತಾಲೂಕಿನ ಸುಮಾರು 100 ರೈತರು ಚಿಯಾ ಬೆಳೆದಿದ್ದರು. ಈಗ ಹೊಸ ಬೆಳೆ ಕಟಾವು, ಖರೀದಿ ಕಾರ್ಯ ಮುಗಿದಿದೆ. ಒಪ್ಪಂದದ ಪ್ರಕಾರ ಕ್ವಿಂಟಲ್‌ಗೆ 17 ಸಾವಿರ ರೂ. ದರದಲ್ಲಿ ಚಿಯಾ ಕಾಳುಗಳನ್ನು ಖರೀದಿಸಿ ಬೆಳೆದವರಿಗೆ ಹಣ ಪಾವತಿಸಲಾಗಿದೆ.

1 ಎಕರೆಗೆ 5ರಿಂದ 6 ಕ್ವಿಂಟಲ್ ಇಳುವರಿ ಬರುತ್ತದೆ. ಜಿಲ್ಲೆಯಲ್ಲಿ ರೈತರು ಪ್ರಾಯೋಗಿಕವಾಗಿ ಬೆಳೆದ ಚಿಯಾ ಇಳುವರಿ ಸರಾಸರಿ 4 ಕ್ವಿಂಟಲ್ ಬಂದಿದ್ದು, ರೈತರಿಗೆ ಹೊಸ ಬೆಳೆ ಭರವಸೆ ಮೂಡಿಸಿದೆ. ಮೂರೂವರೆ ತಿಂಗಳ ಈ ಬೆಳೆಯನ್ನು ಎಕರೆಯಲ್ಲಿ ಬೆಳೆಯಲು ಅಂದಾಜು 10 ಸಾವಿರ ರೂ. ವೆಚ್ಚವಾಗಿದೆ. ''ನಾಲ್ಕು ಎಕರೆಯಲ್ಲಿ 23 ಕ್ವಿಂಟಲ್ ಇಳುವರಿ, ಉತ್ತಮ ಆದಾಯ ಬಂದಿದೆ. ಈ ಬಾರಿಯೂ ಇದರ ಕೃಷಿ ಮಾಡುತ್ತೇನೆ,'' ಎಂದು ಸವದತ್ತಿ ತಾಲೂಕಿನ ಚಿಕ್ಕುಂಬಿ ಗ್ರಾಮದ ರೈತ ಮಲ್ಲಿಕಾರ್ಜುನ ಪ್ರೇಮಚಂದ ಕರಿ ತಿಳಿಸಿದರು. ಚಿಯಾವನ್ನು 'ಸೂಪರ್ ಫುಡ್' ಎಂದು ಪರಿಗಣಿಸಲಾಗುತ್ತಿದ್ದು, ಇದರಲ್ಲಿ ವಿಟಮಿನ್, ಫೈಬರ್, ಪ್ರೊಟೀನ್, ಒಮೆಗಾ-3 ಆಮ್ಲಗಳು ಇವೆ.

ಚಿಯಾ ಬೆಳೆ ಕಟಾವು ಮಾಡುತ್ತಿರುವ ರೈತರು.

ಚಿಯಾ ಕಡಿಮೆ ನೀರಿನಲ್ಲಿ ಉತ್ತಮವಾಗಿ ಬೆಳೆಯುತ್ತದೆ. ಬೇಸಾಯ ವೆಚ್ಚವೂ ಕಡಿಮೆ. ಈ ಬೆಳೆಯನ್ನು ಆಡು, ಹಸುಗಳು ತಿನ್ನುವುದಿಲ್ಲ. 2026-27ನೇ ಸಾಲಿನಲ್ಲಿ ಜಿಲ್ಲೆಯ 1000 ಎಕರೆ ಪ್ರದೇಶದಲ್ಲಿ ಚಿಯಾ ಬೆಳೆ ಬೆಳೆಸುವ ಗುರಿ ಇದೆ.

- ಡಾ.ಎಸ್.ಎಸ್.ಹಿರೇಮಠ ಕೃಷಿ ವಿಜ್ಞಾನಿ, ಐಸಿಎಆರ್ ಕೆಎಲ್‌ಇ ಕೃಷಿ ವಿಜ್ಞಾನ ಕೇಂದ್ರ, ಮತ್ತಿಕೊಪ್ಪ

ಮಾರುಕಟ್ಟೆ ಖಾತ್ರಿ ಅಗತ್ಯ

ಮೈಸೂರು, ಬೆಂಗಳೂರು ಭಾಗದಲ್ಲಿ ಚಿಯಾ ಖರೀದಿದಾರರು ಇದ್ದರೂ ಬೆಳಗಾವಿ ಜಿಲ್ಲೆಯಲ್ಲಿ ಮಾರುಕಟ್ಟೆ ವ್ಯವಸ್ಥೆ ಇಲ್ಲ. ಮೊದಲೇ ಫಸಲು ಖರೀದಿ ಒಪ್ಪಂದ ಮಾಡಿಕೊಳ್ಳಬೇಕು. ಅಥವಾ ಖರೀದಿದಾರರು ಇದ್ದರೆ ಮಾತ್ರ ಈ ಬೆಳೆ ಮಾರಾಟ ಸುಲಭ. ಇದೇ ಕಾರಣಕ್ಕಾಗಿ ರೈತರು ಬೆಳೆದ ಚಿಯಾವನ್ನು ಖರೀದಿ ಮಾಡುವ ಕುರಿತು ಕೆಎಲ್‌ಇ ಕೃಷಿ ವಿಜ್ಞಾನ ಕೇಂದ್ರ ಗುಜರಾತ್ ಮೂಲದ ಕಂಪನಿಯೊಂದಿಗೆ ಒಪ್ಪಂದ ಮಾಡಿ ಕೊಂಡು ಹಣ ಪಾವತಿ ಮಾಡಿದೆ.

ಕೆಪಿಎಸ್ ವಿರುದ್ಧ ಹೋರಾಟ

8 ಸಾವಿರ ಶಾಲೆ ಬಂದ್ ಆಗುವ ಆತಂಕ

ಹುಬ್ಬಳ್ಳಿ: ರಾಜ್ಯ ಸರಕಾರ ಆರಂಭಿಸಲು ಉದ್ದೇಶಿಸಿರುವ 800 ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳಿಂದ 8 ಸಾವಿರಕ್ಕೂ ಅಧಿಕ ಸರಕಾರಿ ಪ್ರಾಥಮಿಕ, ಪ್ರೌಢ ಹಾಗೂ ಅನುದಾನಿತ ಪ್ರೌಢಶಾಲೆಗಳು ಬಂದ್ ಆಗಲಿವೆ. ಅದಕ್ಕಾಗಿ ಶಿಕ್ಷಕರ ಸಂಘಗಳು ಹೋರಾಟ ರೂಪಿಸಬೇಕಿದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.



ಹೊರಟ್ಟಿ ಕರೆ

ಕರ್ನಾಟಕ ಮಾಧ್ಯಮಿಕ ಶಿಕ್ಷಕರ ನೌಕರರ ಸಂಘದ ಹುಬ್ಬಳ್ಳಿ ಘಟಕದ ನೇತೃತ್ವದಲ್ಲಿ ಶನಿವಾರ ನಡೆದ ರಾಜ್ಯ ಘಟಕದ ಕೇಂದ್ರ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ''ಒಂದೇ ಕ್ಯಾಂಪಸ್‌ನಲ್ಲಿ ಇರುವ ಶಾಲೆಗಳಲ್ಲಿ ಕೆಪಿಎಸ್ ಪ್ರಾರಂಭಿಸಲು ಅವಕಾಶವಿದೆ. ಆದರೆ, ಬೇರೆ ಆವರಣದಲ್ಲಿರುವ ಶಾಲೆಗಳನ್ನು ಇದರ ವ್ಯಾಪ್ತಿಗೆ ತರುತ್ತಿರುವುದು ಕಾನೂನಿನ ವಿರುದ್ಧವಾಗಿದೆ,'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

''ಸಂಘ ಮೊಟ್ಟ ಮೊದಲಿಗೆ ಕೆಪಿಎಸ್ ಶಾಲೆ ಪ್ರಾರಂಭದಿಂದ ಆಗುವ ಸಾಧಕ-ಬಾಧಕ ಚಿಂತನ-ಮಂಥನ ಹಾಗೂ ಅಭಿಪ್ರಾಯ ಸಂಗ್ರಹಿಸಬೇಕು.ಇಲ್ಲವಾದಲ್ಲಿ ಅನುದಾನಿತ ಮತ್ತು ಸರಕಾರಿ ಶಾಲಾ ನೌಕರರು ದೊಡ್ಡ ಸಮಸ್ಯೆ ಎದುರಿಸಬೇಕಾಗುತ್ತದೆ. ಸಂಘ ಈ ವಿಚಾರದಲ್ಲಿ ಗಟ್ಟಿ ನಿರ್ಣಯ ಕೈಗೊಂಡು ಹೋರಾಟದ ರೂಪರೇಷೆ ಹಾಕಬೇಕು'' ಎಂದು ಹೇಳಿದರು. ಶಾಲಾ ನೌಕರರ ಹಾವೇರಿ ಜಿಲ್ಲಾ ಸಂಘದ ಗೌರವಾಧ್ಯಕ್ಷ ಎಚ್.ಪಿ. ಬಣಕಾರ ಮಾತನಾಡಿ,''ಸರಕಾರ ಕಾಲ ಕಾಲಕ್ಕೆ ಕೈಗೊಳ್ಳುವ ನಿರ್ಣಯ, ಆದೇಶದಿಂದ ಅನುದಾನಿತ ಶಾಲೆಗಳು ಸೌಲಭ್ಯದಿಂದ ವಂಚಿತವಾಗುತ್ತಾ ಹೋಗುತ್ತಿವೆ. ಒಪಿಎಸ್ ಅನುದಾನಿತ ಸಿಬ್ಬಂದಿಗೂ ಅನ್ವಯಿಸಬೇಕಿದೆ. 2006ರ ನಂತರ ಅನುದಾನಕ್ಕೆ ಒಳಪಟ್ಟವರು ಯುವ ಪೀಳಿಗೆಗೆ ಇಂತಹ ವಿಚಾರಗಳನ್ನು ತಿಳಿಸಿ ಹೇಳುವ ಕೆಲಸ ಸಂಘದಿಂದ ಆಗಬೇಕು'' ಎಂದರು.

ನೀಟ್ ಬರೆದಿದ್ದ ವಿದ್ಯಾರ್ಥಿನಿ ಆತ್ಮಹತ್ಯೆ

ಕಲಬುರಗಿ: ನೀಟ್ ಬರೆದಿದ್ದ ವಿದ್ಯಾರ್ಥಿನಿ ಭಾಗ್ಯಶ್ರೀ (18) ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ನಗರದ ಅಪಾರ್ಟ್‌ಮೆಂಟ್‌ನಲ್ಲಿ ಫ್ಯಾನಿಗೆ ನೇಣುಹಾಕಿಕೊಂಡಿದ್ದಾಳೆ. ''ದ್ವಿತೀಯ ಪಿಯುನಲ್ಲಿ ಶೇ.92 ರಷ್ಟು ಅಂಕ ಪಡೆದಿದ್ದ ಭಾಗ್ಯಶ್ರೀ ನೀಟ್‌ನಲ್ಲೂ ಹೆಚ್ಚು ಅಂಕದ ನಿರೀಕ್ಷೆಯಲ್ಲಿದ್ದಳು. ಕುಟುಂಬದವರ ಜತೆ ಚೆನ್ನಾಗಿಯೇ ಇದ್ದಳು. ಮತ್ತೆ ನೀಟ್ ಬರೆಯಬೇಕೆಂಬ ಆತಂಕ ಇದ್ದಿರಬಹುದು. ಈಗ ಯಾರನ್ನು ದೂರೋಣ?,'' ಎಂದು ಆಕೆ ತಂದೆ ರಾಜಶೇಖರ ಕಣ್ಣೀರು ಹಾಕಿದರು.

ಕ್ರೂಸರ್-ಲಾರಿ ಮುಖಾಮುಖಿ ಡಿಕ್ಕಿ: ಸ್ಥಳದಲ್ಲೇ ಐವರ ಸಾವು

ಶಹಾಬಾದ್ (ಕಲಬುರಗಿ): ಚಿತ್ತಾಪುರ ತಾಲೂಕಿನ ಲಾಡ್ಲಾಪುರ-ಹಲಕರ್ಟಿ ಮಧ್ಯೆ ರಾಷ್ಟ್ರೀಯ ಹೆದ್ದಾರಿ 150ರಲ್ಲಿ ಶನಿವಾರ ಬೆಳಗಿನ ಜಾವ ಲಾರಿ ಮತ್ತು ಕ್ರೂಸರ್ ಮುಖಾಮುಖಿ ಡಿಕ್ಕಿಯಾಗಿ ಐವರು ಸ್ಥಳದಲ್ಲೇ ಮೃತಪಟ್ಟರು.

ಮೆಹಬೂಬ್ ಅಲಿ (42), ತೊಲಾ ಭಾಷಾ (30), ಹುಸೇನ್ ಶಹಾಪುರ (47), ರಸೂಲಬಿ (43) ಹಾಗೂ ಫಾತಿಮಾ (40) ಮೃತರು. ಡಿಕ್ಕಿ ರಭಸಕ್ಕೆ ಐವರ ದೇಹಗಳು ಛಿದ್ರಗೊಂಡಿದ್ದು, ಮೃತಪಟ್ಟ ಎಲ್ಲರೂ ಸಂಬಂಧಿಗಳು.

ವಾಡಿ ಸಮೀಪದ ಇಂಗಳಗಿ ಗ್ರಾಮಕ್ಕೆ ತೆರಳುತ್ತಿದ್ದ ಕ್ರೂಸರ್ ಮತ್ತು ವಾಡಿಯಿಂದ ಯಾದಗಿರಿಗೆ ತೆರಳುತ್ತಿದ್ದ ಲಾರಿ ಮುಖಾಮುಖಿ ಡಿಕ್ಕಿ ಹೊಡೆದಿವೆ. ಅಪಘಾತಕ್ಕೆ ಅತಿವೇಗ ಕಾರಣ ಎನ್ನಲಾಗಿದೆ.

ಕುಟುಂಬದ ಸದಸ್ಯರೊಬ್ಬರು ಪಾರ್ಶ್ವವಾಯು ಪೀಡಿತರಾಗಿದ್ದು, ಅವರನ್ನು ಯಾದಗಿರಿ ಆಸ್ಪತ್ರೆಗೆ ದಾಖಲಿಸಿ ಗ್ರಾಮಕ್ಕೆ ಮರಳಿ ಬರುವಾಗ ಅಪಘಾತ ಸಂಭವಿಸಿದೆ. ವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಡಿಐಜಿ ಶಾಂತನು ಸಿನ್ಹಾ, ಎಸ್‌ಪಿ ಅಡ್ಡೂರು ಶ್ರೀನಿವಾಸುಲು ಸ್ಥಳಕ್ಕೆ ಭೇಟಿ ನೀಡಿದ್ದರು.

ಇಂಗಳಗಿಯಲ್ಲಿ ನೀರವ ಮೌನ: ಅಪಘಾತದ ಸುದ್ದಿ ತಿಳಿಯುತ್ತಿದ್ದಂತೆ ಇಂಗಳಗಿ ಗ್ರಾಮದಲ್ಲಿ ನೀರವ ಮೌನ ಆವರಿಸಿದೆ. ಆಸ್ಪತ್ರೆಗೆ ತೆರಳಿ ಮನೆಗೆ ಹೊರಟಿದ್ದ ಕುಟುಂಬಕ್ಕೆ ವಿಧಿಯಾಟ ಆಘಾತ ನೀಡಿದೆ ಎಂದು ಸ್ಥಳೀಯರು ಕಂಬನಿ ಮಿಡಿದಿದ್ದಾರೆ.

ಲಾಡ್ಲಾಪುರ ಹಲಕರ್ಟಿ ಮಧ್ಯೆ ಡಿಕ್ಕಿಯಾಗಿರುವ ಕ್ರೂಸರ್

ಅಮೂಲ್ಯ ಜೀವಗಳು ಅಪಘಾತಕ್ಕೆ ಬಲಿಯಾಗಿರುವುದಕ್ಕೆ ನೋವಾಗಿದೆ. ಮೃತರ ಆತ್ಮಕ್ಕೆ ಶಾಂತಿ ಕೋರುವೆ. ಮೃತರ ಕುಟುಂಬದವರಿಗೆ ಅಗತ್ಯ ನೆರವು ನೀಡಲಾಗುವುದು.

-ಪ್ರಿಯಾಂಕ್ ಖರ್ಗೆ ಕಲಬುರಗಿ ಉಸ್ತುವಾರಿ ಸಚಿವ

ಮಂಗಳೂರು-ಬೆಂಗಳೂರು ವಂದೇ ಭಾರತ್ ಜೂನ್‌ಗೆ

ಮಂಗಳೂರು ಜಂಕ್ಷನ್ ರೈಲು ನಿಲ್ದಾಣ ಕಾಮಗಾರಿ ಪರಿಶೀಲಿಸಿದ ಸೋಮಣ್ಣ

■ **ವಿಕ ಸುದ್ದಿಲೋಕ** ಮಂಗಳೂರು

''ಮಂಗಳೂರು-ಬೆಂಗಳೂರು ನಡುವೆ ಬಹು ನಿರೀಕ್ಷಿತ ವಂದೇ ಭಾರತ್ ಎಕ್ಸ್‌ಪ್ರೆಸ್ ಜೂನ್‌ನಲ್ಲಿ ಸಂಚಾರ ಆರಂಭಿಸಲಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳೂರು ಸೇರಿ ದೇಶದ ನಾನಾ ಕಡೆಗಳಲ್ಲಿ ಹೊಸ ರೈಲು ಸಂಚಾರಗಳಿಗೆ ಚಾಲನೆ ನೀಡಲಿದ್ದಾರೆ,'' ಎಂದು ರೈಲ್ವೆ ಖಾತೆ ಸಹಾಯಕ ಸಚಿವ ವಿ.ಸೋಮಣ್ಣ ಹೇಳಿದರು.

ಮಂಗಳೂರು ಜಂಕ್ಷನ್ ರೈಲು ನಿಲ್ದಾಣದಲ್ಲಿ ಅಮೃತ ಭಾರತ್ ಯೋಜನೆಯಡಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳನ್ನು ಶನಿವಾರ ಪರಿಶೀಲಿಸಿ ಬಳಿಕ ಸುದ್ದಿಗಾರರಲ್ಲಿ ಮಾತನಾಡಿದರು.

''ಸಕಲೇಶಪುರ-ಕುಕ್ಕೆ ಸುಬ್ರಹ್ಮಣ್ಯ ಮಾರ್ಗದ ವಿದ್ಯುದ್ದೀಕರಣ ಮುಕ್ತಾಯಗೊಂಡಿದೆ. ಹೀಗಾಗಿ ಬೆಂಗಳೂರು-ಮಂಗಳೂರು ನಡುವೆ ಪೂರ್ತಿಯಾಗಿ ವಿದ್ಯುದ್ದೀಕರಣವಾಗಿದ್ದು ಹೆಚ್ಚುವರಿ ರೈಲು ಸಂಚಾರಕ್ಕೆ ಅವಕಾಶ ತೆರೆದುಕೊಂಡಿದೆ,'' ಎಂದರು. ''ಪ್ರಸ್ತಾವಿತ ಶಿವಮೊಗ್ಗ-ಮಂಗಳೂರು ರೈಲು ಮಾರ್ಗ 332 ಕಿ.ಮೀ. ಇರಲಿದ್ದು 3,300 ಕೋಟಿ ರೂ. ಯೋಜನಾ ವೆಚ್ಚ ಅಂದಾಜಿಸಲಾಗಿದೆ. ಎಫ್‌ಎಲ್‌ಸಿ ನಡೆದು ಅನುಮೋದನೆಗೊಂಡಿದ್ದು, ಶೀಘ್ರವೇ ಟೆಂಡರ್ ಕರೆಯಲಾಗುವುದು,'' ಎಂದರು.

ಮಂಗಳೂರಿಗೆ ಪ್ರತ್ಯೇಕ ರೈಲ್ವೆ ವಿಭಾಗ

ಮಂಗಳೂರು ಪ್ರತ್ಯೇಕ ರೈಲ್ವೆ ವಿಭಾಗ ಸೃಜಿಸುವ ಕಾರ್ಯ ಪ್ರಗತಿಯಲ್ಲಿದೆ. ಕೊಂಕಣ, ನೈಋತ್ಯ ಹಾಗೂ ದಕ್ಷಿಣ ರೈಲ್ವೆ ವಲಯಗಳ ವ್ಯಾಪ್ತಿಗೆ ಬರುವ ಮಂಗಳರನ್ನು ಒಂದೇ ವಿಭಾಗದಡಿ ತರುವ ಕಾರ್ಯಗಳು ನಡೆಯುತ್ತಿವೆ. ಆದಷ್ಟು ಶೀಘ್ರದಲ್ಲಿ ಈ ಬೇಡಿಕೆ ನೆರವೇರಲಿದೆ ಎಂದು ಸಚಿವ ಸೋಮಣ್ಣ ತಿಳಿಸಿದರು.



ಕನ್ನಡ ಬಲ್ಲ ಸಿಬ್ಬಂದಿ ನೇಮಿಸಿ

ಮಂಗಳೂರು ಸೆಂಟ್ರಲ್ ಹಾಗೂ ಜಂಕ್ಷನ್ ರೈಲು ನಿಲ್ದಾಣದಲ್ಲಿ ಕನ್ನಡ ಬಲ್ಲ ಸಿಬ್ಬಂದಿ ನೇಮಿಸುವಂತೆ ಸೋಮಣ್ಣ ಅಧಿಕಾರಿಗಳಿಗೆ ಸೂಚಿಸಿದರು. ಬೇರೆ ರಾಜ್ಯದವರಾಗಿದ್ದರೂ ಕರ್ನಾಟಕದಲ್ಲಿ ಕನಿಷ್ಠ ಸಂವಹನ ನಡೆಸಲು ಕನ್ನಡ ಭಾಷೆ ಕಲಿಯಬೇಕು ಎಂದು ತಾಕೀತು ಮಾಡಿದರು.

570 ಚೀಲ ಅಕ್ಕಿ ಸಹಿತ ವಾಹನ ಜಪ್ತಿ

■ ವಿಕ ಸುದ್ದಿಲೋಕ ಹೊರ್ತಿ (ವಿಜಯಪುರ)

ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ವಾಹನವನ್ನು ಸುಜಯಪ ರಾಷ್ಟ್ರೀಯ ಹೆದ್ದಾರಿ 52 ರ ಹಳಗುಣಕಿ ಕ್ರಾಸ್‌ನಲ್ಲಿ ಸಾರ್ವಜನಿಕರು ಹಿಡಿದು ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ.

ಆಹಾರ ಇಲಾಖೆಗೆ ಮಾಹಿತಿ ನೀಡಿದ ತಕ್ಷಣವೇ ಸ್ಥಳಕ್ಕೆ ಆಹಾರ ಇಲಾಖೆ ಅಧಿಕಾರಿ ಸಿದ್ರಾಮೇಶ ಹಲಸಂಗಿ ಭೇಟಿ ನೀಡಿ ವಾಹನ ವಶಕ್ಕೆ ಪಡೆದರು. ವಾಹನ ಚಿತ್ರದುರ್ಗದಿಂದ ಗುಜರಾತ್‌ಗೆ ತೆರಳುತ್ತಿತ್ತು. ವಾಹನದಲ್ಲಿದ್ದ ಅಂದಾಜು 8,29,920 ರೂ. ಮೌಲ್ಯದ 570 ಚೀಲಗಳಲ್ಲಿನ 29,640 ಕೆ.ಜಿ ಅಕ್ಕಿ ಸಮೇತ ವಾಹನವನ್ನು ಜಪ್ತಿ ಮಾಡಿ, ಚಾಲಕನನ್ನು ಬಂಧಿಸಲಾಗಿದೆ ಎಂದು ಆಹಾರ ಇಲಾಖೆ ಅಧಿಕಾರಿ ಸಿದ್ರಾಮೇಶ ಹಲಸಂಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವದೇಶಕ್ಕೆ ಹೋಗಿ ಅರ್ಜಿ ಸಲ್ಲಿಸಬೇಕೆಂಬ ಹೊಸ ನಿಯಮ | ಅಮೆರಿಕದಲ್ಲಿರುವ ವಿದೇಶಿಯರಿಗೆ ಮತ್ತೆ ತಾಪತ್ರಯ

ಗ್ರೀನ್ ಕಾರ್ಡ್‌ಗೆ ಅಮೆರಿಕ ರೆಡ್ ಸಿಗ್ನಲ್

ವಾಷಿಂಗ್ಟನ್: ಗ್ರೀನ್ ಕಾರ್ಡ್ ಪಡೆದು ಅಮೆರಿಕದಲ್ಲೇ ಕಾಯಂ ವಾಸಿಗಳಾಗಬೇಕು ಎಂದು ಆಸೆ ಪಟ್ಟವರಿಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಡಳಿತ ತಣ್ಣೀರು ಎರಚಿದೆ. ಎಚ್1-ಬಿ ವೀಸಾ ಪಡೆದು ಉದ್ಯೋಗದಲ್ಲಿರುವವರು, ಪ್ರವಾಸಿ ವೀಸಾ, ವಿದ್ಯಾರ್ಥಿ ವೀಸಾದಡಿ ಅಮೆರಿಕದಲ್ಲೇ ನೆಲೆಯೂರಿರುವವರು ಇನ್ನು ಗ್ರೀನ್ ಕಾರ್ಡ್‌ಗೆ ಅರ್ಜಿ ಸಲ್ಲಿಸಬೇಕೆಂದರೆ ತಮ್ಮ ತಮ್ಮ ತವರಿಗೆ ಮರಳಬೇಕು. ಅಲ್ಲಿಂದಲೇ ಅರ್ಜಿ ಸಲ್ಲಿಸಬೇಕು ಎಂಬ ಹೊಸ ನಿಯಮವನ್ನು ಅಮೆರಿಕ ಪೌರತ್ವ ಮತ್ತು ವಲಸೆ ಸೇವೆ ಘೋಷಿಸಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಅಮೆರಿಕದ ಪೌರತ್ವ ಮತ್ತು ವಲಸೆ ಸೇವೆಗಳ ವಕ್ತಾರ ಜಾಕ್ ಕಹ್ಲರ್, ಅಮೆರಿಕದಲ್ಲಿ ತಾತ್ಕಾಲಿಕವಾಗಿ ನೆಲೆಸಿರುವ ಮತ್ತು ಗ್ರೀನ್ ಕಾರ್ಡ್ ಬಯಸುವ ವಿದೇಶಿಯರು, ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ, ಅರ್ಜಿಗಳನ್ನು ತಮ್ಮ ತಾಯ್ನಾಡಿನಿಂದಲೇ ಅಮೆರಿಕ ರಾಯಭಾರ ಕಚೇರಿ ಮೂಲಕ ಶಾಶ್ವತ ವೀಸಾಕ್ಕೆ ಅರ್ಜಿ ಸಲ್ಲಿಸಬೇಕು ಎಂದಿದ್ದಾರೆ.

ಈ ನಿಯಮ ಏಕೆ?: ''ಪ್ರವಾಸಿಗರು ಅಥವಾ ವಿದ್ಯಾರ್ಥಿಗಳು ಅಮೆರಿಕಕ್ಕೆ ಬಂದು, ಇಲ್ಲಿಯೇ ಉಳಿದುಕೊಂಡು ಗ್ರೀನ್ ಕಾರ್ಡ್‌ಗೆ ಅರ್ಜಿ ಸಲ್ಲಿಸುತ್ತಿದ್ದರು. ಇದನ್ನು ತಡೆಯುವ ಉದ್ದೇಶದಿಂದ ಹೊಸ ನಿಯಮ ಜಾರಿ ಮಾಡಲಾಗಿದೆ. ಅಮೆರಿಕದಲ್ಲೇ ಇದ್ದುಕೊಂಡು ಗ್ರೀನ್ ಕಾರ್ಡ್‌ಗೆ ಅರ್ಜಿ ಹಾಕಿ, ಅದು ಮಾನ್ಯವಾಗದೇ ಇದ್ದರೂ ಅನೇಕರು ಅಕ್ರಮವಾಗಿ ಅಮೆರಿಕದಲ್ಲೇ ನೆಲೆಯೂರುತ್ತಾರೆ. ಇದರಿಂದ ಅಕ್ರಮ ವಲಸಿಗರ ಸಂಖ್ಯೆ ಹೆಚ್ಚಾಗುತ್ತದೆ. ಇದನ್ನು ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆ,'' ಎಂದು ಕಹ್ಲರ್ ವಿವರಿಸಿದ್ದಾರೆ.

ಈ ಹೊಸ ನಿಯಮದ ಬಗ್ಗೆ ಟ್ವೀಟ್ ಮಾಡಿರುವ ಅಮೆರಿಕದ ಹೋಮ್‌ಲ್ಯಾಂಡ್ ಸೆಕ್ಯೂರಿಟಿ ಇಲಾಖೆ, ''ನಮ್ಮ ದೇಶದ ವಲಸೆ ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಳ್ಳುವ ಕಾಲ ಮುಗಿದಿದೆ. ತಾತ್ಕಾಲಿಕವಾಗಿ ಅಮೆರಿಕದಲ್ಲಿರುವ ವ್ಯಕ್ತಿಯು ಗ್ರೀನ್ ಕಾರ್ಡ್ ಬಯಸುವುದಾದರೆ, ಅವರು ಅರ್ಜಿ ಸಲ್ಲಿಸಲು ತಮ್ಮ ಸ್ವದೇಶಕ್ಕೆ ಮರಳಲೇಬೇಕು. ಈ ನೀತಿಯು ನಮ್ಮ ವಲಸೆ ವ್ಯವಸ್ಥೆಯು ಕಾನೂನಿನ ಆಶಯದಂತೆ ಕಾರ್ಯ ನಿರ್ವಹಿಸಲು ಸಹಾಯ ಮಾಡುತ್ತದೆ ಮತ್ತು ನಿಯಮಗಳಲ್ಲಿರುವ ಲೋಪದೋಷಗಳನ್ನು ಬಳಸಿಕೊಳ್ಳುವುದನ್ನು ತಡೆಯುತ್ತದೆ,'' ಎಂದು ಹೇಳಿದೆ.

ವಿನಾಯಿತಿ ಯಾರಿಗೆ?
ಎಚ್-1ಬಿ ವೀಸಾ ಇರುವ ಹಿರಿಯ ಉದ್ಯೋಗಿಗಳು ಸ್ವದೇಶಕ್ಕೆ ಮರಳಿ ಗ್ರೀನ್ ಕಾರ್ಡ್ ಪಡೆಯುವುದಕ್ಕೆ ವಿನಾಯಿತಿ ಸಿಗಬಹುದು ಎನ್ನಲಾಗಿದೆ.

1.2 ಕೋಟಿ ಭಾರತೀಯರಿಗೆ ಸಮಸ್ಯೆ
ಅಮೆರಿಕದಲ್ಲಿ ದೀರ್ಘ ಕಾಲದಿಂದ ಉದ್ಯೋಗದಲ್ಲಿರುವ 1.2 ಕೋಟಿ ಭಾರತೀಯರು ಮತ್ತು ಅವರ ಕುಟುಂಬಗಳಿಗೆ ಹೊಸ ವಲಸೆ ನೀತಿಯಿಂದ ಸಮಸ್ಯೆ ಎದುರಾಗಲಿದೆ ಎಂದು ಮೂಲಗಳು ತಿಳಿಸಿವೆ. ಅವರ ಬಳಿ ಈಗ ಎಚ್1-ಬಿ ವೀಸಾ ಇದೆ. ಈಗ ಅವರು ಗ್ರೀನ್ ಕಾರ್ಡ್ ಪಡೆಯಲು ಭಾರತಕ್ಕೆ ವಾಪಸ್ ಬರಬೇಕಾಗುತ್ತದೆ. ಈಗಾಗಲೇ ಅಮೆರಿಕ ರಾಯಭಾರ ಕಚೇರಿಗಳಲ್ಲಿ ಲಕ್ಷಾಂತರ ವೀಸಾ ಅರ್ಜಿಗಳು ಬಾಕಿ ಇವೆ. ಈಗ ಗ್ರೀನ್ ಕಾರ್ಡ್ ಅರ್ಜಿಗಳು ಅಲ್ಲಿಗೆ ಸಲ್ಲಿಕೆಯಾದರೆ ಹೆಚ್ಚು ದಿನ ಕಾಯಬೇಕಾಗುತ್ತದೆ.

ಹೊಸ ಗ್ರೀನ್ ಕಾರ್ಡ್ ನೀತಿಯು ಭಾರತೀಯರನ್ನು ಗುರಿಯಾಗಿಟ್ಟುಕೊಂಡಿಲ್ಲ, ದೇಶದಲ್ಲಿ ಹೆಚ್ಚುತ್ತಿರುವ ಅಕ್ರಮ ವಲಸಿಗರಿಗೆ ಕಡಿವಾಣ ಹಾಕಲು ಶಾಶ್ವತ ವ್ಯವಸ್ಥೆ ರೂಪಿಸುವುದು ನಮ್ಮ ಉದ್ದೇಶ.
-ಮಾರ್ಕೊ ರುಬಿಯೊ ಅಮೆರಿಕ ವಿದೇಶಾಂಗ ಕಾರ್ಯದರ್ಶಿ

ಗ್ರೀನ್ ಕಾರ್ಡ್

ವಿಕ ಜ್ಞಾನ ತಾಣ

ಅಮೆರಿಕದಲ್ಲಿ ಕಾಯಂ ವಾಸಕ್ಕೆ ನೀಡುವ ಅಧಿಕೃತ ಅನುಮತಿ ಪತ್ರ. ಈ ಕಾರ್ಡ್ ಇರುವವರಿಗೆ ಅಮೆರಿಕದಲ್ಲಿ ಶಾಶ್ವತವಾಗಿ ವಾಸಿಸುವ ಹಕ್ಕು ಸಿಗುತ್ತದೆ. ಯಾವುದೇ ಕಂಪನಿಯಲ್ಲಿ ಉದ್ಯೋಗಿಯಾಗಬಹುದು. ಸ್ವಂತ ವ್ಯವಹಾರ ನಡೆಸಬಹುದು. ಮಕ್ಕಳಿಗೆ ಶಿಕ್ಷಣ ಸೇರಿದಂತೆ ಹಲವು ಸರಕಾರಿ ಸೌಲಭ್ಯಗಳು ಲಭ್ಯ. ಕೆಲವು ವರ್ಷಗಳ ನಂತರ ಅಮೆರಿಕ ಪೌರತ್ವಕ್ಕೆ ಅರ್ಜಿ ಹಾಕಬಹುದು. ವೀಸಾ ನವೀಕರಣದ ತೊಂದರೆ ಕಡಿಮೆಯಾಗುತ್ತದೆ. ಅಮೆರಿಕದಲ್ಲಿ ಭಾರಿ ಬಂಡವಾಳ ಹೂಡಿಕೆ ಮಾಡಿ ಉದ್ಯೋಗ ಸೃಷ್ಟಿಸುವವರಿಗೆ ಗ್ರೀನ್ ಕಾರ್ಡ್ ಲಭ್ಯ. ವಲಸೆ ಬಂದವರಿಗೆ, ಕ್ರಮವಾಗಿ ನೀಡಲಾಗುವ ಲಾಟರಿ ಮೂಲಕವೂ ಗ್ರೀನ್ ಕಾರ್ಡ್ ಪಡೆಯಲು ಒಂದಿಷ್ಟು ರಿಯಾಯಿತಿ ಇರುತ್ತದೆ. ಅಮೆರಿಕದ ಪೌರತ್ವ ಹೊಂದಿರುವ ಸಂಗಾತಿ ಹೊಂದಿದ್ದರೆ ಅರ್ಜಿದಾರರು ನೇರವಾಗಿ 'ಸ್ಟೇಟಸ್ ಬದಲಾವಣೆ'ಗೆ ಅಂದರೆ ಬೇರೆ ವೀಸಾಗಳಿಂದ ಗ್ರೀನ್ ಕಾರ್ಡ್ ಪಡೆಯಲು ಅರ್ಜಿ ಸಲ್ಲಿಸಬಹುದು. 2024ರಲ್ಲಿ ಒಟ್ಟು 2,50,000 ಜನರು ಮದುವೆಯ ಮೂಲಕ ಗ್ರೀನ್ ಕಾರ್ಡ್ ಪಡೆದಿದ್ದಾರೆ.

ಎಸ್‌ಬಿಐ ಮುಷ್ಕರ ಮುಂದೂಡಿಕೆ

ಮೇ 25, 26ರಂದು ಬ್ಯಾಂಕ್ ಕಾರ್ಯ ನಿರ್ವಹಣೆ
ಮೇ 27ರಂದು ಬಕ್ರೀದ್ ರಜೆ

ಮುಂಬಯಿ: ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ಮೇ 25, 26ರಂದು ನಡೆಸಲು ಉದ್ದೇಶಿಸಲಾಗಿದ್ದ ಮುಷ್ಕರವನ್ನು ಮುಂದೂಡಲಾಗಿದೆ.

ಹೀಗಾಗಿ ಸೋಮವಾರ ಮತ್ತು ಮಂಗಳವಾರ ಭಾರತೀಯ ಸ್ಟೇಟ್ ಬ್ಯಾಂಕ್ ಶಾಖೆಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ ಎಂದು ಅಖಿಲ ಭಾರತ ಎಸ್‌ಬಿಐ ನೌಕರರ ಒಕ್ಕೂಟ (ಎಐಎಸ್‌ಬಿಐಎಸ್‌ಎಫ್) ತಿಳಿಸಿದೆ. ಬ್ಯಾಂಕ್‌ನ ಆಡಳಿತ ಮಂಡಳಿ ಮತ್ತು ನೌಕರರ ಸಂಘಗಳ ಪ್ರತಿನಿಧಿಗಳ ನಡುವೆ ಮುಂಬಯಿನಲ್ಲಿ ಶುಕ್ರವಾರ ರಾತ್ರಿವರೆಗೆ ನಡೆದ ಸಕಾರಾತ್ಮಕ ಮಾತುಕತೆಯ ಬಳಿಕ ಈ ನಿರ್ಧಾರ ಹೊರ ಬಿದ್ದಿದೆ.

''ಮುಂಬಯಿನ ಕಾರ್ಪೊರೇಟ್ ಕಚೇರಿಯಲ್ಲಿ ಬ್ಯಾಂಕಿನ ಆಡಳಿತ ಮಂಡಳಿ ಮತ್ತು ಒಕ್ಕೂಟದ ಪ್ರತಿನಿಧಿಗಳ ಸಭೆ ಯಶಸ್ವಿಯಾಗಿದೆ. ಸಕಾರಾತ್ಮಕ ಸುಧಾರಣೆಗಳನ್ನು ಮಾಡಲು ಆಡಳಿತ ಮಂಡಳಿ ಒಪ್ಪಿಗೆ ಸೂಚಿಸಿದೆ,'' ಎಂದು ಎಐಎಸ್‌ಬಿಐಎಸ್‌ಎಫ್ ಪ್ರಧಾನ ಕಾರ್ಯದರ್ಶಿ ಎಲ್. ಚಂದ್ರಶೇಖರ್ ಒಕ್ಕೂಟದ ಸದಸ್ಯರಿಗೆ ಕಳುಹಿಸಿದ ಸಂದೇಶದಲ್ಲಿ ತಿಳಿಸಿದ್ದಾರೆ.

''ಎಸ್‌ಬಿಐ ಆಡಳಿತ ಮಂಡಳಿಯೊಂದಿಗೆ ಶುಕ್ರವಾರ ನಡೆದ ಸಭೆಯಲ್ಲಿ ನಮ್ಮ ಬೇಡಿಕೆಗಳ ಕುರಿತು ಸಕಾರಾತ್ಮಕ ಸ್ಪಂದನೆ ವ್ಯಕ್ತವಾಯಿತು. ಸಂದೇಶ ವಾಹಕರು ಮತ್ತು ಸಶಸ್ತ್ರ ಸಿಬ್ಬಂದಿಗಳ ನೇಮಕ, ವಿವಿಧ ಶಾಖೆಗಳಲ್ಲಿ ಅಗತ್ಯ ಸಿಬ್ಬಂದಿಗಳ ನಿಯೋಜನೆ, ಹೊರಗುತ್ತಿಗೆಗೆ ತಡೆ, ವೃತ್ತಿ ಪದೋನ್ನತಿ ಯೋಜನೆಗಳ ಪರಾಮರ್ಶೆ, ವೈದ್ಯಕೀಯ ವೆಚ್ಚ ಮರುಪಾವತಿಯಲ್ಲಿ ಸುಧಾರಣೆ ಸೇರಿದಂತೆ ನಮ್ಮ 16 ಬೇಡಿಕೆಗಳನ್ನು ಈಡೇರಿಸುವುದಕ್ಕೆ ಸಂಬಂಧಿಸಿದಂತೆ ಖಚಿತ ಭರವಸೆ ಸಿಕ್ಕಿದೆ.

ಹೀಗಾಗಿ ಮೇ 25, 26ರಂದು ನಡೆಸಲು ಉದ್ದೇಶಿಸಿದ್ದ ಮುಷ್ಕರವನ್ನು ಸದ್ಯಕ್ಕೆ ಕೈಬಿಡಲು ನಿರ್ಧರಿಸಲಾಯಿತು,'' ಎಂದು ಒಕ್ಕೂಟದ ಬಂಗಾಳ ವೃತ್ತದ ಕಾರ್ಯದರ್ಶಿ ಸುದೀಪ್ ದತ್ತಾ ಸುದ್ದಿ ಸಂಸ್ಥೆಗಳಿಗೆ ತಿಳಿಸಿದ್ದಾರೆ.

ಟ್ವಿಶಾ ಶರ್ಮಾ ಪತಿ 7 ದಿನ ಪೊಲೀಸರ ವಶಕ್ಕೆ

ಭೋಪಾಲ್: ಮಾಡೆಲ್ ಹಾಗೂ ನಟಿ ಟ್ವಿಶಾ ಶರ್ಮಾ ಅನುಮಾನಾಸ್ಪದ ಸಾವಿನ ಪ್ರಕರಣದಲ್ಲಿ ಪತಿ ಹಾಗೂ ವಕೀಲ ಸಮರ್ಥ್ ಸಿಂಗ್‌ರನ್ನು ಪೊಲೀಸರು 7 ದಿನ ವಶಕ್ಕೆ ಪಡೆದಿದ್ದಾರೆ.

ಮೇ 21ರಂದು ಭೋಪಾಲ್ ಸೆಷನ್ಸ್ ನ್ಯಾಯಾಲಯವು ಸಮರ್ಥ್ ಸಿಂಗ್‌ನ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿ, ತಕ್ಷಣವೇ ಶರಣಾಗುವಂತೆ ಖಡಕ್ ಸೂಚನೆ ನೀಡಿತ್ತು. ಅದರಂತೆ ಶುಕ್ರವಾರ ಜಬ್ಬಲ್ಪುರದ ಸೆಷನ್ಸ್ ನ್ಯಾಯಾಲಯಕ್ಕೆ ಶರಣಾಗಲು ಬಂದಿದ್ದ ಸಮರ್ಥ್ ಸಿಂಗ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದರು.

ಮೆಡಿಕಲ್ ಪರೀಕ್ಷೆ ಮಾಡಿಸಿದ ಪೊಲೀಸರು ಬಳಿಕ ಕೋರ್ಟ್‌ಗೆ ಹಾಜರುಪಡಿಸಿದ್ದರು. ಈ ವೇಳೆ 14 ದಿನಗಳ ಕಸ್ಟಡಿಗೆ ಪೊಲೀಸರು ಮನವಿ ಮಾಡಿದರು. ಆದರೆ, ಕೋರ್ಟ್ 7 ದಿನ ಪೊಲೀಸ್ ಕಸ್ಟಡಿಗೆ ನೀಡಿದೆ.

ಸ್ವಯಂ ಪ್ರೇರಿತ ದೂರು ದಾಖಲಿಸಿದ ಸುಪ್ರೀಂ ಕೋರ್ಟ್
ಮೇ 25ಕ್ಕೆ ವಿಚಾರಣೆ

ಇದೇ ವೇಳೆ ಸಮರ್ಥ್ ಪಾಸ್‌ಪೋರ್ಟ್ ಅನ್ನು ಕೋರ್ಟ್‌ಗೆ ಒಪ್ಪಿಸಿದ್ದಾರೆ.

ಇನ್ನು, ಸಿಬಿಐ ತನಿಖೆಯೇ ನಮಗೆ ಆಶಾಕಿರಣ. ನನ್ನ ಮಗಳ ಸಾವಿಗೆ ನ್ಯಾಯಸಿಗಬೇಕು ಅಂತ ಟ್ವಿಶಾ ಪೋಷಕರು ಆಗ್ರಹಿಸಿದ್ದಾರೆ. ಕೋರ್ಟ್ 2ನೇ ಬಾರಿ ಮರಣೋತ್ತರ ಪರೀಕ್ಷೆಗೆ ಡೆಲ್ಲಿ ಏಮ್ಸ್‌ನಿಂದ ನಾಲ್ವರು ವೈದ್ಯರನ್ನು ನಿಯೋಜಿಸಿದ್ದು, ಶೀಘ್ರದಲ್ಲೇ ನಡೆಯಲಿದೆ. 33 ವರ್ಷದ ಟ್ವಿಶಾ ಶರ್ಮಾ ಮೇ 12ರಂದು ಭೋಪಾಲ್‌ನಲ್ಲಿರುವ ಪತಿಯ ಮನೆಯಲ್ಲಿ ಶವವಾಗಿ ಪತ್ತೆಯಾಗಿದ್ದರು.

ಹಂತಹಂತವಾಗಿ ಭಾರಿ ಏರಿಕೆ

ಹೊಸದಿಲ್ಲಿ: ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರುಗತಿಯಲ್ಲಿದೆ. ಈ ಸವಾಲನ್ನು ನಿಭಾಯಿಸುವ ಪ್ರಯತ್ನವಾಗಿ ಕೇವಲ 10 ದಿನಗಳಲ್ಲಿ 3 ಬಾರಿ ತೈಲ ಬೆಲೆ ಏರಿಕೆಯಾಗಿದೆ. ಸಿಎನ್‌ಜಿ ಬೆಲೆ ಕೂಡ ಶನಿವಾರ ಕೆ.ಜಿಗೆ 1 ರೂ. ಏರಿಕೆಯಾಗಿದ್ದು, ತಿಂಗಳಲ್ಲಿ ಒಟ್ಟು 4 ರೂ. ಹೆಚ್ಚಳವಾಗಿದೆ.

ಚಿಲ್ಲರೆ ಇಂಧನ ದರಗಳಲ್ಲಿ ದೀರ್ಘ ಕಾಲ ಸ್ಥಿರತೆಯನ್ನು ಕಾಯ್ದುಕೊಳ್ಳಲಾಗಿತ್ತು. ಆದರೆ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಹೆಚ್ಚಿದ ಬೆಲೆ ಹಾಗೂ ರೂಪಾಯಿ ಮೌಲ್ಯದಲ್ಲಿ ನಿರಂತರ ಕುಸಿತದಿಂದ ತೈಲ ಧಾರಣೆ ಏರಿದೆ.

ಹಲವು ಖಾಸಗಿ ಇಂಧನ ಚಿಲ್ಲರೆ ಮಾರಾಟ ಕಂಪನಿಗಳು ದರಗಳನ್ನು ಹೆಚ್ಚಿಸಿವೆ. ಶೇ.90 ರಷ್ಟು ಇಂಧನ ಮಾರುಕಟ್ಟೆಯನ್ನು ಸರಕಾರಿ ಸ್ವಾಮ್ಯದ ಐಒಸಿ, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ನಿಯಂತ್ರಿಸುತ್ತವೆ.

ರಷ್ಯಾ ಅವಲಂಬನೆ

ಹರ್ಮುಜ್ ಜಲಸಂಧಿ ನಿರ್ಬಂಧದಿಂದ ತೈಲ ಸರಬರಾಜು ವ್ಯತ್ಯಯಗೊಂಡಿದೆ. ದೇಶೀಯ ತೈಲ ಬೇಡಿಕೆಯನ್ನು ಪೂರೈಸಲು ಭಾರತ ಮತ್ತೆ ರಷ್ಯಾವನ್ನು ಅವಲಂಬಿಸಿದೆ. ಈ ನಡುವೆ, ಭಾರತ ಪ್ರವಾಸದಲ್ಲಿರುವ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ, ''ಭಾರತ ಎಷ್ಟು ಇಂಧನ ಖರೀದಿಸಬಹುದೋ ಅಷ್ಟನ್ನು ನಾವು ಮಾರಾಟ ಮಾಡಲು ಸಿದ್ಧವಾಗಿದ್ದೇವೆ,'' ಎಂದಿದ್ದಾರೆ.

ಪೂರೈಕೆ ತೊಡಕುಗಳಿಂದ ಹೆಚ್ಚುತ್ತಿರುವ ಸಾಗಾಟ ವೆಚ್ಚದಿಂದ ಕಂಗಾಲಾಗಿರುವ ದೇಶದ ತೈಲ ಸಂಸ್ಕರಣಾಗಾರಗಳು ತಮ್ಮ ಪೂರೈಕೆ ಸರಪಳಿಯನ್ನು ಆಮೂಲಾಗ್ರವಾಗಿ ಬದಲಾಯಿಸಿಕೊಳ್ಳಲು ಸಜ್ಜಾಗಿವೆ. ಅಮೆರಿಕದೊಂದಿಗೆ ಮಾತುಕತೆ ಪ್ರಕ್ರಿಯೆ ನಡೆಯುತ್ತಿರುವಾಗಲೇ ವೆನೆಜುವೆಲಾ ಭಾರತಕ್ಕೆ ಮೂರನೇ ಅತಿದೊಡ್ಡ ಕಚ್ಚಾ ತೈಲ ಪೂರೈಕೆದಾರ ರಾಷ್ಟ್ರವಾಗಿ ಹೊರಹೊಮ್ಮಿದೆ. ಮಧ್ಯಪ್ರಾಚ್ಯದ ತೈಲಕ್ಕೆ ಪರ್ಯಾಯವಾಗಿ ವೆನೆಜುವೆಲಾದ ಹೆವಿ ಕ್ರೂಡ್ ಅನ್ನು ಅಮೆರಿಕ ಸಕ್ರಿಯವಾಗಿ ಉತ್ತೇಜಿಸುತ್ತಿದ್ದು, ಜಾಗತಿಕ ಇಂಧನ ಸರಪಳಿಯನ್ನು ಮರುರೂಪಿಸಲು ಹಾಗೂ ಇರಾನ್‌ನ ಆರ್ಥಿಕ ಪ್ರಭಾವವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದೆ.



ಯಾವಾಗ ಎಷ್ಟು ಜಿಗಿತ?

ದಿನ	ಪೆಟ್ರೋಲ್	ಡೀಸೆಲ್
ಮೇ 15	3 ರೂ.	3 ರೂ.
ಮೇ 19	90 ಪೈಸೆ	90 ಪೈಸೆ
ಮೇ 23	87 ಪೈಸೆ	91 ಪೈಸೆ
ಒಟ್ಟು	4.77 ರೂ.	4.81 ರೂ.

ರಾಜ್ಯಗಳ ಸ್ಥಳೀಯ ತೆರಿಗೆ ಸೇರಿದರೆ 5 ರೂ. ಹೆಚ್ಚಳ

ಬಿಂದುವಿನಿಂದ ಜೀರಾ ಪಾಪ್, ಲೆಮೆನ್ ಜೆಸ್ಟ್ ಬಿಡುಗಡೆ

ಬೆಂಗಳೂರು: ಬಿಂದು ಸಂಸ್ಥೆ ಇವನ್ 8 (ಇವಿಎನ್8) ಎನ್ನುವ ನವೀನ ಅನ್ನು ವಿಭಾಗದಲ್ಲಿ 'ಜೀರಾ ಪಾಪ್' ಹಾಗೂ 'ಲೆಮೆನ್ ಜೆಸ್ಟ್' ಎನ್ನುವ ಪೇಯಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇವಿಎನ್8 ಎಂದರೆ ಆರೋಗ್ಯಕ್ಕೆ ಬೇಕಾದ 8 ಅಂಶಗಳು. ಈ ಪೇಯಗಳು ಎಲ್ಲವನ್ನೂ ಒಳಗೊಂಡಿವೆ. ಇವುಗಳ ವಿಶೇಷವೆಂದರೆ ಯಾವುದೇ ಕೃತಕ ಸಕ್ಕರೆ ಬಳಕೆಯಾಗಿಲ್ಲ, ಸಂಪೂರ್ಣ ಸಕ್ಕರೆ ರಹಿತ. ಇದರಲ್ಲಿ ಪ್ರೊಬಯೋಟಿಕ್ ಸೇರಿಸಲಾಗಿದೆ. ''ಜೀರಾ ಪಾಪ್ ಹಾಗೂ ಲೆಮೆನ್ ಜೆಸ್ಟ್ ಜೀರ್ಣಕ್ರಿಯೆ ಮತ್ತು ಆರೋಗ್ಯಕ್ಕೆ ಬಲ ನೀಡುತ್ತದೆ. ಕರುಳಿನ ಸಮತೋಲನವನ್ನು ಕಾಪಾಡುತ್ತದೆ. ಈ ಎರಡೂ ಪೇಯಗಳು 250 ಎಂಎಲ್‌ನಲ್ಲಿ 50 ರೂ.ಗೆ ಲಭ್ಯವಿರುತ್ತದೆ,'' ಎಂದು ಬಿಂದು ಸಮೂಹ ಸಂಸ್ಥೆ ಕಾರ್ಯನಿರ್ವಾಹಕ ನಿರ್ದೇಶಕಿ ರಂಜಿತಾ ಶಂಕರ್ ತಿಳಿಸಿದ್ದಾರೆ.

ಮಂಡ್ಯ: ಮೂರು ವರ್ಷದಲ್ಲಿ 300 ಜನ ನೀರುಪಾಲು

■ **ನವೀನ್** ಮಂಡ್ಯ
naveena.channappa@timesofindia.com

ಬಿರು ಬಿಸಿಲಿಗೆ ದೇಹ ತಂಪಾಗಿಸಲು ನೀರಿನ ತಾಣಗಳತ್ತ ಆಕರ್ಷಣೆಗೊಳ್ಳುವುದು ಸಹಜ. ಆದರೆ, ಈ ಪ್ರಯತ್ನವೇ ಪ್ರಾಣಕ್ಕೆ ಎರವಾಗುತ್ತಿದೆ. ಕಳೆದ ಏಳೂವರೆ ವರ್ಷಗಳಲ್ಲಿ ಜಿಲ್ಲೆಯಲ್ಲಿ ಬರೋಬ್ಬರಿ 1101 ಮಂದಿ ಹಾಗೂ ಕಳೆದ ಮೂರು ವರ್ಷಗಳಲ್ಲಿ 361 ಜನರು ನೀರಿನಲ್ಲಿ ಮುಳುಗಿ ಪ್ರಾಣ ಕಳೆದುಕೊಂಡಿದ್ದಾರೆ.

ಒಂದೆಡೆ ನಾಲೆಗಳು, ಕೆರೆಗಳ ಏರಿಗೆ ತಡೆಗೋಡೆ ಇಲ್ಲದ ಪರಿಣಾಮ ವೇಗವಾಗಿ ಸಂಚರಿಸುವ ವಾಹನಗಳು ನಾಲೆ/ಕೆರೆಗಳಿಗೆ ಬಿದ್ದು ಜನರು ಸಾವಿಗೀಡಾಗುತ್ತಿದ್ದಾರೆ.

ವೀಕೆಂಡ್ ವೇಳೆ ನೀರಿನ ಪ್ರವಾಸಿ ತಾಣಗಳಲ್ಲಿ ಪೊಲೀಸರನ್ನು ನಿಯೋಜಿಸಲಾಗುತ್ತಿದೆ. ನಾಲೆಗಳು, ಕೆರೆ ಏರಿಗಳು, ಕೃಷಿ ಹೊಂಡಗಳ ಸುತ್ತ ತಡೆಗೋಡೆ ನಿರ್ಮಿಸುವಂತೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು.
-ಡಾ.ವಿ.ಜೆ.ಶೋಭಾರಾಣಿ ಎಸ್ಪಿ, ಮಂಡ್ಯ

ಮತ್ತೊಂದೆಡೆ ಮೋಜು-ಮಸ್ತಿಗಾಗಿ ನೀರಿಗಿಳಿದು ಮೃತಪಡುತ್ತಿದ್ದಾರೆ. ಅದರಲ್ಲೂ ಬೇಸಿಗೆ ಬಂತೆಂದರೆ ಬಿಸಿಲಿನ ಬೇಗೆಯಿಂದ ಮೈಮನ ತಣಿಸಿಕೊಳ್ಳಲು ನೀರಿಗಿಳಿದು ಜಲಕ್ರೀಡೆಯಾಡುವುದು ಸಾಮಾನ್ಯ. ಕೆಲವರು ಮದ್ಯಪಾನ ಮಾಡಿ ಮೋಜು-ಮಸ್ತಿ ಮಾಡುತ್ತಾ ಮೈಮರೆಯುವವರು ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ತಿರುಗಿ ಬಾರದ ತಾಣ ಸೇರುತ್ತಾರೆ.

ಮಳವಳ್ಳಿ ತಾಲೂಕಿನ ಮುತ್ತತ್ತಿ, ಶ್ರೀರಂಗಪಟ್ಟಣ ತಾಲೂಕು ಬಲಮುರಿ, ಎಡಮುರಿಯಲ್ಲಿನ ಕಾವೇರಿ ನದಿ, ಕೆಆರ್ ಎಸ್ ಹಿನ್ನೀರಿನಲ್ಲಿ ಮುಳುಗಿ ಸಾಯುವವರ ಸಂಖ್ಯೆಯೇ ಹೆಚ್ಚಾಗಿದೆ. ಈ ಮೂರು ಪ್ರದೇಶಗಳಲ್ಲಿ ಸಾವು ಸಂಭವಿಸಿರುವ ಬಹುತೇಕ ಪ್ರಕರಣಗಳು ವೀಕೆಂಡ್‌ಗಳಲ್ಲೇ ನಡೆದಿವೆ. ಅದರಲ್ಲೂ ವಿದ್ಯಾರ್ಥಿಗಳು, ಸಾಫ್ಟ್‌ವೇರ್ ಎಂಜಿನಿಯರ್‌ಗಳೇ ಹೆಚ್ಚಾಗಿ ಸಾವಿಗೀಡಾಗಿದ್ದಾರೆ.

ಕಳೆದ ಏಳೂವರೆ ವರ್ಷಗಳಲ್ಲಿ ಮುತ್ತತ್ತಿಯಲ್ಲಿ 30, ಬಲಮುರಿಯಲ್ಲಿ 35ಕ್ಕೂ ಹೆಚ್ಚು ಮಂದಿ ಅಸುನೀಗಿದ್ದಾರೆ. ಈ ಪ್ರದೇಶಗಳಲ್ಲಿ ನದಿ ನೀರಿಗಿಳಿಯದಂತೆ ಪೊಲೀಸರು, ಸ್ಥಳೀಯರು ಎಷ್ಟೇ ಎಚ್ಚರಿಕೆ ನೀಡಿದರೂ ಕಾಳಜಿ ವಹಿಸದ ಯುವಕರು ಅನಾಹುತಗಳಿಗೆ ಕಾರಣರಾಗುತ್ತಿದ್ದಾರೆ.

ಬಹುತೇಕರು ಈಜು ಬಾರದೆ ಪ್ರಾಣ ಕಳೆದುಕೊಂಡಿದ್ದಾರೆ. ವಿ.ಸಿ.ನಾಲೆಯಲ್ಲಿ ವಾಹನಗಳು ಬಿದ್ದು ಪ್ರಯಾಣಿಕರು ಸಾವನ್ನಪ್ಪುತ್ತಿರುವ ಪ್ರಕರಣಗಳೂ ಹೆಚ್ಚಿವೆ.

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಕೇಂದ್ರ ಕಛೇರಿ, ಹುಬ್ಬಳ್ಳಿ ಶಿಸ್ತು ಶಾಖೆ, ಗೋಕುಲ ರಸ್ತೆ, ಹುಬ್ಬಳ್ಳಿ.

ಸಂ: ವಾಕರಸಾ/ಕೇಕ/ಹು/ಶಿಸ್ತು/ಡಿ1/05(26)/304 ದಿನಾಂಕ: 21-05-2026

ಪತ್ರಿಕಾ ಪ್ರಕಟಣೆ

ಶ್ರೀ ಆರ್. ಕೇಶವಮೂರ್ತಿ, ಸಹಾಯಕ ಉಗ್ರಾಣಾಧಿಕಾರಿ ನಿಯಮ - 17/1 ರಡಿಯಲ್ಲಿ ಸಹಾಯಕ ಅಂಕಿ-ಸಂಖ್ಯಾಧಿಕಾರಿ, ಚಿಕ್ಕೋಡಿ ವಿಭಾಗ ಆದ ನೀವು ದಿನಾಂಕ: **19-09-2025 ರಿಂದ** ಮುಂದುವರೆದು ಇಂದಿನವರೆಗೆ ಕರ್ತವ್ಯಕ್ಕೆ ಅನಧೀಕೃತವಾಗಿ ಗೈರು ಹಾಜರಿಯಾಗಿರುವುದರಿಂದ ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ, ಚಿಕ್ಕೋಡಿ ವಿಭಾಗ ರವರು ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿ ಸಂ. **ವಾಕರಸಾ/ಚಿವಿ/ಆಆಪ್ತ-389/25-26 ದಿನಾಂಕ: 03-12-2025** ರಡಿಯಲ್ಲಿ ಹಿಂಬರಹವನ್ನು ಕಳುಹಿಸಿದ್ದು ನೀವು ಅದನ್ನು ಸ್ವೀಕರಿಸಿದ್ದರೂ ಸಹ ನೀವು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ತದ ನಂತರ ಹಲವಾರು ಬಾರಿ ನೀವು ನೀಡಿದ ವಿಳಾಸಗಳಿಗೆ ಕರೆಪತ್ರ ಜಾರಿಗೊಳಿಸಲು ಸಂಪರ್ಕಿಸಲು ಪ್ರಯತ್ನಿಸಿದರೂ ಸಹ ಸದರಿ ವಿಳಾಸಗಳಲ್ಲಿ ನೀವು ಲಭ್ಯವಿರುವುದಿಲ್ಲ. ಆದ್ದರಿಂದ ಕರೆಪತ್ರ ಮತ್ತು ಆಪಾದನಾ ಪಟ್ಟಿಗಳನ್ನು ಭದ್ರತಾ ಸಿಬ್ಬಂದಿಯ ಮೂಲಕ ಜಾರಿಗೊಳಿಸಲು ಮಾಡಿದ ಪ್ರಯತ್ನಗಳು ವಿಫಲವಾಗಿರುತ್ತವೆ.

ಈ ಹಿನ್ನಲೆಯಲ್ಲಿ ನಿಮಗೆ ಈ ಪತ್ರಿಕಾ ಪ್ರಕಟಣೆಯ ಮೂಲಕ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿದ್ದು, ನಿಮ್ಮ ಮೇಲೆ ಈ ಕೆಳಕಂಡಂತೆ ಆಪಾದನೆಗಳನ್ನು ಮಾಡಲಾಗಿದೆ.

ನೀವು ದಿನಾಂಕ: 19-09-2025 ರಿಂದ ಮುಂದುವರೆದು ಕರ್ತವ್ಯಕ್ಕೆ ಅನಧೀಕೃತವಾಗಿ ಗೈರು ಹಾಜರಿರುವುದರ ಕುರಿತಂತೆ ಕ.ರಾ.ರ.ಸಾ. ಸಂಸ್ಥೆ ನೌಕರರ (ನಡತೆ ಮತ್ತು ಶಿಸ್ತು) ನಿಯಮಾವಳಿಗಳು 1971 ರ ವಿನಿಯಮ 19 (2) ಮತ್ತು ವಾಕರಸಾ ಸಂಸ್ಥೆಯಿಂದ ಹೊರಡಿಸಿರುವ ಪತ್ರ ಸಂ. ವಾಕರಸಾ/ಕೇಕ/ಹು/ಸಿಬ್ಬಂದಿ/ಆಡಳಿತ/ಎ3/1402 ದಿನಾಂಕ: 21-10-2023 ರಡಿಯಲ್ಲಿನ ಸುತ್ತೋಲೆ ಸಂ: 105 ರ ಮೇರೆಗೆ ಪ್ರದತ್ತವಾಗಿರುವ ಅಧಿಕಾರದನ್ವಯ ಕ.ರಾ.ರ.ಸಾ. ಸಂಸ್ಥೆಯ ನೌಕರರ (ನಡತೆ ಮತ್ತು ಶಿಸ್ತು) ನಿಯಮಾವಳಿ 1971 ರ ನಿಬಂಧನೆ 23 ರಡಿಯಲ್ಲಿ ನಿಮ್ಮ ಮೇಲೆ ಶಿಸ್ತು ಕ್ರಮ ಜರುಗಿಸಲು ಉದ್ದೇಶಿಸಿದ್ದು, ನೀವು ಈ ಕೆಳಕಂಡ ಕರ್ತವ್ಯಲೋಪಗಳನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

1) ಚಿಕ್ಕೋಡಿ ವಿಭಾಗದ ಸಹಾಯಕ ಅಂಕಿ-ಸಂಖ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ನೀವು ದಿನಾಂಕ: 19-09-2025 ರಿಂದ ಇಲ್ಲಿಯವರೆಗೂ ಮತ್ತು ಮುಂದುವರೆದ ಅವಧಿಗೆ ಕರ್ತವ್ಯಕ್ಕೆ ಅನಧೀಕೃತವಾಗಿ ಗೈರು ಹಾಜರಾಗಿರುತ್ತೀರಿ.
2) ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ, ಚಿಕ್ಕೋಡಿ ವಿಭಾಗ ರವರು ಕರೆ ಪತ್ರ ಸ್ವೀಕರಿಸಿದ ತಕ್ಷಣ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿ ಸಂ. ವಾಕರಸಾ/ಚಿವಿ/ಆಆಪ್ತ-346/25-26 ದಿನಾಂಕ: 12/11/2025 ರಡಿಯಲ್ಲಿ ಅಂಚೆ ಮೂಲಕ ಕಳುಹಿಸಿದ ಹಿಂಬರಹವನ್ನು ಸ್ವೀಕರಿಸಿದ್ದಾಗ್ಯೂ ಕೂಡ ನೀವು ಇಂದಿನವರೆಗೂ ಕರ್ತವ್ಯಕ್ಕೆ ಹಾಜರಾಗದೆ ಮೇಲಾಧಿಕಾರಿಗಳ ಆದೇಶವನ್ನು ಉಲ್ಲಂಘಿಸಿ ಸಂಸ್ಥೆಯ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತೀರಿ.
3) ನೀವು ದಿನಾಂಕ: 18-09-2025 ರಿಂದ 25-1-2025 ರವರೆಗೆ ರಜೆ ಕೋರಿ ಕೊರಿಯರ್ ಮೂಲಕ ಸಲ್ಲಿಸಿದ ರಜೆ ಅರ್ಜಿಯು ದಿನಾಂಕ: 10-11-2025 ರಂದು ಚಿಕ್ಕೋಡಿ ವಿಭಾಗದಲ್ಲಿ ಸ್ವೀಕೃತಗೊಂಡಿದ್ದು, ಅದನ್ನು ತಿರಸ್ಕರಿಸಿದ ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ, ಚಿಕ್ಕೋಡಿ ವಿಭಾಗ ರವರು ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿ ಸಂ. ವಾಕರಸಾ/ಚಿವಿ/ಆಆಪ್ತ-389/25-26 ದಿನಾಂಕ: 03-12-2025 ರಡಿಯಲ್ಲಿ 2ನೇ ಹಿಂಬರಹವನ್ನು ಕಳುಹಿಸಿದ್ದು, ನೀವು ಸಂಸ್ಥೆಗೆ ನೀಡಿದ ವಿಳಾಸದಲ್ಲಿ ಲಭ್ಯವಿಲ್ಲದೆ ಹಿಂಬರಹ ಸ್ವೀಕೃತವಾಗದೆ ಇರುವಂತಾಗಲು ಕಾರಣರಾಗಿರುತ್ತೀರಿ.
4) ಈವರೆಗಿನ ನಿಮ್ಮ 244 ದಿನಗಳ ಅನಧೀಕೃತ ಗೈರು ಹಾಜರಾತಿಯಿಂದಾಗಿ ವಿಭಾಗದ ಅಂಕಿ-ಸಂಖ್ಯಾ ಶಾಖೆಯಲ್ಲಿ ದೈನಂದಿನ ಕಾರ್ಯ ಮತ್ತು ಮಾಸಿಕ ತಃಖ್ತೆಗಳ ನಿರ್ವಹಣೆಯಲ್ಲಿ ತೀವ್ರ ತೊಂದರೆ ಉಂಟಾಗಲು ಕಾರಣರಾಗಿರುತ್ತೀರಿ.
5) ಸುಗಮ ಆಡಳಿತ ನಿರ್ವಹಣೆಗಾಗಿ ಸಂಸ್ಥೆಯು ಅಂಕಿ-ಸಂಖ್ಯಾಧಿಕಾರಿರವರಿಗೆ ಒದಗಿಸಿರುವ ಮೊಬೈಲ್ ಸಂಖ್ಯೆ. 7760991985 ನ್ನು ನೀವು ಕರ್ತವ್ಯಕ್ಕೆ ಹಾಜರಾಗದ ಸಂದರ್ಭದಲ್ಲಿ ನಿಮ್ಮ ಅಧೀನ ಮೇಲ್ವಿಚಾರಕ ಸಿಬ್ಬಂದಿಗೆ ಹಸ್ತಾಂತರಿಸದೇ ನಿಮ್ಮ ಬಳಿಯೇ ಇರಿಸಿಕೊಂಡು ಅಂಕಿ ಸಂಖ್ಯಾ ಶಾಖೆಯ ಸುಗಮ ನಿರ್ವಹಣೆಯಲ್ಲಿ ಅಡೆ-ತಡೆ ಉಂಟಾಗಲು ಕಾರಣರಾಗಿರುವುದಲ್ಲದೇ ಸದರಿ ಮೊಬೈಲ್‌ನ್ನು ಹಿಂದಿರುಗಿಸುವಂತೆ ಅನೇಕ ಬಾರಿ ದೂರವಾಣಿ ಮೂಲಕ ಕರೆ ಮಾಡಿ ತಿಳಿಸಿದ್ದರೂ ಈ ವರೆಗೆ ಅದನ್ನು ಹಿಂದಿರುಗಿಸಿರುವುದಿಲ್ಲ. ಮತ್ತು ದಿನಾಂಕ: 10-01-2026 ರಿಂದ ಸದರಿ ಮೊಬೈಲ್‌ನ್ನು ಸ್ವಿಚ್‌ಆಫ್ ಮಾಡಿ ಸಂಸ್ಥೆಯ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತೀರಿ.
6) ನೀವು ಜವಾಬ್ದಾರಿಯುತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನಿಮ್ಮ ಹುದ್ದೆಯ ಜವಾಬ್ದಾರಿಯನ್ನರಿತು ಕಾರ್ಯ ನಿರ್ವಹಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದು ಕ.ರಾ.ರ.ಸಾ. ಸಂಸ್ಥೆ ನೌಕರರ (ನಡತೆ ಮತ್ತು ಶಿಸ್ತು) ನಿಯಮಾವಳಿಗಳು 1971 ರ ನಿಬಂಧನೆ 3 (1) (i) (ii), (iii) ರ ಉಲ್ಲಂಘನೆ ಮಾಡಿರುತ್ತೀರಿ.

ಈ ತಕ್ಷಣವೇ ಕರ್ತವ್ಯಕ್ಕೆ ಹಾಜರಾಗಲು ಮತ್ತು ಮೇಲ್ಕಂಡ ಆರೋಪಗಳಿಗೆ ನಿಮ್ಮ ಸಂರಕ್ಷಣೆಯ ಕುರಿತಾದ ವಿವರಣೆಯನ್ನು **07 (ಏಳು) ದಿನಗಳ** ಅವಧಿಯಲ್ಲಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ವಿವರಣೆ ಏನೂ ಇರುವುದಿಲ್ಲವೆಂದೂ, ನಿಮ್ಮ ವಿರುದ್ಧ ಕ.ರಾ.ರ.ಸಾ. ಸಂಸ್ಥೆ ನೌಕರರ (ನಡತೆ ಮತ್ತು ಶಿಸ್ತು) ನಿಯಮಾವಳಿ, 1971 ರ ನಿಬಂಧನೆ -23 ರಡಿಯಲ್ಲಿ ವಿಚಾರಣೆ ನಡೆಸುವುದು ಕಾರ್ಯಸಾಧ್ಯವಲ್ಲವೆಂದೂ ಪರಿಗಣಿಸಿ ಕರಾರಸಾಸಂಸ್ಥೆ ನೌಕರರ (ನಡತೆ ಮತ್ತು ಶಿಸ್ತು) ನಿಯಮಾವಳಿ, 1971 ರ ನಿಬಂಧನೆ -28 (ii) ರನ್ವಯ ಮುಂದಿನ ಆದೇಶ ಹೊರಡಿಸಲಾಗುವುದು

ಸಹಿ/- ವ್ಯವಸ್ಥಾಪಕ ನಿರ್ದೇಶಕರು/ಶಿಸ್ತುಪಾಲನಾಧಿಕಾರಿ
ವಾ.ಕ.ರ.ಸಾ. ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ.

ವಾಸಾಸಂಇ/ಧಾರವಾಡ/221/ಅಡ್ವರ್ಟೋರ್/2026-27

ತೈವಾನ್ ಗಡಿಯಲ್ಲಿ ಚೀನಾ ಯುದ್ಧ ನೌಕೆಗಳ ಜಮಾವಣೆ

ತೈಪೆ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇತ್ತೀಚೆಗೆ ಚೀನಾಗೆ ಭೇಟಿ ನೀಡಿ, ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಚರ್ಚೆ ನಡೆಸಿ ಮರಳಿದ ಬೆನ್ನಿಗೇ ತೈವಾನ್ ಸುತ್ತಮುತ್ತಲಿನ ಸಮುದ್ರ ಪ್ರದೇಶದಲ್ಲಿ ಚೀನಾ ತನ್ನ ಮಿಲಿಟರಿ ಚಟುವಟಿಕೆಗಳನ್ನು ತೀವ್ರಗೊಳಿಸಿದೆ.

ದಕ್ಷಿಣ ಚೀನಾ ಸಮುದ್ರ ಮತ್ತು ಪಶ್ಚಿಮ ಪೆಸಿಫಿಕ್ ಮಹಾಸಾಗರದವರೆಗಿನ ಪ್ರಾದೇಶಿಕ ಜಲಪ್ರದೇಶದಲ್ಲಿ ಚೀನಾ ತನ್ನ ನೌಕಾಪಡೆ, ಕರಾವಳಿ ರಕ್ಷಣಾ ಪಡೆ ಸೇರಿದಂತೆ 100 ಕ್ಕೂ ಹೆಚ್ಚು ಅತ್ಯಾಧುನಿಕ ಯುದ್ಧ ನೌಕೆಗಳನ್ನು ನಿಯೋಜಿಸಿದೆ ಎಂದು ತೈವಾನ್‌ನ ರಾಷ್ಟ್ರೀಯ ಭದ್ರತಾ ಮಂಡಳಿ ಮುಖ್ಯಸ್ಥ ಜೋಸೆಫ್ ವು ಹೇಳಿದ್ದಾರೆ.

''ಕಳೆದ ಕೆಲವು ದಿನಗಳಿಂದ ಚೀನಾ ಈ ಭಾರೀ ಪ್ರಮಾಣದ ಸೇನಾ ಜಮಾವಣೆಯನ್ನು ಮಾಡುತ್ತಿದೆ,'' ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ. ಈ ಕುರಿತು 'ಎಕ್ಸ್'ನಲ್ಲಿ ತೀವ್ರ ಆಕ್ರೋಶ ಹೊರಹಾಕಿರುವ ಜೋಸೆಫ್ ವು, ''ಪ್ರಸ್ತುತ ಜಗತ್ತಿನ ಈ ಭಾಗದಲ್ಲಿ ಪ್ರಾದೇಶಿಕ ಶಾಂತಿ, ಸ್ಥಿರತೆ ಹಾಗೂ ಯಥಾಸ್ಥಿತಿಯನ್ನು ಕದಡುತ್ತಿರುವ ಏಕೈಕ ಮತ್ತು ದೊಡ್ಡ ಸಮಸ್ಯೆ ಎಂದರೆ ಅದು ಚೀನಾ ಮಾತ್ರ,'' ಎಂದು ಕಟುವಾಗಿ ಟೀಕಿಸಿದ್ದಾರೆ.

ತೈವಾನ್ ದೇಶವನ್ನು ತನ್ನದೇ ಭೂಪ್ರದೇಶದ ಭಾಗ ಎಂದು ದೀರ್ಘಕಾಲದಿಂದ ವಾದಿಸುತ್ತಿರುವ ಚೀನಾ, ಅಗತ್ಯ ಬಿದ್ದರೆ ಬಲಪ್ರಯೋಗದ ಮೂಲಕ ವಶಕ್ಕೆ ಪಡೆದುಕೊಳ್ಳುವುದಾಗಿ ಬೆದರಿಕೆ ಹಾಕಿದೆ.

ನೈಋತ್ಯ ರೈಲ್ವೆ
ಇ-ಟೆಂಡರ್ ಪ್ರಕಟಣೆ ಸಂ. ಹೆಚ್-ಜಿಎಸ್-ಯುಬಿಎಲ್-02-2026-27 ದಿನಾಂಕ : 19-05-2026
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕಾಮಗಾರಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ವಿಜಯನಗರ ರೈಲ್ವೆ ನಿಲ್ದಾಣದಲ್ಲಿ ಆರ್&ಡಿ ಸೌಲಭ್ಯಗಳು ಮತ್ತು ಸಂಬಂಧಿತ ಕಾಮಗಾರಿಗಳೊಂದಿಗೆ ಎರಡು ಹೆಚ್ಚುವರಿ ಲೂಪ್‌ಲೈನ್‌ಗಳನ್ನು ಒದಗಿಸುವುದರೊಂದಿಗೆ ಸಂಬಂಧಿಸಿದ ವಿದ್ಯುತ್ ಸಾಮಾನ್ಯ, ವಿದ್ಯುತ್ ಟ್ರ್ಯಾಕ್ಷನ್ ಮತ್ತು ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಕಾಮಗಾರಿಗಳು (ಸಂಯೋಜಿತ ಕಾಮಗಾರಿ).	ರೂ. 11,54,88,289/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22-06-2026 ರಂದು 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಮುಖ್ಯ ಯೋಜನಾ ವ್ಯವಸ್ಥಾಪಕರು ಗತಿ ಶಕ್ತಿ / ಹುಬ್ಬಳ್ಳಿ
ಪಿಯುಬಿ/154/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026-27
ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway-SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. ಪ್ರಾಜೆಕ್ಟ್-ಎಸ್‌ಡಬ್ಲ್ಯುಆರ್-ಟಿಎಲ್-ಟಿಹೆಚ್‌ಎನ್-30ಎಂವಿಎ ದಿನಾಂಕ : 20-05-2026
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕಾಮಗಾರಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ವಿಭಾಗೀಯ ರೈಲ್ವೆ ವ್ಯವಸ್ಥಾಪಕರು, ಟ್ರ್ಯಾಕ್ಷನ್ ಮತ್ತು ಡಿಸ್ಟ್ರಿಬ್ಯೂಷನ್, ನೈಋತ್ಯ ರೈಲ್ವೆ, ಮೈಸೂರು ವಿಭಾಗ ರವರ ಪರವಾಗಿ ತೊಳಹುಣಸೆ ರೈಲ್ವೆ ನಿಲ್ದಾಣ ಆರ್‌ಟಿಎಸ್‌ಎಸ್ ನಲ್ಲಿ ರೈಲ್ವೆ ಟ್ರ್ಯಾಕ್ಷನ್ ಎಸ್/ಎಸ್ ಗಾಗಿ ಇಹೆಚ್‌ಟಿ ಆಧಾರದ ಮೇಲ 30ಎಂವಿಎ (ಸಂಪರ್ಕಿತ 5ಎಂವಿಎ ಒಳಗೊಂಡಂತೆ) ಪ್ರವಾಹದ ವಿದ್ಯುತ್ ಸರಬರಾಜನ್ನು ವ್ಯವಸ್ಥೆಗೊಳಿಸುವುದಕ್ಕಾಗಿ ಕೆಳಕಂಡ ಕಾಮಗಾರಿಗಳ ವಿನ್ಯಾಸ, ಸರಬರಾಜು, ನಿರ್ಮಾಣ, ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು : (1) 220/66 ಕೆವಿ ಎಸ್‌ಆರ್‌ಎಸ್ ದಾವಣಗೆರೆ ಉಪ-ಕೇಂದ್ರದಲ್ಲಿ 1 ಸಂಖ್ಯೆಯ ಹೆಚ್ಚುವರಿ ಮಾರ್ಗ ಟರ್ಮಿನಲ್ ಬೇ (2) 220/66ಕೆವಿ ಎಸ್‌ಆರ್‌ಎಸ್ ದಾವಣಗೆರೆ ಎಸ್/ಎಸ್ ದಿಂದ ತೊಳಹುಣಸೆ ಆರ್‌ಟಿಎಸ್‌ಎಸ್ ವರೆಗೆ 7.840 ಕಿಮೀ ಮಾರ್ಗ ಉದ್ದಕ್ಕಾಗಿ 66ಕೆವಿ 630ಚಮಿಮೀ ಸಿಂಗಲ್ ಸರ್ಕ್ಯೂಟ್ ಯುಜಿ ಕೇಬಲ್	ರೂ.45,33,49,959.29

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 12-06-2026 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಮುಕ್ತಾಯದ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.
ಉಪ ಮುಖ್ಯ ವಿದ್ಯುತ್ ಇಂಜಿನಿಯರ್ ಯೋಜನೆ / ಬೆಂಗಳೂರು
ಪಿಯುಬಿ/155/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026-27
ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway-SWR | SWRRLY | @SWRAILWAYHQ | @sw_railways

IN THE COURT OF THE LXXII ADDITIONAL CITY CIVIL JUDGE, MAYO HALL, AT BANGALORE. (CCH-73)
Hearing Date : 10/06/2026
P & SC No. 25028/2026
IN THE MATTER OF THE ESTATE OF LATE SESHADRI SRINIVASAN
PETITIONERS : 1. Mrs. VIJAYA SESHADRI W/o Late Mr. Seshadri Srinivasan, Aged about 67 years, **2. Mr. HARI SESHADRI,** S/o Late Mr. Seshadri Srinivasan, Aged about 43 Years, Represented by his Power of Attorney Holder Mrs. VIJAYA SESHADRI. **3. Mrs. VIDYA SESHADRI** D/o Late Mr. Seshadri Srinivasan, Aged about 40 Years, Represented by her Power of Attorney Holder Mrs. VIJAYA SESHADRI.
4. Mrs. VEENA SESHADRI, D/o Late Mr. Seshadri Srinivasan, Aged about 40 Years, Represented by her Power of Attorney Holder Mrs. VIJAYA SESHADRI, All are at No.3, Flat No.002, Shravanthi Raffle, 38th Main, 16th Cross, JP Nagar 6th Phase, Bengaluru-560078.
-V/s-
RESPONDENT : NIL
PUBLIC NOTICE
Notice is hereby given that; a Petition has been filed before this Court under Section 370 & 372 OF THE INDIAN SUCCESSION ACT for grant of Succession Certificate in favour of Petitioner No. 1 **Mrs. VIJAYA SESHADRI.** This case is posted **on 10/06/2026 at 11.00 A.M,** before the Hon'ble Court of LXXII Additional City Civil and Sessions Judge, Mayo Hall, Bengaluru **(CCH-73).** Any person/s claiming to have any interest may participate in the proceedings before the grant of Succession Certificate.
SCHEDULE
a) **HDFC Bank** Folio No. HB6094230, Certificate No.000016763 with Dist. Nos. 0014957901 to 0014957960 - **60 shares, in the name of Srinivasan Seshadri.**
b) **ULTRATECH CEMCO LTD** - Folio No. 70567466, Certificate No.00113671 with Dist. Nos. 034873620 to 034873639 - **20 shares in the name of S Seshadri.**
c) **ULTRATECH CEMCO LTD** - Folio No. S71659 Certificate No.00171199 with Dist. Nos. 038253122 to 038253167 - **46 shares in the name of S Seshadri.**
d) **LARSEN & TOUBRO LIMITED** - Folio No.S71659, Certificate No.00172363 with Dist. Nos. 010324666 to 010324723 - **58 shares in the name of S Seshadri.**
and
e) **LARSEN & TOUBRO LIMITED** - Folio No. 70567466 Certificate No. 00113679 with Dist. Nos. 006093066 to 006093090 **(25 Shares),** Certificate No.00260731 with Dist. Nos. 143949363 to 143949387 **(25 Shares),** Certificate No. 00376087 with Dist. Nos. 580023527 to 580023576 **(50 Shares) In the name of S Seshadri.**
Given under my hand and seal of the court on this 18th Day of May, 2026.
By order of the Court, Deputy Registrar, City Civil Court, Mayo Hall Unit, Bengaluru.
Advocates for Petitioners
Hitesh Kumar Jain, Advocate
HM LEGAL, No.24/10, 1st Floor, Haudin Road, Ulsoor, Bengaluru-560042. M. 9844372444
E : hmlegal@outlook.in

ರಸಗೊಬ್ಬರ ವಿತರಣೆಗೆ ಕೃಷಿ ಇಲಾಖೆ ಫ್ರೂಟ್ಸ್ ಐಡಿ ಆಧಾರಿತ ವಿತರಣೆ ವ್ಯವಸ್ಥೆ

ಅನಧಿಕೃತ ಸಾಗುವಳಿಗೆ ಗೊಬ್ಬರ ವಿತರಣೆ ಹೇಗೆ?

■ **ಸಂತೋಷ್ ಕಾಚಿನಕಟ್ಟೆ** ಶಿವಮೊಗ್ಗ
lakshmikanthakumar.boraiah@timesofindia.com

ರಸಗೊಬ್ಬರ ವಿತರಣೆಗೆ ಪ್ರಸಕ್ತ ಮುಂಗಾರು ಹಂಗಾಮಿನಿಂದ ರೈತರಿಗೆ ಫ್ರೂಟ್ಸ್ (ಎಫ್‌ಆರ್‌ಯುಐಟಿಎಸ್) ಐಡಿ ಆಧಾರಿತ ವ್ಯವಸ್ಥೆ ಜಾರಿಗೆ ತಂದಿರುವುದು ರಾಜ್ಯದೆಲ್ಲೆಡೆಯ ಅನಧಿಕೃತ ಸಾಗುವಳಿ ರೈತರಿಗೆ ಆತಂಕ ತಂದಿದೆ.

ಮಧ್ಯಪ್ರಾಚ್ಯ ಯುದ್ಧದ ಕಾರಣದಿಂದಾಗಿ ರಸಗೊಬ್ಬರಗಳ ಉತ್ಪಾದನೆ ಮತ್ತು ಪೂರೈಕೆ ಕಡಿಮೆಯಾಗಿದೆ. ಕಾಳಸಂತೆ ಮಾರಾಟವನ್ನು ತಪ್ಪಿಸಿ ನಿಜವಾದ ರೈತರಿಗೆ ರಸಗೊಬ್ಬರ ತಲುಪಬೇಕೆಂಬ ಉದ್ದೇಶದಿಂದ ಸರಕಾರ ಫ್ರೂಟ್ಸ್ ಐಡಿ ಆಧಾರಿತ ವಿತರಣೆ ವ್ಯವಸ್ಥೆ ಮಾಡಿಕೊಂಡಿದೆ. ಕಾಳಸಂತೆ ಮಾರಾಟ, ಕೃತಕ ಅಭಾವ ಸೃಷ್ಟಿ ಮತ್ತು ಯುರಿಯಾ ಬೇಕಾಬಿಟ್ಟಿ ಬಳಕೆಯನ್ನು ತಡೆಗಟ್ಟಲು ಇದು ಅತ್ಯುತ್ತಮ ಮಾರ್ಗ ಹೌದು. ಆದರೆ, ಅಧಿಕೃತ ಖಾತೆದಾರ ರೈತರಿಗೆ ಮಾತ್ರ ಫ್ರೂಟ್ಸ್ ಐಡಿ ಇದೆ. ರಾಜ್ಯದೆಲ್ಲೆಡೆ ಕಗ್ಗಂಟಾಗಿ ಉಳಿದಿರುವ ಅನಧಿಕೃತ ಸಾಗುವಳಿದಾರರಲ್ಲಿ ಫ್ರೂಟ್ಸ್ ಐಡಿ ಇಲ್ಲ, ಹಾಗಾದರೆ ಅನಧಿಕೃತ ಸಾಗುವಳಿದಾರರಿಗೆ ಗೊಬ್ಬರ ವಿತರಣೆ ಹೇಗೆ?

ರಾಜ್ಯದಲ್ಲಿ ಕಂದಾಯ ಭೂಮಿ ಸಾಗುವಳಿ ಮಾಡುತ್ತಿರುವ ಬಗರ್‌ಹುಕುಂ ಸಾಗುವಳಿದಾರರಲ್ಲದೆ ಗೋಮಾಳ, ಸೊಪ್ಪಿನಬೆಟ್ಟ, ಕಾನು, ಕುಮ್ಕಿ, ಬಾನೆ, ಗುಂಡುತೋಪು, ಮೀಸಲು ಅರಣ್ಯ, ವನ್ಯಜೀವಿ ವಲಯ, ಪರಿಭಾವಿತ ಅರಣ್ಯ ಮತ್ತು ಇತರೆ ಅರಣ್ಯ ಭೂಮಿ ಸಾಗುವಳಿ ಮಾಡುತ್ತಿರುವವರ ಬಳಿ ಫ್ರೂಟ್ಸ್ ಐಡಿ ಇಲ್ಲ. ರಾಜ್ಯದಲ್ಲಿ 30 ವರ್ಷಗಳಿಂದ ಈಚೆಗೆ 54 ಲಕ್ಷ ಎಕರೆ ಭೂಮಿಯನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ 9.25 ಲಕ್ಷ ರೈತರು ಅರ್ಜಿ ಹಾಕಿ ಸಾಗುವಳಿ ಹಕ್ಕುಪತ್ರಕ್ಕಾಗಿ ಕಾಯುತ್ತಿದ್ದಾರೆ.



ಹೆಚ್ಚಿನ ಸಂಖ್ಯೆಯಲ್ಲಿರುವ ಅನಧಿಕೃತ ಸಾಗುವಳಿದಾರರಿಗೆ ರಸಗೊಬ್ಬರ ವಿತರಣೆ ಬಗ್ಗೆ ಕೃಷಿ ಇಲಾಖೆ ಉನ್ನತಾಧಿಕಾರಿಗಳು ಮತ್ತು ಕೃಷಿ ಸಚಿವರ ಗಮನಕ್ಕೆ ತಂದಿದ್ದೇವೆ. ಸರಕಾರ ಸೂಕ್ತ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ.
-ಡಾ. ಕಿರಣ್‌ಕುಮಾರ್ ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಶಿವಮೊಗ್ಗ

ತುರ್ತು ಪರಿಸ್ಥಿತಿಯಲ್ಲಿ ಮಿತ ಬಳಕೆ ನೀತಿಯಿಂದ ಕೃಷಿ ಮತ್ತು ರೈತರನ್ನು ಹೊರಗಿಡಬೇಕು. ಹಿಂದೆ ರಸಗೊಬ್ಬರ ಬಳಸಿ ಜಾಗೃತಿ ಮೂಡಿಸಿದ್ದರಿಂದಲೆ ಭಾರತ ಆಹಾರ ಸ್ವಾವಲಂಬನೆ ಸಾಧಿಸಿತು. ಈಗ ಐಡಿ ಇದ್ದವರಿಗೆ ಮಾತ್ರ ರಸಗೊಬ್ಬರ ಎಂದರೆ ಕೃಷಿಯಲ್ಲಿ ಅಭದ್ರತೆ, ಆಹಾರ ಕೊರತೆ ಅಲ್ಲದೆ ಅನಾಹುತಗಳಿಗೂ ಎಡೆ ಮಾಡಿಕೊಡುತ್ತದೆ.
-ಕೆ.ಟಿ.ಗಂಗಾಧರ್ ಮುಖಂಡ, ರಾಜ್ಯ ರೈತ ಸಂಘ

ರಾಜ್ಯದ ಮಲೆನಾಡು ಮತ್ತು ಅರೆಮಲೆನಾಡು ಪ್ರದೇಶದ ವ್ಯಾಪ್ತಿಯಲ್ಲಿ ಅತಿಹೆಚ್ಚು ಬಗರ್‌ಹುಕುಂ ಮತ್ತು ಅಕ್ರಮ ಸಾಗುವಳಿದಾರರು ಇದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಶರಾವತಿ, ತಲಕಳಲೆ, ವರಾಹಿ, ಚಕ್ರಾ, ಸಾವೇಹಕ್ಲು, ಭದ್ರಾ, ತುಂಗಾ ಜಲಾಶಯಗಳಲ್ಲಿ ಮುಳುಗಡೆಯಾಗಿ ಆನಂತರದಲ್ಲಿ ಸರಕಾರವೇ ತೋರಿಸಿದ ಅರಣ್ಯ ಪ್ರದೇಶದಲ್ಲಿ ಸಾಗುವಳಿ ಮಾಡಿಕೊಂಡು ಬದುಕುತ್ತಿರುವವರಲ್ಲಿ ಶೇ.90ರಷ್ಟು ಸಂತ್ರಸ್ತರಿಗೆ ಇದೂವರೆಗೆ ಭೂಮಿ ಒಡೆತನ ಇಲ್ಲ, ಅಲ್ಲದೆ ಬದುಕಿಗಾಗಿ ಲಕ್ಷಾಂತರ ಜನರು ಅಕ್ರಮವಾಗಿ ವಿವಿಧ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ. ಇಂತಹ ರೈತರ ಲಕ್ಷಾಂತರ ಎಕರೆ ತೋಟ, ಗದ್ದೆ, ಹೊಲಗಳಿವೆ. ವಿಶೇಷವೆಂದರೆ ಅಧಿಕೃತ ಖಾತೆದಾರರೂ ಹೆಚ್ಚುವರಿಯಾಗಿ ಲಕ್ಷಾಂತರ ಎಕರೆ ಅನಧಿಕೃತ ಸಾಗುವಳಿ ಮಾಡಿದ್ದಾರೆ.

ಯೂರಿಯಾ, ಡಿಎಪಿ, ಕಾಂಪ್ಲೆಕ್ಸ್ ಮತ್ತು ಇತರೆ ರಸಗೊಬ್ಬರವನ್ನು ಕೇವಲ ಹೊಲದ ಬೆಳೆಗಳಿಗೆ ಅಲ್ಲದೆ ಭತ್ತ ಮತ್ತು ಅಡಕೆ ತೋಟಗಳಿಗೂ ಬಳಕೆ ಮಾಡುತ್ತಾರೆ. ಫ್ರೂಟ್ಸ್ ಐಡಿ ಹೊಂದಿರುವವರಿಗೆ ಮಾತ್ರ ರಸಗೊಬ್ಬರವೆಂದು ಸರಕಾರ ಕಡ್ಡಾಯ ಮಾಡಿದಲ್ಲಿ ಅನಧಿಕೃತ ಸಾಗುವಳಿದಾರರು ರಸಗೊಬ್ಬರದಿಂದ ವಂಚಿತರಾಗುತ್ತಾರೆ. ಇದು ಆಹಾರ ಮತ್ತು ವಾಣಿಜ್ಯ ಬೆಳೆಗಳ ಉತ್ಪಾದನೆ ಮೇಲೆ ಅಡ್ಡ ಪರಿಣಾಮ ಬೀರುವುದಲ್ಲದೆ ಆ ರೈತರ ಆದಾಯಕ್ಕೂ ಪೆಟ್ಟು ಬೀಳುತ್ತದೆ.

ಕೀಟ ಸಂಗ್ರಹಾಲಯ ಸಜ್ಜು | ಕಲೆ ಸಂಸ್ಕೃತಿ ಜನಜೀವನ ಬಿಂಬಿಸುವ ವಸ್ತು ಪ್ರದರ್ಶನ

ತೇಜಸ್ವಿ ಲೋಕದ ವಿಸ್ಮಯ ಕೀಟ ಜಗತ್ತು

■ **ಸಂತೋಷ್ ಅತ್ತಿಗೆರೆ** ಕೊಟ್ಟಿಗೆಹಾರ(ಚಿಕ್ಕಮಗಳೂರು)
rahulgowdaak@gmail.com

ಕೊಟ್ಟಿಗೆಹಾರದ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನದಲ್ಲಿ ತೇಜಸ್ವಿ ಅವರ ಬದುಕು ಬರಹ ಚಿಂತನೆಗಳ ಸಾಕಾರಕ್ಕಾಗಿ ಹಲವು ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಅವರ ಕೃತಿಗಳಲ್ಲಿ ಮೈದಳೆದ ಕೀಟಗಳ ಮಾದರಿಯ ಸಂಗ್ರಹಾಲಯ ಸಜ್ಜಾಗಿದೆ.

ಪ್ರತಿಷ್ಠಾನದಲ್ಲಿ ತೇಜಸ್ವಿ ಅವರ ಆಶಯಕ್ಕೆ ಪೂರಕವಾಗಿ ಚಾರಣ, ವಿಚಾರ ಸಂಕಿರಣ, ಸಂವಾದ, ನಕ್ಷತ್ರ ವೀಕ್ಷಣೆ, ವಸ್ತು ಪ್ರದರ್ಶನ, ನಾಟಕ ಪ್ರದರ್ಶನ ಮುಂತಾದ ಕಾರ್ಯ ಚಟುವಟಿಕೆಗಳನ್ನು ಸಕ್ರಿಯವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಈಗ ಪ್ರತಿಷ್ಠಾನದಲ್ಲಿ ಕೀಟ ಸಂಗ್ರಹಾಲಯ ಮತ್ತು ವಸ್ತು ಸಂಗ್ರಹಾಲಯ ಸಾರ್ವಜನಿಕರ ವೀಕ್ಷಣೆಗೆ ಸಜ್ಜಾಗಿದ್ದು, ಜ್ಞಾನಾಸಕ್ತರನ್ನು ಕೈ ಬೀಸಿ ಕರೆಯುತ್ತಿದೆ.

ಮಲೆನಾಡು ಭಾಗದಲ್ಲಿ ಕಂಡು ಬರುವ ನೂರಾರು ಅಪೂರ್ವ ಕೀಟಗಳ ಸಂಗ್ರಹಾಲಯ ದರ್ಶನಕ್ಕೆ ಸಜ್ಜಾಗಿದ್ದು, ನೈಜ್ಯ ಕೀಟಗಳ ಜತೆಗೆ ಕೀಟಗಳಿಗೆ ಸಂಬಂಧಿಸಿದ ಮಾಹಿತಿಗಳು ಇಲ್ಲಿ ಸಿಗಲಿವೆ. ತೇಜಸ್ವಿ ಅವರು ಬರೆದ ಕೀಟಗಳ ಕುರಿತ ಸಾಲುಗಳನ್ನು ಕೀಟ ಸಂಗ್ರಹಾಲಯದಲ್ಲಿ ಹಾಕಲಾಗಿದೆ. ಕೀಟಗಳ ಬಗ್ಗೆ ಕುತೂಹಲ ಮೂಡಿಸಿ ಅವುಗಳ ಮಹತ್ವವನ್ನು ಸಾರಿ ಹೇಳಲಿದೆ. ನುರಿತ ಕೀಟಶಾಸ್ತ್ರಜ್ಞರ ತಂಡದ ಮಾರ್ಗದರ್ಶನದಲ್ಲಿ ವೈಜ್ಞಾನಿಕವಾಗಿ ಕೀಟ ಸಂಗ್ರಹಾಲಯ ಸಿದ್ಧಪಡಿಸಲಾಗಿದೆ. ಕೀಟ ಸಂಗ್ರಹಾಲಯ ಕೀಟ ಜಗತ್ತಿನ ವಿಸ್ಮಯವನ್ನು ತೆರೆದಿಡಲಿದೆ.

ಚಿಟ್ಟೆ ಉದ್ಯಾನ

ಕೀಟ ಸಂಗ್ರಹಾಲಯ

ಸಾಮಾನ್ಯವಾಗಿ ಕಾಣಸಿಗುವ ಏರೋಪ್ಲೇನ್ ಚಿಟ್ಟೆ, ಹೆಲಿಕಾಪ್ಟರ್ ಚಿಟ್ಟೆ, ಜಿರಳೆಗಳು, ಕಣಜಗಳು, ಜೇನುಹುಳು, ವಿವಿಧ ಪತಂಗಗಳು, ಬಣ್ಣದ ಚಿಟ್ಟೆಗಳು, ಜೀರುಂಡೆಗಳ ಜತೆಗೆ ಅಪರೂಪವಾಗಿ ಕಾಣಸಿಗುವ ಎಲೆ ಹುಳು, ಕಡ್ಡಿ ಹುಳು, ಬಿಸಿಲು ಕುದುರೆ, ವಿವಿಧ ಮಿಡತೆಗಳು ಕೀಟ ಸಂಗ್ರಹಾಲಯದ ಪ್ರಮುಖ ಆಕರ್ಷಣೆಯಾಗಿವೆ.

ಇದಿಷ್ಟೆ ಅಲ್ಲದೇ ಕರ್ನಾಟಕದ ರಾಜ್ಯ ಚಿಟ್ಟೆಯಾದ ಸದರ್ನ್ ಬರ್ಡ್ ವಿಂಗ್ ಚಿಟ್ಟೆ, ಮಹಾರಾಷ್ಟ್ರ ರಾಜ್ಯ ಚಿಟ್ಟೆಯಾದ ಬ್ಲೂ ಮಾರ್ಮನ್ ಚಿಟ್ಟೆ, ಪ್ರಪಂಚದ ಅತ್ಯಂತ ದೊಡ್ಡ ಪತಂಗಗಳಲ್ಲಿ ಒಂದಾದ ಅಟ್ಲಾಸ್ ಪತಂಗ, ಬೆಳದಿಂಗಳ ಪತಂಗಗಳನ್ನೂ ಕೀಟ ಸಂಗ್ರಹಾಲಯದಲ್ಲಿ ನೋಡಬಹುದಾಗಿದೆ.

ಮನ ತಣಿಸುವ ಅಪೂರ್ವ ವಸ್ತುಗಳ ಸಂಗ್ರಹ: ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಆಸಕ್ತಿ, ಹವ್ಯಾಸಗಳಿಗೆ ಸಂಬಂಧಪಟ್ಟ ವಸ್ತುಗಳನ್ನು ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿದೆ. ಕ್ಯಾಮೆರಾ ಬೆಳೆದು ಬಂದ ಹಾದಿಯನ್ನು ಪರಿಚಯ, 19 ನೇ ಶತಮಾನದಿಂದ 21ನೇ ಶತಮಾನದವರೆಗಿನ ವಿವಿಧ ಟೈಪ್‌ರೈಟರ್ ವಸ್ತು ಸಂಗ್ರಹಾಲಯದಲ್ಲಿವೆ. ಇದರ ಜತೆಗೆ ತೇಜಸ್ವಿ ಅವರು ಬಳಸುತ್ತಿದ್ದ ಸ್ಕೂಟರ್‌ನ ಮಾದರಿಯೂ ಪ್ರಮುಖ ಆಕರ್ಷಣೆಯಾಗಿದೆ. ಇದಿಷ್ಟೆ ಅಲ್ಲದೇ ಮಲೆನಾಡಿನ ಕಲೆ, ಸಂಸ್ಕೃತಿ, ಜನಜೀವನವನ್ನು ಬಿಂಬಿಸುವ ವಿವಿಧ ವಸ್ತುಗಳು, ಲೇಖನಿ ಪರಿಕರಗಳು, ಕಾರುಗಳ ಚಿಕ್ಕ ಮಾದರಿ, ತಾಳೆಗರಿ, ವಿವಿಧ ಕಲಾವಿದರ ಕಲಾಕೃತಿಗಳನ್ನು ವಸ್ತು ಸಂಗ್ರಹಾಲಯದಲ್ಲಿ ಕಾಣಬಹುದಾಗಿದೆ. ವಸ್ತು ಸಂಗ್ರಹಕಾರ ಎಂ.ಎಲ್. ಅಶೋಕ್ ಅವರ ನೇತೃತ್ವದಲ್ಲಿ ವಸ್ತು ಸಂಗ್ರಹಾಲಯ ನಿರ್ಮಿಸಲಾಗಿದೆ. ತೇಜಸ್ವಿ ಅವರ ಬದುಕಿನ ವಿವಿಧ ಘಟ್ಟಗಳನ್ನು ನೆನಪಿಸುವ ತೇಜಸ್ವಿ ಅವರ ಫೋಟೊ ಗ್ಯಾಲರಿ ಕೂಡ ಇದ್ದು, ತೇಜಸ್ವಿ ಅವರ ಬಾಲ್ಯದಿಂದ ಅವರ ಬದುಕಿನ ಬೇರೆ ಬೇರೆ ಸಂದರ್ಭದಲ್ಲಿ ತೆಗೆದ ಫೋಟೊಗಳನ್ನು ವೀಕ್ಷಕರು ನೋಡಬಹುದಾಗಿದೆ.

₹2.10 ಕೋಟಿ ಕಳೆದುಕೊಂಡ ವೃದ್ಧೆ »10

ಭೂಮಾಲೀಕರು ಸಲ್ಲಿಸಿದ್ದ ದೂರು ವಜಾ | ಮಾಲೀಕರು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲಾಗದು: ಕೆ- ರೇರಾ ಆದೇಶ

ವಸತಿ ಯೋಜನೆಗೆ ಬಿಲ್ಡರ್, ಭೂಮಾಲೀಕರು ಸಮಾನ ಹೊಣೆಗಾರರು

■ **ಶ್ರೀಕಾಂತ್ ಹುಣಸವಾಡಿ** ಬೆಂಗಳೂರು
Srikanth.G@timesofindia.com

'ವಸತಿ ಯೋಜನೆಗಳ ವಿಚಾರದಲ್ಲಿ ಭೂಮಾಲೀಕರು, ಪ್ರವರ್ತಕರಷ್ಟೇ (ಬಿಲ್ಡರ್‌ಗಳು) ಸಮಾನ ಹೊಣೆಗಾರರು. ಭೂ ಮಾಲೀಕರು ತಮ್ಮ ಹೊಣೆಗಾರಿಕೆಗಳಿಂದ ತಪ್ಪಿಸಿಕೊಳ್ಳುವಂತಿಲ್ಲ' ಎಂದು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ(ಕೆ-ರೇರಾ) ಆದೇಶಿಸಿದೆ.

ಅಲ್ಲದೆ, ಬಿಲ್ಡರ್‌ಗಳು ಅಪಾರ್ಟ್‌ಮೆಂಟ್ ನಿರ್ಮಾಣ ಕಾಮಗಾರಿ ವಿಳಂಬ ಮಾಡುತ್ತಿದ್ದಾರೆ. ಫ್ಲ್ಯಾಟ್‌ಗಳ ಖರೀದಿದಾರರಿಂದ ಸಂಗ್ರಹ ಮಾಡಿದ ಹಣವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ನಿಯಮದಂತೆ ತ್ರೈಮಾಸಿಕ ವರದಿಯನ್ನು ಸಲ್ಲಿಸಿಲ್ಲ. ಹಾಗಾಗಿ ರೇರಾ ನಿಯಮದ ಪ್ರಕಾರ ಅವರನ್ನು ದಂಡಿಸಬೇಕೆಂದು ಕೋರಿ ಭೂಮಾಲೀಕರು ಸಲ್ಲಿಸಿದ್ದ ದೂರನ್ನು ವಜಾಗೊಳಿಸಿದೆ.

ಇನ್ನು ಮುಂದೆ ವಸತಿ ಯೋಜನೆಗಳ ಕಾಮಗಾರಿಗಳು ಸ್ಥಗಿತಗೊಂಡಾಗ ಅಥವಾ ಸಂಪೂರ್ಣ ನಿಂತು ಹೋದ ಸಂದರ್ಭದಲ್ಲಿ ಭೂಮಾಲೀಕರು ತನಗೂ ಅದಕ್ಕೂ ಸಂಬಂಧವಿಲ್ಲ, ಎಲ್ಲದಕ್ಕೂ ಪ್ರವರ್ತಕರೇ ಹೊಣೆಯೆಂದು ಎಲ್ಲಾ ಜವಾಬ್ದಾರಿಯನ್ನು ಅವರ ಹೆಗಲಿಗೆ ಕಟ್ಟಿ ಸುಮ್ಮನೆ ಕೂರುವಂತಿಲ್ಲ. ಅವರು ತಮ್ಮ ಉತ್ತರದಾಯಿತ್ವದಿಂದ ನುಣುಚಿಕೊಳ್ಳಲಾಗದು. ಬಿಲ್ಡರ್ ಅಥವಾ ಪ್ರವರ್ತಕರಂತೆ ಅವರು ಯೋಜನೆಯ ಸಮಾನ ಜವಾಬ್ದಾರರಾಗಿರುವುದರಿಂದ ಅವರು ಸಮಸ್ಯೆಗಳನ್ನು ಬಗೆಹರಿಸಿ ಯೋಜನೆಯನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ ಎಂದು ರೇರಾ ಹೇಳಿದೆ.

ನಗರದ ಬನಶಂಕರಿ ಎರಡನೇ ಹಂತದ ಬಿ.ಎಸ್. ಸುಶೀಲಾ ರಾಮಮೂರ್ತಿ ಸಲ್ಲಿಸಿದ್ದ ದೂರನ್ನು ಆಲಿಸಿದ ಕೆ-ರೇರಾ ಅಧ್ಯಕ್ಷ ಕೆ.ರಾಕೇಶ್ ಸಿಂಗ್ ಮತ್ತು ಸದಸ್ಯ ಜಿ.ಆರ್. ರೆಡ್ಡಿ ಅವರಿದ್ದ ಪೀಠ ಈ ಆದೇಶವನ್ನು ನೀಡಿದೆ.

ಪ್ರಕರಣದ ಎಲ್ಲಾ ಅಂಶಗಳನ್ನು ಅವಲೋಕಿಸಿದ ಪೀಠ, ''ಪ್ರಕರಣದಲ್ಲಿ ಭೂ ಮಾಲೀಕರಾದ ದೂರುದಾರರು ಪ್ರಮೋಟರ್ ವಿರುದ್ಧ ಹಲವು ಪರಿಹಾರಗಳನ್ನು ಕೋರಿದ್ದಾರೆ. ರೇರಾ ಕಾಯಿದೆ ಸೆಕ್ಷನ್ 2(ಝಡ್ ಕೆ) ಪ್ರಕಾರ ಭೂಮಾಲೀಕರು ಮತ್ತು ಪ್ರಮೋಟರ್ ಸಮಾನವಾಗಿರುತ್ತಾರೆ. ಇಬ್ಬರೂ ಸಹ ಡೀಮ್ಡ್ ಪ್ರಮೋಟರ್ ಆಗಿರುತ್ತಾರೆ. ರೇರಾ ಕಾಯಿದೆಯಂತೆ ಇಬ್ಬರೂ ಎಲ್ಲಾ ಹೊಣೆಗಾರಿಕೆಗಳಿಗೆ ಜಂಟಿ ಉತ್ತರದಾಯಿಗಳು. ಆದ್ದರಿಂದ ಪ್ರಮೋಟರ್ ವಿರುದ್ಧದ ದೂರನ್ನು ವಜಾಗೊಳಿಸಲಾಗುತ್ತಿದೆ. ಅವರ ವಿರುದ್ಧ ಭೂಮಾಲೀಕರು ಯಾವುದೇ ಪರಿಹಾರಗಳನ್ನು ಪಡೆಯಲಾಗದು'' ಎಂದು ಆದೇಶಿಸಿದೆ.

ಏನಿದು ಪ್ರಕರಣ?

ಸುಶೀಲಾ ರಾಮಮೂರ್ತಿ ಅವರು ಉತ್ತರಹಳ್ಳಿ ಹೋಬಳಿಯ ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂಬರ್ 15/2ರಲ್ಲಿ ಎರಡು ಎಕರೆ ಜಮೀನು ಹೊಂದಿದ್ದರು. ಅವರು 2019ರಲ್ಲಿ ಆ ಭೂಮಿಯನ್ನು ಅಭಿವೃದ್ಧಿಪಡಿಸಲು ಮಾಂಗಲ್ಯ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ ಜತೆ ಜಂಟಿ ಅಭಿವೃದ್ಧಿ ಒಪ್ಪಂದ (ಜೆಡಿಎ) ಮಾಡಿಕೊಂಡಿದ್ದರು. ಅದರಂತೆ ವಸತಿ ಯೋಜನೆಯ ಕಾಮಗಾರಿ ಆರಂಭವಾಗಿದ್ದರೂ ನಂತರ ನಾನಾ ಕಾರಣಗಳಿಂದಾಗಿ ಕುಂಟುತ್ತಾ ಸಾಗಿತ್ತು.

ರೇರಾ ಕಾಯಿದೆ 31ರಡಿ ಮಾಂಗಲ್ಯ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ ವಿರುದ್ಧ 2023ರಲ್ಲಿ ದೂರು ಸಲ್ಲಿಸಿದ್ದ ಸುಶೀಲಾ ರಾಮಮೂರ್ತಿ, ಪ್ರತಿವಾದಿಗಳಿಗೆ ವಸತಿ ಯೋಜನೆಯ ತ್ರೈಮಾಸಿಕ ವರದಿಗಳು, ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳನ್ನು ಸಲ್ಲಿಸುವಂತೆ ಆದೇಶಿಸಬೇಕು. ಫ್ಲ್ಯಾಟ್ ಖರೀದಿದಾರರಿಂದ ಸಂಗ್ರಹ ಮಾಡಿರುವ ಹಣವನ್ನು ಠೇವಣಿ ಇಡುವಂತೆ ಮತ್ತು ರೇರಾ ನಿಯಮಗಳನ್ನು ಉಲ್ಲಂಘಿಸಿರುವುದರಿಂದ ಅವರಿಗೆ ದಂಡ ವಿಧಿಸುವಂತೆ ಕೋರಿದ್ದರು.

ಶೇ.40ರಷ್ಟು ಕಾಮಗಾರಿ ಪೂರ್ಣ: ಯೋಜನೆಯ ವೆಚ್ಚ 52 ಕೋಟಿ ರೂ. ಎಂದು ಅಂದಾಜಿಸಲಾಗಿದ್ದು, ಅದರಲ್ಲಿ 44 ಕೋಟಿ ರೂ.ಗಳನ್ನು ಫ್ಲ್ಯಾಟ್ ಹಂಚಿಕೆದಾರರಿಂದ ಸಂಗ್ರಹ ಮಾಡಲಾಗಿದೆ. 22 ಕೋಟಿಗಳನ್ನು ಬಿಎಫ್‌ಎಲ್‌ನಿಂದ ಸಾಲ ಪಡೆಯಲಾಗಿದೆ. ಆದರೆ ಈವರೆಗೆ ಶೇ.40ರಷ್ಟು ಮಾತ್ರ ಕಾಮಗಾರಿ ಪೂರ್ಣಗೊಂಡಿದೆ. ಸದ್ಯ ಅಪಾರ್ಟ್‌ಮೆಂಟ್ ನಿರ್ಮಾಣ ಕಾಮಗಾರಿ ಸಂಪೂರ್ಣ ಸ್ಥಗಿತಗೊಂಡಿದ್ದು, ಪ್ರಮೋಟರ್ ಬಹುತೇಕ ವಸತಿ ಯೋಜನೆಯನ್ನು ರದ್ದುಗೊಳಿಸಿದ್ದಾರೆಂದು ಭೂಮಾಲೀಕರು ಆರೋಪಿಸಿದ್ದರು.

ಜತೆಗೆ ಪ್ರತಿವಾದಿಗಳು ಫ್ಲ್ಯಾಟ್ ಹಂಚಿಕೆದಾರರಿಂದ ಸುಮಾರು 22 ಕೋಟಿಗೂ ಅಧಿಕ ಹಣ ಪಡೆದು ಅದನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಆ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸಿಲ್ಲ. ಜತೆಗೆ ಒಮ್ಮೆ ಮಾರಾಟ ಮಾಡಿರುವ ಫ್ಲ್ಯಾಟ್‌ಗಳನ್ನು ಮತ್ತೆ ಮತ್ತೆ ಮಾರಾಟ ಮಾಡಿ ಹಣ ಪಡೆದುಕೊಂಡು ಭಾರಿ ಅಕ್ರಮವೆಸಗಿದ್ದಾರೆ. ನಿಯಮದ ಪ್ರಕಾರ, ಬಿಲ್ಡರ್ ಫ್ಲ್ಯಾಟ್ ಮಾಲೀಕರಿಂದ ಸಂಗ್ರಹಿಸಿದ ಹಣವನ್ನು ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿಡಬೇಕು. ಆದರೆ ಹಾಗೆ ಮಾಡಿಲ್ಲ. ಒಟ್ಟಾರೆ ರೇರಾ ನಿಯಮಗಳನ್ನು ಉಲ್ಲಂಘನೆ ಮಾಡಿರುವ ಬಿಲ್ಡರ್ ವಿರುದ್ಧ ಕ್ರಮ ಜರುಗಿಸಬೇಕೆಂದು ದೂರುದಾರರು ಪ್ರಾಧಿಕಾರವನ್ನು ಕೋರಿದ್ದರು.

ಬೀದಿ ನಾಯಿಗಳಿಗೆ ಆಶ್ರಯ ಕಲ್ಪಿಸಲು ಕ್ರಮ

ಬೆಂಗಳೂರು: ಬೀದಿ ನಾಯಿಗಳ ಸ್ಥಳಾಂತರಕ್ಕೆ 5 ನಗರ ಪಾಲಿಕೆಗಳಲ್ಲೂ ಆಶ್ರಯ ತಾಣಗಳ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ ಎಂದು ಮುಖ್ಯ ಆಯುಕ್ತ ಮಹೇಶ್ವರ ರಾವ್ ತಿಳಿಸಿದ್ದಾರೆ. ''ಬೀದಿ ನಾಯಿಗಳ ಸ್ಥಳಾಂತರ ಸೇರಿದಂತೆ ಭಾರತೀಯ ಕಲ್ಯಾಣ ಮಂಡಳಿಯ ಪ್ರಮಾಣಿತ ಕಾರ್ಯ ವಿಧಾನವನ್ನು ಅನುಷ್ಠಾನಗೊಳಿಸಬೇಕಿದೆ. ಆ ನಿಟ್ಟಿನಲ್ಲಿ ಬೀದಿ ನಾಯಿಗಳ ಆಶ್ರಯ ತಾಣ ನಿರ್ಮಾಣ ಹಾಗೂ ಆ ತಾಣಗಳ ನಿರ್ವಹಣೆಗೆ ಸೇವಾದಾರರನ್ನು ಆಯ್ಕೆ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ,'' ಎಂದು ಹೇಳಿದ್ದಾರೆ. ''ಬೀದಿ ನಾಯಿಗಳ ವಿಚಾರದಲ್ಲಿ ಸುಪ್ರೀಂಕೋರ್ಟ್ ಆದೇಶ ಪಾಲಿಸಲಾಗುವುದು. ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಬಸ್, ರೈಲು ನಿಲ್ದಾಣಗಳ ಆವರಣಗಳಲ್ಲಿರುವ ಬೀದಿ ನಾಯಿಗಳನ್ನು ಗೊತ್ತುಪಡಿಸಿದ ಆಶ್ರಯ ತಾಣಗಳಿಗೆ ಸ್ಥಳಾಂತರಿಸಲಾಗುವುದು. ನಾಯಿಗಳ ಸಂಖ್ಯೆ ಹೆಚ್ಚಿರುವ ಸ್ಥಳಗಳಲ್ಲಿ ಅಥವಾ ಪದೇ ಪದೆ ನಾಯಿ ಕಡಿತ ಹಾಗೂ ಆಕ್ರಮಣಕಾರಿ ವರ್ತನೆಯಿಂದ ಸಾರ್ವಜನಿಕರ ಸುರಕ್ಷತೆಗೆ ತೊಂದರೆ ಇರುವ ಸ್ಥಳಗಳಲ್ಲಿನ ಗುಣಪಡಿಸಲಾಗದಷ್ಟು ಅನಾರೋಗ್ಯಕ್ಕೊಳಪಟ್ಟ ನಾಯಿ, ರೇಬಿಸ್ ನಾಯಿ, ಆಕ್ರಮಣಕಾರಿ/ಅಪಾಯಕಾರಿ ನಾಯಿಗಳ ಪ್ರಕರಣಗಳಲ್ಲಿ ದಯಾಮರಣ ಸೇರಿದಂತೆ ಕ್ರಮಗಳನ್ನು ಕಾನೂನುರೀತ್ಯ ಕೈಗೊಳ್ಳಲಾಗುವುದು,'' ಎಂದು ತಿಳಿಸಿದ್ದಾರೆ.

ಆಡಳಿತ ಮಂಡಳಿ ವಜಾ: ಆಡಳಿತಾಧಿಕಾರಿ ನೇಮಕ

ಬೆಂಗಳೂರು: ನಗರದ ಶೇಷಾದ್ರಿಪುರಂನಲ್ಲಿರುವ ಬಡಗನಾಡು ಬ್ರಾಹ್ಮಣ ಮಹಾಸಭಾದಲ್ಲಿ ವ್ಯಾಪಕ ಅಕ್ರಮಗಳು ನಡೆದಿರುವ ಆರೋಪದ ಹಿನ್ನೆಲೆಯಲ್ಲಿ ಸರಕಾರ ಆಡಳಿತ ಮಂಡಳಿಯನ್ನು ವಜಾಗೊಳಿಸಿ ಆಡಳಿತಾಧಿಕಾರಿಯನ್ನು ನೇಮಕ ಮಾಡಿದೆ. ಆರು ತಿಂಗಳ ಅವಧಿಗೆ ಮಹಾಸಭಾದ ಆಡಳಿತಾಧಿಕಾರಿಯನ್ನಾಗಿ ಸಹಕಾರ ಅಭಿವೃದ್ಧಿ ಅಧಿಕಾರಿ ಎನ್.ಚಂದ್ರಶೇಖರ್ ಅವರನ್ನು ನೇಮಿಸಿ ಸಹಕಾರ ಇಲಾಖೆಯ ಅಧೀನ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ. ಆಡಳಿತಾಧಿಕಾರಿಯು ಕೂಡಲೇ ಮಹಾಸಭಾದ ಅಧಿಕಾರ ವಹಿಸಿಕೊಂಡು, ಸಂಘದ ನ್ಯೂನತೆಗಳನ್ನು ಸರಿಪಡಿಸಿ ಆಡಳಿತ ಮಂಡಳಿಗೆ ಚುನಾವಣೆ ನಡೆಸಬೇಕು. ಹೊಸ ಚುನಾಯಿತ ಮಂಡಳಿಗೆ ಅಧಿಕಾರ ಹಸ್ತಾಂತರ ಮಾಡಿ ಸರಕಾರಕ್ಕೆ ವರದಿ ಸಲ್ಲಿಸತಕ್ಕದ್ದು ಎಂದು ಆದೇಶದಲ್ಲಿ ಸೂಚಿಸಲಾಗಿದೆ. ಮಹಾಸಭಾದಲ್ಲಿ ಸಾಕಷ್ಟು ಅವ್ಯವಹಾರಗಳು ನಡೆಯುತ್ತಿವೆ ಎಂದು ಎಲ್.ಮುರಳಿ ಮೋಹನ ಮತ್ತು ಜಿ.ಆರ್.ಪ್ರಕಾಶ್ ಎಂಬುವವರು ಸಹಕಾರ ಸಂಘಗಳ ನಿಬಂಧಕರಿಗೆ ದೂರು ನೀಡಿದ್ದರು. ಆ ದೂರು ಆಧರಿಸಿ ಅಕ್ರಮಗಳ ಬಗ್ಗೆ ವಿಚಾರಣೆ ನಡೆಸಲು ಮುರಳೀಧರ ಅವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಅವರು ಎಲ್ಲಾ ಅಕ್ರಮಗಳ ಆರೋಪಗಳ ಬಗ್ಗೆ ಪರಿಶೀಲನೆ ನಡೆಸಿ ಸಹಕಾರ ಇಲಾಖೆಗೆ ವರದಿ ಸಲ್ಲಿಸಿದ್ದಾರೆ. ಅದರಲ್ಲಿ 8 ಆರೋಪಗಳ ಪೈಕಿ 7 ಆರೋಪಗಳು ಸಾಬೀತಾಗಿವೆ ಮತ್ತು ಚುನಾಯಿತ ಮಂಡಳಿಯ ಅವಧಿಯು 2025ರ ಡಿಸೆಂಬರ್ ಅಂತ್ಯಕ್ಕೆ ಕೊನೆಗೊಂಡಿದ್ದು, ಚುನಾವಣೆ ನಡೆಸದೆ ಬೈಲಾ ಉಲ್ಲಂಘನೆ ಮಾಡಲಾಗಿದೆ ಎಂದು ವಿಚಾರಣಾಧಿಕಾರಿ ತನ್ನ ವರದಿಯಲ್ಲಿ ತಿಳಿಸಿದ್ದಾರೆ. ಆ ಹಿನ್ನೆಲೆಯಲ್ಲಿ ಹಾಲಿ ಅಧಿಕಾರದಲ್ಲಿದ್ದ ಆಡಳಿತ ಮಂಡಳಿಯನ್ನು ವಜಾಗೊಳಿಸಿ, ಆಡಳಿತಾಧಿಕಾರಿ ನೇಮಕ ಮಾಡಲಾಗುತ್ತಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ವಸತಿ ಇಲಾಖೆ, ಕರ್ನಾಟಕ ಗೃಹ ಮಂಡಳಿಯಿಂದ ಸೂರ್ಯನಗರದಲ್ಲಿ ನಿರ್ಮಾಣ | ವಸತಿ ಸಮುಚ್ಚಯಕ್ಕೂ ಭೂಮಿ ಪೂಜೆ

ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ

■ **ವಿಕ ಸುದ್ದಿಲೋಕ** ಬೆಂಗಳೂರು

ವಸತಿ ಇಲಾಖೆ, ಕರ್ನಾಟಕ ಗೃಹ ಮಂಡಳಿ ಜಂಟಿಯಾಗಿ ಆನೇಕಲ್ ಸಮೀಪದ ಸೂರ್ಯನಗರದಲ್ಲಿ ನಿರ್ಮಿಸುತ್ತಿರುವ ದೇಶದ ಎರಡನೇ ಅತಿದೊಡ್ಡ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಶಂಕುಸ್ಥಾಪನೆ ನೆರವೇರಿಸಿದರು.

ಇದೇ ವೇಳೆ ಸೂರ್ಯ ಡಿವೈನ್ ಮತ್ತು ಸೂರ್ಯ ಶೈನ್ ವಸತಿ ಸಮುಚ್ಚಯ ನಿರ್ಮಾಣಕ್ಕೂ ಭೂಮಿ ಪೂಜೆ ಮಾಡಿದರು. ಅಲ್ಲದೇ ಮುಖ್ಯಮಂತ್ರಿಗಳ 'ನಮ್ಮ ಮನೆ' ಯೋಜನೆಗೆ ಚಾಲನೆ ನೀಡಲಾಯಿತು. ವಸತಿ ಯೋಜನೆಗಳಿಗೆ ಭೂಮಿ ಬಿಟ್ಟುಕೊಟ್ಟಿರುವ ಮಾಲೀಕರಿಗೆ ಸಾಂಕೇತಿಕವಾಗಿ ನಿವೇಶನಗಳನ್ನು ಹಂಚಿಕೆ ಮಾಡಲಾಯಿತು.

ಬಳಿಕ ಮಾತನಾಡಿದ ಸಿಎಂ, ''ಸೂರ್ಯನಗರದಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ಕ್ರೀಡಾಂಗಣ ನಿರ್ಮಿಸುವ ಮೂಲಕ ಕ್ರೀಡೆ, ಪ್ರವಾಸೋದ್ಯಮ, ಉದ್ಯೋಗ ಸೃಷ್ಟಿ, ಆರ್ಥಿಕ ಬೆಳವಣಿಗೆ ಸೇರಿದಂತೆ ಆನೇಕಲ್ ಭಾಗದ ಸಮಗ್ರ ಅಭಿವೃದ್ಧಿಗೆ ನಮ್ಮ ಸರಕಾರ ಮುನ್ನುಡಿ ಬರೆದಿದೆ,'' ಎಂದು ನುಡಿದರು.

''ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ದುರಂತ ಸಂಭವಿಸಿದ ನಂತರ ನಗರದ ಹೊರ ವಲಯದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಸಂಪುಟದಲ್ಲಿ ಚರ್ಚಿಸಿ, ನಿರ್ಧಾರ ಕೈಗೊಳ್ಳಲಾಗಿದೆ. ಗುಜರಾತ್‌ನಲ್ಲಿರುವ ಕ್ರೀಡಾಂಗಣವು 90 ಸಾವಿರ ಆಸನ ವ್ಯವಸ್ಥೆ ಹೊಂದಿದ್ದು, ನಮ್ಮ ರಾಜ್ಯದ್ದು ಎರಡನೇ ದೊಡ್ಡ ಕ್ರೀಡಾಂಗಣವಾಗಲಿದೆ. ಇದರಿಂದ ಪ್ರವಾಸೋದ್ಯಮದ ಪ್ರಗತಿ ಜೊತೆಗೆ ಸುತ್ತಲಿನ ಊರುಗಳ ಆರ್ಥಿಕತೆ, ಉದ್ಯೋಗವೂ ಹೆಚ್ಚುತ್ತದೆ,'' ಎಂದು ಅಭಿಪ್ರಾಯಪಟ್ಟರು.

''ಸರಕಾರದ ಆರ್ಥಿಕ ನೆರವಿಲ್ಲದೆ ಕೆಎಚ್‌ಬಿ ಹಣದಿಂದಲೇ ಕ್ರೀಡಾಂಗಣ ನಿರ್ಮಿಸುವುದಾಗಿ ಮಂಡಳಿ ಅಧ್ಯಕ್ಷರು ಹೇಳಿದ್ದಾರೆ. ಖಾಲಿ ಇರುವ ನಿವೇಶನಗಳ ಮಾರಾಟದಿಂದ ಕೆಎಚ್‌ಬಿಗೆ 20 ಸಾವಿರ ಕೋಟಿ ಆದಾಯ ಬರುವ ಅಂದಾಜಿದೆ. ಈವರೆಗೂ ಕೇವಲ ವಸತಿ ನಿರ್ಮಾಣ ಮಾಡುತ್ತಿದ್ದ ವಸತಿ ಇಲಾಖೆ ಮತ್ತು ಕೆಎಚ್‌ಬಿ ಈಗ 80 ಸಾವಿರ ಆಸನ ವ್ಯವಸ್ಥೆಯ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗಿರುವುದು ಪ್ರಗತಿಯ ದೂರದೃಷ್ಟಿಯಾಗಿದೆ. ಇದಕ್ಕಾಗಿ ಶಿವಲಿಂಗೇಗೌಡರು ಮತ್ತು ಜಮೀರ್ ಅಹಮ್ಮದ್ ಅಭಿನಂದನಾರ್ಹರು,'' ಎಂದು ಶ್ಲಾಘಿಸಿದರು.

''ಈ ಭಾಗದ ಅಭಿವೃದ್ಧಿಗೆ ಪೂರಕವಾಗಿ ಜಿಗಣಿ ಹೋಬಳಿಯ ಪ್ರಮುಖ ಸಂಪರ್ಕ ರಸ್ತೆ ನಿರ್ಮಾಣಕ್ಕೂ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಅಧಿಕಾರಿಗಳು ಈ ಕೆಲಸವನ್ನೂ ಆರಂಭಿಸುತ್ತಾರೆ. ಕ್ರೀಡಾಂಗಣ, ರಸ್ತೆ ಮಾತ್ರವಲ್ಲದೆ ವಸತಿ ಇಲಾಖೆ ಈ ಬಾರಿ ಈವರೆಗೂ 3 ಲಕ್ಷಕ್ಕೂ ಹೆಚ್ಚು ಮನೆ ಮತ್ತು ನಿವೇಶನಗಳನ್ನು ರಾಜ್ಯದಲ್ಲಿ ನೀಡಿದೆ,'' ಎಂದು ಹೇಳಿದರು. »10



ಭೂಮಿ ಬಿಟ್ಟುಕೊಟ್ಟಿರುವ ಮಾಲೀಕರಿಗೆ ಸಾಂಕೇತಿಕವಾಗಿ ನಿವೇಶನಗಳನ್ನು ಹಂಚಿಕೆ ಮಾಡಲಾಯಿತು.

ಕ್ರೀಡಾಂಗಣದ ನೀಲನಕ್ಷೆ.

ಕನಸು ನನಸು

''ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡುವ ಮೂಲಕ ಈ ಭಾಗದ ಜನರ ಬಹುದಿನದ ಕನಸು ನನಸು ಮಾಡಿದ್ದೇವೆ. 25 ಎಕರೆ ಪ್ರದೇಶದಲ್ಲಿ ಕ್ರೀಡಾಂಗಣ ನಿರ್ಮಾಣವಾಗಲಿದ್ದು, ಶಾಲೆ ನಿರ್ಮಾಣಕ್ಕಾಗಿ 10 ಎಕರೆ ಮೀಸಲಿಡಲಾಗಿದೆ,'' ಎಂದು ಸಚಿವ ಬಿ.ಜಡ್.ಜಮೀರ್ ಅಹಮದ್ ಖಾನ್ ಹೇಳಿದರು. ''ಸೂರ್ಯನಗರ 4ನೇ ಹಂತದ ಯೋಜನೆಯಡಿ 100ಕ್ಕೂ ಹೆಚ್ಚು ನಿವೇಶನಗಳ ಲೋಕಾರ್ಪಣೆ ಮಾಡಲಾಗಿದೆ. ಇದಕ್ಕಾಗಿ 16 ಸಾವಿರ ಅರ್ಜಿಗಳು ಬಂದಿವೆ. ಈ ಹಿನ್ನೆಲೆಯಲ್ಲಿ ಲಾಟರಿ ಎತ್ತುವ ಮೂಲಕ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಈ ಯೋಜನೆಗೆ ಭೂಮಿ ಒದಗಿಸಿದ ಸ್ಥಳೀಯರಿಗೆ ಶೇ.50ರಷ್ಟು ನಿವೇಶನಗಳನ್ನು ನೀಡುವಂತೆ ಮಾಜಿ ಸಂಸದರು ಬೇಡಿಕೆ ಇಟ್ಟಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಕ್ರಮವಹಿಸಲಾಗುವುದು,'' ಎಂದು ಭರವಸೆ ನೀಡಿದರು.

ಕ್ರೀಡಾಂಗಣದ ವಿಶೇಷತೆಗಳೇನು?

- ಕ್ರೀಡಾಂಗಣದ ವಿಸ್ತೀರ್ಣ 75 ಎಕರೆ
- 943.46 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ
- 80 ಸಾವಿರ ಆಸನ ಸಾಮರ್ಥ್ಯ
- 11 ಒಳಾಂಗಣ ಕ್ರೀಡೆಗಳಿಗೆ ಕ್ರೀಡಾ ಸಂಕೀರ್ಣ
- ಜಲಕ್ರೀಡಾ ಸಂಕೀರ್ಣ
- ಬಹುಮಹಡಿ ವಾಹನ ನಿಲುಗಡೆ ವ್ಯವಸ್ಥೆ
- ವಾಣಿಜ್ಯ ವ್ಯಾಪಾರ ಸಂಕೀರ್ಣ
- ಹೆಲಿಪ್ಯಾಡ್ ವ್ಯವಸ್ಥೆ

ಜನರ ಬೇಡಿಕೆಗೆ ಸ್ಪಂದಿಸಿ ಸರಕಾರ ಈ ಯೋಜನೆ ಕೈಗೊಂಡಿದೆ. ಈ ಯೋಜನೆ ರೈತರಿಗೆ, ಸ್ಥಳೀಯರಿಗೆ ವರದಾನವಾಗಲಿದೆ.
-ಕೆ.ಎಂ.ಶಿವಲಿಂಗೇಗೌಡ ಅಧ್ಯಕ್ಷ, ಗೃಹ ಮಂಡಳಿ

ಆನೇಕಲ್ ಭಾಗದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ನಿರ್ಮಾಣವಾಗುವುದರಿಂದ ಯುವಕರಿಗೆ ಉತ್ತಮ ಕ್ರೀಡಾ ಸೌಲಭ್ಯಗಳು ದೊರೆಯಲಿವೆ.
-ಡಿ.ಕೆ.ಸುರೇಶ್ ಅಧ್ಯಕ್ಷ, ಬಮೂಲ್

ನಮ್ಮ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಒದಗಿಸಬೇಕು. ಮೆಟ್ರೊ ಸಂಪರ್ಕ, ರಸ್ತೆಗಳ ನಿರ್ಮಾಣಕ್ಕೆ ಒತ್ತು ನೀಡಬೇಕು.
-ಶಿವಣ್ಣ ಶಾಸಕ, ಆನೇಕಲ್ ವಿಧಾನಸಭಾ ಕ್ಷೇತ್ರ

₹5 ಲಕ್ಷ ಕಳೆದುಕೊಂಡಿದ್ದ ಸೊಮಾಲಿಯಾ ಮಹಿಳೆಗೆ ನೆರವಾದ ಪೊಲೀಸರು

ಬೆಂಗಳೂರು: ಹೃದ್ರೋಗ ಚಿಕಿತ್ಸಾ ವೆಚ್ಚಕ್ಕಾಗಿ ತಂದಿದ್ದ ಐದು ಲಕ್ಷ ರೂ.ಗಳನ್ನು ಕಳೆದುಕೊಂಡು ಕಂಗಾಲಾಗಿದ್ದ ಸೊಮಾಲಿಯಾ ದೇಶದ ಮಹಿಳೆಯೊಬ್ಬರು ಹೆಬ್ಬಗೋಡಿ ಠಾಣೆ ಪೊಲೀಸರ ಕ್ಷಿಪ್ರ ಸ್ಪಂದನೆಯಿಂದ ನೆಮ್ಮದಿಯ ನಿಟ್ಟುಸಿರು ಬಿಟ್ಟಿರುವ ಘಟನೆ ಶುಕ್ರವಾರ ನಡೆದಿದೆ.

ಸೊಮಾಲಿಯಾದ ಹಲೀಮಾ ಒಮರ್ ಅಬಿಬಿ ಅವರು ಹೃದ್ರೋಗದಿಂದ ಬಳಲುತ್ತಿದ್ದ ತಮ್ಮ ಸಂಬಂಧಿಯೊಬ್ಬರನ್ನು ನಾರಾಯಣ ಹೃದಯಾಲಯಕ್ಕೆ ದಾಖಲಿಸಲು ನಗರಕ್ಕೆ ಆಗಮಿಸಿದ್ದರು.

ಶುಕ್ರವಾರ ಬೆಳಗ್ಗೆ 10.30ರ ಸುಮಾರಿಗೆ ಹಲೀಮಾ ಅವರು ತಮ್ಮ ಸಂಬಂಧಿ ಜತೆ ಆಟೊದಲ್ಲಿ ಹೆಬ್ಬಗೋಡಿ ಬಳಿಯ ನಾರಾಯಣ ಹೃದಯಾಲಯ ಆಸ್ಪತ್ರೆಗೆ ಬಂದಿದ್ದರು. ಈ ವೇಳೆ ಶಸ್ತ್ರಚಿಕಿತ್ಸೆಗಾಗಿ ತಂದಿದ್ದ 5 ಲಕ್ಷ ರೂ. ನಗದುಳ್ಳ ಬ್ಯಾಗ್ ಅನ್ನು ಆಟೊದಲ್ಲೇ ಮರೆತು ಆಸ್ಪತ್ರೆಯೊಳಗೆ ಹೋಗಿದ್ದಾರೆ. ಬ್ಯಾಗ್ ಮರೆತಿರುವುದು ನೆನಪಾಗಿ ವಾಪಸ್ ಬಂದು ನೋಡಿದಾಗ ಆಟೊ ಚಾಲಕ ಅಲ್ಲಿಂದ ತೆರಳಿದ್ದ.

ಇದರಿಂದ ಕಂಗಾಲಾದ ಹಲೀಮಾ, ಕಣ್ಣೀರಿಡುತ್ತಾ ಆಸ್ಪತ್ರೆ ಸಿಬ್ಬಂದಿಗೆ ವಿಷಯ ತಿಳಿಸಿದ್ದಾರೆ. ತಕ್ಷಣ ಆಸ್ಪತ್ರೆಯ ಸಿಬ್ಬಂದಿಯೊಬ್ಬರು ಹಲೀಮಾ ಅವರೊಂದಿಗೆ ಹೆಬ್ಬಗೋಡಿ ಠಾಣೆಗೆ ತೆರಳಿ ದೂರು ಕೊಡಿಸಿದ್ದಾರೆ.

ಅರ್ಧ ತಾಸಿನಲ್ಲಿ ಆಟೊ ಪತ್ತೆ: ದೂರು ಪಡೆದ ಇನ್ಸ್‌ಪೆಕ್ಟರ್ ಜಿ.ಸೋಮಶೇಖರ್, ಪಿಎಸ್‌ಐ ಶ್ರೀಕಾಂತ್ ನಾಯಕ್ ನೇತೃತ್ವದ ತಂಡವು ಆಟೊ ಚಾಲಕನ ಪತ್ತೆಗೆ ಕಾರ್ಯಾಚರಣೆ ಆರಂಭಿಸಿತು. ಸಿಸಿಟಿವಿ ದೃಶ್ಯಾವಳಿ ಜಾಡು ಹಿಡಿದು ಹೊರಟ ಪೊಲೀಸರ ತಂಡ ಅರ್ಧ ತಾಸಿನಲ್ಲೇ 20 ಕಿ.ಮೀ ದೂರ ಸಾಗಿದ್ದ ಆಟೊ ಚಾಲಕನನ್ನು ಪತ್ತೆ ಮಾಡಿದೆ. ಬಳಿಕ ಚಾಲಕನಿಗೆ ವಿಚಾರ ತಿಳಿಸಿ, ಹಣದ ಬ್ಯಾಗ್ ಅನ್ನು ವಶಕ್ಕೆ ಪಡೆದಿದೆ. ಬಳಿಕ ಹಲೀಮಾ ಅವರನ್ನು ಠಾಣೆಗೆ ಕರೆಸಿ, 5 ಲಕ್ಷ ರೂ. ನಗದುಳ್ಳ ಬ್ಯಾಗ್ ಅನ್ನು ಹಿಂದಿರುಗಿಸಿದ್ದಾರೆ. ಎಲೆಕ್ಟ್ರಾನಿಕ್ ಸಿಟಿ ವಿಭಾಗದ ಡಿಸಿಪಿ ನಾರಾಯಣ ಅವರು, ಇನ್ಸ್‌ಪೆಕ್ಟರ್ ನೇತೃತ್ವದ ತಂಡದ ಕಾರ್ಯವೈಖರಿಯನ್ನು ಶ್ಲಾಘಿಸಿದ್ದಾರೆ.

488 ಫ್ಲ್ಯಾಟ್‌ಗಳು ಆರ್ಮಿ ಹೌಸಿಂಗ್ ವೆಲ್ಫೇರ್ ಅಸೋಸಿಯೇಶನ್‌ಗೆ ಮಾರಾಟ

ಸ್ಕಂದಗಿರಿಯಲ್ಲಿ ಫ್ಲ್ಯಾಟ್ ಬುಕ್ಕಿಂಗ್‌ಗೆ ಅವಕಾಶ

■ **ಬಿ.ಎನ್.ಧನಂಜಯ** ಬೆಂಗಳೂರು
dhananjaya.gowda@timesofindia.com

ರಾಜಧಾನಿಯ ಮಧ್ಯಮ ಮತ್ತು ಉನ್ನತ ಮಧ್ಯಮ ವರ್ಗದವರ ಸ್ವಂತ ಸೂರಿನ ಕನಸು ನನಸಾಗಿಸಲು ಮುಂದಾಗಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ), ತನ್ನ ಪ್ರತಿಷ್ಠಿತ ವಸತಿ ಯೋಜನೆಯಾದ 'ಸ್ಕಂದಗಿರಿ' ಅಪಾರ್ಟ್‌ಮೆಂಟ್‌ನಲ್ಲಿನ ಫ್ಲ್ಯಾಟ್‌ಗಳ ಮಾರಾಟಕ್ಕೆ ಪ್ರಿ-ಬುಕ್ಕಿಂಗ್ ಆರಂಭಿಸಿದೆ.

ಕೋನದಾಸಪುರದ 1ನೇ ಹಂತದಲ್ಲಿ ಸ್ಕಂದಗಿರಿ ಹೆಸರಿನ ಅಪಾರ್ಟ್‌ಮೆಂಟ್ ನಿರ್ಮಿಸಲಾಗಿದೆ. ಇದು ಹಳೆಮದ್ರಾಸ್ ರಸ್ತೆ ಮತ್ತು ವೈಟ್‌ಫೀಲ್ಡ್-ಹೊಸಕೋಟೆ ರಸ್ತೆಗೆ ಹೊಂದಿಕೊಂಡಿದೆ. ಒಟ್ಟು 16 ಬ್ಲಾಕ್‌ಗಳಲ್ಲಿ 1,488 ಫ್ಲ್ಯಾಟ್‌ಗಳನ್ನು ನಿರ್ಮಿಸಲಾಗಿದೆ. ಈಗಾಗಲೇ 488 ಫ್ಲ್ಯಾಟ್‌ಗಳನ್ನು ಆರ್ಮಿ ಹೌಸಿಂಗ್ ವೆಲ್ಫೇರ್ ಅಸೋಸಿಯೇಶನ್‌ಗೆ ಮಾರಾಟ ಮಾಡಲಾಗಿದೆ.

ಒಂದು ಬಿಎಚ್‌ಕೆ ಫ್ಲ್ಯಾಟ್ 635.66 ಚ.ಅಡಿ ಹಾಗೂ 3 ಬಿಎಚ್‌ಕೆ ಫ್ಲ್ಯಾಟ್‌ಗಳು 1444.22 ಚ.ಅಡಿಯಷ್ಟು ವಿಸ್ತೀರ್ಣವನ್ನು ಹೊಂದಿವೆ. ಸದ್ಯ 8 ಬ್ಲಾಕ್‌ಗಳ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದ್ದು, 2027ರ ಮಾರ್ಚ್‌ಗೆ ಪೂರ್ಣಗೊಳಿಸಲು ಗಡುವು ನಿಗದಿಪಡಿಸಲಾಗಿದೆ. ಉಳಿದ ಬ್ಲಾಕ್‌ಗಳು ನಿರ್ಮಾಣ ಹಂತದಲ್ಲಿವೆ.

ಅಪಾರ್ಟ್‌ಮೆಂಟ್ ಆವರಣದಲ್ಲಿ ಈಜುಕೊಳ, ಬ್ಯಾಡ್ಮಿಂಟನ್ ಕೋರ್ಟ್, ಜಿಮ್ನೇಷಿಯಂ, ಯೋಗ ಕೇಂದ್ರ ಮೊದಲಾದ ಸೌಲಭ್ಯಗಳನ್ನು ಕಲ್ಪಿಸಲು ಉದ್ದೇಶಿಸಲಾಗಿದೆ.

ಮುಂಗಡ ಬುಕ್ಕಿಂಗ್‌ಗೆ ಅವಕಾಶ

ಭವಿಷ್ಯದ ಬೆಂಗಳೂರನ್ನು ದೃಷ್ಟಿಯಲ್ಲಿಟ್ಟುಕೊಂಡು ವಿನ್ಯಾಸಗೊಳಿಸಲಾಗಿರುವ ಕೋನದಾಸಪುರ(ವೈಟ್ ಫೀಲ್ಡ್) ಬಳಿಯ ಸ್ಕಂದಗಿರಿ ಬೃಹತ್ ವಸತಿ ಸಮುಚ್ಚಯದಲ್ಲಿ ಈಗಾಗಲೇ 488 ಫ್ಲ್ಯಾಟ್‌ಗಳನ್ನು ಆರ್ಮಿ ಹೌಸಿಂಗ್ ವೆಲ್ಫೇರ್ ಅಸೋಸಿಯೇಷನ್‌ಗೆ ಮಾರಾಟ ಮಾಡಲಾಗಿದೆ. ಇದೀಗ ಉಳಿದ ಫ್ಲ್ಯಾಟ್‌ಗಳ ಖರೀದಿಗೆ ಪ್ರಿ-ಬುಕ್ಕಿಂಗ್‌ಗೆ ಬಿಡಿಎ ಅವಕಾಶ ನೀಡಿದೆ.
ಹೆಚ್ಚಿನ ಮಾಹಿತಿಗೆ: 94831 66622, https://flats.bdakarnataka.in ಸಂಪರ್ಕಿಸಬಹುದು.

ಬೆಲೆ ಎಷ್ಟು?

3 ಬಿಎಚ್‌ಕೆ ಫ್ಲ್ಯಾಟ್‌ಗಳಿಗೆ 1.44 ಕೋಟಿ ರೂ. ಮತ್ತು 1 ಬಿಎಚ್‌ಕೆಗೆ 51 ಲಕ್ಷ ರೂ. ಬೆಲೆ ನಿಗದಿಪಡಿಸಲಾಗಿದೆ. 1 ಮತ್ತು 3 ಬಿಎಚ್‌ಕೆ ಫ್ಲ್ಯಾಟ್‌ಗಳಿಗೆ ಕ್ರಮವಾಗಿ ಪ್ರತಿ ಚ.ಅಡಿಗೆ 8,000 ರೂ.ನಿಂದ 10,000 ರೂ. ವರೆಗೆ ಬೆಲೆ ನಿಗದಿ ಮಾಡಲಾಗಿದೆ. ಸ್ಕಂದಗಿರಿ ವಸತಿ ಯೋಜನೆಯಲ್ಲಿ ಅತ್ಯಾಧುನಿಕ ಯೋಜನೆಗಳನ್ನು ರೂಪಿಸುವ ಉದ್ದೇಶವಿದೆ. ಯೋಜನೆ ಪೂರ್ಣಗೊಳ್ಳಲು ಒಂದು ವರ್ಷ ಬೇಕಾಗುತ್ತದೆ. ರಿಯಲ್ ಎಸ್ಟೇಟ್ ಮೌಲ್ಯವು ಈ ಭಾಗದಲ್ಲಿ ತೀವ್ರವಾಗಿ ಏರುತ್ತಿದೆ. ಖಾಸಗಿ ಡೆವಲಪರ್‌ಗಳು ಇದಕ್ಕಿಂತ ಹೆಚ್ಚು ಬೆಲೆ ನಿಗದಿಪಡಿಸುತ್ತಿದ್ದಾರೆ. ಅಲ್ಲದೆ, ಸ್ಕಂದಗಿರಿ ವಸತಿ ಸಮುಚ್ಚಯವು ಟೆಕ್ ಪಾರ್ಕ್‌ಗಳು ಹಾಗೂ ಪ್ರಮುಖ ರಸ್ತೆಗಳಿಗೆ ಸಮೀಪದಲ್ಲಿದೆ. ಹಾಗಾಗಿ, ಇಲ್ಲಿನ ಫ್ಲ್ಯಾಟ್‌ಗಳಿಗೆ ಹೆಚ್ಚಿನ ಬೇಡಿಕೆ ಸೃಷ್ಟಿಯಾಗಿದೆ.

3 ದ್ವಿಪಥ ಕಾಮಗಾರಿ ಆರಂಭಕ್ಕೆ ಸಿದ್ಧತೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಕೆ-ರೈಡ್, ಬೈಯಪ್ಪನಹಳ್ಳಿ-ಹೊಸೂರು ಮಾರ್ಗ ಸೇರಿ ಒಟ್ಟು ಮೂರು ಮಾರ್ಗಗಳಲ್ಲಿ ದ್ವಿಪಥೀಕರಣ ಕಾಮಗಾರಿ ಆರಂಭಿಸಲು ಮುಂದಾಗಿದೆ.

'ನೈಋತ್ಯ ರೈಲ್ವೆ'ಯ ಬೆಂಗಳೂರು ವಿಭಾಗದಲ್ಲಿ ಆನೇಕಲ್ ರಸ್ತೆ-ಹೀಲಲಿಗೆ ನಿಲ್ದಾಣಗಳ ನಡುವೆ ಮತ್ತು ಬೆಳ್ಳಂದೂರು ರಸ್ತೆ-ಬೈಯ್ಯಪ್ಪನಹಳ್ಳಿ 'ಎ' ಕ್ಯಾಬಿನ್ ನಡುವೆ ಜೋಡಿ ಹಳಿ ಅಳವಡಿಕೆಗೆ ಮುಂದಾಗಿದೆ. ಜತೆಗೆ, ಯಶವಂತಪುರ-ಚನ್ನಸಂದ್ರ ದ್ವಿಪಥೀಕರಣ ಯೋಜನೆ ಕೈಗೆತ್ತಿಕೊಂಡಿದೆ. ಯಶವಂತಪುರ, ಲೊಟ್ಟೆಗೊಲ್ಲಹಳ್ಳಿ, ಹೆಬ್ಬಾಳ ಮತ್ತು ಬಾಣಸವಾಡಿ ಯಾರ್ಡ್‌ಗಳನ್ನು ಒಳಗೊಂಡಂತೆ ಯಶವಂತಪುರ ಮತ್ತು ಬೈಯ್ಯಪ್ಪನಹಳ್ಳಿ 'ಎ' ಪ್ಯಾನೆಲ್ ನಡುವೆ ಹಳಿ ಅಳವಡಿಸಲಾಗುವುದು ಎಂದು ಕೆ-ರೈಡ್ ಅಧಿಕಾರಿಗಳು ತಿಳಿಸಿದ್ದಾರೆ.

ಅಣಕು ಕಾರ್ಯಾಚರಣೆ: ಬಿಸಿಲಿನ ಝಳದ ನಡುವೆ ಕಾಮಗಾರಿ ಕೈಗೊಂಡಿರುವ ಹಿನ್ನೆಲೆಯಲ್ಲಿ ಬಿಸಿಲಿನಿಂದ ಎದುರಾಗುವ ತುರ್ತು ವೈದ್ಯಕೀಯ ಪರಿಸ್ಥಿತಿ ಎದುರಿಸಲು ಬಿಎಸ್‌ಆರ್‌ಪಿ 4ನೇ ಕಾರಿಡಾರ್‌ನ ಕನಕ ವ್ಯಾಪ್ತಿಯ ಅಂಬೇಡ್ಕರ್‌ನಗರ ನಿಲ್ದಾಣದಲ್ಲಿ ಅಣಕು ಕಾರ್ಯಾಚರಣೆ ನಡೆಯಿತು. ಈ ವೇಳೆ ಸಿಬ್ಬಂದಿಗೆ ತರಬೇತಿಯನ್ನೂ ನೀಡಲಾಯಿತು. ನಿರ್ಜಲೀಕರಣ, ತೀವ್ರ ಅಸ್ವಸ್ಥರಾಗುವ ಕಲ್ಪಿತ ಸನ್ನಿವೇಶ ಸೃಷ್ಟಿಸಿ ಈ ಅಣಕು ಪ್ರದರ್ಶನ ನಡೆಸಲಾಯಿತು. ಸಂಕಷ್ಟಕ್ಕೆ ಸಿಲುಕಿದ ವ್ಯಕ್ತಿಯನ್ನು ತಕ್ಷಣವೇ ಗುರುತಿಸುವ, ಪ್ರಾಥಮಿಕ ಚಿಕಿತ್ಸೆ ನೀಡುವ, ತುರ್ತು ನಿರ್ವಹಣಾ ತಂಡಗಳ ನಡುವೆ ಸಂಪರ್ಕದ ಅಭ್ಯಾಸ ನಡೆಸಿದರು.

ಕಾಮಗಾರಿ ಪರಿಶೀಲನೆ

ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ್ ಸಿಂಗ್ ಶನಿವಾರ ಉಪನಗರ ರೈಲು ಯೋಜನೆಯ ಕನಕ ಕಾರಿಡಾರ್ ವ್ಯಾಪ್ತಿಯ ಹೀಲಲಿಗೆ, ಕಾರ್ಮೆಲರಾಂ ಮತ್ತು ಮಾರತ್‌ಹಳ್ಳಿ ನಿಲ್ದಾಣಗಳ ಪ್ಯಾಕೇಜ್ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿದರು. ಹೀಲಲಿಗೆ ನಿಲ್ದಾಣದ ಬಾಕ್ಸ್ ಕಾಮಗಾರಿಗಳು, ಹಳಿ ಯೋಜನೆಯನ್ನು ಚುರುಕುಗೊಳಿಸುವಂತೆ ಸೂಚಿಸಿದರು. ಕಾರ್ಮೆಲರಾಂ ಸಮೀಪದ ನಿವಾಸಿಗಳಿಗೆ ರೈಲ್ವೆ ಹಳಿ ದಾಟಲು ಸಂಯೋಜಿತ ಸ್ಕೈವಾಕ್ ನಿರ್ಮಾಣ ಮತ್ತು ಮಾರತ್‌ಹಳ್ಳಿ ಬಳಿ ಭೂಸ್ವಾಧೀನ ಪ್ರಕ್ರಿಯೆಯನ್ನು ಆದಷ್ಟು ಕಡಿಮೆ ಮಾಡುವ ನಿಟ್ಟಿನಲ್ಲಿ ಎಲಿವೇಟೆಡ್ ನಿಲ್ದಾಣದ ಯೋಜನೆಗಳ ಜಾರಿ ಕುರಿತಂತೆ ಮರುಪರಿಶೀಲಿಸಿದರು.

₹2.10 ಕೋಟಿ ಕಳೆದುಕೊಂಡ ವೃದ್ಧೆ

ದುಪ್ಪಟ್ಟು ಲಾಭದ ಆಮಿಷ

■ **ಮಂಜುನಾಥ್ ಲಗುಮೇನಹಳ್ಳಿ** ಬೆಂಗಳೂರು
manjunatha.s@timesofindia.com

ಸೈಬರ್ ಖದೀಮರು ಹಿರಿಯ ನಾಗರಿಕರನ್ನು ಗುರಿಯಾಗಿಸಿಕೊಂಡು ನಡೆಸುತ್ತಿರುವ ವಂಚನೆಯ ಸರಣಿ ಮುಂದುವರಿದಿದ್ದು, ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಅಧಿಕ ಲಾಭ ಕೊಡಿಸುವುದಾಗಿ ಆಸೆ ತೋರಿಸಿ 65 ವರ್ಷದ ಮಹಿಳೆಯೊಬ್ಬರಿಂದ 2.10 ಕೋಟಿ ರೂ. ಲೂಟಿ ಮಾಡಿದ್ದಾರೆ.

ಈ ಕುರಿತು ವಿಮಾನಯಾನ ಸಂಸ್ಥೆಯ ನಿವೃತ್ತ ಹಿರಿಯ ವ್ಯವಸ್ಥಾಪಕಿಯೊಬ್ಬರು ಕೇಂದ್ರ ವಿಭಾಗದ ಸೈಬರ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಇವರು ಒಂದು ವರ್ಷದ ಹಿಂದೆ ಆನ್‌ಲೈನ್‌ನಲ್ಲಿ ಪರಿಚಯವಾದ ನಕಲಿ ಷೇರು ಹೂಡಿಕೆ ತಜ್ಞರ ಮಾತುಗಳಿಗೆ ಮರುಳಾಗಿ ಹಂತ ಹಂತವಾಗಿ ಹಣ ಕಳೆದುಕೊಂಡಿದ್ದನ್ನು ದೂರಿನಲ್ಲಿ ವಿವರಿಸಿದ್ದಾರೆ.

2025ರ ಮೇ ತಿಂಗಳಿನಲ್ಲಿ ಸಂತ್ರಸ್ತೆಯು ಮೊಬೈಲ್‌ನಲ್ಲಿ ಫೇಸ್‌ಬುಕ್ ವೀಕ್ಷಿಸುತ್ತಿರುವಾಗ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಸಿಗಲಿದೆ ಎಂಬ ಜಾಹೀರಾತು ಗಮನಿಸಿದ್ದರು. ಜಾಹೀರಾತಿನಲ್ಲಿದ್ದ ಮೊಬೈಲ್ ಸಂಖ್ಯೆಗೆ ಕರೆ ಮಾಡಿ ಸುಮ್ಮನಾಗಿದ್ದರು.

ಆ ಬಳಿಕ ಅಂತಾರಾಷ್ಟ್ರೀಯ ದೂರವಾಣಿ ಸಂಖ್ಯೆಗಳಿಂದ ಸಂತ್ರಸ್ತೆಗೆ ನಿರಂತರವಾಗಿ ಕರೆ ಹಾಗೂ ಸಂದೇಶಗಳು ಬರಲಾರಂಭಿಸಿದ್ದವು. ಕರೆ ಸ್ವೀಕರಿಸಿದಾಗ ಹೂಡಿಕೆ ತಜ್ಞರ ನೆಪದಲ್ಲಿ ಪರಿಚಯಿಸಿಕೊಂಡ ವಂಚಕರು, 'fxroad.com' ಹೆಸರಿನ ಆ್ಯಪ್ ಡೌನ್ ಲೋಡ್ ಮಾಡಿಕೊಳ್ಳಲು ಸೂಚಿಸಿದ್ದಾರೆ.

ಅದರಂತೆ ಸಂತ್ರಸ್ತೆಯು ಆ್ಯಪ್ ಡೌನ್‌ಲೋಡ್ ಮಾಡಿಕೊಂಡ ಕೂಡಲೇ ವಂಚಕರು ಟೆಲಿಗ್ರಾಂನಲ್ಲಿ ಸಂದೇಶಗಳನ್ನು ಕಳುಹಿಸಿ ಹಣ ಹೂಡಿಕೆ ಮಾಡಲು ಬ್ಯಾಂಕ್ ಖಾತೆಗಳನ್ನು ನೀಡಿದ್ದಾರೆ. ಅವರ ಮಾತು ನಂಬಿದ ಸಂತ್ರಸ್ತೆಯು, ತಮ್ಮ ಎರಡು ಬ್ಯಾಂಕ್ ಖಾತೆಗಳಲ್ಲಿದ್ದ 2,10,89,441 ರೂ.ಗಳನ್ನು ಹಂತ ಹಂತವಾಗಿ ವರ್ಗಾವಣೆ ಮಾಡಿದ್ದಾರೆ.

ಕಳೆದ ಒಂದು ವರ್ಷದ ಅವಧಿಯಲ್ಲಿ ಆರೋಪಿಗಳು, ಪ್ರತಿ ಬಾರಿ ಹಣ ವರ್ಗಾವಣೆ ಮಾಡಿಸಿಕೊಳ್ಳುವಾಗಲೂ ನಾನಾ ತಂತ್ರಗಳನ್ನು ಹೆಣೆದಿದ್ದಾರೆ. ಕೊನೆಯದಾಗಿ ಹಣ ವರ್ಗಾಯಿಸಿದರೆ, ತಕ್ಷಣವೇ ಲಾಭದ ಹಣ ಸಿಗಲಿದೆ ಎಂದಿದ್ದಾರೆ. ಕೆಲವೊಮ್ಮೆ ಸಂತ್ರಸ್ತೆ ಹೆಸರಲ್ಲಿ ತೆರೆದಿದ್ದ ನಕಲಿ ಷೇರು ವ್ಯವಹಾರದ ಖಾತೆಯಲ್ಲಿ ಹಣದ ಮೊತ್ತ ತೋರಿಸಿ ಯಾಮಾರಿಸಿದ್ದಾರೆ.

ಸಂತ್ರಸ್ತೆಯ ಬ್ಯಾಂಕ್ ಖಾತೆಯಲ್ಲಿದ್ದ ಹಣವೆಲ್ಲಾ ಖಾಲಿಯಾಗಿದೆ. ಆನಂತರವೂ ದುಷ್ಕರ್ಮಿಗಳು ಮತ್ತಷ್ಟು ಹಣ ಹೂಡಿಕೆ ಮಾಡುವಂತೆ ಸೂಚಿಸಿದ್ದಾರೆ. ಇದರಿಂದ ಅನುಮಾನಗೊಂಡ ಸಂತ್ರಸ್ತೆಯು, ತಾನು ಸೈಬರ್ ವಂಚಕರ ಜಾಲಕ್ಕೆ ಸಿಲುಕಿ ಮೋಸ ಹೋಗಿರುವುದು ಗೊತ್ತಾಗಿದೆ. ಹೀಗಾಗಿ, ಮೇ 18ರಂದು ದೂರು ನೀಡಿದ್ದಾರೆ.

'ಅಪರಿಚಿತ ವಂಚಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದ್ದು, ಹಣ ವರ್ಗಾವಣೆ ಮಾಡಿರುವ ಖಾತೆಗಳ ಜಾಡು ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಹೂಡಿಕೆ ವಂಚನೆ ದಿಢೀರ್ ಏರಿಕೆ

ವಂಚನೆಗೆ ನಾನಾ ಮಾರ್ಗಗಳನ್ನು ಬಳಸುತ್ತಿರುವ ಸೈಬರ್ ವಂಚಕರು, ಇತ್ತೀಚೆಗೆ ಷೇರು ಮಾರುಕಟ್ಟೆ ಹೂಡಿಕೆ ಸಲಹೆ ನೆಪದಲ್ಲಿ ಹೆಚ್ಚು ವಂಚನೆ ಮಾಡುತ್ತಿದ್ದಾರೆ. ಇದೇ ವರ್ಷ ಏಪ್ರಿಲ್ ಅಂತ್ಯಕ್ಕೆ ರಾಜ್ಯದಲ್ಲಿ 800ಕ್ಕೂ ಹೆಚ್ಚು ಪ್ರಕರಣ ದಾಖಲಾಗಿವೆ. ಈ ಪ್ರಕರಣಗಳಲ್ಲಿ ಹಿರಿಯ ನಾಗರಿಕರು, ನಿವೃತ್ತ ಉದ್ಯೋಗಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ವಂಚನೆಗೊಳಗಾಗಿರುವುದು ಕಂಡುಬಂದಿದೆ. ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ, ದಿಢೀರ್ ಲಾಭ ಸಿಗಲಿದೆ ಎಂಬ ಸುಳ್ಳನ್ನು ನಾಗರಿಕರು ನಂಬುತ್ತಿದ್ದರು. ಇದು ಸೈಬರ್ ಖದೀಮರಿಗೆ ವರದಾನವಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಸಾಮಾಜಿಕ ಜಾಲತಾಣಗಳಲ್ಲಿ ಪರಿಚಯವಾಗುವ ಅಪರಿಚಿತರು ಹಾಗೂ ಹೂಡಿಕೆ ತಜ್ಞರ ಬಣ್ಣ ಬಣ್ಣದ ಮಾತುಗಳಿಗೆ ನಾಗರಿಕರು ಮರುಳಾಗಬಾರದು. ಒಮ್ಮೆಗೆ ಯಾವುದೇ ಷೇರು ಹೂಡಿಕೆ ಕಂಪನಿಗಳು ದುಪ್ಪಟ್ಟು ಲಾಭ ನೀಡುವುದಿಲ್ಲ. ಆನ್‌ಲೈನ್‌ನಲ್ಲಿ ನಕಲಿ ತಜ್ಞರು ಹೇಳುವ ಆ್ಯಪ್, ಲಿಂಕ್‌ಗಳನ್ನು ಕ್ಲಿಕ್ ಮಾಡಬಾರದು. ಅವುಗಳ ನೈಜತೆಯನ್ನು ಪರಿಶೀಲಿಸಬೇಕು. ಅನಧಿಕೃತ ಆ್ಯಪ್‌ಗಳನ್ನು ನಂಬಲೇಬಾರದು. ಸೈಬರ್ ವಂಚನೆಗೆ ಒಳಗಾಗಿರುವುದು ಗೊತ್ತಾದ ಕೂಡಲೇ ಸೈಬರ್ ಸಹಾಯವಾಣಿ 1930ಕ್ಕೆ ತಕ್ಷಣ ದೂರು ನೀಡಬೇಕು. ಎನ್ ಡಿಎಫ್‌ಸಿ ಕೇಂದ್ರ ಸರಕಾರ ಹಾಗೂ ಆರ್‌ಬಿಐ ಅನುಮೋದಿತ ಅಧಿಕೃತ ಕಂಪನಿಗಳಲ್ಲಿ ಮಾತ್ರ ಹೂಡಿಕೆ ವ್ಯವಹಾರ ನಡೆಸಬೇಕು.

-ರಾಜಾ ಇಮಾಮ್ ಕಾಸಿಂ
ಡಿಸಿಪಿ, ಸಿಸಿಬಿ-2

ಕಾಸಾಗ್ರ್ಯಾಂಡ್ ಮೂನ್‌ಡ್ಯಾನ್ಸ್ ಉದ್ಘಾಟನೆ



ಬೆಂಗಳೂರು: ಭಾರತದ ಪ್ರಮುಖ ರಿಯಲ್ ಎಸ್ಟೇಟ್ ಡೆವಲಪರ್‌ಗಳಲ್ಲಿ ಒಂದಾದ ಕಾಸಾಗ್ರ್ಯಾಂಡ್ ಮೈಸೂರು ರಸ್ತೆಯ ಕುಂಬಳಗೋಡಿನಲ್ಲಿ 'ಕಾಸಾಗ್ರ್ಯಾಂಡ್ ಮೂನ್ ಡ್ಯಾನ್ಸ್' ಯೋಜನೆ ಉದ್ಘಾಟಿಸಿದ್ದು, ಬುಕ್ಕಿಂಗ್ ಕೂಡ ಶುರುವಾಗಿದೆ.

ಆರ್.ಆರ್.ನಗರದಿಂದ ಕೇವಲ 15 ನಿಮಿಷಗಳ ಪ್ರಯಾಣದ ದೂರದಲ್ಲಿ 8.6 ಎಕರೆ ವಿಸ್ತೀರ್ಣದಲ್ಲಿ ಯೋಜನೆ ಅನುಷ್ಠಾನಗೊಳ್ಳುತ್ತಿದೆ. ಬೇಸ್‌ಮೆಂಟ್, ನೆಲಮಹಡಿ ಹಾಗೂ 4 ಅಂತಸ್ತು ಹೊಂದಿರುವ ಕಟ್ಟಡಗಳನ್ನು ನಿರ್ಮಿಸುತ್ತಿದ್ದು, 2 ಮತ್ತು 3 ಬಿಎಚ್ ಕೆಯ 504 ಫ್ಲ್ಯಾಟ್‌ಗಳು ಇರಲಿವೆ. ವಸತಿ ಸಮುಚ್ಚಯವು 71,500 ಚದರ ಅಡಿ ವಿಸ್ತೀರ್ಣದ ಮಧ್ಯಭಾಗದ ಥೀಮ್ಯಾಟಿಕ್ ಅಂಗಳಗಳನ್ನು ಹೊಂದಿದ್ದು, ಸುಮಾರು 4.5 ಎಕರೆಯಷ್ಟು ಮುಕ್ತ ಜಾಗವನ್ನು ಒಳಗೊಂಡಿದೆ.

ನಗರದಲ್ಲಿ ಇಕ್ಕಟ್ಟಾದ ವಾಸಸ್ಥಳಗಳು, ಖಾಸಗಿತನದಲ್ಲಿ ರಾಜಿ ಮಾಡಿಕೊಳ್ಳಬೇಕಾದ ಅನಿವಾರ್ಯತೆಯ ನಡುವೆ 'ಸ್ವಲ್ಪ ಅಡ್ಜಸ್ಟ್ ಮಾಡಿ' ಸಂಸ್ಕೃತಿಗೆ ಸವಾಲೊಡ್ಡುವ ನಿಟ್ಟಿನಲ್ಲಿ ವಿಶಾಲವಾದ, ಕಡಿಮೆ ಎತ್ತರದ ಪ್ರೀಮಿಯಂ ಅಪಾರ್ಟ್‌ಮೆಂಟ್ ಯೋಜನೆ ಇದಾಗಿದೆ. 65ಕ್ಕೂ ಹೆಚ್ಚು ಪ್ರೀಮಿಯಂ ಒಳಾಂಗಣ ಮತ್ತು ಹೊರಾಂಗಣ ಸೌಲಭ್ಯಗಳನ್ನು ನೀಡಲಾಗಿದೆ. ಬೆಂಗಳೂರಿನಲ್ಲೇ ಮೊದಲ ಬಾರಿಗೆ ಎನ್ನಬಹುದಾದ ಓಪನ್ ಟೆರೇಸ್ ಪರಿಕಲ್ಪನೆಯ 20,300 ಚದರ ಅಡಿಯ ಬಹುಮಹಡಿ ಕ್ಲಬ್ ಹೌಸ್ ಮತ್ತು 7,800 ಚದರ ಅಡಿ ವಿಸ್ತೀರ್ಣದ ವಿಶಾಲವಾದ ಈಜುಕೊಳವನ್ನು ನಿರ್ಮಿಸಲಾಗಿದೆ. ಈ ಯೋಜನೆಯು ಕರ್ನಾಟಕ ರೇರಾ ಅಡಿಯಲ್ಲಿ ನೋಂದಣಿಯಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಕಂಪನಿಯ ಅಧಿಕೃತ ವೆಬ್‌ಸೈಟ್ www.casa-grand.co.inಗೆ ಭೇಟಿ ನೀಡಬಹುದಾಗಿದೆ.

70 ಬಿ-ಖಾತಾ ಸ್ವತ್ತುಗಳಿಗೆ ಎ-ಖಾತಾ ವಿತರಣೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪಂಚ ಪಾಲಿಕೆಗಳ ವ್ಯಾಪ್ತಿಯ 52 ಕಡೆ ಶನಿವಾರ ನಡೆದ 'ನನ್ನ ಇ-ಖಾತಾ, ನನ್ನ ಹಕ್ಕು' ಅಭಿಯಾನದಲ್ಲಿ 70 ಬಿ-ಖಾತಾ ಸ್ವತ್ತುಗಳಿಗೆ ಎ-ಖಾತಾ ನೀಡಲಾಗಿದೆ.

ಬಿ-ಖಾತಾದಿಂದ ಎ-ಖಾತಾಗೆ ಪರಿವರ್ತನೆ ಕೋರಿ 304 ಅರ್ಜಿಗಳು ಸಲ್ಲಿಕೆಯಾದವು. ಈ ಪೈಕಿ 70 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಹಾಗೆಯೇ, 809 ಇ-ಖಾತಾ ಅರ್ಜಿಗಳ ಪೈಕಿ 573 ಅರ್ಜಿಗಳನ್ನು ಇತ್ಯರ್ಥಪಡಿಸಲಾಗಿದೆ. 356 ಅರ್ಜಿಗಳು ವಿಲೇವಾರಿಗೆ ಬಾಕಿ ಇವೆ. ಹೊಸ ಖಾತಾ ಕೋರಿ ಸಲ್ಲಿಕೆಯಾದ 234 ಅರ್ಜಿಗಳ ಪೈಕಿ 66 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಇ-ಖಾತಾ, ಮ್ಯುಟೇಷನ್, ತಿದ್ದುಪಡಿ, ಬಿ-ಖಾತಾದಿಂದ ಎ-ಖಾತಾ, ಹೊಸ ಖಾತೆ ಕೋರಿ ಸಲ್ಲಿಕೆಯಾಗಿದ್ದ 1972 ಅರ್ಜಿಗಳ ಪೈಕಿ 1164 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಇನ್ನು, 1008 ಅರ್ಜಿಗಳು ಬಾಕಿಯಿವೆ ಎಂದು ಜಿಬಿಎ ಕಂದಾಯ ವಿಭಾಗದ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಹೊಸ ಮತ್ತು ಬಾಕಿಯಿರುವ ಒಟ್ಟು 285 ಇ-ಖಾತಾ ಅರ್ಜಿಗಳ ಪೈಕಿ 113 ವಿಲೇವಾರಿ ಮಾಡಲಾಗಿದೆ. ಪಶ್ಚಿಮ ನಗರ ಪಾಲಿಕೆ 241ರ ಪೈಕಿ 123, ಉತ್ತರ ನಗರ ಪಾಲಿಕೆ 52ರಲ್ಲಿ 28, ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಲ್ಲಿಕೆಯಾದ 295 ಅರ್ಜಿಗಳ ಪೈಕಿ 231 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಇನ್ನು ಕೇಂದ್ರ ನಗರ ಪಾಲಿಕೆಗೆ ಸಲ್ಲಿಕೆಯಾಗಿದ್ದ ಒಟ್ಟು 112ರಲ್ಲಿ 78 ಅರ್ಜಿಗಳನ್ನು ಇತ್ಯರ್ಥಪಡಿಸಲಾಗಿದೆ.

ಕಾನ್‌ಸ್ಟೆಬಲ್ ಪತ್ನಿ ಆತ್ಮಹತ್ಯೆ: ವರದಕ್ಷಿಣೆ ಕಿರುಕುಳ ಆರೋಪ

ಬೆಂಗಳೂರು: ಪೊಲೀಸ್ ಕಾನ್‌ಸ್ಟೆಬಲ್ ಪತ್ನಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕೆ.ಆರ್.ಪುರ ಪೊಲೀಸ್ ವಸತಿ ಸಮುಚ್ಚಯದಲ್ಲಿ ಶುಕ್ರವಾರ ನಡೆದಿದೆ. ಲಕ್ಷ್ಮೀಪ್ರಿಯಾ (27) ಆತ್ಮಹತ್ಯೆ ಮಾಡಿಕೊಂಡವರು. ಮಗಳ ಆತ್ಮಹತ್ಯೆಗೆ ಅಳಿಯ ರಾಜೇಶ್ ಆರಾಧ್ಯ ಹಾಗೂ ಅವರ ಕುಟುಂಬದವರ ವರದಕ್ಷಿಣೆ ಕಿರುಕುಳವೇ ಕಾರಣ ಎಂದು ಪೋಷಕರು ಆರೋಪಿಸಿ, ಕೆ.ಆರ್.ಪುರ ಠಾಣೆಗೆ ದೂರು ನೀಡಿದ್ದಾರೆ. ಈ ಸಂಬಂಧ ಎಚ್‌ಎಎಲ್ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ರಾಜೇಶ್ ಹಾಗೂ ಅವರ ಪೋಷಕರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿ, ತನಿಖೆ ಕೈಗೊಂಡಿದ್ದಾರೆ. ಮಳವಳ್ಳಿ ಮೂಲದ ಲಕ್ಷ್ಮೀಪ್ರಿಯಾ ಹಾಗೂ ಮೈಸೂರಿನ ರಾಜೇಶ್ 2023ರಲ್ಲಿ ವಿವಾಹವಾಗಿದ್ದರು. ದಂಪತಿಗೆ 8 ತಿಂಗಳ ಹೆಣ್ಣು ಮಗುವಿದೆ. ಕೆ. ಆರ್.ಪುರ ಪೊಲೀಸ್ ವಸತಿ ಸಮುಚ್ಚಯದಲ್ಲಿ ದಂಪತಿ ನೆಲೆಸಿದ್ದರು. ಲಕ್ಷ್ಮೀಪ್ರಿಯಾ ಅವರು ಶುಕ್ರವಾರ ಮಧ್ಯಾಹ್ನ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸ್ವಲ್ಪ ಸಮಯದ ಬಳಿಕ ಕುಟುಂಬಸ್ಥರಿಗೆ ಆತ್ಮಹತ್ಯೆ ಮಾಡಿಕೊಂಡಿರುವ ವಿಷಯ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆತ್ಮಹತ್ಯೆಗೂ ಮುನ್ನ ಲಕ್ಷ್ಮೀಪ್ರಿಯಾ, ಸಹೋದರನಿಗೆ ತನ್ನ ಮೊಬೈಲ್‌ನ ಪಾಸ್‌ವರ್ಡ್‌ನ್ನು ವಾಟ್ಸ್‌ಆ್ಯಪ್‌ನಲ್ಲಿ ಕಳುಹಿಸಿದ್ದರು. ಇದರಿಂದ ಅನುಮಾನಗೊಂಡ ಸಹೋದರ, ಕರೆ ಮಾಡಿದ್ದಾನೆ. ಆದರೆ, ಲಕ್ಷ್ಮೀಪ್ರಿಯಾ ಸ್ವೀಕರಿಸಿಲ್ಲ. ಪುತ್ರಿಯ ಆತ್ಮಹತ್ಯೆಗೆ ಅಳಿಯ ಹಾಗೂ ಅವರ ಕುಟುಂಬಸ್ಥರ ದೈಹಿಕ, ಮಾನಸಿಕ ಹಾಗೂ ವರದಕ್ಷಿಣೆ ಕಿರುಕುಳವೇ ಕಾರಣ ಎಂದು ಲಕ್ಷ್ಮೀಪ್ರಿಯಾ ಪೋಷಕರು ಆರೋಪಿಸಿದ್ದಾರೆ. ರಾಜೇಶ್ ಹಾಗೂ ಲಕ್ಷ್ಮೀಪ್ರಿಯಾ ನಡುವೆ ಸಣ್ಣಪುಟ್ಟ ವಿಚಾರಗಳಿಗೆ ಆಗಾಗ್ಗೆ ಜಗಳ ನಡೆಯುತ್ತಿತ್ತು ಎಂಬುದು ಗೊತ್ತಾಗಿದೆ. ಮೊಬೈಲ್ ಜಪ್ತಿ ಮಾಡಲಾಗಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

- ದಂಪತಿ ನಡುವೆ ಕೌಟುಂಬಿಕ ಜಗಳ
- 8 ತಿಂಗಳ ಮಗು ಬಿಟ್ಟು ನೇಣಿಗೆ ಶರಣಾದ ತಾಯಿ

ಎಲ್ಲಿ-ಏನು?
ಭಾನುವಾರ

ಹಾಲುಮತ ಉದ್ಯಮಿಗಳ ಸಂಘ: ಕನಕೋದ್ಯಮಿ ಕಾರ್ಯಕ್ರಮ. ಸಮುದಾಯದ ಉದ್ಯಮಿಗಳ ಸಮ್ಮಿಲನ ಹಾಗೂ ಉದ್ಯಮಿಗಳಿಗೆ ಅವಕಾಶಗಳ ಅರಿವು ಕಾರ್ಯಕ್ರಮ. ಉದ್ಘಾಟನೆ : ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ
ಸ್ಥಳ: ಕನಕದಾಸ ಸಮುದಾಯ ಭವನ, ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆ, ಜ್ಞಾನಗಂಗಾ ನಗರ. ಬೆಳಗ್ಗೆ 10.

ಉದಯಭಾನು ಕಲಾಸಂಘ: ಕಣ್ಣಿನ ಪೊರೆ ಉಚಿತ ಶಸ್ತ್ರ ಚಿಕಿತ್ಸೆಗಾಗಿ ತಪಾಸಣೆ ಹಾಗೂ ದಂತ ಪರೀಕ್ಷೆ ಶಿಬಿರ.
ಸ್ಥಳ: ಸಂಘದ ಆವರಣ, ಕೆಂಪೇಗೌಡನಗರ. ಬೆಳಗ್ಗೆ 10.

ವಚನಜ್ಯೋತಿ ಬಳಗ: ವಚನ ಅಭಿನಂದನೆ ಕಾರ್ಯಕ್ರಮ. ಬೆಳಗ್ಗೆ 10ಕ್ಕೆ ವಚನಗಳು ಮತ್ತು ದಾಂಪತ್ಯಗೀತೆಗಳ ಗಾಯನ. ಮಧ್ಯಾಹ್ನ 12ಕ್ಕೆ ಸಭಾ ಕಾರ್ಯಕ್ರಮ. ಪ್ರಾಸ್ತಾವಿಕ ನುಡಿ: ಬಳಗದ ಅಧ್ಯಕ್ಷ ಎಸ್.ಪಿನಾಕಪಾಣಿ. ಉದ್ಘಾಟನೆ : ಬಸವ ಸಮಿತಿಯ ಹಿರಿಯ ಉಪಾಧ್ಯಕ್ಷ ಪ್ರಭುದೇವ ಜಿಗಟೇರಿ.
ಸ್ಥಳ: ಡಾ.ಎಂ.ಚಿದಾನಂದ ಮೂರ್ತಿ ಸಭಾಂಗಣ, ಪಾಲಿಕೆ ಸೌಧ, ವಿಜಯನಗರ.

ಶ್ರೀ ಗುರು ಪಂಚಾಕ್ಷರಿ ಪುಟ್ಟರಾಜು ಸಂಗೀತ ಶಾಲೆ: ಕನ್ನಡ ಡಿಂಡಿಮದ ಸಾಂಸ್ಕೃತಿಕ ಸಂಭ್ರಮ. ಪುಸ್ತಕ ಬಿಡುಗಡೆ, ಗೀತ ಗಾಯನ, ಪ್ರಶಸ್ತಿ ಪ್ರದಾನ ಸಮಾರಂಭ. ಉದ್ಘಾಟನೆ : ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಸದಸ್ಯ ದೇವರಾಜು ಡಿ. (ಪದ ದೇವರಾಜು)
ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3.

ಗ್ರಂಥದ ಗುಡಿ- ಗ್ರಂಥಾಲಯ: ವಿ.ಎಸ್.ಕುಮಾರ್ ಅವರ 'ಬಂದು ಹೋಗುವ ನಡುವೆ' ಕೃತಿ ಲೋಕಾರ್ಪಣೆ.

ಸ್ಥಳ: ಗ್ರಂಥಾಲಯ ಆವರಣ, ಕುಮಾರಸ್ವಾಮಿ ಬಡಾವಣೆ. ಸಂಜೆ 5.30.

ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್: 11ನೇ ರಾಷ್ಟ್ರೀಯ ನೃತ್ಯ ಕಲಾ ಮೇಳ ಹಾಗೂ 75ನೇ ರಾಜ್ಯಮಟ್ಟದ ಸಾಂಸ್ಕೃತಿಕ ಕಲಾ ಪ್ರತಿಭೋತ್ಸವ.
ಸ್ಥಳ: ಸಂಸ ರಂಗಮಂದಿರ, ರವೀಂದ್ರ ಕಲಾಕ್ಷೇತ್ರ. ಸಂಜೆ 4ರಿಂದ 9.30ರವರೆಗೆ.

ಕಾರ್ಯಕ್ರಮ ಆಹ್ವಾನ ಪತ್ರಿಕೆ ವಾಟ್ಸ್‌ಆ್ಯಪ್ ಮಾಡಿ
76766 68588

ಜಿಕೆವಿಕೆಯಲ್ಲಿ ಯಶಸ್ವಿಯಾಗಿ ನಡೆದ ರೈತ ಸಂತೆ

■ **ವಿಕ ಸುದ್ದಿಲೋಕ** ಬೆಂಗಳೂರು

ಜಿಕೆವಿಕೆ ಆವರಣದ ಗಣಪತಿ ದೇವಸ್ಥಾನ ಸಮೀಪದ ಗುಂಡು ತೋಪಿನಲ್ಲಿ ಶನಿವಾರ ರೈತ ಸಂತೆಯನ್ನು ವಿಭಿನ್ನವಾಗಿ ಆಯೋಜಿಸಲಾಗಿದ್ದು, ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ರೈತ ಸಂತೆಯಲ್ಲಿ ನೇರಳೆ ಜ್ಯೂಸ್ ಶಾಟ್ಸ್, ಸ್ವೀಟ್ ಕಾರ್ನ್ ಸುಲಿಯುವ ಯಂತ್ರ, ಪರಿಸರ ಸ್ನೇಹಿ ಆಯುರ್ವೇದಿಕ್ ಹೇರ್ ಡೈ, ಬೆಟ್ಟದ ನೆಲ್ಲಿಕಾಯಿ, ಮಾವು, ಹಲಸು, ಮುಳ್ಳು ಬದನೆಕಾಯಿ, ನಾಟಿ ಸೌತೆಕಾಯಿ ಹಾಗೂ ಇತರೆ ಉತ್ಪನ್ನಗಳು ಗ್ರಾಹಕರ ಮನಸ್ಸನ್ನು ಆಕರ್ಷಿಸಿದವು.

ನೇರಳೆ ಹಣ್ಣುಗಳಿಂದ ತಯಾರಿಸಲಾದ ಆರೋಗ್ಯ ಪೂರ್ಣ ಪಾನೀಯವು ನೈಸರ್ಗಿಕ ರುಚಿ ಮತ್ತು ತಾಜಾತನದಿಂದ ಜನರ ಬಾಯಲ್ಲಿ ನೀರೂರಿಸಿತು. ಇದು ಬೇಸಿಗೆಗೆ ಉತ್ತಮ ಪಾನೀಯವಾಗಿದೆ.

ಸಿಹಿ ಜೋಳದ ತೆನೆಯಲ್ಲಿನ ಕಾಳುಗಳನ್ನು ಸಲಭವಾಗಿ ಬೇರ್ಪಡಿಸುವ ಸ್ವೀಟ್ ಕಾರ್ನ್ ಸುಲಿಯುವ ಯಂತ್ರವು ಎಲ್ಲರ ಗಮನ ಸೆಳೆಯಿತು. ಸಾರ್ವಜನಿಕರು ಇದರ ಕಾರ್ಯ ವೈಖರಿಯನ್ನು ಆಸಕ್ತಿಯಿಂದ ವೀಕ್ಷಿಸಿದರು.

ರಾಸಾಯನಿಕ ಮುಕ್ತ ಹೇರ್ ಡೈ, ಸಿರಿಧಾನ್ಯಗಳ ಮಿಲೆಟ್ಸ್ ಮಿಶ್ರಣ, ಬೆಟ್ಟದ ನೆಲ್ಲಿಕಾಯಿ, ಮಾವು ಮತ್ತು ಹಲಸು, ಮುಳ್ಳು ಬದನೆಕಾಯಿ, ನಾಟಿ ಸೌತೆಕಾಯಿ, ಸುಗಂಧ ಮತ್ತು ಔಷಧೀಯ ಸಸ್ಯಗಳು, ಅಲಂಕಾರಿಕ ಗಿಡಗಳು, ಜೈವಿಕ ಗೊಬ್ಬರಗಳು, ಕೃಷಿ ಯಂತ್ರೋಪಕರಣಗಳು, ಎರೆಹುಳು ಗೊಬ್ಬರ, ಸಸ್ಯ ಸಂರಕ್ಷಣೆ, ಜೈವಿಕ ಕೀಟನಾಶಕಗಳು, ಕರಕುಶಲ ವಸ್ತುಗಳು, ಅಡಕೆ ಉತ್ಪನ್ನಗಳು, ರೇಷ್ಮೆ ಕೃಷಿಯ ಉಪ ಉತ್ಪನ್ನಗಳು, ಜೇನು ಕೃಷಿ, ವಾಣಿಜ್ಯೀಕರಣ ಉತ್ಪನ್ನಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡಲಾಯಿತು. ಅಲಂಕಾರಿಕ ಮೀನುಗಳು, ಎತ್ತಿನ ಬಂಡಿ ಸವಾರಿಯೂ ಗಮನ ಸೆಳೆಯಿತು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಆಯೋಜಿಸಿದ್ದ 'ಕೃಷಿ ಪರಿಸರದೆಡೆಗೆ- ನಮ್ಮ ನಡಿಗೆ' ಕಾರ್ಯಕ್ರಮಕ್ಕೆ 150ಕ್ಕೂ ಹೆಚ್ಚು ನಗರ ವಾಸಿಗಳು ಸ್ವಯಂ ಪ್ರೇರಣೆಯಿಂದ ಭಾಗವಹಿಸಿ 6 ಕಿ.ಮೀ ನಡಿಗೆಯಲ್ಲಿ ಪಾಲ್ಗೊಂಡು ಕೃಷಿ ಸಂಬಂಧಿತ ವಿಷಯಗಳ ಕುರಿತು ಸಮಗ್ರ ಮಾಹಿತಿ ಪಡೆದರು.

ಕೃಷಿ ವಿದ್ಯಾನಿಲಯದ ಕುಲಪತಿ ಡಾ. ಎಸ್.ವಿ.ಸುರೇಶ, ವಿಸ್ತರಣಾ ನಿರ್ದೇಶಕರಾದ ಡಾ. ವೈ.ಎನ್.ಶಿವಲಿಂಗಯ್ಯ, ಸಂಶೋಧನಾ ನಿರ್ದೇಶಕ ಡಾ. ಮೂಡಲಗಿರಿಯಪ್ಪ, ಸಹ ವಿಸ್ತರಣಾ ನಿರ್ದೇಶಕ ಡಾ. ಕೆ.ಪಿ.ರಘುಪ್ರಸಾದ್ ಮತ್ತು ಇತರೆ ಅಧಿಕಾರಿಗಳು ಭಾಗವಹಿಸಿದ್ದರು.

ಬೇಸಿಗೆ ಶಿಬಿರ

ಕೃಷಿ ವಿಶ್ವವಿದ್ಯಾನಿಲಯದ ಸಿಬ್ಬಂದಿ ತರಬೇತಿ ಘಟಕವು ಮಕ್ಕಳಿಗೆ ಬಿತ್ತನೆಯಿಂದ ಬೆಳೆಯುವರೆಗೆ- 'ಕೃಷಿ ಪಯಣ' ಎಂಬ ವಿನೂತನ ಶಿಬಿರವನ್ನು ಹಮ್ಮಿಕೊಂಡಿದೆ. ಮೇ 25 ರಿಂದ 29ರವರೆಗೆ ನಡೆಯಲಿರುವ ಶಿಬಿರದಲ್ಲಿ 8 ರಿಂದ 14 ವರ್ಷದೊಳಗಿನ ಮಕ್ಕಳು ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಮೊ: 85532 15997



ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಜೆಡಿಎಸ್ ಘಟಕದ ಅಧ್ಯಕ್ಷ ಎಚ್. ಎಂ. ರಮೇಶ್ ಗೌಡ ಅವರು ವಿಧಾನ ಪರಿಷತ್ ಸದಸ್ಯ ಟಿ.ಎನ್ ಜವರಾಯಿಗೌಡ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು. ಬಿಬಿಎಂಪಿ ಮಾಜಿ ಸದಸ್ಯ ಹನುಮಂತೇಗೌಡ, ಜಿಪಂ ಮಾಜಿ ಸದಸ್ಯೆ ಲತಾ ಹನುಮಂತೇ ಗೌಡ, ಯುವ ಮುಖಂಡ ಸಂತೋಷ್ ಜವರಾಯಿಗೌಡ ಹಾಗೂ ಕ್ಷೇತ್ರದ ಹಲವಾರು ಮುಖಂಡರು ಉಪಸ್ಥಿತರಿದ್ದರು.

ಫ್ರೀಡಂ ಬೆಂಗಳೂರು ಹಾಫ್ ಮ್ಯಾರಥಾನ್ ಇಂದು

ಬೆಂಗಳೂರು: ಕಲ್ಕಿ ಸ್ಪೋರ್ಟ್ಸ್ ಇಂಡಿಯಾ ಆಯೋಜಿಸಿರುವ 'ಫ್ರೀಡಂ ಬೆಂಗಳೂರು ಹಾಫ್ ಮ್ಯಾರಥಾನ್-2026' ಓಟದ ಸ್ಪರ್ಧೆ ಹೊಸಕೆರೆಹಳ್ಳಿ ಸಮೀಪದ ನೈಸ್ ಟೋಲ್ ಬಳಿ ಭಾನುವಾರ ನಡೆಯಲಿದೆ.

ನೈಸ್ ರಸ್ತೆಯಲ್ಲಿ ನಡೆಯಲಿರುವ ಈ ಐತಿಹಾಸಿಕ ಓಟದಲ್ಲಿ ಭಾಗಿಯಾಗಲು 6 ಸಾವಿರಕ್ಕೂ ಹೆಚ್ಚು ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಈ ಸ್ಪರ್ಧೆಯು ಫಿಟ್ನೆಸ್ ಹಾಗೂ ಜೀವನಶೈಲಿಯ ಸಂಭ್ರಮಾಚರಣೆಗೆ ವೇದಿಕೆ ಕಲ್ಪಿಸಲಿದೆ.

ಬೆಳಗ್ಗೆ 5.45ಕ್ಕೆ ಫ್ರೀಡಂ ಬೆಂಗಳೂರು ಹಾಫ್ ಮ್ಯಾರಥಾನ್-2026 ಓಟ ಆರಂಭವಾಗಲಿದ್ದು, 21.1 ಕಿ.ಮೀ ಹಾಫ್ ಮ್ಯಾರಥಾನ್, 10 ಕಿ.ಮೀ ಮತ್ತು 5 ಕಿ.ಮೀ ಓಟದ ವಿಭಾಗಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿರಲಿದೆ. ಅಥ್ಲೀಟ್‌ಗಳು, ಫಿಟ್ನೆಸ್ ಪ್ರೇಮಿಗಳು, ಕಾರ್ಪೊರೇಟ್ ತಂಡಗಳು ಹಾಗೂ ರನ್ನಿಂಗ್ ಕ್ಲಬ್‌ಗಳು ಈ ಓಟದಲ್ಲಿ ಭಾಗವಹಿಸಲಿದ್ದು, ಮೊದಲ ಬಾರಿಗೆ ಓಟದಲ್ಲಿ ಭಾಗಿಯಾಗುವವರಿಗೂ ಅವಕಾಶ ನೀಡಲಾಗಿದೆ.

ಓಟದಲ್ಲಿ ಭಾಗಿಯಾಗುವ ಎಲ್ಲರಿಗೂ ಟೈಮ್ಡ್‌ಬಿಬ್ ಪ್ರೀಮಿಯಂ ಡ್ರೈ-ಫಿಟ್-ಟೀ ಶರ್ಟ್, ಫಿನಿಶರ್ಸ್ ಮೆಡಲ್, ಹೈಡ್ರೇಷನ್ ಬೆಂಬಲದ ಜತೆಗೆ ವೈದ್ಯಕೀಯ ಸೇವೆ, ಸ್ವಯಂಸೇವಕರ ನೆರವು ಸಿಗಲಿದೆ.

ಎಲ್ಲಾ ಓಟಗಾರರ ಅನುಕೂಲಕ್ಕಾಗಿ ಓಟದ ಮಾರ್ಗದಲ್ಲಿನ ಆಯಕಟ್ಟಿನ ಸ್ಥಳಗಳಲ್ಲಿ ಸಪೋರ್ಟ್ ಪಾಯಿಂಟ್, ಡಿಸ್ಟೆನ್ಸ್ ಮಾರ್ಕ್‌ಗಳು ಹಾಗೂ ರೂಟ್ ಬ್ಯಾಂಡಿಂಗ್ ವ್ಯವಸ್ಥೆ ಇರಲಿದೆ.

ಇಂದು ಮುತ್ತು ಮಾರಿಯಮ್ಮ ಕರಗ

ಬೆಂಗಳೂರು: ಶಂಕರಮಠ ಮಹಾತ್ಮ ಗಾಂಧಿ ನಗರ ಮುತ್ತು ಮಾರಿಯಮ್ಮ ದೇವಸ್ಥಾನದ 49ನೇ ವರ್ಷದ ಕರಗ ಮತ್ತು ಅಗ್ನಿಕುಂಡ ಮಹೋತ್ಸವ ಭಾನುವಾರ ನಡೆಯಲಿದೆ.

ಮಧ್ಯಾಹ್ನ 12 ರಿಂದ 1.30ರವರೆಗೆ ದೇವಿಗೆ ವಿಶೇಷ ಹೂವಿನ ಅಲಂಕಾರ, ಅಂಬಲಿ ಸೇವೆ, ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ ನಡೆಯಲಿದೆ. ಸಂಜೆ 6ರಿಂದ 7ರವರೆಗೆ 'ಅಗ್ನಿಕುಂಡ' ಉತ್ಸವ ಬಳಿಕ ವಿಷ್ಣುದಾದ ಯುವಕರ ಸಂಘದ ವತಿಯಿಂದ ಅನ್ನ ಸಂತರ್ಪಣೆ ನಡೆಯಲಿದೆ. ಸಂಜೆ 7ಕ್ಕೆ ಮುತ್ತು ಮಾರಿಯಮ್ಮ ಕರಗ ಆರಂಭವಾಗಲಿದೆ. ಪ್ರಮುಖ ಬೀದಿಗಳಲ್ಲಿ ಕರಗ ಸಾಗಲಿದೆ. ಶಾಸಕ ಕೆ.ಗೋಪಾಲಯ್ಯ ಮತ್ತು ಹೇಮಲತಾ ಗೋಪಾಲಯ್ಯ ಪಾಲ್ಗೊಳ್ಳಲಿದ್ದಾರೆ ಎಂದು ದೇಗುಲ ಸಮಿತಿ ಅಧ್ಯಕ್ಷ ಪಿ. ಕುಮಾರ್ ಹಾಗೂ ಖಜಾಂಚಿ ಕೃಷ್ಣಮೂರ್ತಿ ತಿಳಿಸಿದ್ದಾರೆ.

ಕರಗ ಪ್ರಯುಕ್ತ ಶುಕ್ರವಾರದಿಂದಲೇ ನಾನಾ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ ಸಿಕ್ಕಿದೆ. ಶನಿವಾರ ಪೀರಾಭಿಷೇಕ, 'ಗಂಗೆ ಕರಗ ಮೆರವಣಿಗೆ' ನಡೆಯಿತು.

ಆಮೆ ದಿನ ಪ್ರಯುಕ್ತ ಪೋಸ್ಟ್‌ಕಾರ್ಡ್ ಬಿಡುಗಡೆ

ಬೆಂಗಳೂರು ದಕ್ಷಿಣ: ಭಾರತೀಯ ಅಂಚೆ ಇಲಾಖೆ, ಪೋಸ್ಟ್‌ಕ್ರಾಸಿಂಗ್ ವೆಲ್ ಫೇರ್ ಸೊಸೈಟಿ ಆಫ್ ಇಂಡಿಯಾ ಮತ್ತು ಪೋಸ್ಟ್ ಕಾರ್ಡ್ಸ್ ವಿಲ್ಲೆ ಸಹಯೋಗದೊಂದಿಗೆ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ವಿಶ್ವ ಆಮೆ ದಿನ ಆಚರಿಸಲಾಯಿತು. ಇದೇ ವೇಳೆ, ನೆಲದ ಆಮೆ, ಕಡಲಾಮೆ ಮತ್ತು ಸಿಹಿನೀರಿನ ಆಮೆಗಳನ್ನು ಒಳಗೊಂಡ ಒಂಬತ್ತು ಶೈಕ್ಷಣಿಕ ಪೋಸ್ಟ್‌ಕಾರ್ಡ್‌ಗಳನ್ನು ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಆಮೆಗಳ ಜಾತಿಗಳ ನಡುವಿನ ವ್ಯತ್ಯಾಸಗಳ ಬಗ್ಗೆ ವಿವರವಾದ ಮಾಹಿತಿ ನೀಡಲಾಯಿತು. ಆಮೆ ಸಂರಕ್ಷಣಾ ಪ್ರಯತ್ನಗಳಿಗೆ ನಾವು ಹೇಗೆ ಕೊಡುಗೆ ನೀಡಬಹುದು ಎಂಬ ಕುರಿತು ರೌಂಡ್‌ಗ್ಲಾಸ್ ಸಸ್ಟೈನ್ ಸಹಯೋಗದೊಂದಿಗೆ ಕಿರು ಚಲನಚಿತ್ರಗಳನ್ನು ಪ್ರದರ್ಶಿಸಲಾಯಿತು. ಏಳು ಕಡಲಾಮೆ ಮಾದರಿಗಳನ್ನು ಸರೀಸೃಪ ಉದ್ಯಾನವನದಲ್ಲಿ ಪ್ರದರ್ಶಿಸಲಾಯಿತು.

ಕ್ರೀಡಾಂಗಣಕ್ಕೆ ಫಲವತ್ತಾದ ಕೃಷಿ ಭೂಮಿ ಬಳಕೆ: ಬಿಜೆಪಿ ಆಕ್ಷೇಪ

■ **ವಿಕ ಸುದ್ದಿಲೋಕ** ಬೆಂಗಳೂರು

ಆನೇಕಲ್‌ನ ಕೆಎಚ್‌ಬಿ ಸೂರ್ಯ ಕ್ರೀಡಾ ಗ್ರಾಮದಲ್ಲಿ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕೆ ರೈತರ ಫಲವತ್ತಾದ ಭೂಮಿ ಬಳಸುತ್ತಿರುವುದು ಸರಿಯಲ್ಲ ಎಂದು ಆಕ್ಷೇಪಿಸಿರುವ ಬಿಜೆಪಿ ನಾಯಕರು, ರೈತರ ಪರ ನಿಲ್ಲುವುದಾಗಿ ಹೇಳಿದ್ದಾರೆ.

ರಾಜ್ಯ ಸರಕಾರದ ನಡೆ ಖಂಡಿಸಿರುವ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್, "ಆನೇಕಲ್‌ನಲ್ಲಿ ರೈತರು, ಪರಿಸರವಾದಿಗಳ ವಿರೋಧದ ನಡುವೆಯೂ ಸರಕಾರ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸುತ್ತಿದೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣವನ್ನು ವರ್ಷಕ್ಕೆ ಕೇವಲ ನಾಲ್ಕೈದು ಬಾರಿಯಷ್ಟೇ ತೆರೆಯಲಾಗುತ್ತದೆ. ಇಂತಹ ಸ್ಥಿತಿ ಇರುವಾಗ ಯಾವ ಕಾರಣಕ್ಕೆ ಕ್ರೀಡಾಂಗಣ ನಿರ್ಮಿಸಲಾಗುತ್ತಿದೆ?" ಎಂದು ಪ್ರಶ್ನಿಸಿದರು.

"ಕ್ರೀಡಾಂಗಣದ ಸುತ್ತ ಜಮೀನು ಮಾರಾಟ ಮಾಡಲು, ಅದರಿಂದ ಕಮಿಷನ್ ಹೊಡೆಯಲು ಈ ಯೋಜನೆ ರೂಪಿಸಲಾಗಿದೆ. ಆನೇಕಲ್‌ನ ಯಾರಾದರೂ ಕ್ರೀಡಾಪಟು ಕ್ರೀಡಾಂಗಣ ನಿರ್ಮಿಸುವಂತೆ ಸರಕಾರಕ್ಕೆ ಮನವಿ ಮಾಡಿದ್ದಾರೆಯೇ? ಏಕಾಏಕಿ ಯೋಜನೆ ರೂಪಿಸಿದ್ದಾರೆ ಎಂದರೆ ಇದು ಖಂಡಿತವಾಗಿ ಹಣ ಗಳಿಸಲು ಮಾಡಿರುವ ಯೋಜನೆಯಾಗಿದೆ," ಎಂದು ಶಂಕೆ ವ್ಯಕ್ತಪಡಿಸಿದರು.

ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿರುವ ಸರಕಾರ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, "ಕಾಂಗ್ರೆಸ್ ಸರಕಾರಕ್ಕೆ ರೈತರ ಸಮಸ್ಯೆ ಎಂದರೆ ಅಸಡ್ಡೆ. ಕೆಂಪೇಗೌಡ ವಿಮಾನನಿಲ್ದಾಣದ ಸಮೀಪ ಸಾವಿರಾರು ಎಕರೆ ಭೂಮಿ ಇದ್ದು, ಅಲ್ಲೇ ಕ್ರೀಡಾಂಗಣ ನಿರ್ಮಿಸಬಹುದಿತ್ತು. ಅದು ಬಿಟ್ಟು ಆನೇಕಲ್‌ನಲ್ಲಿ ಫಲವತ್ತಾದ ಜಮೀನು ಪಡೆದು ರೈತರಿಗೆ ಪದೇ ಪದೇ ತೊಂದರೆ ಕೊಡುತ್ತಿದ್ದಾರೆ. ಅನ್ನದಾತರ ಹಿತಾಸಕ್ತಿ ಕಡೆಗಣಿಸಲು ಅವಕಾಶ ನೀಡುವುದಿಲ್ಲ, ರೈತರ ಪರವಾಗಿ ಬಿಜೆಪಿ ನಿಲ್ಲಲಿದೆ," ಎಂದು ಹೇಳಿದರು.

ಕ್ರಿಕೆಟ್ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ

» ನಮ್ಮ ಮೊದಲ ಪುಟದಿಂದ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, "ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಕ್ರೀಡಾಂಗಣ ಹಾಗೂ ಕ್ರೀಡಾ ಸಂಕೀರ್ಣ ನಿರ್ಮಾಣದ ಮೂಲಕ ನಮ್ಮ ಸರಕಾರ ಬೆಂಗಳೂರಿಗೆ ದೊಡ್ಡ ಕೊಡುಗೆ ನೀಡುತ್ತಿದೆ. ಶಾಸಕ ಶಿವಣ್ಣ ಹಾಗೂ ಡಿ.ಕೆ.ಸುರೇಶ್ ಅವರ ಕನಸಿನಂತೆ 2 ಸಾವಿರ ಕೋಟಿ ರೂ. ಮೊತ್ತದ ಅಂತಾರಾಷ್ಟ್ರೀಯ ಕ್ರೀಡಾ ಸಂಕೀರ್ಣ ಕಟ್ಟಲಾಗುತ್ತಿದೆ. ಇವರ ಆಕಾಂಕ್ಷೆಯಂತೆ ಈ ಭಾಗದ ಜನರಿಗೆ ಕಾವೇರಿ ನೀರು ಒದಗಿಸಲಾಗುತ್ತಿದೆ," ಎಂದು ತಿಳಿಸಿದರು.

ಗೃಹ ಸಚಿವ ಡಾ. ಜಿ.ಪರಮೇಶ್ವರ್, ಶಾಸಕರಾದ ಶಿವಣ್ಣ, ಟಿ.ಬಿ.ಜಯಚಂದ್ರ, ಕೃಷ್ಣಪ್ಪ, ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ, ವಿಧಾನ ಪರಿಷತ್ ಸದಸ್ಯ ರಾಮೋಜಿಗೌಡ, ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಎಚ್.ಎಂ.ರೇವಣ್ಣ, ಕೆಎಚ್‌ಬಿ ಆಯುಕ್ತ ಕೆ.ಎ.ದಯಾನಂದ ಉಪಸ್ಥಿತರಿದ್ದರು.

ಭಾಷಣ ಸಂದರ್ಭದಲ್ಲಿ ಗದ್ದಲ

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಭಾಷಣ ಮಾಡುತ್ತಿದ್ದ ಸಂದರ್ಭದಲ್ಲಿ ಗದ್ದಲ ನಡೆಯಿತು. ಆನೇಕಲ್ ಶಾಸಕ ಶಿವಣ್ಣ ಅವರ ಬೆಂಬಲಿಗರು ತಮ್ಮ ಶಾಸಕರನ್ನು ಸಚಿವರನ್ನಾಗಿ ಮಾಡಬೇಕೆಂದು ಫ್ಲೆಕಾರ್ಡ್‌ಗಳನ್ನು ಪ್ರದರ್ಶಿಸಿದರು. ಅಲ್ಲದೇ ಜೋರಾಗಿ ಘೋಷಣೆಗಳನ್ನು ಕೂಗುತ್ತಿದ್ದರು. ಇದರಿಂದ ಕೋಪಗೊಂಡ ಸಿಎಂ, "ಏಯ್ ಸುಮ್ನೆ ಕೂತ್ಕೊಳ್ಳಿ" ಎಂದು ಗದರಿದರು. ಆದರೂ, ಶಾಸಕರ ಬೆಂಬಲಿಗರು ಸುಮ್ಮನಾಗಲಿಲ್ಲ, ಆಗ ತಾಳ್ಮೆ ಕಳೆದುಕೊಂಡ ಸಿಎಂ, ಅವರನ್ನು ಹೊರಹಾಕುವಂತೆ ಪೊಲೀಸರಿಗೆ ಸೂಚಿಸಿದರು. ಆಗ ವಾತಾವರಣ ತಿಳಿಯಾಯಿತು. ಕಾರ್ಯಕ್ರಮ ಮುಗಿಯುತ್ತಿದ್ದಂತೆ ಸಿಎಂ ವಾಹನದ ಬಳಿ ದೌಡಾಯಿಸಿದ ಕಾರ್ಯಕರ್ತರು, ತಮ್ಮ ಶಾಸಕರನ್ನು ಮಂತ್ರಿ ಮಾಡುವಂತೆ ಮತ್ತೊಮ್ಮೆ ಫ್ಲೆಕಾರ್ಡ್ ಪ್ರದರ್ಶಿಸಿದರು.

ಉತ್ಪನ್ನಗಳ ಮೇಲೆ ಕನ್ನಡ ಬಳಸದ ಉದ್ದಿಮೆಗಳು

ಕನ್ನಡ ಗೆಳೆಯರ ಬಳಗ ಖಂಡನೆ

ಬೆಂಗಳೂರು: ರಾಜ್ಯದಲ್ಲಿರುವ ಎಲ್ಲ ಸರಕಾರಿ ಮತ್ತು ಖಾಸಗಿ ವಲಯಗಳಲ್ಲಿ ತಯಾರಾಗುವ ಉತ್ಪನ್ನಗಳ ಹೆಸರು ಮತ್ತು ಅವುಗಳ ಬಳಕೆ ಕುರಿತಾದ ಮಾಹಿತಿಯನ್ನು ಇತರ ಭಾಷೆಗಳ ಜತೆಗೆ ಕನ್ನಡದಲ್ಲಿ ಮುದ್ರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಆದರೆ, ರಾಜ್ಯ ಸರಕಾರದ ಉದ್ದಿಮೆಗಳು ಹಾಗೂ ನಿಗಮಗಳೇ ಪಾಲಿಸುತ್ತಿಲ್ಲ ಎಂದು ಕನ್ನಡ ಗೆಳೆಯರ ಬಳಗವು ಅಸಮಾಧಾನ ವ್ಯಕ್ತಪಡಿಸಿದೆ.

"ರಾಜ್ಯದ ಹೆಮ್ಮೆಯ ಉದ್ದಿಮೆ ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆಯನ್ನು (ಕೆಎಸ್‌ಡಿಎಲ್) ಲಾಭದ ಹಳಿಗೆ ತರಲಾಗಿದೆ. ಆದರೆ, ಈ ಉದ್ಯಮದ ಉತ್ಪನ್ನಗಳ ಮೇಲೆ ಕನ್ನಡವನ್ನು ಕಂಡೂ ಕಾಣದಂತೆ ಸಣ್ಣದಾಗಿ ಕೊನೆಯಲ್ಲಿ ಮುದ್ರಿಸುತ್ತಿರುವುದು ಕನ್ನಡಕ್ಕೆ ಮಾಡುತ್ತಿರುವ ಅವಮಾನವಾಗಿದೆ. ಅದೇ ರೀತಿ ಸರಕಾರದ ಅಂಗ ಸಂಸ್ಥೆಯಾಗಿರುವ ಎಂಎಸ್‌ಐಎಲ್, ನೋಟ್‌ಬುಕ್ ಹೊರತುಪಡಿಸಿ ಬೇರೆ ಉತ್ಪನ್ನಗಳ ಮೇಲೆ ಕನ್ನಡ ಭಾಷೆಯನ್ನು ಮುದ್ರಿಸುತ್ತಿಲ್ಲ, ಕನ್ನಡ ಭಾಷೆ ಬಳಸಬೇಕೆಂಬ ನಿಯಮವನ್ನು ಸರಕಾರಿ ಸಂಸ್ಥೆಗಳೇ ಪಾಲಿಸದಿರುವಾಗ ಖಾಸಗಿ, ಬಹುರಾಷ್ಟ್ರೀಯ ಉದ್ದಿಮೆಗಳಿಗೆ ಅನುಸರಿಸಿ ಎನ್ನಲಾದೀತೇ?" ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ್ ಪ್ರಶ್ನಿಸಿದ್ದಾರೆ.

ಪೇಟೆ ಧಾರಣೆ

ಬೆಂಗಳೂರು ಸಗಟು ಬೆಲೆ
23.05.2026

ಸೂರ್ಯಕಾಂತಿ ಎಣ್ಣೆ (10 ಲೀ.)	
ಗೋಲ್ಡ್ ವಿನ್ನರ್	1720
ಜೆಮಿನಿ	1750
ಸನ್‌ಪ್ಯೂರ್ (10 ಕೆ.ಜಿ.)	1710
ಪಾಮ್ ಆಯಿಲ್ (850 ಗ್ರಾ.ನ 10 ಪ್ಯಾಕೆಟ್)	
ರುಚಿ ಗೋಲ್ಡ್	1440
ಶುಭ್ (10 ಲೀ.)	1420
ಕಡಲೆಕಾಯಿ ಎಣ್ಣೆ (10 ಲೀ.)	
ಫ್ಯೂರ್‌ನಟ್	1700
ಕೆ ಎನ್ ಜಿ	1650
ನಟ್ ಗೋಲ್ಡ್	1620
ಕುಕ್ಕಿಂಗ್ ಆಯಿಲ್ (850 ಗ್ರಾ.ನ 10 ಪ್ಯಾಕೆಟ್)	
ಸನ್‌ಪಾರ್ಕ್	1400
ಸನ್ ಪ್ರಿಯಾ	1470
ಸನ್‌ಪ್ಲಸ್	1480
ದೀಪದ ಎಣ್ಣೆ (850 ಗ್ರಾ.ನ 10 ಪ್ಯಾಕೆಟ್)	
ಆನಂದಮ್	1470
ಅಂದಂ	1460
ಸಕ್ಕರೆ (50 ಕೆಜಿ)	
ಉತ್ತಮ	2130-2140
ಮಧ್ಯಮ	2115-2120
ಬೆಲ್ಲ (ಕ್ವಿಂಟಾಲ್)	
ಸಣ್ಣ ಅಚ್ಚು	5450-5500
ದಪ್ಪ ಅಚ್ಚು	5300-5500
ಉಂಡೆ ಸೇಲಂ	5400-5600
ಕಡ್ಲೆ ಬೇಳೆ (50 ಕೆಜಿ)	
ಲಕನ್	4250-4300

ತೊಗರಿಬೇಳೆ (50 ಕೆಜಿ)	
ಶಿವಲಿಂಗ	6510-6520
ರೆಗ್ಯುಲರ್	5650-5800
ಉದ್ದಿನ ಬೇಳೆ (50 ಕೆಜಿ)	
ಹನುಮಾನ್	6000-6050
ಮಹಾರಾಜ	5750-6300
ಕಡ್ಲೆಕಾಯಿ ಬೀಜ (40 ಕೆಜಿ)	
ಉತ್ತಮ	6100-6200
ಮಧ್ಯಮ	5300-5400
ಅಕ್ಕಿ (ಕ್ವಿಂಟಾಲ್)	
ಸೋನಾ ಮಸೂರಿ (ಹಳೆ)	5800-6200
ಸೋನಾ ಮಸೂರಿ (ಹೊಸ)	4900-5200
ಸೋನಾ ಮಸೂರಿ ಸ್ಟೀಮ್	4900-5200
ಇಡ್ಲಿಕಾರ್	3700-3900
ರಾಗಿ (ಕ್ವಿಂಟಾಲ್)	
ಉತ್ತಮ	4900-5200
ಮಧ್ಯಮ	4600-4700
ಗೋಧಿ (50 ಕೆಜಿ)	
ಉತ್ತಮ	2100-2200
ಮಧ್ಯಮ	1900-2000
ಜೋಳ (50 ಕೆಜಿ)	
ಉತ್ತಮ	2700-2800
ಮಧ್ಯಮ	2000-2400
ಈರುಳ್ಳಿ (50 ಕೆಜಿ)	
ದಪ್ಪ	800-900
ಮಧ್ಯಮ	450-500
ಗೋಲ್ಟಾ	300-400
ಮೊಟ್ಟೆ 100ಕ್ಕೆ	605

ಡೆನ್ಮಾರ್ಕ್‌ನಲ್ಲಿ ಉಪನ್ಯಾಸಕರಾಗಿರುವ ಭಾರತೀಯ ಇಂಗ್ಲಿಷ್ ಲೇಖಕ ತಬಿಶ್ ಖೈರ್, 'ಡ್ರೌನ್ ದ ರೆಫ್ಯೂಜೀಸ್' ಎಂಬ ಕಾದಂಬರಿ ಬರೆದಿದ್ದು, ಜೂನ್ 17ರಂದು ಬಿಡುಗಡೆಯಾಗಲಿದೆ. ವಲಸೆಗೊಳಗಾದ, ಸ್ಥಳಾಂತರಗೊಂಡ ವ್ಯಕ್ತಿಗಳ ಕಥೆಯನ್ನು ಇದು ಹೇಳುತ್ತದೆ.



ಶಾಲೆ ಅರಳುವ ಸಮಯ

ಶಾಲೆ ಕೇವಲ ಇಟ್ಟಿಗೆ-ಸಿಮೆಂಟ್‌ಗಳ ಕಟ್ಟಡವಲ್ಲ, ಮಕ್ಕಳ ಕಲರವದ ನಡುವೆ ಜೀವ ತಳೆಯುತ್ತದೆ ಶಾಲೆ. ಮಕ್ಕಳಿಲ್ಲದ ಬೇಸಿಗೆ ರಜೆಯಲ್ಲಿ ಖಾಲಿತನ ಅನುಭವಿಸಿದ ಶಾಲೆಗೆ ಮತ್ತೆ ಮಕ್ಕಳು ಶಾಲೆಗೆ ಬರುವ ಸೂಚನೆ ಸಿಕ್ಕಿದೆ. ಮತ್ತದೇ ಹೊಸ ಹುರುಪಿನೊಂದಿಗೆ ಮಕ್ಕಳ ಆಗಮನಕ್ಕೆ ಕಾದಿರುವ ಇಸ್ಕೂಲು ಮಕ್ಕಳಿಗಾಗಿ ಇಲ್ಲಿ ತಾನೇ ಪತ್ರವೊಂದನ್ನು ಬರೆದಿದೆ...

ಅಕ್ಷತಾ ಕೃಷ್ಣಮೂರ್ತಿ
feedbacklvk@vijaykarnataka.com

ಮಕ್ಕಳೇ,

ಎಲ್ಲರೂ ಮನೆಯಲ್ಲಿ ಬೆಚ್ಚಗಿದ್ದೀರಾ? ಮಳೆ ಬಂತೆಂದು ಮಳೆಯಲ್ಲಿ ಆಡಲಿಕ್ಕೆ ಹೊರಟಿರಾ ಏನು? ಹುಷಾರು, ಮೊದಲ ಮಳೆಗೆ ನೆನೆದು ಆರೋಗ್ಯ ಕೆಡಿಸಿಕೊಳ್ಳಬೇಡಿ. ನನ್ನನ್ನು ನೀವೆಲ್ಲ ನೋಡಲು ಬರುವಾಗ ಆರೋಗ್ಯದಿಂದ ಇರಬೇಕೋ ಬೇಡವೋ..?

ನನಗೂ ನಿನ್ನೆ ಟೆನ್ಷನ್ ಆಯಿತು, ಮೊನ್ನೆಮೊನ್ನೆ ಸುಣ್ಣಬಣ್ಣ ಬಳಿಸಿಕೊಂಡಿದ್ದೆನಲ್ಲಾ, ಎಲ್ಲಾ ಮಳೆನೀರಿಗೆ ಹೋಗಿಬಿಟ್ಟರೆ... ನನ್ನ ಮಕ್ಕಳು ಬರುವಾಗ ನಾನು ಸುರಸುಂದರಾಂಗನಾಗಿ ಕಾಣಬೇಡವಾ ಅಂತ... ಇರಲಿ, ನಾನಂತೂ ನಿಮ್ಮ ಸ್ವಾಗತಕ್ಕೆ ರೆಡಿಯಾಗಿ ನಿಂತಿದ್ದೇನೆ. ಇನ್ನು ಸ್ವಾಗತದ ಕಮಾನು ಕಟ್ಟಿದರಾಯಿತು ನೋಡಿ.

ಮಳೆ ಬಂದು ಬೇಸಿಗೆಯ ಧಗೆಯನ್ನು ಸ್ವಲ್ಪ ಕಡಿಮೆ ಮಾಡಿತು ನಿಜ. ಆದರೆ, ಅದಕ್ಕಿಂತ ಹೆಚ್ಚಿನದು ನೀವು ಬರುತ್ತೀರೆಂಬ ಖುಷಿ ಕೊಡುವ ತಂಪು. ಅದಕ್ಕೂ ಮುನ್ನ ಏಪ್ರಿಲ್ ಹತ್ತರ ನಂತರದ್ದಂತೂ ನನ್ನದು ಬರೀ ನೋವಿನ ಕಥೆ ಮಕ್ಕಳೇ. ನನ್ನ ಸುತ್ತಮುತ್ತ ನೀವೂ ಇಲ್ಲ, ಶಿಕ್ಷಕರೂ ಇಲ್ಲ, ಯಾರೂ ಇಲ್ಲದೆ ಸೊರಗಿರುವೆ. ಈ ಒಂಟಿತನದ ನೋವು ನನಗೆ ಮಾತ್ರ ಗೊತ್ತು. ಬೀಗ ಜಡಿಸಿಕೊಂಡ ನನ್ನ ಬಾಗಿಲು, ಹೊರ ಪ್ರಪಂಚ ಕಾಣಲಾಗದ ತೊಳಲಾಟಕ್ಕೆ ಸಿಕ್ಕ ಮುಚ್ಚಿದ ಕಿಟಕಿಗಳು, ಧೂಳು ಮೈ ತುಂಬಿಸಿಕೊಂಡ ಗೋಡೆಗಳು. ನಿಮ್ಮ ಪುಟ್ಟ ಪಾದದ ಹೆಜ್ಜೆ ಸಪ್ಪಳವಿಲ್ಲದ ನೆಲ, ತಪಸ್ಸಿಗೆ ಕುಳಿತ ಟೈಂ ಟೈಂ ಗಂಟೆ, ಮೂಲೆ ಸೇರಿದ ಕಸಬರಿಗೆ.. ಹೀಗೆ ಎಲ್ಲವೂ.. ಎಲ್ಲರನ್ನೂ.. ಕಳೆದುಕೊಂಡು ಮಾತಿಲ್ಲದೆ, ನಿಮ್ಮೆಲ್ಲರ ಕತೆಯಿಲ್ಲದೆ ಕಳೆವ ದುಃಖ ನನಗೆ ಮಾತ್ರ ಗೊತ್ತು...

ಈ ವರ್ಷ ನಾನು ಪಕ್ಕಾ ಕಟ್ಟಡ ಎಂದು ಜನಗಣತಿ 2027ರ ಮನೆ ಪಟ್ಟಿಯಲ್ಲಿ ಗುರುತಿಸಿಕೊಂಡು ಬೀಗಿದ್ದರೂ, ಮಕ್ಕಳಿಲ್ಲದ ಮನೆಯಂತಾಗಿದೆ ನನ್ನ ಪರಿಸ್ಥಿತಿ. ಎಳೆಯ ಪಾರಿಜಾತದ ಪಾದಗಳ ಗುರುತು ಇಲ್ಲದೇ ನನ್ನ ನೆಲ ಬಾಡಿದೆ. ಪುಟಾಣಿ ಕೈಗಳ ಸ್ಪರ್ಶವಿಲ್ಲದೆ ಗೋಡೆಗಳು ಮಾತನಾಡದೇ ನಿಂತಿರುವಾಗ, ಹಗಲಿರುಳು ಒಂದೆಂತೆನಿಸಿ ಬೆಳಕು ಕೂಡ ಮೌನ ಮತ್ತು ಕತ್ತಲೆಯ ಭಾಷೆ ಬರೆಯುತ್ತಿದೆ ಅನಿಸುತ್ತದೆ.

ಇನ್ನೇನು ಜೂನ್ ಬಂತು, ನನ್ನ ಸಡಗರದ ಋತು ಶುರು. ಬರಸಾತ ರಿಪೇರಿಯೆಂದು ಮಾಡಿನ ಹಂಚು ಸ್ವಚ್ಛ ಮಾಡಿಸಿಕೊಂಡ ಊರಿನ ಮನೆಗಳನ್ನು ನೋಡಿದ ನಾನು ಯಾರಿಗೂ ಕಮ್ಮಿ ಇಲ್ಲ ಎಂದು ಸಾರುತ್ತ ಮುಖ್ಯಾಧ್ಯಾಪಕರಿಗೆ ಹಾಗೂ ಎಸ್‌ಡಿಎಂಸಿ ಅವರಿಗೆ ತಿಳಿಸಿ ಸಜ್ಜಾಗತೊಡಗಿರುವೆ. ಅವರ ಸ್ವಚ್ಛತೆಯ ಪರಿಪಾಠಕ್ಕೆ ಬೆದರಿದ ಜೇಡ ಹೊಸ ಜಾಡನ್ನು ಹುಡುಕಿ ನನ್ನ ಬಿಟ್ಟು ಅಂತೂ ಪರಾರಿಯಾಗಿದ್ದಾನೆ. ಅವನಿದ್ದರೆ ನನ್ನ ಮಕ್ಕಳಿಗೆ ತೊಂದರೆ. ಅಲರ್ಜಿ ಹರಡುವ ಮಹಾ ಘಾತಕ ಜೇಡ. ಬರಬೇಡ ಎಂದರೂ ಮಕ್ಕಳು ಮತ್ತು ಶಿಕ್ಷಕರು ಇಲ್ಲದ ಹೊತ್ತು ನಿಧಾನ ಬಂದು ಒಳಹೊಕ್ಕಿ ಬಿಡುತ್ತಾನೆ. ನನ್ನ ಸುತ್ತ ಬಿದ್ದ ಕಾಡಿನ ಮರಗಳ ಒಣಗಿದ ಎಲೆಗಳು, ಹಸಿಕಸ ಗುಂಡಿಗೆ ಸೇರಿ ಗೊಬ್ಬರವಾಗುವ ನಿರೀಕ್ಷೆಯಲ್ಲಿವೆ.

ಹೌದು, ಅಜ್ಜಿಮನೆ ಗೌಜು ಮುಗಿಯಿತಾ?

ಬೇಸಿಗೆ ರಜೆ ಮುಗಿಯುತ್ತಿದ್ದಂತೆ ಅಜ್ಜಿ ಮನೆಯ ಮುದ್ದು ಮೊಮ್ಮಕ್ಕಳು, ವಿದ್ಯಾರ್ಥಿಗಳಾಗಿ ಹಗುರ ಬದಲಾಗುತ್ತಿದ್ದೀರಿ, ನನಗೆ ಗೊತ್ತು. ಏಪ್ರಿಲ್ ಹತ್ತರಂದು ಎತ್ತಿಟ್ಟ ಪುಸ್ತಕ ಪೆನ್ನುಗಳೆಲ್ಲ ಮೂಲೆ ಸೇರಿದ್ದು ರಜೆ ಮುಗಿಯುತ್ತಿರುವ ಹೊತ್ತಿಗೆ ನೆನಪಾಗಿದೆಯಲ್ಲ? ನಿರ್ದಿಷ್ಟ ವೇಳಾಪಟ್ಟಿಯಿಲ್ಲದ ರಜೆಯ ಬದುಕು ಇನ್ನೇನು ಕೆಲವು ದಿನಗಳಲ್ಲಿ ಮುಗಿದು ಬಿಡುತ್ತದೆ ಎಂಬ ಆತಂಕ ರಜೆಯ ಕೊನೆಯ ವಾರ ನಿಮಗೆಲ್ಲರಿಗೂ ಎದುರಾಗುತ್ತದೆ ಎಂಬ ಪರಮ ಸತ್ಯದ ಅರಿವು ನನಗಿದೆ. ನೋಟ್‌ಬುಕ್, ಕಂಪಾಸು, ಬ್ಯಾಗು, ಶಾಲೆಯ ಡೈರಿ ಎಲ್ಲವೂ ನೆನಪಾಗಿ ಜೊತೆಗೆ ಹೋಂವರ್ಕ್ ಕೂಡ ಮಾಡಲು ಮನಸ್ಸು ಮಾಡದೇ ನಿಮ್ಮೆಲ್ಲರನ್ನೂ ಸತಾಯಿಸುವುದು ನಾನು ಕಣ್ಣಾರೆ ನೋಡಿದ್ದೇನೆ.

ನನ್ನ ಭೇಟಿಗೆ ನೀವೆಲ್ಲ ಬಂದ ದಿನ ತಕ್ಷಣ ಎದುರಾಗುವವರು ಶಿಕ್ಷಕರು. ಅವರನ್ನು ನೋಡಿದಾಕ್ಷಣ, ರಜಾ ಅವಧಿಯಲ್ಲಿ ಕೊಟ್ಟ ಮನೆಗೆಲಸ ನೆನಪಾಗಿ ನೋವು ಕಾಡುತ್ತದೆ, ನಿಮ್ಮ ನೋವು ನೋಡಿ ನಾನು ಕೂಡ ದುಃಖಿಸುತ್ತೇನೆ. ಸೇತುಬಂಧ ದೃಢೀಕರಣ ಪರೀಕ್ಷೆಗಳು ಕಿರಿಕಿರಿ ಎನಿಸುತ್ತವೆ ಅಲ್ಲವಾ? ನನ್ನ ಈ ಆವರಣಕ್ಕೆ ಬರುವುದೇ ಬೇಡ, ಮನೆಯೇ ಮೇಲು ಅನಿಸುವುದೇ ಈಗ. ಆದರೂ, ಪ್ರಾರ್ಥನಾ ಚಟುವಟಿಕೆಗಳು, ಕ್ರೀಡೆ, ಗೆಳೆಯರ ಒಡನಾಟ, ಶಿಕ್ಷಕಿಯರ ಸಲುಗೆ, ಅಕ್ಷರದಾಸೋಹದ ಸವಿನೆನಪುಗಳು ಪುನಃ ನನ್ನತ್ತ ಮುಖಮಾಡುವಂತೆ ಒತ್ತಾಯಿಸುತ್ತವೆ ಅಲ್ಲವಾ?

ಮರಳಿ ಶಾಲೆಗೆ

ಹೊಸ ಬ್ಯಾಗು, ಕಂಪಾಸು, ಛತ್ರಿ, ರೇನ್‌ಕೋಟ್‌ಗಳು ಮನೆ ತುಂಬಿಕೊಂಡವಾ? ನೋಟ್‌ಬುಕ್‌ಗಳು ಹೊಸ ಖಾಕಿ ಪೇಪರಿನ ಬೈಂಡ್ ಹಾಕಿಸಿಕೊಂಡು, ಹೆಸರು ಬರೆಯಲು ನೆರವಾಗುವ ಛೋಟಾಭೀಮ್ ಸ್ಟಿಕ್ಕರ್ ಅಂಟಿಸಿಕೊಂಡಾಗಿರಬೇಕು ಈಗ. ನಿಮ್ಮೆಲ್ಲರ ಕನಸಿನಲ್ಲೂ ನಾನು ಬರಲಾರಂಭಿಸಿರಬೇಕು ಈಗ. ನಾನು, ಶಿಕ್ಷಕರು, ಸ್ನೇಹಿತರು, ಕ್ಲಾಸು, ಬೆಂಚು... ಎಲ್ಲವೂ ಇನ್ನೇನು ಕನಸಿನಿಂದ ನನಸಿಗೇ ಬರುವುದಕ್ಕೆ ದಿನ ದೂರವಿಲ್ಲ.

ಪುಟಾಣಿ ಕಂದಮ್ಮಗಳಿರಾ,

ನನಗಿನ್ನು ವಯಸ್ಸು ಕಡಿಮೆಯಾಗಲಿಕ್ಕಿದೆ. ಯಾಕೆ ಗೊತ್ತಾ? ಅಂಗನವಾಡಿ, ಕೆ.ಜಿ ಕ್ಲಾಸಿನ ಮುಖ ನೋಡಿದ ಕಂದಮ್ಮಗಳು ನನ್ನಲ್ಲಿಗೆ ಬರಲಿದ್ದಾರೆ. ಅವರೆಲ್ಲ ನನ್ನ ದೊಡ್ಡ ಮುಖ ನೋಡಲು ಹಿಂಜರಿಯಲಾರರು. ಪುಟಾಣಿ ಮಕ್ಕಳ ನೈದಿಲೆಯಂತಹ ನಯನಗಳು ಕೊಳಗಳಾಗುವುದನ್ನು ಮಾತ್ರ ನಾನು ಸಹಿಸಲಾರೆ. ಎಲ್ಲ ವಿಷಯ ಗೊತ್ತಿದ್ದರೂ ನಿಮ್ಮೆಲ್ಲರ ಮನದಲ್ಲಿ ಎದ್ದ ಹೊಯ್ದಾಟವೆಲ್ಲ ನಿಧಾನವಾಗಿ ಪಾಲಕರಿಗೂ ತಟ್ಟುತ್ತಿರುತ್ತದೆ ಎಂಬುದೇ ಸಂಕಟ. ನನ್ನೊಳಗೆ ಬಂದು ಸೇರಲು ಪಾಲಕರು ಕೂಡ ಕೆಲವು ತಯಾರಿ ಮಾಡದಿದ್ದರೆ ಹೇಗೆ? ಹೀಗಾಗಿ ಪೆಟ್ಟಿಗೆ ಒಳಸೇರಿದ ಮಕ್ಕಳ ಜನನ ಪ್ರಮಾಣ ಪತ್ರ ತನ್ನ ಹೆಸರು ಹಾಗೂ ಜನ್ಮದಿನಾಂಕ ಸರಿ ಇದೆಯೇ ಎಂದು ಪರೀಕ್ಷೆ ಮಾಡಿಕೊಳ್ಳುತ್ತವೆ. ಆಧಾರ್‌ಕೇಂದ್ರಗಳಲ್ಲಿ ಸಾಲುಗಟ್ಟಿ ನಿಂತ ಪಾಲಕರು ನನ್ನ ಕುರಿತಾಗಿಯೇ ಮಾತುಕತೆ ಶುರು ಮಾಡುತ್ತಾರೆ. ಜಾತಿ, ಆದಾಯ ಪ್ರಮಾಣಪತ್ರಗಳೆಲ್ಲ ಕ್ಯೂನಲ್ಲಿ ನಿಂತು ನಿಧಾನ ನಡಿಗೆಯಲ್ಲಿ ಹಾದು ಪಾಲಕರ ಕೈ ಸೇರುತ್ತದೆ.

ಈಗೀಗ ಸಮವಸ್ತ್ರವೆಲ್ಲ ಎದ್ದೆದ್ದು ಇಸ್ತ್ರಿಮಾಡಿಸಿಕೊಳ್ಳಲು ಮುಂದಾಗುತ್ತವೆ. ಕಿತ್ತು ಹೋದ ಶರ್ಟಿನ ಗುಂಡಿಗಳು ಮರು ಜೀವ ಪಡೆಯುತ್ತವೆ. ಪ್ರತಿ ಸಮವಸ್ತ್ರದಲ್ಲಿಯೂ ನನ್ನ ಲೋಕದ ಒಂದೊಂದು ಕಥಾನಕವಿದೆ. ತೊಳೆದರೂ ಹೋಗದ ಗೀಚಿದ ಗೆರೆಗಳು ಶರ್ಟಿನ ಅಂದವನ್ನು ಒಂದು ನಮೂನೆಯಲ್ಲಿ ಹೆಚ್ಚಿಸಿ ಮಕ್ಕಳಿಗೆ ನನ್ನ ಕಥೆ ನೆನಪಿಸುತ್ತದೆ.

ಕನಸಿನಲ್ಲಿ ಹಠಾತ್ತನೆ ನನ್ನ ಕಂಡ ಶಿಕ್ಷಕರು ಬಾಗಿಲು ತೆರೆಯಲು ಗಡಿಬಿಡಿಯಿಂದಲೇ ಸಿದ್ಧಗೊಳ್ಳುತ್ತಿರುತ್ತಾರೆ. ಈ ವರ್ಷದ ಬೇಸಿಗೆ ಶಿಕ್ಷಕರಿಗೆ ಕೆಲಸದಲ್ಲಿಯೇ ಕಳೆದು ಹೋಗಿದೆ. ಮಕ್ಕಳಿಗೆ ಫಲಿತಾಂಶ ನೀಡಿ, ಅಂಬೇಡ್ಕರ್ ಜಯಂತಿ ಮುಗಿಸುವಷ್ಟರಲ್ಲಿ ಜನಗಣತಿಯ ಕೆಲಸ ಶುರುವಾದಾಗ ನಿಮ್ಮೆಲ್ಲರನ್ನು, ನನ್ನನ್ನು, ಸಂಸಾರವನ್ನು ಒಂದಷ್ಟು ಕಾಲ ಇಷ್ಟವಿಲ್ಲದಿದ್ದರೂ ದೂರ ಮಾಡಿಕೊಂಡು, ಪೂರ್ಣವಾಗಿ ಮನೆಪಟ್ಟಿ ಕೆಲಸದಲ್ಲಿ ತೊಡಗಿಕೊಂಡ ಕೆಲಸದ ಘಳಿಗೆಗಳು ಶಿಕ್ಷಕರನ್ನು ದಾಟಿವೆ. ಉರಿ ಬಿಸಿಲಿನಲ್ಲಿ ಬೆವರಿಳಿಸುತ್ತ ಜನಗಣತಿ ಮನೆ ಸಂಖ್ಯೆಯನ್ನು ನನ್ನ ಗೋಡೆ ಮೇಲೆ ಬರೆದ ಮಾಸ್ತರರಿಗೆ ಬಿಸಿಲಿಗೆ ಮೈಯೊಡ್ಡಿ ನಿಂತ ನನ್ನ ಬಗ್ಗೆ ಸಹಾನುಭೂತಿ ಇದೆ. ನನ್ನ ಎದುರಿಗೆ ತಾವು ನಿಂತು ತೆಗೆಸಿಕೊಂಡ ಜಿಪಿಎಸ್ ಫೋಟೋ ಮಾಸ್ತರರ ಮೊಬೈಲ್‌ನಲ್ಲಿ ಕುಳಿತು ಆಗಾಗ ನಗುತ್ತಿರುತ್ತದೆ. ವರ್ಷಪೂರ್ತಿ ಅವರು ನನ್ನ ಜೊತೆ ಸೆಲ್ಫಿ ತೆಗೆದುಕೊಳ್ಳುತ್ತಲೇ ಇರುತ್ತಾರೆ.

ಶಿಕ್ಷಕರು ಮನೆಪಟ್ಟಿ ಕೆಲಸ ಮುಗಿಸಿ ಮಳೆಗಾಲಕ್ಕೆ ಪೂರ್ವ ತಯಾರಿಯಾಗಿ ಒಣಮೀನು, ಉಪ್ಪಿನಕಾಯಿ, ಹಪ್ಪಳ ಸಂಡಿಗೆ ಮಾಡಿ ಮುಗಿಸುವಷ್ಟರಲ್ಲಿಯೇ ಮೇ 28ನೇ ತಾರೀಕು ಹಾಯ್ ಹೇಳುತ್ತದೆ. ನಾನು ಅವರನ್ನು ಕೂಗಿ ಕರೆದಂತಹ ಸದ್ದು ಶಿಕ್ಷಕರಿಗೆ ಮಾತ್ರ ಕೇಳುತ್ತಿರುತ್ತದೆ. ನಿಮ್ಮನ್ನೆಲ್ಲ ಪ್ರೀತಿಯಿಂದ ಸ್ವಾಗತಿಸುವ ಪೂರ್ವ ತಯಾರಿಗಳನ್ನು ಹೆಡ್ ಮಾಸ್ಟರ್‌ಜೊತೆ ಚರ್ಚಿಸಿ ಆರಂಭಗೊಳಿಸುತ್ತಾರೆ. ಕಪಾಟಿನಲ್ಲಿದ್ದ ಅಕ್ಕಂದಿರ ಸೀರೆಗಳಲ್ಲಿ ನನ್ನ ಹೆಸರಿನ ಸ್ವರಸಂಚಾರವಾದಂತೆ ಆಗುತ್ತದೆ. ಯಾವುದೋ ಮೋಡಿಗೆ ಒಳಗಾದವರಂತೆ ಅಕ್ಕಂದಿರು-ಮಾಸ್ತರುಗಳೆಲ್ಲ ಹಿರಿದಾದ ನನ್ನ ಗೇಟಿನ ಬಾಗಿಲು ತೆರೆಯಲು ಸಿದ್ಧಗೊಳ್ಳುತ್ತಾರೆ.

ಪ್ರಾರಂಭೋತ್ಸವದ ಹೊತ್ತಲ್ಲಿ ಈ ಬಾರಿ ವಿಶೇಷವಾಗಿ ಆಚರಿಸಲ್ಪಡುವ ಮೆಗಾ ಪಿಟಿಎಂ ಬಗ್ಗೆ ನನಗೆ ಕುತೂಹಲವಿದೆ. ನಾಲ್ಕು ದಿನ ಮುನ್ನವೇ ಶಿಕ್ಷಕರನ್ನು ಬರಹೇಳಿರುವ ನಾನು ಹೊಸ ದಾಖಲಾತಿಯಾಗಿ ಬರುವ ಪುಟ್ಟ ಕಂದಮ್ಮಗಳನ್ನು ಕಾಣುವ ಕಾತರದಲ್ಲಿದ್ದೇನೆ. ಶಿಕ್ಷಕರು, ಎಸ್‌ಡಿಎಂಸಿ, ಅಡುಗೆಯವರು ಸೇರಿ ನನ್ನ ವಿಶಾಲ ಗೋಡೆಯತ್ತ ದೃಷ್ಟಿ ಹರಿಸಿದ್ದಾರೆ. ಹಳೆಯ ಚಾರ್ಟ್‌ಗಳು, ನಕಾಶೆಗಳು, ಕಲಿಕೋಪಕರಣಗಳ ಜಾಗದಲ್ಲಿ ಹೊಸ ಹೊಸ ಚಿತ್ರಪಟಗಳು ಬಂದು ಕೂತಿವೆ. ಪಂಚಾಂಗ ಬದಲಿಸಿಕೊಂಡ ಗೋಡೆ ಹೊಸ ಶೈಕ್ಷಣಿಕ ವರ್ಷದ ಸೇತುಬಂಧದ ತಯಾರಿ ನಡೆಸುತ್ತಿದೆ. ಪ್ರಾರ್ಥನೆಯ ಸಾಲು ನನ್ನೆದುರಿಗೆ ಕಂಡಾಗಲೇ ಮುಂಗಾರಿನ ಮಳೆ ಮೋಡಗಳು ಧಾವಿಸಿ ಬರುತ್ತವೆ. ಪುಟ್ಟಪುಟ್ಟ ಸಸಿ ಹುಟ್ಟಲು ತಕ್ಕುದಾದ ಮಣ್ಣಿನ ತೆಕ್ಕೆಗೆ ಮಳೆ ಬೀಜಗಳು ಉದುರುತ್ತವೆ. ನನ್ನ ಮೇಲಿನ ನಿಮ್ಮೆಲ್ಲರ ವ್ಯಾಮೋಹ ಅಲ್ಲಿಂದಲೇ ಶುರುವಾಗುತ್ತದೆ.. ಮತ್ತೆ ಮತ್ತೆ..

ನಾನಂತೂ ನಿಮ್ಮ ಕಡು ವ್ಯಾಮೋಹಿ. ಬರುತ್ತೀರಲ್ಲ, ಕಾಯುತ್ತಿದ್ದೇನೆ.

ಇಂತಿ, ನಿಮ್ಮ ಪ್ರೀತಿಯ ಶಾಲೆ.

(ಲೇಖಕರು ಕಥೆಗಾರರು, ಶಾಲಾ ಶಿಕ್ಷಕರು)

ಕಾವ್ಯ ಮತ್ತು ಜಾಹೀರಾತು

ಕಾವ್ಯ ಭಾಷಿಕ ಕಲೆಗಳಲ್ಲಿ ಶ್ರೇಷ್ಠ. ಆದರೆ ಜಾಹೀರಾತು ಕಾವ್ಯ ಸ್ವಾಯತ್ತ ಕಲೆಯಲ್ಲ, ನಿಜವಾದ ಕಾವ್ಯವನ್ನು ಆಶ್ರಯಿಸಿಕೊಂಡು ಜೀವ ತಳೆಯುವ ಪರಾವಲಂಬಿ.



ಏಕ ಅನೇಕ

ಎಸ್.ದಿವಾಕರ್

ಕುವೆಂಪು ಅವರ 'ದೋಣಿ ಸಾಗಲಿ ಮುಂದೆ ಹೋಗಲಿ' ಎಂಬ ಕವನ ಪ್ರಕೃತಿ ಸೌಂದರ್ಯವನ್ನು, ನಿಸರ್ಗದ ಪವಾಡವನ್ನು, ದೈನಂದಿನ ಜೀವನವನ್ನು ಕುರಿತ ಜಿಜ್ಞಾಸೆಯನ್ನು ಬಗೆಬಗೆಯ ರೂಪಕಗಳ ಮೂಲಕ ಅನಾವರಣಗೊಳಿಸುತ್ತದೆಯಷ್ಟೆ. ಆದರೆ ಜಾಹೀರಾತು ಕವಿಯೊಬ್ಬ ಅದೇ ಕವನವನ್ನು ಪರಿಭಾವಿಸುವ ಪರಿಯೇ ಬೇರೆ. ಅವನು ಹದಿಹರೆಯದ ಹುಡುಗ, ಹುಡುಗಿಯರು ಒಟ್ಟಿಗೆ ಹುಟ್ಟುಹಾಕುವ ಒಂದು ದೋಣಿಯನ್ನೂ ಅದರ ಹಿನ್ನೆಲೆಯಲ್ಲಿ ಹಸಿರು ಸಿರಿಯ ನಡುವೆ ಇರುವ ಒಂದು ಸುಂದರ ಬಂಗಲೆಯನ್ನೂ ತೋರಿಸುವ ಫೋಟೋವೊಂದರ ಕೆಳಗೆ ಅದೇ ಕವನದ ಮೊದಲೆರಡು ಸಾಲುಗಳನ್ನು ಮುದ್ರಿಸಿದರೆ ಅದು ಪ್ರೇಕ್ಷಣೀಯ ಸ್ಥಳವೊಂದರ ಸೊಗಸಾದ ಜಾಹೀರಾತಾಗುತ್ತದೆ. ಪರಿಣಾಮಕಾರಿ ಜಾಹೀರಾತಿಗಿರುವುದು ನಿಮಗೆ ಬೇಡವಾದ ಯಾವುದಾದರೊಂದು ವಸ್ತುವನ್ನು ನಿಮಗೆ ಮಾರುವ ಉದ್ದೇಶ. ಅದರದು ಉತ್ಪಾದಕನೊಬ್ಬನಿಗೆ ಲಾಭ ತಂದುಕೊಡುವ ಪ್ರಯತ್ನ. ಅದರಿಂದ ಜಾಹೀರಾತು ಬರೆಯುವವನ ಮತ್ತು ಅವನನ್ನು ನೇಮಿಸಿಕೊಂಡಿರುವವನ ಭಾವನಾತ್ಮಕ ಅನುಭವಕ್ಕೆ ಧಕ್ಕೆಯೇನೂ ಇಲ್ಲ.

ಇವತ್ತು ಜಾಹೀರಾತು ಬರೆಯುವ ಕವಿ ಎಂಥ ಭಾಷಿಕ ಆವರಣದಲ್ಲಿ ಕೆಲಸ ಮಾಡುತ್ತಾನೆಂದರೆ ಸಾಮಾನ್ಯ ಜನತೆ ಕೇಳಿಸಿಕೊಳ್ಳುವುದು ಅಥವಾ ಓದುವುದು ಬಳಕೆಯ ವಸ್ತುಗಳನ್ನು ಕುರಿತ ಕಾವ್ಯವನ್ನಷ್ಟೆ. ಕಾವ್ಯಾತ್ಮಕ ಭಾಷೆ ನಿರಂತರವಾಗಿ, ಅಷ್ಟೇಕೆ ನಿರ್ದಯವಾಗಿ, ಮಾರಾಟ ಮಾಡುವ ಉದ್ದೇಶಕ್ಕಷ್ಟೇ ಸೀಮಿತವಾಗುತ್ತಿದೆ.

ಒಬ್ಬ ಸಮರ್ಥ ಕವಿಯನ್ನು ನೋಡಿ. ಅವನು ತನ್ನ ಕಾವ್ಯದಲ್ಲಿ ಗುಲಾಬಿಯೊಂದನ್ನು ಗುಲಾಬಿಯನ್ನಾಗಿಯೇ ಉಳಿಯಗೊಡುವುದಿಲ್ಲ; ಆ ಹೂವಿಗೆ ಅನೇಕಾರ್ಥಗಳನ್ನು ತೊಡಿಸುತ್ತಾನೆ. ಅವನ ಕಣ್ಣಿನಲ್ಲಿ ಅದು ಅನೇಕ ವಸ್ತುವಿಶೇಷಗಳನ್ನು ಸಂಕೇತಿಸುತ್ತದೆ. ಉದಾಹರಣೆಗೆ ವಸಂತಾಗಮನ, ಪ್ರಿಯವಾದವರನ್ನು ಕುರಿತ ಪ್ರೀತಿ, ಜೀವನದ ನಶ್ವರತೆ ಹೀಗೆ. ಜಾಹೀರಾತು ಬರೆಯುವವನೂ ಕೂಡ ಒಂದು ಸಾಬೂನನ್ನು ಸಾಬೂನಾಗಿ ಮಾತ್ರ ನೋಡದೆ ಅದಕ್ಕೆ ಹಲವು ಅರ್ಥಗಳನ್ನು ಆರೋಪಿಸಿದಾಗ ಅದು ತನ್ನನ್ನು ಮೀರಿದ ಸಂಕೇತವೊಂದನ್ನು ಪಡೆದುಕೊಳ್ಳುತ್ತದೆ. ಉದಾಹರಣೆಗೆ ಜಾಹೀರಾತುಗಳಲ್ಲಿ ಸಾಬೂನು ಕೌಟುಂಬಿಕ ಸಂತೋಷ, ಶ್ರೀಮಂತರ ಸೌಂದರ್ಯ ಪ್ರಜ್ಞೆ, ಪುರುಷತ್ವ ಹೀಗೆ ಹಲವು ಸಂಕೇತಗಳಾಗಬಹುದು. ಅದೇ ರೀತಿ ಜಾಹೀರಾತು ಕವಿ ಟೂತ್‌ಪೇಸ್ಟ್, ಕಾರಿನ ಚಕ್ರ, ಪಾನೀಯ, ಪೀಠೋಪಕರಣ, ಬಟ್ಟೆ ಒಗೆಯುವ ಪುಡಿ ಹೀಗೆ ಯಾವುದರ ಬಗೆಗೇ ಬರೆಯಲಿ, ಅವನ ಕೆಲಸ ಬಳಕೆಯ ವಸ್ತುಗಳನ್ನು ಕಾವ್ಯಾತ್ಮಕವಾಗಿ ವಿವರಿಸುವುದು. ನಿದರ್ಶನಕ್ಕಾಗಿ ಈ ಕೆಲವನ್ನು ಗಮನಿಸಿ: 'ಕ್ಷಣದಲ್ಲೇ ಗೌರವರ್ಣ ಈಗ ನಿಮ್ಮ ಕೈಯಲ್ಲಿ' ಎನ್ನುತ್ತದೆ ಒಂದು ಜಾಹೀರಾತು; 'ಘನತೆಯ ಜಗತ್ತಿಗೆ ಹೆಜ್ಜೆಹಾಕಿರಿ' ಎಂದು ಕರೆಕೊಡುತ್ತವೆ ಚಪ್ಪಲಿ ಜಾಹೀರಾತುಗಳು; 'ಯುಗಾದಿ ಆಚರಣೆ ಆಗಿರಲಿ ಸಾಂಪ್ರದಾಯಿಕ / ಬ್ಯಾಂಕಿಂಗ್ ಮಾಡುತಲಿರಿ ಡಿಜಿಟಲ್ ಮೂಲಕ' ಎಂದು ತನ್ನ ಗ್ರಾಹಕರನ್ನು ಸೆಳೆಯುತ್ತದೆ ಬ್ಯಾಂಕು.

ಕಾವ್ಯವೆನ್ನುವುದು ಭಾಷಿಕ ಕಲೆಗಳಲ್ಲೇ ಅತ್ಯಂತ

ಶ್ರೇಷ್ಠವಾದದ್ದೆಂದು ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲಾಗಿದೆಯಷ್ಟೆ. ಆದರೆ ಜಾಹೀರಾತೆನ್ನುವುದು ಕಾವ್ಯದಂತೆ ಒಂದು ಸ್ವಾಯತ್ತ ಕಲೆಯಲ್ಲ. ಹಾಗೆ ನೋಡಿದರೆ ಅದು ನಿಜವಾದ ಕಾವ್ಯವನ್ನು ಆಶ್ರಯಿಸಿಕೊಂಡು ಜೀವ ತಳೆಯುವ ಪರಾವಲಂಬಿ.

ನಿಜವಾದ ಕಾವ್ಯ ಪ್ರಾಯೋಜಿತವಲ್ಲದ್ದು; ಜಾಹೀರಾತಿನಲ್ಲಿರುವುದು ಪ್ರಾಯೋಜಿತ ಕಾವ್ಯ. ಬ್ರಿಟಿಷ್ ಕವಿ, ವಿಮರ್ಶಕ ಜೇಮ್ಸ್ ರೀವ್ಸ್ ಇಂಥ ಕಾವ್ಯವನ್ನು 'ಸಬ್‌ಸ್ಟಿಟ್ಯೂಟ್ ಪೊಯೆಟ್ರಿ' ಎನ್ನುತ್ತಾನೆ. ಕನ್ನಡದಲ್ಲಿ ಇದನ್ನು ಕಾವ್ಯಾಭಾಸ ಎನ್ನಬಹುದೇನೊ. ಅಂದರೆ ಯಾವುದು ಕಾವ್ಯವಲ್ಲದಿದ್ದರೂ ಕಾವ್ಯವೆನಿಸುವ ಹಾಗೆ ಭಾಸವಾಗುವುದೋ ಅದು ಕಾವ್ಯಾಭಾಸ. ಇವತ್ತು ಸಾಮಾಜಿಕ ಜಾಲತಾಣಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಬಹುಪಾಲು ಕವನಗಳು ಈ ಬಗೆಯವೇ ಅಲ್ಲವೆ?

ವಿಮರ್ಶಕ ವಿಲಿಯಂ ಎಂಪ್ಸನ್ ಪ್ರಕಾರ ಅತ್ಯುತ್ತಮ ಕವನಗಳೆಲ್ಲವೂ ಸಂದಿಗ್ಧಾರ್ಥದಿಂದ ಕೂಡಿರುತ್ತವೆ. ಆದರೆ ಜಾಹೀರಾತು ಒಂದು ವೇಳೆ ಸಂದಿಗ್ಧಾರ್ಥವುಳ್ಳ ಶಬ್ದಗಳನ್ನು ಬಳಸಿಕೊಂಡರೂ ಅವು ಯಾವುದಾದರೊಂದು ಚಮತ್ಕಾರಕ್ಕಷ್ಟೇ ಸೀಮಿತವಾಗಿರುತ್ತದೆ. ಕಾವ್ಯವನ್ನು ಓದುವಾಗ ನಾವು ಅದರ ಆಶಯದ ಜೊತೆ ಅಥವಾ ನೇರವಾಗಿ ಕವಿಯ ಜೊತೆ ನಮ್ಮನ್ನು ನಾವು ಗುರುತಿಸಿಕೊಳ್ಳುತ್ತೇವಲ್ಲವೆ? ಜಾಹೀರಾತುಗಾರರು ತಾವು ಆಡುವ ಪಾತ್ರಗಳ ಜೊತೆ ಗುರುತಿಸಿಕೊಳ್ಳಬೇಕೆಂದು ನಮ್ಮನ್ನು ಪುಸಲಾಯಿಸುತ್ತಾರೆ.

ಕಾವ್ಯ ಮತ್ತು ಜಾಹೀರಾತು, ಎರಡರಲ್ಲೂ ವಿಪುಲವಾದ ಪ್ರಾಸಗಳಿರುತ್ತವೆ. ಆದರೆ ಆ ಪ್ರಾಸಗಳು, ನಮ್ಮ ಬೇಂದ್ರೆಯವರ ಕಾವ್ಯದಲ್ಲಿರುವಂತೆ, ಒಂದಕ್ಕೊಂದು ಪೂರಕವಾಗಿ, ಉದ್ದೇಶಿತ ಆಶಯವನ್ನೂ ಮೀರಿದ ಧ್ವನಿಯಾಗಿ ಒಡಮೂಡಿರುವುದಿಲ್ಲ.

ಮರಳಿ ಬಂದಿದೆ ಯುಗಾದಿ
ತಂದಿದೆ ಹೊಸ ವರುಷದ ಆದಿ
ತೋರಲಿ ಹೊಸ ವರುಷದ ಹಾದಿ
ತೂರಲಿ ನಮ್ಮೆಲ್ಲರ ಸಂಕುಚಿತ ಪರಿಧಿ

ಇದು ರಾಜಕಾರಣಿಯೊಬ್ಬರು ನೀಡಿದ ಸಂದೇಶ; ಅವರು 'ನೀಡಿದ' ಎನ್ನುವುದಕ್ಕಿಂತ ಜಾಹೀರಾತು ಕವಿಯೊಬ್ಬ ಅವರಿಗೆಂದೇ ಸಿದ್ಧಪಡಿಸಿದ ಸಂದೇಶ. ಇದರಲ್ಲಿ ಅಂತ್ಯಪ್ರಾಸವೇನೋ ಇದೆ. ಆದರೆ ಅದು ಪ್ರಾಸಕ್ಕಾಗಿ ಪ್ರಾಸ ಎನ್ನಿಸುವಂತೆ ಮೂಡಿಬಂದಿರುವ ಪ್ರಾಸವಾಗಿದೆಯೇ ಹೊರತು ಅರ್ಥಾನುಸಾರಿಯಾದ ಪ್ರಾಸವಂತೂ ಅಲ್ಲವೇ ಅಲ್ಲ.

ಜಾಹೀರಾತು ಸಂಕೇತಗಳನ್ನು ತನಗೆ ಬೇಕಾದಂತೆ ತಿರುಚುವ ಕಲೆ. ಫ್ಯಾಷನ್ನಿನ ಸಂಕೇತಗಳು ಬಟ್ಟೆಬರೆಗಳನ್ನೋ ಪೋಷಾಕುಗಳನ್ನೋ ಅದ್ವಿತೀಯವೆಂದು ತೋರಿಸುತ್ತವೆ; ಯೌವನದ ಲವಲವಿಕೆಯ ಸಂಕೇತ ಕೋಕಕೋಲಾದಂಥ ಪಾನೀಯಗಳ ಮಾರಾಟಕ್ಕೆ ನೆರವಾಗುತ್ತದೆ. ಹಸುಗೂಸಿಗೆ ಸಂಬಂಧಪಟ್ಟ ಪ್ರೀತಿ, ವಾತ್ಸಲ್ಯ, ಸಂಭ್ರಮ ಮೊದಲಾದ ಸಂಕೇತಗಳು ಬೇಬಿಫುಡ್, ಡೈಪರ್ ಇತ್ಯಾದಿ ವಸ್ತುಗಳ ಮೂಲಕ ಜಾಹೀರಾತುಗಳಾಗಿ ಬೇರೆಯದೇ ಅರ್ಥವನ್ನು ಕೊಡುತ್ತವೆ.

ಇವತ್ತು ದೈನಂದಿನ ಜೀವನದ ಎಲ್ಲ ಸಂಕೇತಗಳನ್ನು, ಅದರಲ್ಲೂ ಮುಖ್ಯವಾಗಿ ಸಂತೋಷವನ್ನೋ, ಉಲ್ಲಾಸವನ್ನೋ ಸೂಚಿಸುವ ಸಂಕೇತಗಳನ್ನು, ಜಾಹೀರಾತುದಾರರು ಎತ್ತಿಹಾಕಿಕೊಂಡಿದ್ದಾರೆ. ವಿಪರ್ಯಾಸವೆಂದರೆ ಬಡತನ, ಭೀತಿ, ನೋವು, ವಿಷಾದ, ಕಳವಳ, ಆತಂಕ ಮುಂತಾದ ಭಾವಗಳು ಒಳ್ಳೆಯ ಕಾವ್ಯದ ವಸ್ತುಗಳಾಗುವಂತೆ ಜಾಹೀರಾತಿನ ವಸ್ತುಗಳಾಗದೇ ಇರುವುದು. ಯಾಕೆಂದರೆ ದುಃಖದುಮ್ಮಾನಗಳ ಸಂಕೇತಗಳನ್ನು ಉಪಯೋಗಿಸಿಕೊಳ್ಳುವ ಇರಾದೆ ಜಾಹೀರಾತುಗಳ ಜಾಯಮಾನದಲ್ಲೇ ಇಲ್ಲ. ಸುಖಸಂತೋಷಗಳು ನಮ್ಮ ಕೈಯಳತೆಯೊಳಗೇ ಇವೆ ಎಂದು ಸಾರುತ್ತವೆ ಅವು.

ಕಾವ್ಯವೆನ್ನುವುದು ವಿಭಿನ್ನ ಅನುಭವ ಜಗತ್ತುಗಳನ್ನು ಹೇಗೋ ಹಾಗೆ ಭಾಷೆಯ ಸಾಧ್ಯತೆಗಳನ್ನೂ ಅನ್ವೇಷಿಸುವ ಕಲೆ. ಆದ್ದರಿಂದ ನಾವು ಒಂದು ಕವನವನ್ನು ವಿಮರ್ಶಿಸುವಾಗ ಎರಡು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಒಂದು, ಕವನ ತನ್ನದೇ ಜಗತ್ತೊಂದನ್ನು ಅನ್ವೇಷಿಸುತ್ತಿದೆಯೆ? ಹಾಗಿದ್ದರೆ ಅದು ಯಾವ ಬಗೆಯ ಜಗತ್ತು? ಎರಡನೆಯ ಪ್ರಶ್ನೆ, ಕವನ ಭಾಷೆಯ ಬಳಕೆಯಲ್ಲಿ ಹೊಸ ಸಾಧ್ಯತೆಯನ್ನೇನಾದರೂ ಕಂಡರಿಸಿದೆಯೆ? ಈ ಪ್ರಶ್ನೆಗಳಿಗೆ ದೊರೆಯುವ ಉತ್ತರಗಳಿಂದಲೇ ನಾವು ಕವನವೊಂದು ಅಸಲಿಯೋ ನಕಲಿಯೋ, ಒಳ್ಳೆಯದೋ ಕೆಟ್ಟದ್ದೋ, ಸಾರ್ಥಕವೋ ನಿರರ್ಥಕವೋ ಎಂದು ತೀರ್ಮಾನಿಸುವುದು ಸಾಧ್ಯ. ಹಾಗೆ ತೀರ್ಮಾನಿಸುವಾಗ ಕವನ ನಮ್ಮನ್ನು ಹೊಸ ಜಗತ್ತಿಗೆ, ವಿಚಾರದ ಔನ್ನತ್ಯಕ್ಕೆ, ಭಾವಾನುಭವದ ಆಳಗಳಿಗೆ, ವಿಸ್ತೃತವಾದ ಕಾಣ್ಕೆಗೆ ಕರೆದೊಯ್ಯುತ್ತಿದೆಯೆ ಎಂದೂ ನಾವು ಕೇಳಿಕೊಳ್ಳಬೇಕು. ಒಳ್ಳೆಯ ಕಾವ್ಯ ನಮ್ಮನ್ನು ಹೊಸ ಜಗತ್ತುಗಳಿಗೆ ಕರೆದೊಯ್ಯುವ ಮೂಲಕ ನಮ್ಮ ಸಂವೇದನೆಯನ್ನು ಹಿಗ್ಗಿಸುತ್ತದೆ. ಆದರೆ ಕಾವ್ಯಾಭಾಸವಷ್ಟೇ ಆಗಿರುವ ಜಾಹೀರಾತು ಕಾವ್ಯ ನಮಗೆ ಪರಿಚಿತವಾಗಿರುವ ಜಗತ್ತನ್ನೇ ಪುನರ್‌ರೂಪಿಸುವ ಮೂಲಕ ನಮ್ಮಲ್ಲಿ ಈಗಾಗಲೇ ಇರುವ ಅನುಭವವನ್ನಷ್ಟೇ ದೃಢಪಡಿಸುತ್ತದೆ. ■

ಮೆಟ್ರೊ @9.17

ಸಂದೇಶ್ ಎಚ್. ನಾಯ್ಕ್
feedbacklvk@vijaykarnataka.com

ನಿಲ್ದಾಣ ಹೊಕ್ಕ ಮೆಟ್ರೊ ಆಯಾಸವನ್ನೆಲ್ಲಾ ಅರೆಕ್ಷಣ ನೀಗಿಸಿಕೊಳ್ಳುವಂತೆ ನಿಶ್ಚಲಗೊಂಡಿತು. ಇಳಿಯುವ, ಹತ್ತುವ ಜನರ ಆ ಗಡಿಬಿಡಿಯಲ್ಲೆಲ್ಲೋ ಬದುಕು ಸಿಲುಕಿಕೊಂಡಿತ್ತು. 'ಕೊಟ್ಟ ಸಮಯ ಮುಗಿಯಿತು' ಎಂಬ ಕಾಲನ ಎಚ್ಚರಿಕೆಯ ಸಣ್ಣ ತುಣುಕೋ ಎಂಬಂತೆ 'ಕ್ಲೀಂ, ಕ್ಲೀಂ..' ಸದ್ದು ಮೊಳಗಲಾರಂಭಿಸಿತು, ಬಾಗಿಲುಗಳು ಮುಚ್ಚಿಕೊಳ್ಳಲು ಅನುವಾದವು.

ಓಡೋಡಿ ಬಂದ ಅಶ್ವಿತ್, ಒಮ್ಮೆ ಹಿಂತಿರುಗಿ ನೋಡಿದ. ಆಕೆ ಅವಸರದ ಹೆಜ್ಜೆ ಇಡುತ್ತಿದ್ದಳು. ಆರಾಮವಾಗಿ ಒಳ ಸೇರಿಕೊಳ್ಳಬಹುದಾಗಿದ್ದ ಆತ ಕೊಂಚ ಎಡವಿದಂತೆ ನಟಿಸಿ, ಬಾಗಿಲಿಗೆ ಬ್ಯಾಗ್ ಅಡ್ಡವಾಗುವಂತೆ ಹಿಂದೆ ಸರಿದ. ಮುಚ್ಚುವ ತನ್ನ ನಿರ್ಧಾರದಿಂದ ಬಾಗಿಲು ತಾತ್ಕಾಲಿಕವಾಗಿ ಹಿಂದೆ ಸರಿಯಿತು.

'ಅಯ್ಯೋ ಟ್ರೇನ್ ಮಿಸ್ ಆಯಿತಲ್ಲ' ಎಂಬ ಆಕೆಯ ಮುಖ ಭಾವ ಬದಲಾಯಿತು. ತೆರೆದ ಬಾಗಿಲೇ ಆ ಕ್ಷಣದ ಅವಕಾಶ, ಬಾಚಿಕೊಳ್ಳಬೇಕಷ್ಟೇ ಎಂಬಂತೆ ಆಕೆ ಒಮ್ಮೆಗೆ ಮೆಟ್ರೊದೊಳಕ್ಕೆ ತೂರಿಕೊಂಡಳು. ಕೆಕ್ಕರಿಸಿ ನೋಡುತ್ತಿದ್ದ ಸೆಕ್ಯೂರಿಟಿಯವ ಹಿಂದೆಯೇ ಉಳಿದುಹೋದ.

ನವಿಲುಗರಿ

ಅಶ್ವಿತ್‌ನ ನೋಟ ಯಾವ್ಯಾವುದೋ ನೆಪದಲ್ಲಿ ಅತ್ತ ಹರಿಯಿತು. ಇಬ್ಬರಿಗೂ ಒಂದು ಕೋಚ್‌ನ ಅಂತರ. ಗುಳಿಕೆನ್ನೆಯ ಮುಖದ ಆಕೆ ತಿಳಿನೀಲಿ ಜೀನ್ಸ್, ಬ್ಲ್ಯಾಕ್ ಟಾಪ್ ತೊಟ್ಟಿದ್ದಳು. ಕೂದಲು ಮುಕ್ತವಾಗಿ ಹಾರಾಡುತ್ತಿತ್ತು. ಕೊಂಚ ಬಿಡುವೆಂಬಂತೆ ಕ್ಲಿಪ್ ಆಕೆಯ ಶಾರ್ಟ್ ಟಾಪ್‌ನ ಅಂಚನ್ನು ಅಪ್ಪಿತ್ತು. ಝೋಕ್ ಬ್ಯಾಗ್‌ನ ಗಾತ್ರ ಆಕೆಗೆ ತುಸು ದೊಡ್ಡದೇ. ಸ್ಕೆಚರ್ಸ್ ಶೂ ಆಕೆಯ ಪಾದವನ್ನು ಅಡಗಿಸಿಟ್ಟಿಕೊಂಡದ್ದು, ಅಶ್ವಿತ್‌ಗೆ ತುಸು ನಿರಾಸೆ. ಆದರೂ ಆಕೆ ಪ್ರಯಾಣಕ್ಕೆ ಜೊತೆಯಾದ ಭಾವ. ಸ್ಮಾರ್ಟ್ ವಾಚ್ ನೋಡಿಕೊಂಡ. ಅದು ಬೆಳಗ್ಗಿನ 9:17 ನ್ನು ತೋರಿಸುತ್ತಿತ್ತು.

ಅಂದಿನಿಂದ ಬೆಳಗ್ಗಿನ ಯಾವ ಗಡಿಬಿಡಿಗೂ ಆತ 9.17ರ ಮೆಟ್ರೊ ಹಿಡಿಯುವುದನ್ನು ತಪ್ಪಿಸಲಾಗುತ್ತಿರಲಿಲ್ಲ. ಅವರಿಬ್ಬರೂ ಆ ಮೆಟ್ರೋದ ನಿತ್ಯ ಪಯಣಿಗರು. ಹಾಗಂತ ಜೊತೆಜೊತೆಗೆ ಕುಳಿತು ಸಾಗುವ ಹಂಬಲದ ಸಹಪಯಣಿಗರಲ್ಲ.

ಅವತ್ತೊಂದಿನ ಅಶ್ವಿತ್ ಬಾಗಿಲಿನ ಪಕ್ಕದ ಸೀಟ್‌ನಲ್ಲಿ, ಗಾಜಿನ ಹಲಗೆಗೆ ಒರಗಿ ಸಣ್ಣಗೆ ನಿದ್ದೆಗೆ ಜಾರಿದ್ದ. ಯಾವುದೋ ಘಮ, ಆತನ ಮೈದಡವಿ ಎಬ್ಬಿಸಿದಂತಾಯ್ತು. ಕಣ್ಣು ಬಿಟ್ಟರೆ, ಆಕೆ ಅದೇ ಗಾಜಿಗೆ ಒರಗಿ ನಿಂತಿದ್ದಾಳೆ. ಆ ಪಾರದರ್ಶಕ ಗಾಜು, ಇಬ್ಬರನ್ನೂ ಬೆಸೆದೂ ಬೆಸೆಯದಂತೆ ಹತ್ತಿರ ತಂದಿತ್ತು. ಬೆಳಗ್ಗಿನ ಗಾಳಿಗೆ ಹಾರಾಡುತ್ತಿದ್ದ ಅರೆ ಹಸಿ ಕೂದಲು, ಶಾಂಪೂವಿನ ಘಮವನ್ನು ಚೆಲ್ಲುತ್ತಿತ್ತು. ಆತ ಆದಷ್ಟೂ ಅದನ್ನು ಒಳಗೆಳೆದುಕೊಳ್ಳುತ್ತಿದ್ದ, ನೇರ ಹೃದಯದೊಳಕ್ಕೇ!

ಆಕೆ ಪುಸ್ತಕವೊಂದನ್ನು ಎದೆಗವುಚಿ ಹಿಡಿದಿದ್ದಳು. '.....twice' ಅಂತೇನೋ ಅರ್ಧಂಬರ್ಧ ಹೆಸರು ಕಾಣಿಸಿತು. ಚಾಟ್‌ಜಿಪಿಟಿಯ ನೆರವು ಪಡೆದು ಅದರ ಹೆಸರನ್ನು 'fool me twice' ಅಂತ ಪತ್ತೆ ಹಚ್ಚಿದ ದಿನವೇ ಅಶ್ವಿತ್ ಆ ಪುಸ್ತಕವನ್ನೂ ಅಮೆಜಾನ್ ಕಾರ್ಟ್‌ಗೆ ಹಾಕಿಕೊಂಡ.

ಮತ್ತೊಂದು 9.17ರ ಮೆಟ್ರೊದ ಪ್ರಯಾಣ. ಅಂದು ಅಯಾಚಿತವಾಗಿ ಇಬ್ಬರೂ ಅಕ್ಕಪಕ್ಕ ಕುಳಿತಿದ್ದರು. ಆಕೆ ಇನ್‌ಸ್ಟಾಗ್ರಾಮ್ ಸ್ಕ್ರಾಲ್ ಮಾಡುತ್ತಿದ್ದಳು. 'thatgirl.isha' ಎಂಬ ಐ.ಡಿಯನ್ನು ಕಣ್ಣಲ್ಲೇ ಕದ್ದ, ದಾಖಲಿಸಿಟ್ಟಕೊಂಡ. ಖುಷಿಯ ನಗೆ ತುಟಿ ದಾಟದಂತೆ ಬೇಕೆಂದೇ ತಡೆದ.

'ಇನ್ನೇನು ಕೆಲವೇ ಕ್ಷಣಗಳಲ್ಲಿ ರೈಲು ಪ್ಲಾಟ್‌ಫಾರ್ಮ್ ತಲುಪಲಿದೆ' ಎಂಬ ಘೋಷಣೆ ಆ ಸಂಜೆ ಸುಳ್ಳಾಗಿತ್ತು. 'ಮೆಟ್ರೊ ಸೇವೆಯಲ್ಲಿ ವ್ಯತ್ಯಯ' ಎಂಬ ಸುದ್ದಿ ಹೊರ ಬಿತ್ತು. ಎಲ್ಲರನ್ನೂ ಹೊರ ಕಳಿಸಲಾರಂಭಿಸಿದರು. ಸ್ಕ್ಯಾನ್ ಮಾಡಿ ಪ್ರವೇಶಿಸಿದವರು, ಸ್ಕ್ಯಾನ್ ಮಾಡಿಯೇ ನಿರ್ಗಮಿಸಬೇಕಿತ್ತು. ಆ ಜನಂಜಗುಳಿಯಲ್ಲಿ ಆಕೆಯೂ ನಿಂತಿದ್ದಳು.

'ಏನಾಯಿತು?' ಕೇಳಿದ. 'ಚಾರ್ಜ್ ಖಾಲಿ. ಚಾರ್ಜಿಂಗ್ ಪೋರ್ಟ್ ಇಲ್ಲ' ದನಿ ತಗ್ಗಿತ್ತು. ಆತ ಅದಾಗಲೇ ಸ್ವಯಂಚಾಲಿತ ಗೇಟ್‌ನಿಂದ ಹೊರ ಬಂದಿದ್ದ. ವಾಪಾಸು ಬಂದ ಅಶ್ವಿತ್ ತನ್ನ ಬ್ಯಾಗ್‌ನಲ್ಲಿದ್ದ ಕೇಬಲ್‌ನ ಒಂದು ತುದಿಯನ್ನು ತನ್ನ ಮೊಬೈಲ್‌ಗೂ, ಇನ್ನೊಂದನ್ನೂ ಒಳಗಿದ್ದ ಆಕೆಯ ಮೊಬೈಲ್‌ಗೂ ಸಿಕ್ಕಿಸಿದ. ಇಬ್ಬರನ್ನೂ ಬೆಸೆದಂತೆ ನಡುವೆ ಕೇಬಲ್. 7-8 ನಿಮಿಷದಲ್ಲಿ ಶೇ. 4 ಚಾರ್ಜ್‌ನ್ನು ಕಡ ನೀಡಿದ್ದ. 'ಸಾಕು, ಥ್ಯಾಂಕ್ಸ್' ಎಂದಳು. ಈತ ಅನುಮೋದನೆಯ ನಗು ಬೀರಿ ನಡೆದ.

ಅದರ ಮರುದಿನ ಆತ ಇನ್ನಷ್ಟು ಹುಮ್ಮಸ್ಸಿನಿಂದ 9.17ರ ಮೆಟ್ರೊ ಹಿಡಿದ. ಆದರೆ ಆಕೆ ಬರಲೇ ಇಲ್ಲ, ಮುಂದಿನ ನಾಲ್ಕೈದು ದಿನಗಳೂ ಕಾಣಿಸಲಿಲ್ಲ, ಆಕೆಯನ್ನು ಕಾಣದೇ ಆತನ ಕಣ್ಣುಗಳೂ ಬಳಲಲಾರಂಭಿಸಿದವು. ಆದರೂ 9.17ರ ಮೆಟ್ರೊವನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ. ಒಂಟಿ ಪಯಣ ಸಣ್ಣಗೆ ಮನಸ್ಸನ್ನು ಕೊರೆಯುತ್ತಿತ್ತು. ಹೀಗೆ ಎಷ್ಟೊಂತ ಕಾಯುವುದು ಎನಿಸಿತು. ಮೊಳೆತ ಪ್ರೀತಿಯನ್ನು ಅನಾಥ ಮಾಡಿ, ಬದುಕಿನ ಸಂತೆಯಲ್ಲಿ ಕೈ ಬಿಟ್ಟು ಸಾಗಲು ಮನಸ್ಸಾಗಲಿಲ್ಲ ಅಶ್ವಿತ್‌ಗೆ.

ಒಂದು ಸುಂದರ ಸಂಜೆ, ಆಕೆ ಐಡಿಯನ್ನು ನೆನಪಿನಿಂದ ಹೆಕ್ಕಿ ತೆಗೆದು ಒಂದೊಂದೇ ಅಕ್ಷರವನ್ನು ಟೈಪಿಸತೊಡಗಿದ. ಇನ್‌ಸ್ಟಾಗ್ರಾಂ ಖಾತೆಯ ಕದ ತಟ್ಟಿದ. ಹೀಗೊಂದು ಮೆಸೇಜ್‌ನ್ನೂ ಇನ್‌ಬಾಕ್ಸ್‌ಲಿ ತೇಲಿಬಿಟ್ಟ, 'ನಾನು ಸಾಲ ಕೊಟ್ಟ ನಾಲ್ಕು ಪರ್ಸೆಂಟ್ ಚಾರ್ಜ್ ನಿಮ್ಮ ಮೊಬೈಲ್‌ನೊಳಗೆ ಉಸಿರಾಡಿಕೊಂಡಿದೆ. ತುಸು ನಿಗಾ ಇರಿಸಿ'. ತೀರದ ಕುತೂಹಲ, ಕಾತರದಿಂದ ಕ್ಷಣಕಾಲ ತಡೆದು, ಇನ್‌ಬಾಕ್ಸ್‌ನತ್ತ ಇಣುಕಿದ, 'ಟೈಪಿಂಗ್....' ಸಂಕೇತ ಮೂಡಿತು! ■

ವರ್ಷಗಳ ಸಂಶೋಧನೆ ಮತ್ತು ಪ್ರಾಚೀನ ಆಯುರ್ವೇದ ಗ್ರಂಥ ಬಳಸಿ ಜಾಲಿ ತುಳಸಿ 51 ಡ್ರಾಪ್ಸ್ ತಯಾರಿಸಲಾಗಿದೆ
ದೇಹವನ್ನು ನಿರ್ವಿಷಗೊಳಿಸುತ್ತದೆ ಮತ್ತು ರೋಗನಿರೋಧಕ ಶಕ್ತಿ ಹೆಚ್ಚಿಸುವಲ್ಲಿ ಸಹಕರಿಸುತ್ತದೆ
ಪ್ರಾಯೋಗಿಕವಾಗಿ ಪರೀಕ್ಷಿಸಲ್ಪಟ್ಟಿದೆ
ತುಳಸಿಯ 5 ವಿಧದ ಸಾರ ಬಳಸಿ ಅತ್ಯಂತ ವಿಶೇಷ ವಿಧಾನದಿಂದ ತಯಾರಿಸಲ್ಪಟ್ಟಿದೆ
• ಗ್ಯಾಸ್
• ಸುಡುವ ಸಂವೇದನೆ
• ಅಜೀರ್ಣ
• ಕರುಳಿನ ಆರೋಗ್ಯ
• ಮಲಬದ್ಧತೆ
• ಕೆಟ್ಟ ಶ್ವಾಸ
• ಮೊಡವೆಗಳು/ಮೊಡವೆ
• ಕೂದಲು ಉದುರುವಿಕೆ
• ಬಾಯಿ ಹುಣ್ಣು
• ಗಮನದ ಕೊರತೆ (ADHD)
• ಗಂಟಲು ನೋವು
• ಉಸಿರಾಟ ತೊಂದರೆ
• ಕೆಮ್ಮು
• ಅಲರ್ಜಿ
• ಚರ್ಮ ರೋಗ
• ತಲೆಸುತ್ತು
• ಜ್ಞಾಪಕಶಕ್ತಿ
• ದೌರ್ಬಲ್ಯ
• ಕಪ್ಪು ಕಲೆಗಳು ಮತ್ತು ಸುಕ್ಕುಗಳು
• ಮರಗಟ್ಟುವಿಕೆ
• ಕೀಲು ನೋವಿಗೆ ಸಹಕಾರಿ

JOLLY
CLINICALLY TESTED
ತುಳಸಿ 51 ಡ್ರಾಪ್ಸ್
5-5 ಹನಿ ಬೆಳಿಗ್ಗೆ & ಸಂಜೆ ಮಕ್ಕಳು, ಹಿರಿಯರು ಮತ್ತು ಯುವಕರು
ಜಾಲಿ ತುಳಸಿ 51 ಬ್ರ್ಯಾಂಡ್‌ನ ಸದಾಶಯ ಮತ್ತು ಗ್ರಾಹಕರ ತಳಹದಿಯ ಲಾಭ ಪಡೆಯಲು ಇದೇ ರೀತಿಯ ಹೆಸರುಗಳೊಂದಿಗೆ ಅನೇಕವು ಎಷ್ಟೇ ಬಂದರೂ, ಮೆಡಿಕಲ್ ಸ್ಟೋರ್‌ನಿಂದ ಖರೀದಿಸುವಾಗ ತುಳಸಿ ಡ್ರಾಪ್ಸ್ ಬದಲು ಜಾಲಿ ತುಳಸಿ 51 ಡ್ರಾಪ್ಸ್ ಬಗ್ಗೆ ನಿರ್ದಿಷ್ಟವಾಗಿ ಕೇಳಿ ಪಡೆಯಿರಿ.
Super Stockist.»Shri Rama Stores,Yellapur. M:98143-30500
Bagalkot: 9972840996, Bangalore: 8951490881, Chitradurga: 9742800795, Davangere: 9591346737, Gadag:9886715963, Gulbarga: 9886294310, Haveri:94486-30757, 9538226227, Hubli: 9980571313, Ilkal: 9448014145, Mangalore: 9964746647, 9845082957, 9945172643, Manipal: 9880451511, Mysore: 9243580210, Ranebennur: 9844323973, Sirsi: 9916250217, Udupi: 9449920235, 9845456115, Kolar: 94482-61087, Mysur: 9590562007, Raichur: 94485-70649, Davangere: 9880708064
ಎಲ್ಲಾ ಮೆಡಿಕಲ್ ಸ್ಟೋರ್‌ಗಳಲ್ಲಿ ಲಭ್ಯ ✆ 97813-30500 www.jollyorganic.com

RNI No. KARKAN/2016/71628
Vol. 11 Issue no. 143
Published by Lokesh K V on behalf of Metropolitan Media Company Limited., Published at 74/2,Sanjana Plaza,4th&5th Floor,Elephant Rock Road,Jayanagar 3rd block,Bengaluru-560011, Ph: 080 40877666 and Printed at (a) Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099. (b) Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) Metropolitan Media Co. Ltd.,Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g) Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011. Regd. Office: 74/2,Sanjana Plaza,4th&5th Floor,Elephant Rock Road,Jayanagar 3rd block,Bengaluru-560011, (Ph:080-40877666). Editor: Sudarshan Channangihalli.
© All Rights Reserved. Reproduction in whole or part without permission is prohibited.

ಪದ್ಯಕಾಲ



ಬಜಾರಿಗೆ ಬಂದ ಕಬೀರ

ಬಜಾರಿಗೆ ಬಂದ ಕಬೀರ
ಜನಜಾತ್ರೆ ಹೆಜ್ಜೆಯೂರಲೂ
ಇರಲಿಲ್ಲ ತಾವು; ಯಾರೋ
ತಳ್ಳಿದರು, ನೂಕಿದರು ಮತ್ತಾರೊ
ಏಕತಾರಿ ಮಿಡಿಯಿತು ಮೆಲು
ದನಿಯಲ್ಲಿ; ಹುಚ್ಚುಹುಡುಗನ
ಕಣ್ಣಲ್ಲಿ ನಕ್ಕ ಕಬೀರ;

ತರಂಗಗಳೆದ್ದು ತುಂಬಿತು ನಾದ
ನಾದಕ್ಕೆ ತಲೆಬಾಗಿ ಬಂದನೊಬ್ಬ
ನೂಕು ನುಗ್ಗಲಲ್ಲೇ ಕೈಮುಗಿದ,
ಚಿಪ್ಪು ಬಾಳೆಯ ಹಣ್ಣ ಕೊಟ್ಟು

ದಾರಿಬಿಟ್ಟರು ಜನ ನಿರಾಳ ಕಬೀರ
ನಕ್ಕು ನುಡಿಸಿದ ತನ್ನೊಳದನಿಯ
ಹಾಡಿಗೆ ಜನ ಮರಳು, ಕಾಡಿದರು
ಬೇಡಿದರು, 'ಬಾಬಾ ಕೊಡು ನಮಗೆ
ಸಕಲ ಸಂಪತ್ತು, ಕೊನೆಗಾಲದ ಸುಖ' ,
ಮೆಲ್ಲಗೆ ಕಾಲ್ತೆಗೆದ ಕಬೀರ ಅಲ್ಲಿಂದ

ಒಂಟಿ ಪಯಣದ ಹಾದಿ, ತೋರಿತ್ತು
ಬೆಟ್ಟದ ತುಟ್ಟತುದಿಯ, ದಣಿವಿಲ್ಲ,
ದಾಹ ಇದ್ದೇ ಇತ್ತು, ಮೀಟುವ ತಂತಿಯ
ಆಟ ನಡೆದೆ ಇತ್ತು ಅಂತರಂಗದಲ್ಲಿ

ತೇಲುತ್ತ ತೇಲುತ್ತ ಬಂದ ಮೋಡಗಳು
ಮೈಸವರಿ ಹೋದವು ಮರುಳು ಮಾಡಿ
ಇಳಿಮುಖದ ಸೂರ್ಯ ಮರೆಯಾಗಿ
ಬಾನು ತುಂಬಿತು ಬಣ್ಣಬಣ್ಣಗಳಲ್ಲಿ
ಗೂಡತ್ತ ಹೊರಟವು ದಣಿದ ಹಕ್ಕಿ

ಎದೆಯ ತೆರೆಯುತ್ತ ಎಲ್ಲ ತುಂಬುತ್ತ
ಅಂದ ಕಬೀರ: ಭ್ರಮೆಯಲ್ಲ, ಮಾಯೆ
ಅಲ್ಲ ಈ ಜಗದ ವ್ಯಾಪಾರ, ಸತ್ಯದವತಾರ
ನೀರಗುಳ್ಳೆಯೂ ನಿಜ, ಹುಲ್ಲುಕಡ್ಡಿಯೂ,
ನೂಕು ನುಗ್ಗಲು ನಿಜ, ಅಲ್ಲಿಂದ ಎದ್ದುಬಂದ
ಏಕಾಂತವೂ ನಿಜ, ಈ ಜಗವೆಂಬುದು ನಿಜ

(ಕಬೀರರ ಒಂದು ಭಜನ್ ಕೇಳಿ)



ಜಿ.ಪಿ.ಬಸವರಾಜು

ಗುಣಾಢ್ಯ ನಂದು

ಮಕ್ಕಳ ಕಥೆ

ಲತಾ ಹೆಗಡೆ
feedbacklvk@vijaykarnataka.com

ವಿದ್ಯಾನಗರದ ಸರಸ್ವತಿ ವಿದ್ಯಾಲಯದಲ್ಲಿ ಪ್ರತಿ ವರ್ಷ ಕಡಿಮೆ ಶುಲ್ಕದಲ್ಲಿ ಬೇಸಿಗೆ ಶಿಬಿರಗಳನ್ನು ಆಯೋಜಿಸುವುದು ಪದ್ಧತಿ. ಅಲ್ಲದೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಉಚಿತ ಶಿಬಿರ ಹಾಗೂ ಸ್ಪರ್ಧೆಗಳನ್ನು ಏರ್ಪಡಿಸಿ ಬಡ ಮತ್ತು ಚುರುಕುಬುದ್ಧಿಯ ಪ್ರತಿಭಾವಂತ ಮಕ್ಕಳನ್ನು ಗುರುತಿಸಿ ಅವರಿಗೆ ಉಚಿತ ಶಿಕ್ಷಣ ನೀಡಲಾಗುತ್ತಿತ್ತು. ಒಮ್ಮೆ ಹಾಗೆ ಹುಡುಕಿ ತಂದ ಚುರುಕುಮತಿಯೇ ನಂದು. ಅವ ಹುಟ್ಟು ಬುದ್ಧಿವಂತ. ಆದರೆ ವಿದ್ಯಾಭ್ಯಾಸ ಆರನೆತ್ತೆಗೆ ನಿಲ್ಲಲು ಕಾರಣ ಬಡತನ ಹಾಗೂ ಮನೆಯ ಜವಾಬ್ದಾರಿ. ತಂದೆಯ ಆರೋಗ್ಯ ಹದಗೆಟ್ಟಿತ್ತು. ತಾಯಿ ನಾಲ್ಕಾರು ಮನೆಯ ಮುಸುರೆ ಕೆಲಸ ಮಾಡಿ ಜೀವನ ನಿರ್ವಹಿಸುತ್ತಿದ್ದರು. ನಂದುವೂ ಕೆಲವು ಮನೆಗಳ ಅಂಗಳ ತೊಳೆಯುವುದು; ಗಿಡಕ್ಕೆ ನೀರು ಹಾಕುವುದು ಮಾಡುತ್ತ ಖರ್ಚನ್ನು ತೂಗಿಸಲು ಅಮ್ಮನಿಗೆ ನೆರವಾಗಿದ್ದ.

ನಂದುವಿನ ಹೆತ್ತವರಿಂದ ಒಪ್ಪಿಗೆ ಪಡೆದ ನಂತರ ವಿದ್ಯಾನಗರಕ್ಕೆ ಕರೆತಂದು ಸರಸ್ವತಿ ವಿದ್ಯಾಲಯಕ್ಕೆ ಸೇರಿಸಿದ್ದಾಗಿತ್ತು. ವಿದ್ಯಾರ್ಥಿ ನಿಲಯದಲ್ಲಿ ಉಳಿದುಕೊಳ್ಳುವ ವ್ಯವಸ್ಥೆಯೂ ಆಗಿತ್ತು. ಖಾಲಿ ಕೂರಲು ಇಷ್ಟಪಡದ ನಂದು ವಿದ್ಯಾರ್ಥಿ ನಿಲಯದ ಅಂಗಳ ಗುಡಿಸುವುದು, ಗಿಡಗಳಿಗೆ ನೀರುಣಿಸುವುದು ಮುಂತಾದ ಕೆಲಸಗಳಲ್ಲಿ ರಾಮಯ್ಯನಿಗೆ ಕೈಜೋಡಿಸಿ ಬೇಡವೆಂದರೂ ಸಹಾಯ ಮಾಡುತ್ತ ರಾಮಯ್ಯನ ಮನ ಗೆಲ್ಲುವುದರ ಜೊತೆಗೆ ಬಹುಬೇಗನೆ ಎಲ್ಲರ ವಿಶ್ವಾಸಕ್ಕೂ ಪಾತ್ರನಾದ.

ಶಾಲೆಯೂ ಶುರುವಾಯಿತು, ಗೆಳೆಯರೂ ಆದರು. ಎಲ್ಲರನ್ನೂ ಹಚ್ಚಿಕೊಂಡು ಗೆಳೆತನ ಬೆಳೆಸಿ ಪ್ರೀತಿ ಗಳಿಸಿದ ನಂದು. ಸ್ನೇಹಿತರಲ್ಲಿ ಅಸೂಯೆ ಉಳ್ಳವರೂ ಅನೇಕರಿದ್ದರು. ನಂದು ತನ್ನ ಬುದ್ಧಿವಂತಿಕೆ, ಪ್ರತಿಭೆಯಿಂದಲೇ ಶಿಕ್ಷಕರ ಅಚ್ಚುಮೆಚ್ಚಿನವನಾದ. ಇದನ್ನು ಕಂಡು ಹೊಟ್ಟೆಕಿಚ್ಚು ಪಟ್ಟವರಲ್ಲಿ ರಮೇಶ, ಸುರೇಶನ ಪಾಲು ಹೆಚ್ಚಿತ್ತು. ನಂದುವಿನ ಏಳಿಗೆ ಸಹಿಸಲಾಗದೇ ಈ ಸಲದ ಪರೀಕ್ಷೆಯಲ್ಲಿ ಆತ ಫೇಲಾಗುವಂತೆ ಮಾಡಲು ಪುಸ್ತಕಗಳನ್ನು ಕದ್ದು ಮುಚ್ಚಿಡತೊಡಗಿದರು. ವಿಷಯ ತಿಳಿದರೂ ನಂದು ಸುಮ್ಮನಿದ್ದ. ಮನನ ಮಾಡಿದ್ದನ್ನು ಮತ್ತೆ ನೋಟು ಪುಸ್ತಕಗಳಲ್ಲಿ ಬರೆದಿಡತೊಡಗಿದ. ಮತ್ತೆ ಪುಸ್ತಕಗಳನ್ನು ಕದಿಯುವುದು, ಇವ ಮತ್ತೆ ಬರೆದಿಡುವುದು ಅನೇಕ ಬಾರಿ ನಡೆಯಿತು.

ಗೆಳೆಯರೆನ್ನಿಸಿಕೊಂಡ ಹೊಟ್ಟೆಕಿಚ್ಚಿನ ರಮೇಶ, ಸುರೇಶ ಇವನ ಪುಸ್ತಕಗಳನ್ನು ಕದಿಯುವುದರಲ್ಲೇ ಮಗ್ನರಾಗಿದ್ದರು. ನಂದುವೋ ಬರೆದೂ ಬರೆದು ಮತ್ತಷ್ಟು ಬುದ್ಧಿವಂತನಾದ.

ಪರೀಕ್ಷೆಯ ಸಮಯ ಬಂದೇ ಬಿಟ್ಟಿತು, ಗೆಳೆಯರು ಪುಸ್ತಕ ಬಚ್ಚಿಟ್ಟದ್ದೂ ಅಲ್ಲದೆ 'ನಿನ್ನ ಪುಸ್ತಕಗಳು ಕಳೆದುಹೋಗಿವೆ, ಹೇಗೆ ಪರೀಕ್ಷೆ ಬರೆಯುತ್ತಿ, ಅನುತ್ತೀರ್ಣನಾಗುತ್ತೀಯಷ್ಟೇ' ಎಂದು ಹೆದರಿಸುತ್ತಾ ನಂದುವಿನ ಆತ್ಮವಿಶ್ವಾಸ ಕುಗ್ಗಿಸಲು ಯತ್ನಿಸಿದರು. ಆದರೆ ಓದಿಕೊಂಡದ್ದನ್ನು ಅನೇಕ ಬಾರಿ ಮತ್ತೆಮತ್ತೆ ಬರೆದ ಕಾರಣ ನಂದುವಿಗೆ ಪಠ್ಯಪುಸ್ತಕವೇ ಕಂಠಪಾಠ ಮಾಡಿದಂತಾಗಿತ್ತು. ನೋಟು ಪುಸ್ತಕಗಳು ಕಳೆದಿದ್ದರಿಂದ ನಷ್ಟದ ಬದಲು ಲಾಭವೇ ಆಯಿತು. ಏಳನೆತ್ತೆ ಪರೀಕ್ಷೆಯಲ್ಲಿ ಉತ್ತಮವಾಗಿ ಬರೆದು ಶಾಲೆಗಷ್ಟೇ ಅಲ್ಲದೆ ರಾಜ್ಯಕ್ಕೇ ಮೊದಲಿಗನಾಗಿದ್ದ. ನೋಟ್ಸ್ ಕದ್ದ ಹೊಟ್ಟೆಕಿಚ್ಚಿನ ಗೆಳೆಯರಿಬ್ಬರೂ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದರು. ಅವರಿಗೆ ತಮ್ಮ ತಪ್ಪಿನ ಅರಿವಾಗಿತ್ತು. ನಂದುವಿನಲ್ಲಿ ಕ್ಷಮೆ ಕೇಳಿದರೂ ಕಾಲ ಮಿಂಚಿತ್ತು. ಗೆಳೆಯನ ಏಳಿಗೆ ಸಹಿಸದೆ ಅಸೂಯೆಯಿಂದ ಪುಸ್ತಕಗಳನ್ನು ಬಚ್ಚಿಟ್ಟ ತಪ್ಪಿಗೆ ಇದ್ದ ತರಗತಿಯಲ್ಲೇ ಮತ್ತೊಮ್ಮೆ ಕೂರುವಂತಾದದ್ದಕ್ಕೆ ರಮೇಶ, ಸುರೇಶ ಪಶ್ಚಾತ್ತಾಪಪಟ್ಟರು. ನಂದು ಮುಂದಿನ ತರಗತಿಗೆ ಹೋದರೂ ಇವರಿಬ್ಬರನ್ನೂ ಮರೆಯದೆ ಪ್ರೀತಿಯಿಂದ ಮಾತಾಡಿಸುತ್ತಿದ್ದ. ಹಾಗೆಯೇ ಓದುವುದರಲ್ಲಿ ಸಹಾಯವನ್ನೂ ಮಾಡುತ್ತಾ ಎಲ್ಲರ ಪ್ರೀತಿಪಾತ್ರನಾಗಿ ಪ್ರತಿಭಾವಂತನಾಗಿ ಬೆಳೆದು ಹೆತ್ತವರಿಗೆ ಹಾಗೂ ಶಾಲೆಗೆ ಕೀರ್ತಿ ತಂದ. ■

ಸೇತುವೆ

ಕಥೆ ಕಿಟಕಿ



ಗಿರಿಧರ್ ಖಾಸನೀಸ್

ಸೇತುವೆಯ ಉದ್ಘಾಟನಾ ಸಮಾರಂಭ ಜೋರಾಗಿ ನಡೆಯಿತು. ಬೆಂಗಳೂರಿನಿಂದ ಮಂತ್ರಿಗಳು ಬಂದಿದ್ದರು. ಲೋಕಲ್ ಎಂ.ಎಲ್.ಎ. ತಾನೇ ಕೈಯಾರೆ ಸೇತುವೆಯನ್ನು ಕಟ್ಟಿದ ಹಾಗೆ ಬೀಗುತ್ತಿದ್ದ. ಹಳ್ಳಿ ಜನರಿಗೆಲ್ಲ ಅಂದು ಬಿಟ್ಟಿ ಊಟ ಉಪಾಹಾರ.

ಸಮಾರಂಭ ಮುಗಿದ ಮೇಲೆ ನನ್ನ ಹಳೇ ಗೆಳೆಯ ಮಂಜುನಾಥನ ಮನೆಗೆ ಹೋದೆ. ಅಲ್ಲಿಂದಲೇ ಒಂದು ವರದಿ ತಯಾರಿಸಿ ಮುಖ್ಯ ಕಚೇರಿಗೆ ಕಳಿಸಿದೆ.

ಮಂಜುನಾಥನ ಅಜ್ಜಿ ನನ್ನನ್ನು ದಿಟ್ಟಿಸಿ ನೋಡಿದರು. ಅವರ ಬೆನ್ನು ಬಾಗಿತ್ತು. ಕಣ್ಣು ಮಂಜಾಗಿತ್ತು.

'ಏನಜ್ಜಿ, ಹೇಗಿದ್ದೀರಿ? ನಾನು ಮಂಜುನಾಥನ ಗೆಳೆಯ, ಆನಂದ.'

'ಯಾವ ಆನಂದನೋ, ಗೋವಿಂದನೋ... ಏನು ಬಂದಿದ್ದು?'

'ಈವತ್ತು ಸೇತುವೆ ಓಪನ್ ಆಯ್ತಲ್ಲ ಅಜ್ಜಿ, ಅದನ್ನ ವರದಿ ಮಾಡೋಕೆ ಬಂದಿದ್ದೀನಿ.'

'ಅದು ಸೇತುವೆಯಲ್ಲ, ದಂಧೆ. ಹಳೇ ಸೇತುವೆ ನೂರು ವರ್ಷ ಉಳಿಯಿತು. ಈ ಸೇತುವೆ ನಾಲ್ಕು ದಿನ ನಿಲ್ಲೋದಿಲ್ಲ, ನೋಡ್ತಿರು.'

ಮಂಜುನಾಥ ನನ್ನನ್ನು ತಾರಸಿಗೆ ಕರೆದೊಯ್ದ. 'ಅಜ್ಜಿ ಮಾತನ್ನು ಮನಸ್ಸಿಗೆ ತಗೋಬೇಡ' ಅಂದ. ಸಿಗರೇಟ್ ಸೇದುತ್ತಾ ನಿಂತೆವು. ಸೂರ್ಯ ಮುಳುಗುವ ಸಮಯ. ದೂರದಲ್ಲಿ ಸೇತುವೆ ಚಿನ್ನದಂತೆ ಕಂಗೊಳಿಸುತ್ತಿತ್ತು.

★★

ಇಂದು ಬೆಳಗಿನ ಜಾವ ಮೊಬೈಲ್ ರಿಂಗಣಿಸಿತು. ಸಂಪಾದಕರ ಧ್ವನಿ. 'ಏಳಯ್ಯ, ಮಹರಾಯ. ಮೂರು ವರ್ಷಗಳ ಹಿಂದೆ ಸೇತುವೆಯ ಉದ್ಘಾಟನೆಗೆ ಹೋಗಿದ್ದು ನೆನಪಿದೆಯಾ? ನಿನ್ನೆ ರಾತ್ರಿ ಮುರಿದು ಬಿತ್ತಂತೆ. ಹೋಗಿ ನೋಡಿಕೊಂಡು ಬಾ.' ಸುದ್ದಿ ಕಾಳ್ಗಿಚ್ಚಿನಂತೆ ಹರಡಿತ್ತು. ನಾನು ತಲುಪಿದಾಗ ನದಿಯ ದಡದಲ್ಲಿ ಜನರ ಜಾತ್ರೆ. ಮಾಹಿತಿ ಸಂಗ್ರಹಿಸಿ, ಮಂಜುನಾಥನ ಮನೆಗೆ ಹೋದೆ. ಸಂಪಾದಕರಿಗೆ ವರದಿ ಕಳಿಸಿದೆ.

ಅಜ್ಜಿ ಕಾಣಲಿಲ್ಲ, 'ಹುಷಾರಿಲ್ಲ, ಮಲಗಿದ್ದಾರೆ' ಅಂತ ಮಂಜು ಹೇಳಿದ. ಅವನ ಮುಖದಲ್ಲಿ ಹಿಂದಿನ ಕಳೆಯಿರಲಿಲ್ಲ, 'ಬಾ ತಾರಸಿಗೆ ಹೋಗುವ,' ಅಂದ. ರಣರಣ ಬಿಸಿಲು. ನೆರಳಲ್ಲಿ ನಿಂತು ನನಗೊಂದು ಸಿಗರೇಟ್ ಕೊಟ್ಟ, ತಾನೂ ಒಂದನ್ನು ಹೊತ್ತಿಸಿದ. 'ಒಂದು ವಾರದಿಂದ ಅಜ್ಜಿ ಹೇಳುತ್ತಲೇ ಇದ್ದಳು, ಆ ಪಾಪಿ ಸೇತುವೆ ಮೇಲೆ ಹೋಗಬೇಡ ಹೋಗಬೇಡ ಅಂತ..'

ದೂರದಲ್ಲಿ, ಮುರಿದ ಸೇತುವೆಯ ಕಾಂಕ್ರೀಟ್ ಕಂಬಗಳ ಮೇಲೆ ರಣಹದ್ದುಗಳ ಸಾಲು. ■

ಜೀವ ವೈವಿಧ್ಯ

ಆಫ್ರಿಕಾದ ಆಗ್ನೇಯ ಕರಾವಳಿಯಲ್ಲಿರುವ ಮಡಗಾಸ್ಕರ್ ದ್ವೀಪದಲ್ಲಿ ಮಾತ್ರ ಕಂಡುಬರುವ ಫೋಸಾ, ಬೆಕ್ಕಿನಂತಹ ಮೀಸೆಗಳನ್ನು ಮತ್ತು ನಾಯಿಯಂತಹ ಮೂತಿಯನ್ನು ಹೊಂದಿದೆ. ಆದರೆ ಇದು ಬೆಕ್ಕು ಅಥವಾ ನಾಯಿ ಎರಡಕ್ಕೂ ಸಂಬಂಧಿಸಿದ್ದಲ್ಲ; ಇದು ಒಂದು ರೀತಿಯ ಮುಂಗುಸಿ (Mongoose) ಜಾತಿಗೆ ಸೇರಿದ ಪ್ರಾಣಿ.

ಸುಮಾರು 10 ಕೆ.ಜಿ ತೂಕವಿರುವ ಇದು ಮಡಗಾಸ್ಕರ್‌ನ ಅತ್ಯಂತ ದೊಡ್ಡ ಮಾಂಸಾಹಾರಿ ಪ್ರಾಣಿ. ಹಗಲು ಮತ್ತು ರಾತ್ರಿ ಎರಡೂ ಸಮಯದಲ್ಲಿ ಚಟುವಟಿಕೆಯಿಂದಿರುವ ಇದು, ನೆಲದ ಮೇಲೆ ಹಾಗೂ ಮರಗಳಲ್ಲಿ ನೆಲೆಸುವ ಪ್ರಾಣಿಗಳನ್ನು ಬೇಟೆಯಾಡುತ್ತದೆ. ಇದು ಮರದಿಂದ ಮರಕ್ಕೆ ಅಥವಾ ಮರದಿಂದ ನೆಲಕ್ಕೆ ಜಿಗಿಯುವಾಗ ಸಮತೋಲನ ಕಾಯ್ದುಕೊಳ್ಳಲು ಇದರ ಉದ್ದನೆಯ ಬಾಲವು ಸಹಾಯ ಮಾಡುತ್ತದೆ. ಸ್ಥಳೀಯರು ಈ ಪ್ರಾಣಿಯನ್ನು ಕಂಡು ಭಯಪಡುತ್ತಾರಾದರೂ, ಮನುಷ್ಯರ ಮೇಲೆ ದಾಳಿ ಮಾಡುವುದಿಲ್ಲ.

ಇದು ಅತ್ಯಂತ ನಿಗೂಢವಾಗಿ ಅಡಗಿ ಕುಳಿತು ಬೇಟೆಯಾಡುವ ಪ್ರಾಣಿಗಳಲ್ಲಿ ಒಂದಾಗಿದೆ. ಮಡಗಾಸ್ಕರ್‌ನ ಕಾಡುಗಳಲ್ಲಿ ನೀವು ಎಷ್ಟೇ ವರ್ಷಗಳ ಕಾಲ ಅಲೆದಾಡಿದರೂ ಸಹ, ಈ ಪ್ರಾಣಿಯ ಒಂದು ಸಣ್ಣ ನೋಟ ಸಿಗುವುದು ಬಹಳ ಅಪರೂಪ. ■

ನ್ಯೂ ಬುಕ್

ಲಘು- ಗುರುಗಳ ನಡುವೆ

ಕಥೆಗಾರ ಕೆ.ಸತ್ಯನಾರಾಯಣ ಅವರ ಲಘು ಧಾಟಿಯ ಕಥೆಗಳ ಸಂಕಲನ 'ಸರಯೂ ದಡದಲ್ಲಿ ಮಾರುತಿ ಭಕ್ತರು'. ವಿಡಂಬನಾತ್ಮಕ-ಲಲಿತ-ಲಘು ಪ್ರಬಂಧ ಸಂಕಲನಗಳು ಕನ್ನಡದಲ್ಲಿ ಹಲವಾರು ಬಂದಿವೆ. ಆದರೆ, ಈ ಬಗೆಯ ಕಥೆಗಳು ರಚಿತವಾಗಿರುವುದು ವಿರಳವೇ. ಇಲ್ಲಿ ಈ ಬಗೆಯ 49 ಕಥೆಗಳಿವೆ.



ಸರಯೂ ದಡದಲ್ಲಿ ಮಾರುತಿ ಭಕ್ತರು; ಲೇ: ಕೆ.ಸತ್ಯನಾರಾಯಣ ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು ಪುಟ: 179; ಬೆಲೆ: 170 ರೂ.

'ಸರಯೂ ನದಿಯಲ್ಲಿ ಮಾರುತಿ ಭಕ್ತರ ಮೇಳ' ಕಥೆಯಲ್ಲಿ ಶ್ರೀರಾಮಾವತಾರ ಸಮಾಪ್ತಿಯಾದ ದಿನದಂದು ಮಾರುತಿ ಭಕ್ತರು ಸರಯೂ ದಡದಲ್ಲಿ ಸಮ್ಮೇಳನ ನಡೆಸುತ್ತಾರೆ. ಅಲ್ಲಿ ಒಬ್ಬಾತ ಮಾರುತಿಯ ವೇಷ ಹಾಕಿದ್ದಾರೆ. ಆತನಿಗೆ ಕಥಾನಿರೂಪಕ ಕೈಮುಗಿಯುತ್ತಾರೆ. 'ಅಲ್ಲಿಯೇ ವಾರದ ಕಾಲ ಮಾರುತಿ ಸಪ್ತಾಹ. ಅದಾದ ಬಳಿಕ ಮಾರುತಿ ವೇಷ ಬದಲಿಸಿ ನಮ್ಮೆಲ್ಲರಂತೆ ಕಲಿಯುಗದ ತನ್ನ ಉಳಿದ ಭಾಗವನ್ನು ನಿರ್ವಹಿಸಲು ಉದ್ಯುಕ್ತನಾಗುತ್ತಾನೆ' ಎಂದು ಲೇಖಕರ ಗೆಳೆಯ ಹೇಳುವಲ್ಲಿಗೆ ಕಥೆ ಮುಗಿಯುತ್ತದೆ. ಆದರೆ, ಆ ಆಚರಣೆಯ ವೈಚಿತ್ರ್ಯ, ಅದರ ಬಗೆಗೆ ಏನನ್ನೂ ಹೇಳದೇ ತೆರೆದಿಡುವ ರೀತಿ ಸತ್ಯನಾರಾಯಣ ಅವರ ಕಥನಶಕ್ತಿಯನ್ನು ತೆರೆದಿಡುತ್ತದೆ. ನಂಬಿಕೆ-ಮೂಢನಂಬಿಕೆಗಳ ನಡುವಣ ಗೆರೆ ಇಲ್ಲಿ ತೆಳುವಾಗಿ, ಅದರ ಬಗೆಗೆ ನಗಲಿಕ್ಕೂ ಆಗದ ಟೀಕಿಸಲಿಕ್ಕೂ ಆಗದ ಪರಿಸ್ಥಿತಿಯನ್ನು ಬರಿ ಚಿತ್ರಣ ನೀಡುವಷ್ಟರಲ್ಲೇ ಓದುಗರ ವಿಶ್ಲೇಷಣೆಗೆ ಬಿಡುವ ಈ ಬಗೆ ಗಮನ ಸೆಳೆಯುತ್ತದೆ.

'ಜನಾಂಗೀಯ ಚರಿತ್ರೆಯ ಹಳವಂಡ'ದಲ್ಲಿ ಹಲವು 'ಸಾಧಕ'ರ ಸಾಧನೆಯ ರೀತಿಯನ್ನು ವಿಡಂಬಿಸುತ್ತಾರೆ. 'ಲಾಲ್‌ಬಾಗ್‌ನಲ್ಲೂ ಸಿಗದ ಕಥೆ' ನಗಿಸುತ್ತದೆ, ವಿಷಾದವನ್ನೂ ಮೂಡಿಸುತ್ತದೆ. 'ರಾಯರು ಕತೆ ಬರೆಯಲಿಲ್ಲವಂತೆ' ಕಥೆ ಎಲ್ಲರ ಬದುಕಿನಲ್ಲಿರುವ ಬರೆಯಲಾರದ, ಹೇಳಬಹುದಾದರೂ ಪೂರ್ತಿ ಹೇಳಲಾರದ, ಅರ್ಧ ಹೇಳಬಹುದಾದ... ಹೀಗೆ ಬಗೆಬಗೆಯ ಕಥೆಗಳಿಗೆ ಪ್ರತಿನಿಧಿ.

2-3 ಪುಟಗಳ ಕಥೆಗಳು. ನಿರೂಪಣೆ ಸರಳ, ಸರಾಗ. ಈ ಕಥೆಗಳು ಕೆಲವೊಮ್ಮೆ ನಗಿಸುತ್ತವೆ, ನಿಟ್ಟುಸಿರು ಬಿಡುವಂತೆ ಮಾಡುತ್ತವೆ, ಕೆಲವೊಮ್ಮೆ ಚಿಂತನೆಗೂ ಹಚ್ಚುತ್ತವೆ. ಅವನ್ನು ಓದುಗರು ಗ್ರಹಿಸಿದಾಗ ಲಘು ಭಾವವೂ ಗುರುವಾಗುತ್ತದೆ. ಲಘು ಕಥೆಗಳ ನೆಪದಲ್ಲಿ ಬಹಳಷ್ಟನ್ನು ನೀಡುವ ಈ ಕೃತಿ ಕಥಾಲೋಕದಲ್ಲಿ ಭಿನ್ನ ಪ್ರಯೋಗ. ■

ಗ್ರಾಮ್ಯ ಬದುಕಿನ ಕಟು ವಾಸ್ತವ

ಕಥೆಗಾರ ಶರಣಬಸವ ಕೆ. ಗುಡದಿನ್ನಿಯವರ ಮೂರನೇ ಕಥಾ ಸಂಕಲನ 'ಹುಲಿ ಮನೆ ಆಟ'. ಇಲ್ಲಿರುವ ಒಂಬತ್ತು ಕತೆಗಳು ಗ್ರಾಮ್ಯ ಬದುಕಿನ ಕಟು ವಾಸ್ತವಗಳನ್ನು ಅನಾವರಣ ಮಾಡುತ್ತವೆ.

ಹುಲಿ ಮನೆ ಆಟ; ಲೇ: ಶರಣಬಸವ ಕೆ. ಗುಡದಿನ್ನಿ ಪ್ರ: ಟಾಮಿ ಪ್ರಕಾಶನ, ಲಿಂಗಸಗೂರು ಪುಟ: 84; ಬೆಲೆ: 150 ರೂ.

ಸಂಕಲನದ ಮೊದಲ ಕಥೆ 'ಅಂಗಾಲ ಕಣ್ಣವರು'. ಮನುಷ್ಯರ ಸಂಬಂಧಗಳಿಗಿಂತ ದೇವರೇ ಮುಖ್ಯವಾಗುವ ಹಾಗೂ ದೇವರ ಹೆಸರಲ್ಲಿ ಮಾಡುವ ಸುಲಿಗೆಯನ್ನು ಈ ಕಥೆಯಲ್ಲಿ ಪರಿಣಾಮಕಾರಿಯಾಗಿ ವಿವರಿಸಲಾಗಿದೆ. 'ಉಣ್ಣ ಕೂಸಿನ ಗಂಗಾಳ ಕಸಗೊಂಡ ನಿಮ್ದೆಂತ ದೇವ್ರು' ಎಂದು ಅಳುತ್ತಾ ಹೇಳುವ ಸಾವಿತ್ರಿಯ ನೋವು, 'ದುಡ್ಕಂಡು ತಿನಾ ಬಡವ್ರ ಕುತ್ತಿಗಿ ಮ್ಯಾಲ ಕುಂತು ನಿಮ್ ಮನಿ ಕುಂಬಿ ಕಟಿಗೆಂತೀರಲ ಅದು ದರಿದ್ರ, ಗುಡ್ಯಾಗಳ ದೇವ್ರು ಬಡವರ ಕುತ್ತಿಗಿ ಕೊಯ್ರೀ ಅಂತಾನೇನು' ಎಂದು ಆಕ್ರೋಶದಿಂದ ಹೇಳುವ ಬೀರಪ್ಪನ ನೋವು ಇಡೀ ಕಥೆಯನ್ನು ರೂಪಿಸಿದೆ.

ಈ ಕೃತಿಯಲ್ಲಿ ಗಮನ ಸೆಳೆಯುವ ಮತ್ತೊಂದು ಕಥೆ 'ಹುಲಿ ಮನೆ ಆಟ'. ಇಲ್ಲಿ ಕಥೆ ಹೇಳುವ ಗಡ್ಡ್ಯಾನಿಗೆ ಕಣ್ಣೇ ಕಾಣುವುದಿಲ್ಲ. ತಾನು ಕೇಳಿದ್ದು ಮತ್ತು ಗ್ರಹಿಸಿದ್ದನ್ನು ಅವ ನಿರೂಪಿಸುತ್ತಾನೆ. ಇಲ್ಲೂ ದೇವರು ಮತ್ತು ಮನುಷ್ಯತ್ವದ ಸಂಘರ್ಷ ಇದೆ.

ಉಳಿದಂತೆ 'ಬಿಜ್ಜಮ್ಮನ ಕೆರೆ', 'ಅಹಲ್ಯಾ', 'ನನಗೆ ರೆಕ್ಕೆಗಳಿಲ್ಲ', 'ಅಂಡೇ ಪಿರ್ಕಿ ಅಮೀರ', 'ಶಿಲುಬೆ', 'ಗುಲಾಬಿ ಬಣ್ಣದ ಬೂಟು' ಕತೆಗಳು ಶರಣ ಬಸವ ಅವರ ಕಥಾಕೌಶಲಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ. ಈ ಸಂಕಲನದಲ್ಲಿ ಶರಣಬಸವರವರು ಕಣ್ಣಿಗೆ ಕಟ್ಟುವಂತೆ ಗ್ರಾಮ್ಯ ಲೋಕವನ್ನು ಸೃಷ್ಟಿಸಿದ್ದಾರೆ. ಲೇಖಕರೇ ಹೇಳಿರುವಂತೆ ಅನುಭವಗಳೇ ಕಥೆಗಳಾಗಿ ಬದಲಾಗಿದ್ದರೂ, ತಮ್ಮ ವಿಶಿಷ್ಟ ನಿರೂಪಣೆಯ ಮೂಲಕ ಕಥೆಯನ್ನು ಪರಿಣಾಮಕಾರಿಯಾಗಿ ಓದುಗರಿಗೆ ದಾಟಿಸಿದ ರೀತಿ ಮೆಚ್ಚುವಂಥದ್ದು. ■

ನಾನು ಓದಿದ ಹೊತ್ತಿಗೆ

ಸಣ್ಣ ಅನುಭವಗಳ ಭವ್ಯ ಭಾವಲೋಕ

ಡಾ.ಲಕ್ಷ್ಮಣ ವಿ ಎ
feedbacklvk@vijaykarnataka.com

ರೂಪಕ, ಭಾವ ಮತ್ತು ಬದುಕಿನ ಸೂಕ್ಷ್ಮ ಅನುಭವಗಳನ್ನು ಒಂದೇ ಹೊತ್ತಿನಲ್ಲಿ ಹಿಡಿದಿಡಬಲ್ಲ ಕವಯತ್ರಿಯರ ಸಾಲಿನಲ್ಲಿ ಎಚ್. ಆರ್.ಸುಜಾತಾ ಗಮನ ಸೆಳೆಯುತ್ತಾರೆ.

'ಮೋಡ ಕಟ್ಟುವ ಕನಸು' ಕವನ ಸಂಕಲನದಲ್ಲಿ ಜೀವನದ ಸಾಮಾನ್ಯ ದೃಶ್ಯಗಳೊಳಗೆ ಅಡಗಿರುವ ಅಸಾಮಾನ್ಯ ತತ್ವಗಳನ್ನು ಕಾವ್ಯಾತ್ಮಕವಾಗಿ ಅನಾವರಣಗೊಳಿಸಿದ್ದಾರೆ. ಈ ಸಂಕಲನದ ಕವನಗಳು ಓದುಗರನ್ನು ತಾಕುವುದು ಸರಳ ಭಾಷೆಯಿಂದಲ್ಲ; ಆ ಸರಳತೆಯೊಳಗೆ ಮಡುಗಟ್ಟಿರುವ ಆಳವಾದ ಅನುಭವದಿಂದ. 'ಮೋಡವೇಕೆ ತೇಲುತ್ತಿವೆ? ಒಲಿದ ಜೀವ ಹಗುರವೆಂದು' ಸಾಲುಗಳಲ್ಲಿ ಪ್ರೀತಿಯ ಹಗುರತನವನ್ನು ಮೋಡದ ಚಲನೆಯಲ್ಲಿ ಕಾಣುವ ಕವಯತ್ರಿ, 'ಹಕ್ಕಿಯೇಕೆ ಹಾರುತ್ತಿವೆ? ಪ್ರೀತಿಗಿಲ್ಲ ಮೇರೆಯೆಂದು' ಎಂದು ಹೇಳುವಾಗ ಪ್ರೀತಿಯ ಅಸೀಮ ಸ್ವಭಾವವನ್ನು ಮನದಟ್ಟಾಗಿಸುತ್ತಾರೆ. 'ಹೂ ಮತ್ತು ಆಲಿಕಲ್ಲು' ಪದ್ಯದಲ್ಲಿ ಮಳೆಯನ್ನೇ 'ಕಣ್ಣ ಹರಳಾಗಿ' ನೆಲಕ್ಕೆ ಇಳಿಯುವಂತೆ ಚಿತ್ರಿಸುವುದು, ಪ್ರಕೃತಿಯೊಳಗಿನ ನೋವು ಮತ್ತು ಸೌಂದರ್ಯದ ದ್ವಂದ್ವವನ್ನು ನೆನಪಿಸುತ್ತದೆ. ಮಳೆಯ ಹನಿ ಇಲ್ಲಿ ಕೇವಲ ನೀರಲ್ಲ; ಅದು ಪ್ರಕೃತಿಯ ಭಾವಭಾಷೆ. 'ಹುಸಿಯಾಗದು ಕನಸು' ಕವನದಲ್ಲಿ ಕನಸು, ದುಃಖ, ಪ್ರೀತಿ, ಬದುಕಿನ ಹೋರಾಟ ಪರಸ್ಪರ ಜೋತುಬಿದ್ದ ಜೀವಸಂಬಂಧಗಳಾಗಿ ಮೂಡಿವೆ. 'ಕಳೆದುಕೊಳ್ಳುವುದು, ಕೂಡಿದಷ್ಟು ಸುಲಭವಲ್ಲ' ಎಂಬ ಸಾಲು ಬದುಕಿನ ಅನುಭವಗಳ ಸಾರವಾಗಿಬಿಡುತ್ತದೆ. 'ಹಿಮದ ಕರುಳು' ಪದ್ಯದಲ್ಲಿ ಕವಯತ್ರಿ ದುಃಖವನ್ನು ಹಿಮದ ರೂಪಕದಲ್ಲಿ ಹಿಡಿದಿಡುತ್ತಾರೆ. 'ಬಿಸಿಲಂತೆ ಕರಗಿ ಹೋಗುವುದು ದುಃಖದ ನಿಯತಿ' ಎನ್ನುವ ಸಾಲುಗಳಲ್ಲಿ ನೋವಿನ ಶಾಶ್ವತತೆಯನ್ನು ಅಲ್ಲ, ಅದರ ಕರಗುವ ಸ್ವಭಾವವನ್ನು ನೆನಪಿಸುವ ಧೈರ್ಯ ಇದೆ. 'ಗರ ಬೀಳಿಸುವ ಆಟ' ಕವನ ಜೀವನ-ಸಾವಿನ ಚಕ್ರವನ್ನು ಸರಳವಾಗಿ ಹೇಳುತ್ತದೆ. 'ಒಂದು ಸತ್ತರೆ ಬದಲೊಂದು ಹುಟ್ಟುತ್ತದೆ' ಎನ್ನುವ ಸಾಲು ಅಸ್ತಿತ್ವದ ನಿರಂತರ ಚಲನೆಯ ಸಂಕೇತ. 'ಕೊರೆದ ಗೆರೆ' ಪದ್ಯ ಈ ಸಂಕಲನದ ಪ್ರಬಲ ಸಾಮಾಜಿಕ ರೂಪಕಗಳಲ್ಲಿ ಒಂದು. ಬೇಲಿ, ಗಡಿ, ಪರಿಧಿ ಇವೆಲ್ಲ ಮಾನವರು ಕಟ್ಟಿದವು. ಆದರೆ 'ಒಣಗಿದ ಹೂಪಕಳೆಗಳು ಗಾಳಿಯಲ್ಲಿ ತೇಲುತ್ತಿವೆ ಬೇಲಿಯ ಗೆರೆ ದಾಟಿ' ಎನ್ನುವ ಸಾಲು ಪ್ರಕೃತಿಗೆ ಗಡಿಯಿಲ್ಲವೆಂಬ ಸತ್ಯವನ್ನು ಹೇಳುತ್ತದೆ. ಒಟ್ಟಾರೆ ಇದು ಬದುಕಿನ ಸಣ್ಣ ಸಣ್ಣ ಅನುಭವಗಳಿಂದ ಕಟ್ಟಿದ ಭಾವಲೋಕ.

ಮೋಡ ಕಟ್ಟುವ ಕನಸು; ಲೇ: ಹೆಚ್.ಆರ್.ಸುಜಾತಾ; ಪ್ರ: ಮಿಂಚುಳ್ಳಿ ಪ್ರಕಾಶನ; ಬೆಲೆ: 150; ಪುಟ: 88 ■

ಮೊದಲ ಪ್ರಧಾನಿಯ ಭಾರತ

ಇಂದು ಗಾಂಧಿಯವರ ಚಿತ್ರ ಹೇಗೆ ಬದಲಾಗಿದೆಯೋ ಹಾಗೆಯೇ ಆಧುನಿಕ ಭಾರತದ ನಿರ್ಮಾತೃ ಎನಿಸಿಕೊಂಡಿರುವ ಜವಾಹರಲಾಲ ನೆಹರು ಅವರ ಕುರಿತ ಚಿತ್ರಣವೂ ಭಿನ್ನಭಿನ್ನವಾಗಿ ದೊರಕುತ್ತದೆ.ಮೊದಲ ಪ್ರಧಾನಿಯಾಗಿ ಭಾರತದ ಬಗೆಗೆ ಸಮಗ್ರ ಕನಸು ಕಂಡು, ತಮ್ಮದೇ ರೀತಿಯಲ್ಲಿ ನವಭಾರತದ ನಿರ್ಮಾಣಕ್ಕೆ ಪ್ರಯತ್ನಿಸಿದವರು ಅವರು. ಅವರ ಕಲ್ಪನೆಯ ಭಾರತ ಹೇಗಿತ್ತು, ಅವರನ್ನು ಇಂದು ಹೇಗೆ ಚಿತ್ರಿಸಲಾಗುತ್ತಿದೆ ಎಂಬ ಬಗ್ಗೆ ಜೆಎನ್‌ಯುನ ನಿವೃತ್ತ ಪ್ರಾಧ್ಯಾಪಕ ಆದಿತ್ಯ ಮುಖರ್ಜಿ 'ನೆಹರು ಕಲ್ಪನೆಯ ಭಾರತ: ನಿನ್ನೆ, ಇಂದು ಮತ್ತು ನಾಳೆ' ಎಂಬ ಶೀರ್ಷಿಕೆಯಲ್ಲಿ ಕೃತಿ ರಚಿಸಿದ್ದು, ಅದನ್ನು ಡಾ.ಬಿ.ಆರ್. ಮಂಜುನಾಥ್, ಡಾ.ಎಚ್.ಜಿ.ಜಯಲಕ್ಷ್ಮಿ ಕನ್ನಡಕ್ಕೆ ಅನುವಾದಿಸಿದ್ದಾರೆ. ನೆಹರು ಅವರ ಭಾರತದ ಪರಿಕಲ್ಪನೆ, ಕೋಮುವಾದದ ಕುರಿತ ಅಭಿಪ್ರಾಯ, ನೆಹರು ಅವರನ್ನು ರಾಕ್ಷಸೀಕರಿಸಿರುವ ರೀತಿ, ಅವರ ವೈಜ್ಞಾನಿಕ ಮನೋಭಾವ, ಜನತಂತ್ರ ಕಟ್ಟುವ ಕುರಿತ ದೃಷ್ಟಿಕೋನ ಇತ್ಯಾದಿ ವಿವಿಧ ಅಧ್ಯಾಯಗಳೊಂದಿಗೆ ನೆಹರು ಅವರ ಸಿದ್ಧಾಂತ, ಪ್ರತಿಪಾದನೆಗಳ ಕುರಿತು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.



ನೆಹರು ಕಲ್ಪನೆಯ ಭಾರತ; ಮೂಲ: ಆದಿತ್ಯ ಮುಖರ್ಜಿ; ಅನು: ಡಾ.ಬಿ.ಆರ್. ಮಂಜುನಾಥ್, ಡಾ.ಎಚ್.ಜಿ.ಜಯಲಕ್ಷ್ಮಿ; ಪ್ರ: ನವಕರ್ನಾಟಕ ಪ್ರಕಾಶನ, ಬೆಂ; ಪುಟ: 136; ಬೆಲೆ: 190 ರೂ. ■

ಅಜ್ಜಿ ಹೇಳಿದ ಕಥೆಗಳು

ಡಾ. ಜೆ ಎನ್ ಜಗನ್ನಾಥ್
feedbacklvk@vijaykarnataka.com

ತಮ್ಮ ಮೊಮ್ಮಕ್ಕಳ ಒಡನಾಟದಿಂದ ವಿಸ್ತಾರಗೊಂಡ ಕಲ್ಪನಾ ಶಕ್ತಿಯೊಡನೆ ಮಕ್ಕಳಿಗಾಗಿ ಮಕ್ಕಳ ಕಥಾ ಸಂಕಲನವನ್ನು ರಚಿಸಿದ್ದಾರೆ ಲೇಖಕಿ, ಗಾಯಕಿ, ಉಪನ್ಯಾಸಕಿ ಮಾಲತಿ ಶ್ರೀನಿವಾಸನ್. 'ಭುವಿಯಲ್ಲಿ ಗಣಪ' ಶೀರ್ಷಿಕೆಯ ಈ ಕೃತಿಯಲ್ಲಿ ಮಕ್ಕಳಿಗಾಗಿ 30 ಅಧ್ಯಾಯಗಳಲ್ಲಿ ಕಥೆಗಳನ್ನು ನೀಡಲಾಗಿದೆ.

ಇಲ್ಲಿ ಗಣಪನನ್ನು ಕಥಾ ನಾಯಕನಾಗಿ ಮಾಡಿ, ಇಂದಿನ ಪ್ರಪಂಚಕ್ಕೆ ಆಹ್ವಾನಿಸಿ, ಇಲ್ಲಿಯ ಪರಿಸರ, ಜೀವನ, ವಿನೋದದ ಮಿಶ್ರಣದಿಂದ ಮಾಲತಿಯವರು ಕಥೆಗಳನ್ನು ಮಕ್ಕಳಿಗಾಗಿ ಹೆಣೆದಿದ್ದಾರೆ. ಮಕ್ಕಳ ಕಲ್ಪನೆಗೆ ನಿಲುಕುವ, ಅವರಿಗೆ ಆಸಕ್ತಿಯನ್ನು ಹುಟ್ಟಿಸುವ ಆಪ್ಯಾಯಮಾನವೆನಿಸುವ ಕಥಾ ಸರಣಿ ಇದು ಎಂದು ಚನ್ನುಡಿಯಲ್ಲಿ ರವೀಂದ್ರ ಹೇಳಿದ್ದಾರೆ.

ಒಮ್ಮೆ ತನಗೆ ಬದಲಾವಣೆ ಬೇಕೆಂದು ಗಣಪ ಕೈಲಾಸದಿಂದ ಶಿವ ಪಾರ್ವತಿಯರ ಒಪ್ಪಿಗೆ ಪಡೆದು ಭೂಮಿಗೆ ಬರುತ್ತಾನೆ. ಜೊತೆಗೆ ವಾಹನ ಮೂಷಿಕ ನಾಯಿಯ ರೂಪದಲ್ಲಿ ಬರುತ್ತದೆ. ಅನಾಥಾಶ್ರಮದಿಂದ ಗಣಪತಿ ಮತ್ತು ನಾಯಿಯನ್ನು ಕರೆದುಕೊಂಡು ಬಂದ ಮಕ್ಕಳಿಲ್ಲದಿದ್ದ ದಂಪತಿಗಳು ಮೊದಲ ದಿನವೇ ಕಳ್ಳರನ್ನು ಓಡಿಸಿದ ಬಾಲಕನಿಂದ ಸಂತಸಪಡುತ್ತಾರೆ. ಗಣಪನು ಶಾಲೆಗೆ ಸೇರುತ್ತಾನೆ, ಪ್ರವಾಸ ಮಾಡುತ್ತಾನೆ, ಕುಂಟನಾದ ಮಧುವಿಗೆ ಬಹುಮಾನ ಕೊಡಿಸುತ್ತಾನೆ, ತರಕಾರಿ ಕದ್ದವರನ್ನು ಹಿಡಿಯುತ್ತಾನೆ, ಪತ್ತೆದಾರಿ ಮಾಡುತ್ತಾನೆ. ಒಮ್ಮೆ ನಾಯಿಯ ರೂಪದ ಮೂಷಿಕನನ್ನು ಕಾರ್ಪೊರೇಷನ್‌ರವರು ಹಿಡಿದು ವ್ಯಾನಿನಲ್ಲಿ ಒಯ್ಯುತ್ತಾರೆ. ಹರಸಾಹಸ ಪಟ್ಟು ಬಿಡಿಸುತ್ತಾರೆ.

ಬಹಳ ವಿನೋದ ತುಂಬಿ ಮಕ್ಕಳಿಗೆ ಆಕರ್ಷಕವಾಗುವಂತೆ, ಸರಳವಾಗಿ, ಅಜ್ಜಿ ಹೇಳುವಂತೆ ಕಥೆಗಳನ್ನು ಮಾಲತಿಯವರು ಹೆಣೆದಿದ್ದಾರೆ. ಈ ಪುಸ್ತಕ ಪ್ರತಿಯೊಬ್ಬರಿಗೂ ಬಹಳ ಉಪಯುಕ್ತ. ಒಂದು ತಿಂಗಳು ದಿನಕ್ಕೊಂದು ಕಥೆಯನ್ನು ಮಕ್ಕಳಿಗೆ ಓದಿ ಹೇಳಬಹುದು.

ಭುವಿಯಲ್ಲಿ ಗಣಪತಿ; ಲೇ: ಮಾಲತಿ ಶ್ರೀನಿವಾಸನ್ ; ಪ್ರ: ಸ್ನೇಹ ಬುಕ್ ಹೌಸ್, ಬೆಂಗಳೂರು; ಪುಟ: 112; ಬೆಲೆ: 195 ರೂ. ■

ಪುಸ್ತಕ ಟಿಪ್ಪಣಿ

ತೌಲನಿಕ ಕೃತಿಶೋಧ

ಭೈರಪ್ಪನವರ ಪರ್ವ ಹಾಗೂ ಉತ್ತರ ಕಾಂಡ ಎರಡೂ ಕಾದಂಬರಿಗಳು ಪುರಾಣಗಳನ್ನು ವಾಸ್ತವವಾದಿ ನೆಲೆಯಲ್ಲಿ ನೋಡಿ ರಚಿಸಿದಂಥವು. ಇವೆರಡನ್ನೂ ತೌಲನಿಕವಾಗಿ ಅಧ್ಯಯನ ಮಾಡಿ ಡಾ. ಉಮಾ ರಾಮರಾವ್ ಅವರು ಪಿಎಚ್‌ಡಿ ಮಹಾಪ್ರಬಂಧ ರಚಿಸಿದ್ದು, ಇದರ ಕೃತಿರೂಪವೇ 'ಬಹುನೆಲೆಗಳ ಬೆರಗು'. ಕಥಾಹಂದರ, ಪಾತ್ರಪ್ರಪಂಚ, ಕಥನತಂತ್ರ ಮತ್ತು ಶೈಲಿ, ಆಶಯ, ಕೆಲವು ನಿರ್ವಹಣೆಗಳು, ವಿವಿಧ ಆಯಾಮಗಳು -ಈ ವಿವಿಧ ಅಧ್ಯಾಯಗಳಲ್ಲಿ ಪರ್ವ ಹಾಗೂ ಉತ್ತರಕಾಂಡವನ್ನು ಅವರು ವಿಶ್ಲೇಷಿಸಿದ್ದಾರೆ. **ಬಹು ನೆಲೆಗಳ ಬೆರಗು; ಲೇ: ಡಾ.ಉಮಾ ರಾಮರಾವ್; ಪ್ರ: ಸಾಹಿತ್ಯಭಂಡಾರ, ಬೆಂಗಳೂರು; ಪುಟ: 452; ಬೆಲೆ: 520 ರೂ.** ■

ಚೇತೋಹಾರಿ ಪ್ರಬಂಧಗಳು



ಲೇಖಕ ವೈ.ಎನ್. ಗುಂಡೂರಾವ್ ಅವರ ಮನೋಲ್ಲಾಸಕರ ಪ್ರಬಂಧಗಳ ಸಂಕಲನ ಕೃತಿ 'ಗುಬ್ಬಿ ಗಾನ'. ಇಲ್ಲಿ ಲೇಖಕರ ಸಮೃದ್ಧ ಬಾಲ್ಯದ ಸುಳಿವುಗಳು ಕಾಣಿಸುತ್ತವೆ. ಇಲ್ಲಿ ಹಾಸ್ಯದ ಹಿಂದೆ ವಿಷಾದವಿದೆ, ತುಂಟತನವೂ ಇದೆ. ಲೇಖಕರ ಪಳಗಿದ ಬರಹದ ಶೈಲಿ ಸಹಜವಾಗಿ ಓದಿಸಿಕೊಂಡುಹೋಗುತ್ತದೆ. ಬರವಣಿಗೆಯಲ್ಲಿ ರೂಢಿಸಿಕೊಂಡಿರುವ ಕಥನ ಕಲೆ ಗಮನಾರ್ಹ. ಶುದ್ಧ ಹಾಸ್ಯವನ್ನೊಳಗೊಂಡ ಒಟ್ಟು 24 ಚೇತೋಹಾರಿಯಾದ ಪ್ರಬಂಧಗಳು ಇದರಲ್ಲಿವೆ. **ಗುಬ್ಬಿ ಗಾನ: ಲೇ: ವೈ.ಎನ್. ಗುಂಡೂರಾವ್: ಪ್ರ: ನ್ಯೂ ವೇವ್ ಬುಕ್ಸ್, ಬೆಂಗಳೂರು: ಪುಟ: 156; ಬೆಲೆ: 170 ರೂ.** ■

ಹೃದಯ ತಜ್ಞರ ಮಾತು



ಖ್ಯಾತ ವೈದ್ಯ, ಹೃದ್ರೋಗ ತಜ್ಞ ಡಾ. ಎನ್.ಪ್ರಭುದೇವ ಅವರು ಬರೆದ ಆರೋಗ್ಯ, ಸ್ವಾಸ್ಥ್ಯ ಸಂಬಂಧಿ ಲೇಖನಗಳು ಕನ್ನಡಕ್ಕೆ ಅನುವಾದಗೊಂಡು 'ಬದುಕು ಒಮ್ಮೆ ಮಾತ್ರ' ಎಂಬ ಕೃತಿಯಾಗಿದೆ. ಭ್ರಮರ ಬಹದ್ದೂರ್ ಹಾಗೂ ಶ್ರೀನಿವಾಸ ಬಹದ್ದೂರ್ ಈ ಬರಹಗಳನ್ನು ಅನುವಾದಿಸಿದ್ದಾರೆ. ಹೃದಯದ ಆಯುಸ್ಸು, ಹೃದಯಸ್ತಂಭನದ ಬಗ್ಗೆ ಏನು ತಿಳಿದಿರಬೇಕು, ವಯಸ್ಸಿಗನುಗುಣವಾಗಿ ನಾಡಿಮಿಡಿತ ಮೊದಲಾ ಆರೋಗ್ಯ ಸಂಬಂಧಿ ಲೇಖನಗಳು ಹಾಗೂ ಸೋಲುಗಳೇ ನಮ್ಮನ್ನು ಸೋಲಿಸುತ್ತವೆ, ಜೀವನದ ಸೂಕ್ಷ್ಮ ಭಾವನೆಗಳು, ಇತರರ ಮೇಲಿನ ಪ್ರೀತಿ ಇತ್ಯಾದಿ ಸ್ಫೂರ್ತಿದಾಯಕ ಲೇಖನಗಳೂ ಸೇರಿದಂತೆ 31 ಲೇಖನಗಳು ಇಲ್ಲಿವೆ. **ಬದುಕು ಒಮ್ಮೆ ಮಾತ್ರ; ಲೇ: ಮೂಲ- ಡಾ. ಎನ್.ಪ್ರಭುದೇವ; ಅನು: ಭ್ರಮರ, ಶ್ರೀನಿವಾಸ ಬಹದ್ದೂರ್; ಪ್ರ: ವೈದ್ಯವಾರ್ತಾ ಪ್ರಕಾಶನ, ಮೈಸೂರು; ಪುಟ: 164; ಬೆಲೆ: 200 ರೂ.** ■

ವಿಜಯಬಂಧ - 7955

1	■	2		■	3	4	■	5
6			■	■	■	7		
	■	8	9	■	10		■	
11	12	■	13			■	14	
■	15			■	16			■
17		■	18			■	19	20
	■	21		■	22	23	■	
24			■	■	■	25		
	■	26		■	27		■	

ಎಡದಿಂದ ಬಲಕ್ಕೆ

2 ಮೀನನ್ನು ಕಬಳಿಸಲು ನೀರಿನಲ್ಲಿ ನಿಂತ ಪಕ್ಷಿ 2
3 ಅಗ್ರಜ ಪೋಷಿಸಿದ ಬ್ರಹ್ಮನ ಮೇಕೆ 2
6 ಕರದಲ್ಲಿ ಹಿಡಿದು ತಂದದ್ದು ತುಂಬಾ ಭೀಕರ 3
7 ಮನ ಮುಟ್ಟುವಂತೆ ನೃತ್ಯ ಹೇಳಿಕೊಟ್ಟ ನಾಟ್ಯಾಚಾರ್ಯ 3
8 ಸುಮಾರಾಗಿ ಅರಳಿದ ಹೂವು 2
10 ನಿಧನನಾದ ನಂತರವೂ ಬಂದ ಹಣ 2
11 ಸದನಕ್ಕೆ ನುಗ್ಗಿ ದಾಂಧಲೆ ಮಾಡಿದ ಪಶು 2
13 ಯಮುನಾ ನದಿ ಬಳಿ ನಿಂತು ಅರಳಿಸಿದ ಅಕ್ಷಿ 3
14 ಬ್ರಹ್ಮ ಮನುಷ್ಯರ ಹಣೆಯ ಮೇಲೆ ದಾಖಲಿಸಿದ್ದು 2
15 ಬಡವನನ್ನು ಬೆನ್ನಟ್ಟಿ ಬಂದ ಬಲಿಷ್ಠ ಮಂಗ 3
16 ಮನನ ಮಾಡಿಕೊಂಡು ಉಳಿಸಬೇಕಾದ ಕಾಡು 3
17 ಉದಾರವಾಗಿ ನೀಡಿದ ಹತ್ತಿ ನೂಲು 2
18 ಮುಷ್ಕರ ಮಾಡಲು ಅನುವು ಮಾಡಿಕೊಟ್ಟ ಭೂಮಿ 3
19 ಹಯ ಶತ್ರುವಿನ ಮೇಲೆರಗಿ ಕೊಟ್ಟ ಗೆಲುವು 2
21 ಸುಖ ದುಃಖಕ್ಕೆ ಕಾರಣವಾದ ಪೂರ್ವಜನ್ಮದ ಕಾರ್ಯ 2
22 ಆಕೆ ನೆತ್ತಿಯ ಮೇಲೆ ಹಚ್ಚಿಕೊಂಡ ಹಾಲಿನ ಪದರ 2
24 ಜೀವನದಲ್ಲಿ ಕಂಡ ಪ್ರಾಣ ಇಲ್ಲದ ವಸ್ತು 3
25 ಮನುಕುಲದವನಾದ ಪಾಂಡು ಪುತ್ರ 3
26 ನಗಾಡುವಾಗ ಕುಲುಕಿದ ಸೊಂಟ 2
27 ಕರ್ಪೂರ ಉರಿದಾಗ ವ್ಯಾಪಿಸಿದ ಸುವಾಸನೆ 2

ಮೇಲಿನಿಂದ ಕೆಳಕ್ಕೆ

1 ಮದವೇರಿದ ಕೃಷ್ಣನ ಗೆಳೆಯ ಹೂವಿನ ಪರಾಗ ಹೀರಿದ 4
2 ಬಳಗದ ಜನರನ್ನು ತುಸು ಸುತ್ತುವರಿ 3
4 ಅಜ್ಞನದು ಸಹ ಹುಟ್ಟುತಾನೆ 3
5 ವನಿತೆ ಬಳಿಯಿರುವ ಕುಬೇರನ ಒಂಬತ್ತು ವಿಧದ ಐಶ್ವರ್ಯ 4
9 ಮನುಷ್ಯನಾದ ಮೇಲೆ ಅಳವಡಿಸಿಕೊಳ್ಳಬೇಕಾದ ನೀತಿ 5
10 ಕಾಣಿಸದಂತೆ ನೀಡಿದ ಹಣದ ಉಡುಗೊರೆ 5
12 ರಗಳೆಗೆ ಸಿಕ್ಕಿಹಾಕಿಕೊಂಡ ಶಹರು 3
14 ತನಯ ವ್ಯಕ್ತ ಮಾಡಿದ ಮೃದುತನ 3
17 ಕೆಂದಾವರೆ ಅರಳಿದಾಗ ಉರಿದ ಕಾಡ್ಗಿಚ್ಚು 4
20 ನೂರು ದೇಗುಲಗಳು ಇಲ್ಲಿವೆ 4
21 ಕನಸಿನಲ್ಲಿ ಗೀಚಿ ಬರೆದ ಪದ್ಯ 3
23 ಪುನಃ ಪುನಃ ಬಂದ ಜ್ಞಾಪಕ 3

ವಿಜಯಬಂಧ | 7954

ಎಡದಿಂದ ಬಲಕ್ಕೆ: 1.ಏಣಿ 2.ಕಣಜ 4.ಜಾಲ 6.ಕೋಳ 7.ಲತಾ 8.ಕವಿ 10.ವರಸೆ 11.ನಾರಿ 12.ಮಾತುಳ 13.ಲೆಕ್ಕಿಗ 14.ದೀನ 15.ಮತ್ತು 16.ಯಾಪಾರ 18.ವರಾಹಿ 19.ಜನ 20.ಸವಾರ 21.ಮೆಲು 23.ಧಾಮ 24.ಮಾಣಿ 25.ರಫ್ತು 26.ಯತನ 27.ಮಂಕ.

ಮೇಲಿನಿಂದ ಕೆಳಕ್ಕೆ: 1.ಏಕೈಕ 2.ಕಳವಳ 3.ಜಲಸೆಲೆ 5.ಲಗೋರಿ 9.ವಿಮಾನಯಾನ 11.ನಾಗಮಹಿಮ 17.ರಸಮಯ 18.ವರಮಾನ 19.ಜಠರ 22.ಲುಬ್ಧಕ.

ಅ.ನಾ. ಪ್ರಹ್ಲಾದರಾವ್

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ. ದೂ: 9513747474

ಮಿಥುನ, ತುಲಾ, ಮಕರ-ಈ ರಾಶಿಯವರಿಗೆ ಅಮೃತ ಸಂಜೀವಿನಿ ಯೋಗ



ಮೇಷ: ಅಧಿಕಾರದಲ್ಲಿ ಸ್ಥಾನಮಾನ ಪಡೆಯಲು ಧಾರ್ಮಿಕ ಕಾರ್ಯಗಳನ್ನು ನಡೆಸಿ. ಗಿಡಮೂಲಿಕೆಗಳಿಂದ ಉದರವ್ಯಾಧಿಗಳು ಗುಣವಾಗಲಿವೆ. ಅಸಾಮಾನ್ಯ ವ್ಯಕ್ತಿಯನ್ನು ವ್ಯಾಪಾರ ನಿಮಿತ್ತ ಭೇಟಿ ಮಾಡುವಿರಿ. ಅದೃಷ್ಟಸಂಖ್ಯೆ 5, ಅದೃಷ್ಟಬಣ್ಣ ಕೆಂಪು
(ನಾಮಾಕ್ಷರ: ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ಹಣಕಾಸು ಸಂಸ್ಥೆಗಳ ನೆರವಿನಿಂದ ಬಹುದಿನಗಳ ಸ್ವಂತ ಉದ್ಯಮ ಆರಂಭಿಸುವ ಯೋಜನೆ ಕೈಗೂಡುವುದು. ಮನದಲ್ಲಿರುವ ಆಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸಲು ಸೂಕ್ತವಾದ ದಿನ. ಅದೃಷ್ಟಸಂಖ್ಯೆ 9, ಅದೃಷ್ಟಬಣ್ಣ ಹಳದಿ
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಕಟ್ಟಡ ನಿರ್ಮಾಣದ ಗುತ್ತಿಗೆಯನ್ನು ಪಡೆಯುವವರು ಆಮೂಲಾಗ್ರವಾಗಿ ಚಿಂತನೆ ನಡೆಸಿ ಒಪ್ಪಿಕೊಳ್ಳುವುದು ಸೂಕ್ತ. ಸ್ಥಾನ ಬದಲಾವಣೆಯಿಂದ ಮನಸ್ಸಿಗೆ ನೆಮ್ಮದಿಯ ವಾತಾವರಣ ಸೃಷ್ಟಿಯಾಗುವುದು. ಅದೃಷ್ಟಸಂಖ್ಯೆ 6, ಅದೃಷ್ಟಬಣ್ಣ ಹಸಿರು
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರ, ಪುನರ್ವಸು 1, 2, 3

ಕಟಕ: ಹಿರಿಯರ ಮಾರ್ಗದರ್ಶನದಂತೆ ನಡೆದು ಕೆಲಸಗಳನ್ನು ಮಾಡುವುದರಿಂದ ಅಡೆತಡೆಗಳು ಕಡಿಮೆಯಾಗುವುದು. ಉದ್ಯೋಗ ಬದಲಾವಣೆಯ ಬಗ್ಗೆ ತೀರ್ಮಾನಿಸಬೇಡಿ. ಅದೃಷ್ಟಸಂಖ್ಯೆ 8, ಅದೃಷ್ಟಬಣ್ಣ ಬೂದು
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ಪೊಲೀಸ್ ಅಧಿಕಾರಿಗಳಿಗೆ ಸರಿ-ತಪ್ಪು ತೀರ್ಮಾನಿಸುವುದು ಕಷ್ಟ. ವೃತ್ತಿಯಲ್ಲಿ ಒತ್ತಡ ಹೆಚ್ಚುವುದು. ವ್ಯವಹಾರ ನಡೆಸುವುದಕ್ಕಾಗಿ ಸಾಲ ತೆಗೆದುಕೊಳ್ಳಬೇಡಿ. ಅದೃಷ್ಟಸಂಖ್ಯೆ 7, ಅದೃಷ್ಟಬಣ್ಣ ನೀಲಿ
(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ಇಂದ್ರೀಯಗಳ ಚಾಂಚಲ್ಯ ಏಕಾಗ್ರತೆಯನ್ನು ಭಂಗಗೊಳಿಸುವ ಜೊತೆಗೆ ಹಾದಿ ತಪ್ಪಿಸುವ ಸಾಧ್ಯತೆ ಹೆಚ್ಚಿರುತ್ತದೆ. ಕೆಲಸ-ಕಾರ್ಯಗಳನ್ನು ಮುಗಿಸಿಕೊಳ್ಳಲು ಆತುರ ತೋರುವಿರಿ. ಅದೃಷ್ಟಸಂಖ್ಯೆ 4, ಅದೃಷ್ಟಬಣ್ಣ ಕೇಸರಿ
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ವ್ಯವಹಾರದಲ್ಲಿ ವಿದೇಶಿ ಸಂಪರ್ಕಗಳು ಅಥವಾ ದೊಡ್ಡ ಮಟ್ಟದ ದೇಶಿಯ ವ್ಯವಹಾರಗಳ ಸಂಪರ್ಕಗಳು ಹೆಚ್ಚಲಿವೆ. ದಂಪತಿ ಮಧ್ಯೆ ಅನವಶ್ಯಕ ವಿವಾದ ಉಂಟಾಗಬಹುದು. ಅದೃಷ್ಟಸಂಖ್ಯೆ 1, ಅದೃಷ್ಟಬಣ್ಣ ಕಪ್ಪು
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಉದರ ಬಾಧೆಯನ್ನು ಉಪಶಮನ ಮಾಡಿಕೊಳ್ಳುವುದಕ್ಕಾಗಿ ಹಸಿ ತರಕಾರಿಯನ್ನು ಅಥವಾ ಸ್ನಿಗ್ಧ ಆಹಾರವನ್ನಷ್ಟೇ ಸೇವಿಸಿ. ವಿವಾಹ ಯೋಗ್ಯ ವಯಸ್ಕರಿಗೆ ಪ್ರಯತ್ನವಿದ್ದರೆ ಮದುವೆ ನಿಶ್ಚಯವಾಗುವುದು. ಅದೃಷ್ಟಸಂಖ್ಯೆ 3, ಅದೃಷ್ಟಬಣ್ಣ ಬಿಳಿ
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ರಿಯಲ್ ಎಸ್ಟೇಟ್ ವ್ಯವಹಾರಸ್ಥರಿಗೆ ಕಾರ್ಯಸಾಧನೆಗೆ ಅನುಕೂಲಕರ ಹಾಗೂ ಲಾಭದಾಯಕ ವಾತಾವರಣ ಸಿಗಲಿದೆ. ದಿನದ ಮೊದಲರ್ಧ ಬೇಸರವಿದ್ದರೆ ಉಳಿದರ್ಧ ದಿನ ಸಂತೋಷದಲ್ಲಿ ಕಳೆಯುತ್ತೀರಿ. ಅದೃಷ್ಟಸಂಖ್ಯೆ 4, ಅದೃಷ್ಟಬಣ್ಣ ಖಾಕಿ
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ: ದೇವರ ಆಶೀರ್ವಾದ ಇರುವುದರಿಂದ ಪ್ರಯಾಣ ಅನುಕೂಲಕರವಾಗಿ ಮತ್ತು ಅನಾಯಾಸವಾಗಿ ಇರುತ್ತದೆ. ಸೋದರ ಮಾವನ ಆರೋಗ್ಯ ವ್ಯತ್ಯಾಸದಿಂದ ದಿನಚರಿಯಲ್ಲಿ ಬದಲಾವಣೆ ಉಂಟಾಗುತ್ತದೆ. ಅದೃಷ್ಟಸಂಖ್ಯೆ 2, ಅದೃಷ್ಟಬಣ್ಣ ಗುಲಾಬಿ
(ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ಮಗನ ವಿಷಯದಲ್ಲಿ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಎಡವಿದ ಅನುಭವ ಆಗಲಿದೆ. ಗೆಳೆಯನಿಂದ ಸವಾಲುಗಳನ್ನು ಎದುರಿಸುವಲ್ಲಿ ಸಹಾಯ ನಿರೀಕ್ಷಿಸಬಹುದು. ಆತ್ಮವಿಶ್ವಾಸ ನಿಮ್ಮನ್ನು ರಕ್ಷಿಸಲಿದೆ. ಅದೃಷ್ಟಸಂಖ್ಯೆ 9, ಅದೃಷ್ಟಬಣ್ಣ ಮರೂನ್
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ಹೊಂದಾಣಿಕೆಯ ಮನೋಭಾವ ಕಡಿಮೆಯಾಗುವುದರಿಂದ ಕುಟುಂಬದಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗದಂತೆ ಜಾಗ್ರತೆ ವಹಿಸಿ. ನೀವೇ ವಿಮರ್ಶಿಸಿಕೊಳ್ಳಿ, ಸರಿತಪ್ಪು ಅರಿವಾಗಲಿದೆ. ಅದೃಷ್ಟಸಂಖ್ಯೆ 1, ಅದೃಷ್ಟಬಣ್ಣ ಸುವರ್ಣ
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ವಿಕ ಮನಿ

From The House of THE ECONOMIC TIMES

ಕನ್ನಡದ ಏಕೈಕ ಹಣಕಾಸು ವಾರಪತ್ರಿಕೆ

ಪೆಟ್ರೋಲ್‌ಗೆ ಬೈ EV ಕ್ರಾಂತಿಗೆ ಜೈ

ಹೊಸ ಟ್ರೆಂಡ್ ಬಗ್ಗೆ ಬಿ. ಸೋಮಶೇಖರ್ ಕವರ್ ಸ್ಟೋರಿ.

ಟರ್ಮ್ ಇನ್ಶೂರೆನ್ಸ್ VS ಯುಲಿಪ್ ಯಾವುದು ಬೆಸ್ಟ್?
- ಶರತ್ ಎಂ.ಎಸ್. ಗೈಡೆನ್ಸ್

ಮ್ಯೂಚುವಲ್ ಫಂಡ್‌ನಲ್ಲೂ ಡ್ರೀಮ್ ಇಲೆವೆನ್ ಕ್ರಿಕೆಟ್ ಟೀಮ್!
- ಶ್ರೀಧರ ಬಾಣಾವರ ಕಾಮೆಂಟರಿ

ಸಂಚಿಕೆಯ ಹೈಲೈಟ್ಸ್
- ಟೈಮ್ ಬಾಂಬ್ ಮೇಲೆ ಕುಳಿತಿದೆ ಅಮೆರಿಕ ಎಕಾನಮಿ: ರಂಗಸ್ವಾಮಿ ಮೂಕನಹಳ್ಳಿ ಕಾಲಂ
- ಕ್ರೆಡಿಟ್ ಸ್ಕೋರ್, ಇದು ನಿಮ್ಮ ಹಣಕಾಸು ಆರೋಗ್ಯದ ರಿಪೋರ್ಟ್ ಕಾರ್ಡ್ – ಡಾ.ಭಾಸ್ಕರ ಅದ್ವೈತ ಲೇಖನ
- ನಿಮ್ಮ ಉದ್ಯಮದ ಯಶಸ್ಸಿಗೆ 'ಜಿ.ಕೆ. ಪ್ರಮೋದ್' ಮಾರ್ಕೆಟಿಂಗ್ ಸೂತ್ರಗಳು
- ತೈಲಾಘಾತದ ಪರ್ವ ಶುರು: ಮುಂದಿವೆ ಕಷ್ಟದ ದಿನಗಳು! ಚೇರ್ಕಾಡಿ ಸಚ್ಚಿದಾನಂದ ಶೆಟ್ಟಿ ಮುನ್ನೋಟ
- ಬ್ಯಾಡ್ ಸ್ಟೋರಿ: ವಿದೇಶದಲ್ಲಿ ಸ್ಟಡಿ; ನಮ್ಮುಡುಗರ ಕನಸಿಗೆ ಬೆಂಕಿ ಹಚ್ಚಿದ ಡಾಲರ್
- ಕಾರ್ಪೋರೇಟ್ ಜಗತ್ತು: ಸಂಕಷ್ಟ, ತನಿಖೆಗಳ ಮಧ್ಯೆಯೇ ಅರಳಿದ ಅದಾನಿ ಸಾಮ್ರಾಜ್ಯ–ರಂಗನಾಥ ನೂಲಿಕರ ಲೇಖನ
- ವಿಶೇಷ ಸಂದರ್ಶನ: ಬಿಕ್ಕಟ್ಟು ತಾತ್ಕಾಲಿಕ, ದೇಶದ ಬೆಳವಣಿಗೆ ನಿಶ್ಚಿತ– ಜಿಯೊ ಫೈನಾನ್ಶಿಯಲ್ ಸರ್ವಿಸಸ್‌ನ ಕೆ.ವಿ.ಕಾಮತ್ ವಿಶ್ವಾಸ

ಪತ್ರಿಕೆಗಾಗಿ ಸಂಪರ್ಕಿಸಿ 72594 58080
ಪ್ರತಿ ಭಾನುವಾರ ನಿಮ್ಮ ಕೈ ಸೇರಲಿದೆ
ಬೆಲೆ ₹5
ಪ್ರತಿ ಭಾನುವಾರ ಮಾರುಕಟ್ಟೆಯಲ್ಲಿ ವಿಕ ಮನಿ ಬಿಡುಗಡೆ
ಪತ್ರಿಕೆಗಾಗಿ ಸ್ಕ್ಯಾನ್ ಮಾಡಿ ನಿಮ್ಮ ವಿಳಾಸ ಬರೆದು submit ಮಾಡಿ

ಜಾಗತಿಕ ಶಾಂತಿ, ಸ್ಥಿರತೆಗೆ ಭಾರತ ಬದ್ಧ: ಮೋದಿ

ಅಮೆರಿಕದ ಜತೆಗೆ ಕೆಲಸ ಮಾಡಲು ಸಿದ್ಧ ಎಂದ ಪ್ರಧಾನಿ ನರೇಂದ್ರ ಮೋದಿ

ವಿದೇಶಾಂಗ ಸಚಿವ ಮಾರ್ಕೊ ರೂಬಿಯೊ ಜತೆಗೆ ಮಹತ್ವದ ಸಭೆ

ಹೊಸದಿಲ್ಲಿ: ''ಜಾಗತಿಕ ಒಳಿತಿಗೆ ಅಮೆರಿಕ ಜತೆ ಕೆಲಸ ಮಾಡಲು ಭಾರತ ಸಿದ್ಧವಿದೆ. ಪ್ರಾದೇಶಿಕ ಸ್ಥಿರತೆ, ಜಾಗತಿಕ ಶಾಂತಿ ಸ್ಥಾಪನೆ, ಇಂಧನ, ಆಹಾರ ಭದ್ರತೆಗೆ ಸಮಗ್ರ ಕಾರ್ಯತಂತ್ರ ಪಾಲುದಾರಿಕೆ ಭಾಗವಾಗಿ ಅಮೆರಿಕ ಜತೆ ಕೆಲಸ ಮಾಡಲಿದೆ,'' ಎಂದು ಮೋದಿ ತಿಳಿಸಿದ್ದಾರೆ.

ಭಾರತ ಪ್ರವಾಸದಲ್ಲಿರುವ ಅಮೆರಿಕ ವಿದೇಶಾಂಗ ಸಚಿವ ಮಾರ್ಕೊ ರೂಬಿಯೊ ಜತೆ ಶನಿವಾರ ನಡೆದ ಮಾತುಕತೆ ವೇಳೆ ''ಹೆಚ್ಚುತ್ತಿರುವ ಜಾಗತಿಕ ಸಂಘರ್ಷಗಳ ನಡುವೆ ವಿಶ್ವ ಸಮುದಾಯದ ಒಳಿತಿಗೆ ಅಮೆರಿಕ ಜತೆ ಭಾರತ ಕೈಜೋಡಿಸಲಿದೆ,'' ಎಂದು ಮೋದಿ ತಿಳಿಸಿದರು.

ಈ ವೇಳೆ ಶ್ವೇತಭವನಕ್ಕೆ ಭೇಟಿ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಮೆರಿಕ ವಿದೇಶಾಂಗ ಸಚಿವ ಮಾರ್ಕೊ ರೂಬಿಯೊ ಆಹ್ವಾನ ನೀಡಿದರು. ನಾಲ್ಕು ದಿನಗಳ ಪ್ರವಾಸದ ಅಂಗವಾಗಿ ಭಾರತಕ್ಕೆ ಆಗಮಿಸಿರುವ ರೂಬಿಯೊ ಅವರು ಹೊಸದಿಲ್ಲಿಯಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪರವಾಗಿ ಆಹ್ವಾನ ನೀಡಿದರು.

ಅಮೆರಿಕ-ಭಾರತ ನಡುವಿನ ಭದ್ರತೆ, ರಕ್ಷಣೆ, ಇಂಧನ, ನಿರ್ಣಾಯಕ ತಂತ್ರಜ್ಞಾನ, ವ್ಯಾಪಾರ ವಿಷಯವಾಗಿ ದ್ವಿಪಕ್ಷೀಯ ಚರ್ಚೆ ನಡೆಸಿದರು. ಇದೇ ವೇಳೆ ಪಶ್ಚಿಮ ಏಷ್ಯಾ ಸಂಘರ್ಷ, ಹರ್ಮುಜ್ ಜಲಸಂಧಿ ನಿರ್ಬಂಧದಿಂದ ಉಂಟಾದ ಇಂಧನ ಸಮಸ್ಯೆ, ಬೆಲೆ ಏರಿಕೆ ವಿಷಯವಾಗಿ ಪ್ರಧಾನಿ ಮೋದಿ ಹಾಗೂ ರೂಬಿಯೊ ಮಾತುಕತೆ ನಡೆಸಿದರು.

ಮಾತುಕತೆ ವೇಳೆ ''ಇಂಧನ ಮೂಲಗಳನ್ನು ವೈವಿಧ್ಯಮಯವಾಗಿಸಲು ಭಾರತಕ್ಕೆ ಅವಕಾಶವಿದೆ. ಇಂಧನ ಅಗತ್ಯ ಪೂರೈಸಲು ನಾವು ಸಿದ್ಧ,'' ಎಂದು ಭರವಸೆ ನೀಡಿದ ರೂಬಿಯೊ, ಅಮೆರಿಕದ ಇಂಧನ ಉತ್ಪನ್ನಗಳಿಗೆ ಭಾರತದಲ್ಲಿ ಮಾರುಕಟ್ಟೆ ರೂಪಿಸುವ ಪ್ರಯತ್ನ ನಡೆಸಿದರು.

ಅಮೆರಿಕ-ಇರಾನ್ ಸಂಘರ್ಷ, ಹರ್ಮುಜ್ ಜಲಸಂಧಿ ನಿರ್ಬಂಧದಿಂದ ಇಂಧನ ಅಭಾವ ಎದುರಾಗಿರುವ ಸನ್ನಿವೇಶದಲ್ಲಿ ರೂಬಿಯೊ ನೀಡಿದ ಹೇಳಿಕೆ ಮಹತ್ವ ಪಡೆದುಕೊಂಡಿದೆ. ದೇಶದ ಶೇ.80ರಷ್ಟು ಇಂಧನಕ್ಕೆ ಹರ್ಮುಜ್ ಅವಲಂಬಿಸಿರುವ ಭಾರತ, ಫೆ.28ಕ್ಕೆ ಆರಂಭವಾದ ಯುದ್ಧದ ಬಳಿಕ ಇಂಧನ ಕೊರತೆ, ಬೆಲೆ ಏರಿಕೆ ಬಿಸಿ ಎದುರಿಸುತ್ತಿದೆ.

ಅಮೆರಿಕ ಭೇಟಿಗೆ ಆಹ್ವಾನ

ಭಾರತವನ್ನು ನಿರ್ಬಂಧಿಸಿಲ್ಲ

''ರಷ್ಯಾ ತೈಲ ಖರೀದಿ ವಿಷಯದಲ್ಲಿ ಭಾರತವನ್ನು ನಿರ್ಬಂಧಿಸಿಲ್ಲ. ಉಕ್ರೇನ್ ಯುದ್ಧ ಅಂತ್ಯಗೊಳಿಸುವ ದೂರದೃಷ್ಟಿಯ ಉದ್ದೇಶದಿಂದ ರಷ್ಯಾ ತೈಲದ ಮೇಲೆ ಕೆಲ ನಿರ್ಬಂಧ ವಿಧಿಸಲಾಗಿದೆ ಅಷ್ಟೆ. ಭಾರತದ ಇಂಧನ ಮೂಲಗಳನ್ನು ನಿರ್ಬಂಧಿಸುವ ಉದ್ದೇಶ ಅಮೆರಿಕಕ್ಕೆ ಇಲ್ಲ,'' ಎಂದು ರೂಬಿಯೊ ತಿಳಿಸಿದರು.

ರೂಬಿಯೊ ಕಾರ್ಯಕ್ರಮಗಳು
- ಭಾನುವಾರ: ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್ ಜತೆ ದ್ವಿಪಕ್ಷೀಯ ಮಾತುಕತೆ
- ಅಮೆರಿಕ ರಾಯಭಾರ ಕಚೇರಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗಿ
- ಸೋಮವಾರ: ಭಾರತದ ಪ್ರಮುಖ ಪಾರಂಪರಿಕ ತಾಣಗಳಿಗೆ ಭೇಟಿ
- ಜೈಪುರ ಅರಮನೆ, ಆಗ್ರಾದ ತಾಜಮಹಲ್‌ಗೆ ಭೇಟಿ ನೀಡಲಿರುವ ರೂಬಿಯೊ
- ಮಂಗಳವಾರ: ಕ್ವಾಡ್ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ ಭಾಗಿ

ಇರಾನ್ ದೂಷಿಸಿದ ರೂಬಿಯೊ

''ಜಾಗತಿಕ ಮಟ್ಟದಲ್ಲಿ ಇಂಧನ ಬೆಲೆ ಏರಿಕೆಗೆ ಇರಾನ್ ಕಾರಣ'' ಎಂದು ಮಾರ್ಕೊ ರೂಬಿಯೊ ದೂಷಿಸಿದರು. ''ಇರಾನ್ ಮೂಲಭೂತವಾದಿ ಆಡಳಿತ ತೈಲ ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ. ಹರ್ಮುಜ್ ಜಲಸಂಧಿಯನ್ನು ಅಕ್ರಮವಾಗಿ ನಿಯಂತ್ರಿಸಿದೆ. ಜಾಗತಿಕ ನಿಯಮಗಳಿಗೆ ವಿರುದ್ಧವಾಗಿ ಜಲಮಾರ್ಗ ನಿರ್ಬಂಧಿಸುವ ಮೂಲಕ ಸರಕು ಸಾಗಣೆ, ತೈಲ ಸಾಗಣೆ ಹಡಗುಗಳ ಸಂಚಾರಕ್ಕೆ ಅಡ್ಡಿಪಡಿಸಿದೆ. ಜಲಸಂಧಿಗೆ ಟೋಲ್ ವಿಧಿಸುವ ಪ್ರಯತ್ನ ಮಾಡುತ್ತಿದೆ. ಇರಾನ್ ಆಡಳಿತದ ಕಾನೂನು ಬಾಹಿರ ಕೃತ್ಯಕ್ಕೆ ಅಮೆರಿಕ ಅವಕಾಶ ನೀಡುವುದಿಲ್ಲ,'' ಎಂದು ರೂಬಿಯೊ ತಿಳಿಸಿದರು.

ಡೊನಾಲ್ಡ್ ಟ್ರಂಪ್ ಪುತ್ರಿ ಇವಾಂಕಾ ಹತ್ಯೆಗೆ ಸಂಚು

ವಾಷಿಂಗ್ಟನ್/ಟೆಹರಾನ್: ಪಶ್ಚಿಮ ಏಷ್ಯಾ ಸಂಘರ್ಷದ ನಡುವೆ ಡೊನಾಲ್ಡ್ ಟ್ರಂಪ್ ಪುತ್ರಿ ಇವಾಂಕಾ ಟ್ರಂಪ್ ಹತ್ಯೆಗೆ ಸಂಚು ರೂಪಿಸಿದ್ದ ಸಂಗತಿ ಬಯಲಾಗಿದ್ದು, ಅಮೆರಿಕ-ಇರಾನ್ ನಡುವಿನ ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸಿದೆ. ಸಂಚುಕೋರನನ್ನು ಬಂಧಿಸಿರುವ ಟರ್ಕಿ ಪೊಲೀಸರು, ಇವಾಂಕಾ ಹತ್ಯೆ ಸಂಚು ವಿಫಲಗೊಳಿಸಿದ್ದಾರೆ.

ಇರಾನಿಯನ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಜತೆ ಸಂಪರ್ಕ ಹೊಂದಿದ್ದ ಇರಾಕಿ ಪ್ರಜೆ ಮೊಹಮ್ಮದ್ ಬಕರ್ ಸಾದ್ ದಾವುದ್ ಅಲ್ ಸಾದಿ ಸಂಚು ರೂಪಿಸಿದ್ದ ಸಂಗತಿ ಬೆಳಕಿಗೆ ಬಂದಿದೆ. 2020ರಲ್ಲಿ ಇರಾನಿಯನ್ ಕಮಾಂಡರ್ ಖಾಸಿಮ್ ಸುಲೈಮಾನಿ ಹತ್ಯೆಗೆ ಪ್ರತೀಕಾರವಾಗಿ ಟ್ರಂಪ್ ಪುತ್ರಿ ಇವಾಂಕಾ ಕೊಲ್ಲಲು ಪಿತೂರಿ ರೂಪಿಸಿದ್ದ ಎನ್ನಲಾಗಿದೆ.

ಇತ್ತೀಚೆಗೆ ಅಮೆರಿಕದಿಂದ ಗಡೀಪಾರಾಗಿದ್ದ ಮೊಹಮ್ಮದ್ ಬಕರ್ ಸಾದ್ ದಾವುದ್ ಅಲ್ ಸಾದಿಯನ್ನು ಹತ್ಯೆ ಸಂಚು ಆರೋಪದ ಮೇಲೆ ಮೇ 15 ರಂದು ಟರ್ಕಿಯಲ್ಲಿ ಬಂಧಿಸಲಾಗಿದೆ. ಹತ್ಯೆಯ ಸಂಚಿನ ಭಾಗವಾಗಿ ಫ್ಲೋರಿಡಾದಲ್ಲಿರುವ ಇವಾಂಕಾ ಟ್ರಂಪ್ ನಿವಾಸದ ನೀಲನಕ್ಷೆಯನ್ನು ಸಿದ್ಧಪಡಿಸಿಕೊಂಡಿದ್ದ ಸಂಗತಿ ತನಿಖೆಯಲ್ಲಿ ಬಯಲಾಗಿದೆ. ಬಂಧಿತ ಅಲ್ ಸಾದಿ ಬಳಿಯಿದ್ದ ಇವಾಂಕಾ ಮನೆಯ ಫೋಟೊಗಳು, ಸಾಮಾಜಿಕ ಜಾಲತಾಣದಲ್ಲಿ ಮಾಡಲಾದ ಪೋಸ್ಟ್‌ಗಳನ್ನು ತನಿಖಾಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಇವಾಂಕಾ ಟಾರ್ಗೆಟ್ ಏಕೆ?

ಸುಲೈಮಾನಿ ಹತ್ಯೆಗೆ ಪ್ರತೀಕಾರದ ಭಾಗವಾಗಿ ಡೊನಾಲ್ಡ್ ಟ್ರಂಪ್ ವಿರುದ್ಧ ಸಾಂಕೇತಿಕ ಸೇಡು ತೀರಿಸಿಕೊಳ್ಳಲು ಪುತ್ರಿ ಇವಾಂಕಾ ಹತ್ಯೆಗೆ ಸಂಚು ಅಲ್ ಸಾದಿ ಸಂಚು ರೂಪಿಸಿದ್ದ ಎನ್ನಲಾಗಿದೆ. 2020ರಲ್ಲಿ ಅಮೆರಿಕ ಪಡೆಗಳು ಇರಾಕ್‌ನ ಬಾಗ್ದಾದ್ ಏರ್‌ಪೋರ್ಟ್ ಬಳಿ ನಡೆಸಿದ ವಾಯುದಾಳಿಯಲ್ಲಿ ಐಆರ್‌ಜಿಸಿ ಕಮಾಂಡರ್ ಆಗಿದ್ದ ಸುಲೈಮಾನಿ ಹತ್ಯೆಗೀಡಾಗಿದ್ದ.

ಐಆರ್‌ಜಿಸಿ ಬೆಂಬಲಿತ ಇರಾಕ್ ಪ್ರಜೆ ಬಂಧನ

ಮಧ್ಯಪ್ರಾಚ್ಯ ಉದ್ವಿಗ್ನತೆ ಮತ್ತಷ್ಟು ಹೆಚ್ಚಳ

ಇರಾನ್ ಒಪ್ಪಂದ ಮಾಡಿಕೊಳ್ಳಲು ಹಾತೊರೆಯುತ್ತಿದೆ. ಸಂಧಾನ ಮಾತುಕತೆ ಏನಾಗುತ್ತದೆ ಎಂಬುದನ್ನು ಕಾದು ನೋಡೋಣ. ಟೆಹರಾನ್ ಪರಮಾಣು ಅಸ್ತ್ರ ಹೊಂದಲು ಬಿಡುವುದಿಲ್ಲ. ಒಂದು ಹಂತದ ಪೆಟ್ಟು ಕೊಟ್ಟಿದ್ದೇವೆ. ಮೊಂಡುತನ ಮುಂದುವರಿಸಿದರೆ ಮತ್ತೊಮ್ಮೆ ಬಲವಾದ ಏಟು ನೀಡುವ ಸಮಯ ಬರಬಹುದು.
- ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಇರಾನ್ ವಿರುದ್ಧ ಹೊಸ ದಾಳಿ?

ಪಶ್ಚಿಮ ಏಷ್ಯಾ ಸಂಘರ್ಷ ಅಂತ್ಯಗೊಳಿಸುವ ಉದ್ದೇಶಿತ ಸಂಧಾನ ಮಾತುಕತೆ ವಿಫಲವಾದರೆ ಇರಾನ್ ವಿರುದ್ಧ ಹೊಸ ದಾಳಿ ಆರಂಭಿಸಲು ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗಂಭೀರವಾಗಿ ಚಿಂತನೆ ನಡೆಸಿದ್ದಾರೆ. ಸಂಧಾನ ಮಾತುಕತೆಗೆ ವೇದಿಕೆ ಸಿದ್ಧಪಡಿಸಲು ಪಾಕಿಸ್ತಾನ ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಅವರು ಇರಾನ್‌ಗೆ ಭೇಟಿ ನೀಡಿದ ಹೊತ್ತಿನಲ್ಲೇ ರಾಷ್ಟ್ರೀಯ ಭದ್ರತಾ ಅಧಿಕಾರಿಗಳ ಜತೆ ಸಭೆ ನಡೆಸಿರುವ ಟ್ರಂಪ್, ಸಂಧಾನ ಮಾತುಕತೆ ವಿಫಲವಾದರೆ ದಾಳಿ ಪುನಾರಂಭಿಸಲು ಸಿದ್ಧತೆ ಕೈಗೊಳ್ಳುವಂತೆ ರಕ್ಷಣಾ ಪಡೆಗಳಿಗೆ ಸೂಚಿಸಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಕತಾರ್ ಪ್ರತಿನಿಧಿಗಳ ಜತೆ ಶನಿವಾರ ಟೆಹರಾನ್‌ಗೆ ಭೇಟಿ ನೀಡಿರುವ ಮುನೀರ್, ಐಆರ್‌ಜಿಸಿ ಜನರಲ್ ಅಹ್ಮದ್ ವಹಿದಿ ಅವರೊಂದಿಗೆ ಸಂಧಾನ ಮಾತುಕತೆ ಮುಂದುವರಿಸುವ ಕುರಿತು ಚರ್ಚೆ ನಡೆಸಿದರು.

ವಿಕ ಈ ದಿನ ವಿಶೇಷ ಮೇ 24

ಜನುಮ ದಿನ

ಮಾಧವ ಗಾಡ್ಗೀಳ್

- ಪರಿಸರ ವಿಜ್ಞಾನಿ ಮಾಧವ ಗಾಡ್ಗೀಳ್ ಅವರು 1942ರ ಮೇ 24ರಂದು ಮಹಾರಾಷ್ಟ್ರದ ಪುಣೆಯಲ್ಲಿ ಜನಿಸಿದರು. ಪ್ರತಿಷ್ಠಿತ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಅವರು ಪಿಎಚ್‌ಡಿ ಪದವಿ ಪಡೆದಿದ್ದಾರೆ. ಸೆಂಟರ್ ಆಫ್ ಎಕಾಲಾಜಿಕಲ್ ಸೈನ್ಸ್‌ನ ಸ್ಥಾಪಕರೂ ಹೌದು. ಪ್ರಧಾನಿಯವರ ವೈಜ್ಞಾನಿಕ ಸಲಹಾ ಮಂಡಳಿಯ ಸದಸ್ಯರಾಗಿದ್ದ ಮಾಧವ ಗಾಡ್ಗೀಳ್, ಪಶ್ಚಿಮಘಟ್ಟಗಳ ಸಂರಕ್ಷಣೆಗಾಗಿ ರಚಿಸಲಾದ ಪಶ್ಚಿಮಘಟ್ಟ ಪರಿಸರ ವಿಜ್ಞಾನ ಪರಿಣಿತರ ತಂಡದ ಮುಖ್ಯಸ್ಥರಾಗಿದ್ದರು. ಪದ್ಮಶ್ರೀ, ಪದ್ಮಭೂಷಣ, ಚಾಂಪಿಯನ್ಸ್ ಆಫ್ ದ ಅರ್ತ್ ಸೇರಿದಂತೆ ಹಲವು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದರು. ಅವರು 2026ರ ಜನವರಿ 7 ರಂದು ಪುಣೆಯಲ್ಲಿ ಕೊನೆಯುಸಿರೆಳೆದರು.

ವಿಬಿ-ಜಿ ರಾಮ್ ಜಿ ಕಾಯಿದೆ ಕರಡು ನಿಯಮ ಬಿಡುಗಡೆ

ಹೊಸದಿಲ್ಲಿ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಮನರೇಗಾ) ಯೋಜನೆಗೆ ಪರ್ಯಾಯವಾಗಿ ರೂಪಿಸಲಾದ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್‌ಗಾರ್ ಮತ್ತು ಅಜೀವಕ ಮಿಷನ್ (ವಿಬಿ-ಜಿ ರಾಮ್‌ಜಿ) ಯೋಜನೆಯ ಕರಡು ನಿಯಮಗಳನ್ನು ಕೇಂದ್ರ ಸರಕಾರ ಶನಿವಾರ ಪ್ರಕಟಿಸಿದೆ. ದೇಶಾದ್ಯಂತ ಜುಲೈ 1 ರಿಂದ ಯೋಜನೆಯನ್ನು ಅಧಿಕೃತವಾಗಿ ಜಾರಿಗೊಳಿಸುವ ಮುನ್ನ ಸಾರ್ವಜನಿಕ ಅಭಿಪ್ರಾಯ ಆಲಿಸಲು ಹೊಸ ಕಾಯಿದೆಯ ಕುರಿತು ಕರಡು ನಿಯಮಗಳನ್ನು ಬಿಡುಗಡೆ ಮಾಡಲಾಗಿದೆ. 'ವಿಬಿ-ಜಿ ರಾಮ್‌ಜಿ ಕಾಯಿದೆ'ಯ ಸೆಕ್ಷನ್ 33 ಅಡಿಯಲ್ಲಿ ರೂಪಿಸಲಾದ ಕರಡು ನಿಯಮಗಳ ಕುರಿತು ಪಾಲುದಾರರು, ಸಾರ್ವಜನಿಕರ ಅಭಿಪ್ರಾಯ ಆಲಿಸಲು ನಿಯಮಗಳನ್ನು ಬಿಡುಗಡೆ ಮಾಡಲಾಗಿದೆ.

ಕರಡು ನಿಯಮಗಳಲ್ಲೇನಿದೆ?: ಹೊಸ ಯೋಜನೆಗೆ ರೂಪಿಸಲಾದ ಪ್ರಸ್ತಾಪಿತ ಚೌಕಟ್ಟಿನಲ್ಲಿ ಪರಿವರ್ತನಾ ನಿಬಂಧನೆಗಳು, ರಾಷ್ಟ್ರೀಯ ಮಟ್ಟದ ಸ್ಟೀರಿಂಗ್ ಕಮಿಟಿ ರಚನೆ, ಗ್ರಾಮೀಣ ಉದ್ಯೋಗ ಖಾತರಿ ಕೌನ್ಸಿಲ್ ರಚನೆ, ಆಡಳಿತಾತ್ಮಕ ವೆಚ್ಚಗಳು, ಕುಂದಕೊರತೆ ನಿವಾರಣೆ, ಪರಿಹಾರ, ವೇತನ ನಿಗದಿ, ನಿರುದ್ಯೋಗ ಭತ್ಯೆ ಪಾವತಿ, ಕೇಂದ್ರಾಡಳಿತ ಪ್ರದೇಶಗಳ ಪ್ರಮಾಣಿಕ ಖರ್ಚು ವೆಚ್ಚ ಹಂಚಿಕೆ ಸೇರಿ ಹಲವು ವಿಷಯ ಒಳಗೊಂಡಿವೆ.

ಬಾಲಕಿಯ ಅಪಹರಣ, ಹತ್ಯೆ

ಚೆನ್ನೈ: ಕೊಯಮತ್ತೂರಿನ ಸುಲೂರು ಪ್ರದೇಶದಲ್ಲಿ ಹತ್ತು ವರ್ಷದ ಬಾಲಕಿಯನ್ನು ಅಪಹರಿಸಿ ಹತ್ಯೆಗೈಯ್ಯಲಾಗಿದೆ.

ಕಣ್ಣಂಪಾಳಯಂ ಸರೋವರದ ಬಳಿ ಬಾಲಕಿಯ ಶವ ಪತ್ತೆಯಾಗಿದ್ದು, ದೇಹದ ತುಂಬೆಲ್ಲ ಗಾಯಗಳು ಕಂಡುಬಂದಿವೆ. ಬಾಲಕಿಯನ್ನು ಅಪಹರಿಸಿ ಕೊಲೆ ಮಾಡಿದ ಆರೋಪದ ಮೇರೆಗೆ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಬಾಲಕಿ ಸುಲೂರು ಪ್ರದೇಶದ ತನ್ನ ಮನೆಯ ಹತ್ತಿರ ದಿನಸಿ ಖರೀದಿಸಲು ಅಂಗಡಿಗೆ ಹೋಗಿದ್ದಳು. ಈ ವೇಳೆ ಕಿಡಿಗೇಡಿಗಳು ಆಕೆಯನ್ನು ಅಪಹರಿಸಿ ಕೊಲೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಯ ಸಂಬಂಧ ತಮಿಳುನಾಡು ಸಿಎಂ ಜೋಸೆಫ್ ವಿಜಯ್ ನೇತೃತ್ವದ ಟಿವಿಕೆ ಸರಕಾರದ ವಿರುದ್ಧ ಡಿಎಂಕೆ ಹರಿಹಾಯ್ದಿದೆ.

''ಮುಖ್ಯಮಂತ್ರಿ ವಿಜಯ್ ಅವರಿಂದ ನ್ಯಾಯದ ಭರವಸೆ ಸಿಗುವವರೆಗೂ ನಾವು ಶವವನ್ನು ತೆಗೆದುಕೊಂಡು ಹೋಗುವುದಿಲ್ಲ. ಈ ರೀತಿಯ ಕೃತ್ಯಗಳು ಆಗಬಾರದು ಎಂದು ಬದಲಾವಣೆಗೆ ಮತ ಹಾಕಿದ್ದೇವೆ. ಆದರೆ, ಅವರು ಈಗ ಯಾವುದೇ ಹೇಳಿಕೆ ಅಥವಾ ಭರವಸೆ ನೀಡುತ್ತಿಲ್ಲ. ರಾಜ್ಯದಲ್ಲಿ ಹೊಸ ಸರಕಾರ ಆಡಳಿತಕ್ಕೆ ಬಂದ ಹೊರತಾಗಿಯೂ, ಯಾವುದೇ ಬದಲಾವಣೆ ಆಗಿಲ್ಲ,'' ಎಂದು ಬಾಲಕಿಯ ಪೋಷಕರು ಆಕ್ರೋಶ ಹೊರಹಾಕಿದ್ದಾರೆ. ಸಂಬಂಧಿಕರು ಸುಲೂರು ಪೊಲೀಸ್ ಠಾಣೆಯ ಹೊರಗೆ ಪ್ರತಿಭಟನೆ ನಡೆಸಿದ್ದಾರೆ. ತಮಿಳುನಾಡು ಸಚಿವ ಎಂ.ಎಸ್. ಸಂಪತ್ ಅವರು ಇಎಸ್‌ಐ ಆಸ್ಪತ್ರೆಗೆ ಭೇಟಿ ನೀಡಿ ಸಂತ್ರಸ್ತೆಯ ಕುಟುಂಬವನ್ನು ಭೇಟಿ ಮಾಡಿ ಸಾಂತ್ವನ ಹೇಳಿದರು.

ನಕಲಿ ವಿಡಿಯೊಗೆ ನಟಿ ರುಕ್ಮಿಣಿ ಕಿಡಿ

ಹೊಸದಿಲ್ಲಿ: ಖ್ಯಾತ ನಟಿ ರುಕ್ಮಿಣಿ ವಸಂತ್ ಅವರ ನಕಲಿ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಅಶ್ಲೀಲವಾಗಿ ತಮ್ಮನ್ನು ಬಿಂಬಿಸಲು ಯತ್ನಿಸಿದ ಕಿಡಿಗೇಡಿಗಳಿಗೆ ಕಾನೂನು ಮೂಲಕ ತಕ್ಕ ಪಾಠ ಕಲಿಸುವುದಾಗಿ ನಟಿ ರುಕ್ಮಿಣಿ ಎಚ್ಚರಿಕೆ ನೀಡಿದ್ದಾರೆ. ಬಿಕಿನಿ ತೊಟ್ಟಿರುವಂತೆ ನಟಿಯನ್ನು ಬಿಂಬಿಸಲಾದ ವಿಡಿಯೊ ವೈರಲ್ ಆಗಿದೆ. ಸಾಮಾಜಿಕ ಜಾಲತಾಣದಲ್ಲಿ ನಟಿಯ ಬೆಂಬಲಿಗರು ಹಾಗೂ ಅಭಿಮಾನಿಗಳು ಈ ವಿಡಿಯೊ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸಾಂಪ್ರದಾಯಿಕ ಉಡುಗೆಯ ಮೂಲಕವೇ ಗಮನ ಸೆಳೆದಿರುವ ನಟಿ ರುಕ್ಮಿಣಿ ಅವರು ತಮ್ಮ ನಕಲಿ ವಿಡಿಯೊ ಬಗ್ಗೆ 'ಎಕ್ಸ್' ಖಾತೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿ, ಎಚ್ಚರಿಕೆಯನ್ನು ಕೂಡ ನೀಡಿದ್ದಾರೆ.



ಕೊಲ್ಲಂ ನಿವಾಸಿಗೆ ₹12 ಕೋಟಿ ಲಾಟರಿ

ಕಾಸರಗೋಡು: ಕೊಲ್ಲಂ ಜಿಲ್ಲೆಯ ಕರುಣಾಗಪ್ಪಳ್ಳಿಯ ಪೊನ್ನನ್ ಎಂಬವರಿಗೆ ಈ ಬಾರಿಯ ಕೇರಳ ಲಾಟರಿ ಇಲಾಖೆಯ ವಿಷು ಬಂಪರ್‌ನಲ್ಲಿ 12 ಕೋಟಿ ರೂ.ಗಳ ಮೊದಲ ಬಹುಮಾನ ಲಭಿಸಿದೆ. ಕೇರಳ ಲಾಟರಿ ಇಲಾಖೆಯ ವಿಷು ಬಂಪರ್ ಡ್ರಾ ಶನಿವಾರ ನಡೆದಿದೆ. ಮೊದಲ ಬಹುಮಾನವು **ಟಿಕೆಟ್ ಸಂಖ್ಯೆ ವಿಬಿ 135452** ಲಭಿಸಿದೆ. 2ನೇ ಬಹುಮಾನ ತಲಾ 1 ಕೋಟಿ ರೂ. 6 ಸಂಖ್ಯೆಗಳಿಗೆ ಹೋಯಿತು. ಆರು ಸಂಖ್ಯೆಗಳಿಗೆ ಮೂರನೇ ಬಹುಮಾನ ತಲಾ 10 ಲಕ್ಷ ರೂ. ಲಭಿಸಿದೆ. ಟಿಕೆಟ್ ಬೆಲೆ 300 ರೂ. ಆಗಿತ್ತು. ಮುದ್ರಿಸಲಾದ ಎಲ್ಲ 45 ಲಕ್ಷ ಟಿಕೆಟ್‌ಗಳು ಮಾರಾಟವಾಗಿದೆ.

NATIONAL SEEDS CORPORATION LIMITED
(A Government of India Undertaking)
Regional Office : Bangalore - 24. (CIN No.: U 74899 DL 1963 GOI 003913)
Phone : 080-2341 5816. E-mail : rm.bangalore@indiaseeds.com, nscbangalore.mktg@gmail.com Website : www.indiaseeds.com
एनएससी NSC
No. : 7(4)/Tender/Mktg/NSC-BNG/2026-27 Date : 23-05-2026
NOTICE INVITING TENDER (NIT)
National Seeds Corporation Limited, Regional Office, Bangalore invites NIT through Online for Purchase of Certified Seeds of Groundnut and Truthfully Labelled Seeds of Green Manure from reputed Seed Producers. For further details visit our Website : www.indiaseeds.com. NIT Document can be Downloaded from Website : https://indiaseeds.enivida.com from 24-05-2026, 13.00 hrs. Last Date for Submission of Online Tender is 27-05-2026 till 14.00 hrs.
Sd/- Regional Manager,
National Seeds Corporation, Bangalore.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಕಬಿನಿ ಜಲಾಶಯ ವಿಭಾಗ, ಕಬಿನಿ ಕಾಲೋನಿ, ಹೆಚ್.ಡಿ.ಕೋಟೆ ತಾ||, ಮೈಸೂರು ಜಿಲ್ಲೆ
ಸಂ: ಕಾ.ಇಂ/ಕ.ಜ.ವಿ/ಯೋ.ಶಾ/ಟೆಂಡರ್ ಪ್ರ.ಸಂ.03/2026-27
ದಿನಾಂಕ : 15.05.2026
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 03/2026-27 ದಿನಾಂಕ:15.05.2026
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕನಿಷ್ಠ ಮೊತ್ತ ರೂ.1.90 ಲಕ್ಷ ಮತ್ತು ಗರಿಷ್ಠ ಮೊತ್ತ **ರೂ.4229.19 ಲಕ್ಷದ ಒಟ್ಟು 03** ಕಾಮಗಾರಿಗಳನ್ನು ಅರ್ಹ ವರ್ಗದ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಅಹ್ವಾನಿಸಲಾಗಿದೆ. ಕೆ.ಪಿ.ಪಿ ಪೋರ್ಟಲ್‌ನಲ್ಲಿ ಟೆಂಡರ್‌ಗೆ ಅರ್ಜಿ ಸಲ್ಲಿಸಲು ಕಡೆಯ **ದಿನಾಂಕ:29.05.2026** ಸಾ:5.00 ಗಂಟೆವರೆಗೆ ಮತ್ತು ತಾಂತ್ರಿಕ ಬಿಡ್ಡನ್ನು **ದಿನಾಂಕ:30.05.2026ರ** ಸಾ:5.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡ್ಡು ಅನುಮೋದನೆಯಾದ ನಂತರ ತೆರೆಯಲಾಗುವುದು. ಟೆಂಡರ್ ವಿವರಗಳನ್ನು ಕರ್ನಾಟಕ ಸರ್ಕಾರದ ವೆಬ್‌ಸೈಟ್ **https://kppp.karnataka.gov.in/kppp** ನಿಂದ ದಿನಾಂಕ:15.05.2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್,
ಕಬಿನಿ ಜಲಾಶಯ ವಿಭಾಗ, ಕಬಿನಿ ಕಾಲೋನಿ
DIPR/DDMYS/195/KSMCA/162/2026-27

Quick ನ್ಯೂಸ್
- ದಿಲ್ಲಿಯ ಲ್ಯುಟೆನ್ಸ್ ಪ್ರದೇಶದಲ್ಲಿನ ಐಷಾರಾಮಿ 'ಜಿಮ್‌ಖಾನಾ ಕ್ಲಬ್' ಕಟ್ಟಡ ತೆರವುಗೊಳಿಸಲು ಜೂ.5 ಡೆಡ್‌ಲೈನ್; ರಕ್ಷಣಾ ಬಳಕೆಗೆ ಅಗತ್ಯ ಎಂದಿರುವ ಕೇಂದ್ರ ಸರಕಾರ
- ತೆಲಂಗಾಣದಲ್ಲಿ ರಣಬಿಸಿಲಿಗೆ 16 ಮಂದಿ ಬಲಿ; ಮೃತರ ಕುಟುಂಬಕ್ಕೆ ಸರಕಾರದಿಂದ 4 ಲಕ್ಷ ರೂ. ಪರಿಹಾರ ಘೋಷಣೆ
- ವಿಮಾನ ಟಿಕೆಟ್ ರದ್ದತಿ ದರದಲ್ಲಿ ಭಾರಿ ವಂಚನೆ ಆರೋಪ: ಆನ್‌ಲೈನ್ ಬುಕ್ಕಿಂಗ್ ಆ್ಯಪ್‌ಗಳ ವಿರುದ್ಧ ತನಿಖೆಗೆ ಸಚಿವ ಪ್ರಲ್ಹಾದ್ ಜೋಶಿ ಆದೇಶ
- ದಂಗೆ, ಹಿಂಸಾಚಾರದಲ್ಲಿ ತಮ್ಮನ್ನು ಮೀರಿಸುವವರೇ ಇಲ್ಲ ಎಂದ ಬಾಂಗ್ಲಾದೇಶ ಮಾಜಿ ಪ್ರಧಾನಿ ಯೂನಸ್ ಸಲಹೆಗಾರ, ವಿದ್ಯಾರ್ಥಿ ಮುಖಂಡ ಆಸಿಫ್ ಮಹಮುದ್ ಶೋಜಿಬ್
- ಪರಿಸರವಾದಿಗಳು ಹೊಸ ಯೋಜನೆ ಸ್ವಾಗತಿಸಿದ್ದೇ ಇಲ್ಲ ಎಂದ ಸಿಜೆಐ ವಿರುದ್ಧ ಭುಗಿಲೆದ್ದ ಅಸಮಾಧಾನ; 71 ಮಂದಿ ಪರಿಸರವಾದಿಗಳು, ಕೇಂದ್ರದ ಮಾಜಿ ಅಧಿಕಾರಿಗಳಿಂದ ಖಂಡನಾ ಪತ್ರ ರವಾನೆ

ರಾಜ್ಯಸಭೆ ಅರ್ಜಿಗಳ ಸಮಿತಿ ಅಧ್ಯಕ್ಷರಾಗಿ ಚಡ್ಡಾ ನೇಮಕ

ಹೊಸದಿಲ್ಲಿ: ಇತ್ತೀಚೆಗಷ್ಟೇ ಆಮ್ ಆದ್ಮಿ ಪಕ್ಷದಿಂದ ಬಿಜೆಪಿಗೆ ಸೇರ್ಪಡೆಗೊಂಡ ಸಂಸದ ರಾಘವ್ ಚಡ್ಡಾ ಅವರನ್ನು ರಾಜ್ಯಸಭೆಯ ಅರ್ಜಿಗಳ ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ರಾಜ್ಯಸಭೆ ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಅವರು ಈ ಸಮಿತಿಯನ್ನು ಪುನರಚಿಸಿ ಅದಕ್ಕೆ 10 ಸದಸ್ಯರನ್ನು ನಾಮನಿರ್ದೇಶನ ಮಾಡಿದ್ದಾರೆ. ರಾಘವ್ ಚಡ್ಡಾ ಅಧ್ಯಕ್ಷತೆಯ ಸಮಿತಿಯಲ್ಲಿ ಹರ್ಷ ಮಹಾಜನ್, ಗುಲಾಮ್ ಅಲಿ, ಶಂಭು ಶರಣ್ ಪಟೇಲ್, ಮಯಾಂಕ್ ಕುಮಾರ್ ನಾಯಕ್, ಮಸ್ತಾನ್ ರಾವ್ ಯಾದವ್ ಬೀಡಾ, ಜೇಬಿ ಮಾತರ್ ಹಿಷಮ್, ಸುಭಾಶಿಷ್ ಖುಂಟಿಯಾ, ರ್ವಾಂಗ್‌ವ್ರಾ ನರ್ಜಾರಿ, ಸಂತೋಷ್‌ಕುಮಾರ್ ಪಿ. ಸದಸ್ಯರಾಗಿದ್ದಾರೆ. ಇನ್ನು, ರಾಜ್ಯಸಭಾ ಸದಸ್ಯರಾದ ಡಾ. ಮೇನಕಾ ಗುರುಸ್ವಾಮಿ ಅವರನ್ನು ಕಾರ್ಪೊರೇಟ್ ಕಾಯಿದೆಗಳ (ತಿದ್ದುಪಡಿ) ವಿಧೇಯಕ 2026ರ ಜಂಟಿ ಸಮಿತಿಯ ಸದಸ್ಯರನ್ನಾಗಿ ಸಭಾಪತಿ ನಾಮನಿರ್ದೇಶನ ಮಾಡಿದ್ದಾರೆ.

ಲಡಾಖ್‌ನಲ್ಲಿ ಸೇನಾ ಹೆಲಿಕಾಪ್ಟರ್ ಅಪಘಾತ

ಮೂವರು ಸೇನಾ ಅಧಿಕಾರಿಗಳು ಪಾರು

ಹೊಸದಿಲ್ಲಿ: ಲಡಾಖ್‌ನ ಲೇಹ್ ಸಮೀಪದ ಪರ್ವತ ಪ್ರದೇಶದಲ್ಲಿ ಸೇನಾ ಹೆಲಿಕಾಪ್ಟರ್ ಪತನಗೊಂಡಿದ್ದು, ಅದರಲ್ಲಿದ್ದ ಮೂವರು ಸೇನಾಧಿಕಾರಿಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಹಳೆಯದಾಗುತ್ತಿರುವ ಚೀತಾ ಸರಣಿಗೆ ಸೇರಿದ ಈ ಹೆಲಿಕಾಪ್ಟರ್ ಪತನಗೊಂಡಿದ್ದು, ಅದರಲ್ಲಿ ಲೆಫ್ಟಿನೆಂಟ್ ಕರ್ನಲ್, ಮೇಜರ್ ಜನರಲ್ ಮತ್ತು ಮೇಜರ್ ಪ್ರಯಾಣಿಸುತ್ತಿದ್ದರು. ನಿಯಂತ್ರಣ ತಪ್ಪುತ್ತಿದ್ದಂತೆಯೇ ಮೂವರೂ ಸುರಕ್ಷಿತವಾಗಿ ಹೊರಗೆ ಜಿಗಿದರು. ಈ ಅಪಘಾತವು 1970ರ ದಶಕದಿಂದಲೂ ಬಳಕೆಯಲ್ಲಿರುವ ಚೀತಾ ಹೆಲಿಕಾಪ್ಟರ್‌ಗಳ ಸುರಕ್ಷತೆಯ ಬಗ್ಗೆ ಮತ್ತೆ ಚರ್ಚೆ ಹುಟ್ಟುಹಾಕಿದೆ.

ಪ.ಬಂಗಾಳದಲ್ಲಿ ಬಕ್ರೀದ್ ರಜೆ ಕಡಿತ

ಕೋಲ್ಕೊತಾ: ಪಶ್ಚಿಮ ಬಂಗಾಳದ ಬಿಜೆಪಿ ಸರಕಾರ ಬಕ್ರೀದ್ ಹಬ್ಬದ ರಜೆಯನ್ನು ಕಡಿತಗೊಳಿಸಿದೆ. ಹಿಂದಿನ ಮಮತಾ ಬ್ಯಾನರ್ಜಿ ಅವಧಿಯಲ್ಲಿ ಬಕ್ರೀದ್ ಹಬ್ಬಕ್ಕೆ ಎರಡು ದಿನ ಸರಕಾರ ರಜೆ ಘೋಷಿಸಲಾಗಿತ್ತು. ಹಿಂದಿನ ಸರಕಾರದ ಆದೇಶ ಬದಲಿಸಿದ ಸಿಎಂ ಸುವೇಂದು ಅಧಿಕಾರಿ, ಎರಡು ದಿನಗಳ ರಜೆಯನ್ನು ಒಂದು ದಿನಕ್ಕೆ ಇಳಿಸಿದ್ದಾರೆ. ರಾಜ್ಯ ಹಣಕಾಸು ಇಲಾಖೆ ಬಿಡುಗಡೆ ಮಾಡಿದ ಸಾರ್ವತ್ರಿಕ ರಜೆ ದಿನದ ಪಟ್ಟಿಯಲ್ಲಿ ಬಕ್ರೀದ್ ರಜೆಯನ್ನು ಒಂದು ದಿನ ಕಡಿತಗೊಳಿಸಲಾಗಿದೆ. ಹೊಸ ರಜೆ ಪಟ್ಟಿ ಪ್ರಕಾರ ಪ್ರಸಕ್ತ ವರ್ಷ ಮೇ 28 ರಂದು ಬಕ್ರೀದ್ ರಜೆ ಘೋಷಣೆ ಮಾಡಲಾಗಿದೆ.

ಆಯುಷ್ಮಾನ್ ಭಾರತ್ ಜಾರಿ: ಪಶ್ಚಿಮ ಬಂಗಾಳದಲ್ಲಿ ಕೇಂದ್ರ ಸರಕಾರದ 'ಆಯುಷ್ಮಾನ್ ಭಾರತ' ಆರೋಗ್ಯ ಯೋಜನೆ ಜುಲೈ ತಿಂಗಳಿಂದ ಜಾರಿಗೆ ಬರಲಿದೆ. ಸಿಎಂ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರಕಾರ, ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದಂತೆ ಆಯುಷ್ಮಾನ್ ಭಾರತ ಯೋಜನೆಯನ್ನು ಜಾರಿಗೊಳಿಸಲು ಆದೇಶ ನೀಡಿದೆ. ಯೋಜನೆಗಾಗಿ ಕೇಂದ್ರ ಸರಕಾರ 500 ಕೋಟಿ ರೂ. ಬಿಡುಗಡೆ ಮಾಡಿದೆ.

ದೀದಿ ವಿನ್ಯಾಸ ಕೆಡವಿದ ಸಿಎಂ ಸುವೇಂದು



ಪಶ್ಚಿಮ ಬಂಗಾಳದ ಕೋಲ್ಕೊತಾದಲ್ಲಿ ಮಾಜಿ ಸಿಎಂ ಮಮತಾ ಬ್ಯಾನರ್ಜಿ ಅವರು ಸ್ವತಃ ವಿನ್ಯಾಸಗೊಳಿಸಿ, ಅವರ ಆಡಳಿತಾವಧಿಯಲ್ಲಿ ನಿರ್ಮಿಸಿದ್ದ ಸಾಲ್ಟ್ ಲೇಕ್ ಕ್ರೀಡಾಂಗಣ ಬಳಿಕ ಫುಟ್ಬಾಲ್ ಆಧಾರಿತ ಶಿಲ್ಪಾಕೃತಿಯನ್ನು ಶನಿವಾರ ಸ್ಥಳೀಯ ಆಡಳಿತ ಕೆಡವಿ ಹಾಕಿತು.

ಗಣಿಯಲ್ಲಿ ಸ್ಫೋಟ, 90 ಮಂದಿ ಸಾವು

ಬೀಜಿಂಗ್: ಚೀನಾದ ಶಾಂಕ್ಸಿ ಪ್ರಾಂತ್ಯದ ಚಾಂಗ್‌ಝಿ ನಗರದಲ್ಲಿರುವ ಲಿಯುಶೆನ್ಯು ಕಲ್ಲಿದ್ದಲು ಗಣಿಯಲ್ಲಿ ಸಂಭವಿಸಿದ ಭೀಕರ ಸ್ಫೋಟದಲ್ಲಿ 90 ಮಂದಿ ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಸರಕಾರಿ ಸ್ವಾಮ್ಯದ ಸುದ್ದಿ ಸಂಸ್ಥೆ ಕ್ಸಿನ್ಹುವಾ ವರದಿ ಮಾಡಿದೆ.

ಅಪಘಾತದ ಸಮಯದಲ್ಲಿ ಒಟ್ಟು 247 ಕಾರ್ಮಿಕರು ಗಣಿಯೊಳಗಿದ್ದರು, ಅವರಲ್ಲಿ ಶನಿವಾರ ಮುಂಜಾನೆಯ ವೇಳೆಗೆ 201 ಜನರನ್ನು ಸುರಕ್ಷಿತವಾಗಿ ಮೇಲಕ್ಕೆ ಕರೆತರಲಾಗಿದೆ. ಗಣಿಯೊಳಗೆ ಸಿಲುಕಿರುವ ಉಳಿದ ಕಾರ್ಮಿಕರ ರಕ್ಷಣೆಗಾಗಿ ಯುದ್ಧೋಪಾದಿಯಲ್ಲಿ ಕಾರ್ಯಾಚರಣೆ ಮುಂದುವರಿದಿದೆ. ಶುಕ್ರವಾರ ಸಂಜೆ 7ರ ಸುಮಾರಿಗೆ ಗಣಿಯೊಳಗೆ ಕಾರ್ಮಿಕರು ಕೆಲಸ ಮಾಡುತ್ತಿದ್ದಾಗ ಭೀಕರ ಸ್ಫೋಟ ಸಂಭವಿಸಿದೆ.

ಈ ಭೀಕರ ಗಣಿ ದುರಂತದ ಬೆನ್ನಲ್ಲೇ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು, ''ನಾಪತ್ತೆಯಾಗಿರುವ ಕಾರ್ಮಿಕರನ್ನು ಪತ್ತೆಹಚ್ಚಬೇಕು ಮತ್ತು ಗಾಯಾಳುಗಳಿಗೆ ಅತ್ಯುತ್ತಮ ಚಿಕಿತ್ಸೆ ನೀಡಬೇಕು,'' ಎಂದು ಅವರು ಸೂಚಿಸಿದ್ದಾರೆ. ಅಲ್ಲದೆ, ಇಡೀ ಘಟನೆಯ ತನಿಖೆಯನ್ನು ನಡೆಸಿ, ಕಾನೂನಿನ ಪ್ರಕಾರ ಕಠಿಣ ಕ್ರಮ ಕೈಗೊಳ್ಳುವಂತೆ ಆದೇಶಿಸಿದ್ದಾರೆ.

ಹಮ್ಜಾ ಅಂತ್ಯಕ್ರಿಯೆಯಲ್ಲಿ ಪಾಕ್ ಉಗ್ರರು, ಅಧಿಕಾರಿಗಳು ಭಾಗಿ

ಹೊಸದಿಲ್ಲಿ: ಪಾಕಿಸ್ತಾನ ಬೆಂಬಲಿತ ಅಲ್ ಬದ್ರ್ ಉಗ್ರ ಸಂಘಟನೆಯ ಪ್ರಮುಖ ಕಮಾಂಡರ್ ಹಾಗೂ 2019ರ ಪುಲ್ವಾಮಾ ದಾಳಿಯ ಮಾಸ್ಟರ್‌ಮೈಂಡ್ ಹಮ್ಜಾ ಬುರ್ಹಾನ್ ಅಂತ್ಯಕ್ರಿಯೆಯಲ್ಲಿ ಪಾಕ್ ಉಗ್ರ ಸಂಘಟನೆಗಳ ಪ್ರಮುಖರು ಹಾಗೂ ಅಧಿಕಾರಿಗಳು ಭಾಗಿಯಾಗಿರುವುದು ಬೆಳಕಿಗೆ ಬಂದಿದೆ.

ಇದರಿಂದ ಪಾಕಿಸ್ತಾನದ ಉಗ್ರ ಸಂಘಟನೆಗಳ ಪೋಷಣೆ ಮತ್ತೊಮ್ಮೆ ಬಯಲಾಗಿದೆ. ಶುಕ್ರವಾರ ನಡೆದ ಅಂತ್ಯಸಂಸ್ಕಾರದಲ್ಲಿ ಹಿಜ್ಬುಲ್ ಮುಜಾಹಿದ್ದೀನ್ ಸಂಘಟನೆ ಮುಖ್ಯಸ್ಥ ಸೈಯದ್ ಸಲಾಹುದ್ದೀನ್ ಮತ್ತು ಅಲ್-ಬದ್ರ್ ಮುಖ್ಯಸ್ಥ ಬಖ್ತ್ ಜಮೀನ್ ಖಾನ್ ಸೇರಿ ಭಾರತಕ್ಕೆ ಬೇಕಾಗಿರುವ ಹಲವು ಮೋಸ್ಟ್ ವಾಂಟೆಡ್ ಉಗ್ರರು ಭಾಗವಹಿಸಿದ್ದರು.

ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಅಧಿಕಾರಿಗಳೂ ಪಾಲ್ಗೊಂಡಿದ್ದರು ಎಂದು ಭದ್ರತಾ ಸಂಸ್ಥೆಗಳು ತಿಳಿಸಿವೆ. 40ಕ್ಕೂ ಹೆಚ್ಚು ಸಿಆರ್‌ಪಿಎಫ್ ಯೋಧರನ್ನು ಬಲಿ ಪಡೆದ 2019ರ ಪುಲ್ವಾಮಾ ಸ್ಫೋಟದ ಪ್ರಮುಖ ಸಂಚುಕೋರನಾಗಿದ್ದ ಈತ, ಬಳಿಕ ಪಾಕಿಸ್ತಾನಕ್ಕೆ ಪರಾರಿಯಾಗಿದ್ದ. ಗೃಹ ಸಚಿವಾಲಯವು 2022 ರಲ್ಲಿ ಈತನನ್ನು 'ಅಧಿಕೃತ ಭಯೋತ್ಪಾದಕ' ಎಂದು ಘೋಷಿಸಿತ್ತು. ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಅಪರಿಚಿತ ಬಂದೂಕುಧಾರಿಗಳು ಗುರುವಾರ ಗುಂಡಿಕ್ಕಿ ಹತ್ಯೆಗೈದಿದ್ದರು.

ಕರ್ನಾಟಕ ಸರ್ಕಾರ ಸಾಮಾಜಿಕ ಅರಣ್ಯ ವಿಭಾಗ, ಚಿತ್ರದುರ್ಗ.
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಚಿತ್ರದುರ್ಗ.
ದೂ.ಸಂಖ್ಯೆ: 08194-220130, 9449863645 ಇಮೇಲ್:dcfsfcta@gmail.com
ಸಂಖ್ಯೆ:ಸಾಅವಿಚಿ.ಆರ್‌ಕೆವಿವೈ/ಸಾಅಯೋ ಟೆಂಡರ್. ಸಿಆರ್ 01/2025-26
ದಿನಾಂಕ:-21-05-2026
ಇ-ಟೆಂಡರ್ ಪ್ರಕಟಣೆ (ಮೂರನೇ ಬಾರಿ)
[ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ]
ಚಿತ್ರದುರ್ಗ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ 2026-27ನೇ ಸಾಲಿನಲ್ಲಿ ಚಿತ್ರದುರ್ಗ ಸಾಮಾಜಿಕ ಅರಣ್ಯ ವಿಭಾಗ ವ್ಯಾಪ್ತಿಯಲ್ಲಿ ಬರುವ ಸಾಮಾಜಿಕ ಅರಣ್ಯ ವಲಯಗಳಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಕೈಗೊಳ್ಳಬೇಕಾದ ಅರಣ್ಯೀಕರಣ ಕಾಮಗಾರಿಗಳಿಗೆಈಗಾಗಲೇ ಮೊದಲ ಹಾಗೂ ಎರಡನೇ ಬಾರಿ ಕರೆದ ಇ-ಟೆಂಡರ್‌ನಲ್ಲಿ ಯಶಸ್ವಿಯಾಗದ ಕಾಮಗಾರಿಗಳಿಗೆ ಸಂಬಂಧಿಸಿದಂತೆ 2026-27 ನೇ ಸಾಲಿಗೆ ರಾಜ್ಯದ ಅರಣ್ಯ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೋಂದಣಿ ಆಗಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಟೆಂಡರ್‌ಗಳನ್ನುಮೂರನೇ ಬಾರಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ದಿನಾಂಕ:25-05-2026 ರಿಂದ 01-06-2026 ರಂದು 16:00 ಗಂಟೆಯವರೆಗೆ [ಸಂಜೆ:4.00 ಗಂಟೆ] ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಟೆಂಡರ್ ವಿವರಗಳನ್ನು https://kppp.karnataka.gov.in/ವೆಬ್ ಸೈಟ್ ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ. ಒಟ್ಟು ಟೆಂಡರ್ ಮೊತ್ತ ರೂ. 166.693 ಲಕ್ಷಗಳು.
ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ತಾಂತ್ರಿಕ ಸಹಾಯಕರು, ಸಾಮಾಜಿಕ ಅರಣ್ಯ ವಿಭಾಗ, ಚಿತ್ರದುರ್ಗ
RO.No.118:DIPR/CTA/KSMCA/2026-27

ಮಾರ್ಚ್ 28ರಿಂದ ಮೇ 31ರವರೆಗೆ

ಐಪಿಎಲ್ ಸಂಗ್ರಾಮ
2026ರ ಹಂಗಾಮ

2026ರ ಐಪಿಎಲ್ ಅಂಕಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ರನ್ ರೇಟ್
ಬೆಂಗಳೂರು Q	14	9	5	0	18	+0.783
ಗುಜರಾತ್ Q	14	9	5	0	18	+0.695
ಹೈದರಾಬಾದ್ Q	14	9	5	0	18	+0.524
ಪಂಜಾಬ್	14	7	6	1	15	+0.309
ರಾಜಸ್ಥಾನ	13	7	6	0	14	+0.083
ಕೋಲ್ಕೊತಾ	13	6	6	1	13	+0.011
ಚೆನ್ನೈ	14	6	8	0	12	-0.345
ಡೆಲ್ಲಿ	13	6	7	0	12	-0.871
ಮುಂಬಯಿ	13	4	9	0	08	-0.510
ಲಖನೌ	14	4	10	0	08	-0.740

638 ರನ್ — **ಸಾಯಿ ಸುದರ್ಶನ್**, ಗುಜರಾತ್ ಟೈಟನ್ಸ್

24 ವಿಕೆಟ್ — **ಭುವನೇಶ್ವರ್ ಕುಮಾರ್**, ರಾಯಲ್ ಚಾಲೆಂಜರ್ಸ್ ಬೆಂಗಳೂರು

ಲಖನೌ ವಿರುದ್ಧ ಪಂಜಾಬ್‌ಗೆ 7 ವಿಕೆಟ್ ಜಯ | ಶ್ರೇಯಸ್ ಅಯ್ಯರ್ ಭರ್ಜರಿ ಶತಕ

ಕಿಂಗ್ಸ್‌ಗೆ ಗೆಲುವಿನ ಶ್ರೇಯಸ್ಸು

ಲಖನೌ: ನಾಯಕ ಶ್ರೇಯಸ್ ಅಯ್ಯರ್ (101*) ಮತ್ತು ಪ್ರಭ್‌ಸಿಮ್ರನ್ ಸಿಂಗ್(69) ಸಿಡಿಲಬ್ಬರದ ಬ್ಯಾಟಿಂಗ್ ನೆರವಿನಿಂದ ಪಂಜಾಬ್ ಕಿಂಗ್ಸ್ ತಂಡ ಲಖನೌ ಸೂಪರ್ ಜಯಂಟ್ಸ್ ವಿರುದ್ಧ 7 ವಿಕೆಟ್‌ಗಳ ಜಯ ಸಾಧಿಸಿದೆ. ಲಖನೌ ನೀಡಿದ 197 ರನ್ ಗುರಿಯನ್ನು ಬೆನ್ನಟ್ಟಿದ ಕಿಂಗ್ಸ್ 18 ಓವರ್‌ಗಳಲ್ಲಿ 3 ವಿಕೆಟ್‌ಗೆ 200 ರನ್ ಗಳಿಸಿ ಗೆಲುವಿನ ನಗೆ ಬೀರಿತು. ನಾಯಕನ ಆಟ ಪ್ರದರ್ಶಿಸಿದ ಅಯ್ಯರ್ ಇನಿಂಗ್ಸ್ 11 ಫೋರ್, 5 ಸಿಕ್ಸರ್‌ಗಳನ್ನು ಒಳಗೊಂಡಿತ್ತು. ಈ ಗೆಲುವಿನೊಂದಿಗೆ ಪಂಜಾಬ್ ಪ್ಲೇಆಫ್ ಕನಸನ್ನು ಜೀವಂತವಾಗಿರಿಸಿಕೊಂಡಿದೆ.

ಟಾಸ್ ಗೆದ್ದ ಪಂಜಾಬ್ ಬೌಲಿಂಗ್ ಆಯ್ದುಕೊಂಡಿತು. ಈಗಾಗಲೇ ಪ್ಲೇಆಫ್ ಸ್ಪರ್ಧೆಯಿಂದ ಹೊರಬಿದ್ದಿರುವ ಲಖನೌ ಪರ ಜೋಶ್ ಇಂಗ್ಲಿಸ್(72) ಸ್ಫೋಟಕ ಅರ್ಧಶತಕ ಗಳಿಸಿ ತಂಡಕ್ಕೆ ನೆರವಾದರು.

ಲಖನೌ ಸೂಪರ್‌ಜಯಂಟ್ಸ್ 7ನೇ ಓವರ್‌ನಲ್ಲಿ 69 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಈ ವೇಳೆ ಜೊತೆಯಾದ ಇಂಗ್ಲಿಸ್ ಮತ್ತು ರಿಷಭ್ ಪಂತ್ (26 ರನ್, 21 ಎಸೆತ) ನಾಲ್ಕನೇ ವಿಕೆಟ್‌ಗೆ 65 ರನ್‌ಗಳನ್ನು ಕಲೆ ಹಾಕಿ ತಂಡವನ್ನು ಚೇತರಿಸಿಕೊಳ್ಳುವಂತೆ ಮಾಡಿದರು.



ಸಂಕ್ಷಿಪ್ತ ಸ್ಕೋರ್

ಲಖನೌ ಸೂಪರ್ ಜಯಂಟ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 196 (ಜೋಶ್ ಇಂಗ್ಲಿಸ್ 72, ಆಯುಷ್ ಬದೋನಿ 43; ಯುಜುವೇಂದ್ರ ಚಾಹಲ್ 25ಕ್ಕೆ 2, ಮಾರ್ಕೊ ಜಾನ್ಸನ್ 33ಕ್ಕೆ 2).

ಪಂಜಾಬ್ ಕಿಂಗ್ಸ್: 18 ಓವರ್‌ಗಳಲ್ಲಿ 3 ವಿಕೆಟ್‌ಗೆ 200 (ಶ್ರೇಯಸ್ ಅಯ್ಯರ್ 101*, ಪ್ರಭ್‌ಸಿಮ್ರನ್ ಸಿಂಗ್ 69; ಮೊಹಮ್ಮದ್ ಶಮಿ 45ಕ್ಕೆ 2, ಅರ್ಜುನ್ ತೆಂಡೂಲ್ಕರ್ 31ಕ್ಕೆ 1)

ಮಿಚೆಲ್ ಮಾರ್ಷ್ ಬದಲಿಗೆ ಆರಂಭಿಕನಾಗಿ ಕಣಕ್ಕಿಳಿದ ಅರ್ಶಿನ್ ಕುಲಕರ್ಣಿ ಮತ್ತು ನಿಕೋಲಸ್ ಪೂರನ್ ಅವರ ಆರಂಭಿಕ ವಿಕೆಟ್‌ಗಳ ಪತನದ ನಂತರ, ಇಂಗ್ಲಿಸ್ ಯುವ ಆಟಗಾರ ಆಯುಷ್ ಬದೋನಿಗೆ ಕ್ರೀಸ್‌ನಲ್ಲಿ ಹೆಚ್ಚು ಅವಕಾಶ ಮಾಡಿಕೊಟ್ಟರು. ಬದೋನಿ ಕೇವಲ 18 ಎಸೆತಗಳಲ್ಲಿ 43 ರನ್ ಗಳಿಸಿ ಮಿಂಚಿದ್ದಲ್ಲದೆ, ಔಟಾಗುವುದಕ್ಕೂ ಮುನ್ನ ಇಂಗ್ಲಿಸ್ ಜೊತೆ ಮೂರನೇ ವಿಕೆಟ್‌ಗೆ 49 ರನ್‌ಗಳ ಜೊತೆಯಾಟ ನೀಡಿದರು. ಅಂತಿಮವಾಗಿ ಲಖನೌ ತಂಡವು 6 ವಿಕೆಟ್‌ಗೆ 196 ರನ್‌ಗಳ ಸವಾಲಿನ ಮೊತ್ತ ಕಲೆಹಾಕಿತು.

ರಾಯಲ್ಸ್‌ಗೆ ಗೆಲುವಿನ ಅನಿವಾರ್ಯತೆ

ಅಭ್ಯಾಸದ ವೇಳೆ ವೈಭವ್ ಸೂರ್ಯವಂಶಿ

ಇಂದು ಮುಂಬಯಿ ವಿರುದ್ಧ ಪಂದ್ಯ
ಪ್ಲೇಆಫ್ ಹಾದಿ ಭದ್ರಪಡಿಸುವ ನಿರೀಕ್ಷೆಯಲ್ಲಿ ರಾಜಸ್ಥಾನ

ಮುಂಬಯಿ: ಪ್ರಸಕ್ತ ಐಪಿಎಲ್‌ನ ಕೊನೆಯ ಪ್ಲೇಆಫ್ ಸ್ಥಾನವನ್ನು ಭದ್ರ ಪಡಿಸಿಕೊಳ್ಳುವ ಇರಾದೆಯಲ್ಲಿರುವ ರಾಜಸ್ಥಾನ ರಾಯಲ್ಸ್ ಭಾನುವಾರ ಡಬಲ್ ಹೆಡರ್‌ನ ಮೊದಲ ಪಂದ್ಯದಲ್ಲಿ ಮುಂಬಯಿ ಇಂಡಿಯನ್ಸ್ ತಂಡವನ್ನು ಎದುರಿಸಲಿದೆ. ಸೋಲಿನಿಂದ ಕಂಗೆಟ್ಟಿರುವ ಮುಂಬಯಿ ಇಂಡಿಯನ್ಸ್ ಸಮಾಧಾನಕರ ಗೆಲುವಿನೊಂದಿಗೆ ಈ ಋತುವಿಗೆ ವಿದಾಯ ಹೇಳಲು ತವಕಿಸಿದೆ.

ಪ್ರಸ್ತುತ 14 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿರುವ ರಾಯಲ್ಸ್ ತಂಡ, ಮುಂಬಯಿ ಇಂಡಿಯನ್ಸ್ ವಿರುದ್ಧ ಗೆಲ್ಲಲೇಬೇಕಾದ ಅನಿವಾರ್ಯತೆಯಲ್ಲಿದೆ. ಈ ಗೆಲುವು ಅವರನ್ನು 16 ಅಂಕಗಳಿಗೆ ಕೊಂಡೊಯ್ಯಲಿದ್ದು, ಪ್ಲೇಆಫ್ ರೇಸ್‌ನಲ್ಲಿರುವ ಪಂಜಾಬ್ ಕಿಂಗ್ಸ್ ಮತ್ತು ಕೋಲ್ಕೊತಾ ನೈಟ್ ರೈಡರ್ಸ್ ತಂಡಗಳಿಗಿಂತ ಕನಿಷ್ಠ ಒಂದು ಅಂಕದ ಮುನ್ನಡೆ ತಂದುಕೊಡಲಿದೆ.

ಆದರೆ, ಒಂದು ವೇಳೆ ಭಾನುವಾರದ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಸೋತರೆ, ತಂಡ ಪ್ಲೇಆಫ್ ತಲುಪುವ ಸಣ್ಣ ಆಸೆ ಜೀವಂತವಾಗಿರಲು ಪಂಜಾಬ್ ಮತ್ತು ಕೋಲ್ಕೊತಾ ಎರಡೂ ತಂಡಗಳು ತಮ್ಮ ಕೊನೆಯ ಪಂದ್ಯಗಳಲ್ಲಿ ಸೋಲಲಿ ಎಂದು ಪ್ರಾರ್ಥಿಸಬೇಕಾಗುತ್ತದೆ.

ಆರಂಭಿಕ ಆಟಗಾರ ವೈಭವ್ ಸೂರ್ಯವಂಶಿ ಅವರ ಸ್ಫೋಟಕ ಬ್ಯಾಟಿಂಗ್‌ಗಿಂತ ಹೆಚ್ಚಾಗಿ, ಯಶಸ್ವಿ ಜೈಸ್ವಾಲ್ ಮುಂಬಯಿ ಇಂಡಿಯನ್ಸ್‌ಗೆ ದೊಡ್ಡ ಆತಂಕವಾಗಿದ್ದಾರೆ. ಭಾರತ ತಂಡದ ಓಪನರ್ ಆಗಿರುವ ಜೈಸ್ವಾಲ್, ಗುವಾಹಟಿಯಲ್ಲಿ ಜಸ್‌ಪ್ರೀತ್ ಬುಮ್ರಾ ಮತ್ತು ಬಳಗದ ವಿರುದ್ಧ ಕೇವಲ 32 ಎಸೆತಗಳಲ್ಲಿ 77 ರನ್ ಸಿಡಿಸಿ ಮೊದಲಾರ್ಧದಲ್ಲೇ ಪಂದ್ಯದ ಫಲಿತಾಂಶವನ್ನು ನಿರ್ಧರಿಸಿದ್ದರು.

ನಾಯಕ ರಿಯಾನ್ ಪರಾಗ್ ಮತ್ತು ಧ್ರುವ್ ಜುರೆಲ್ ಅವರಿಂದ ಹೆಚ್ಚಿನ ಸ್ಥಿರತೆಯ ಅಗತ್ಯ ತಂಡಕ್ಕಿದೆ. ಇಬ್ಬರೂ ಬ್ಯಾಟಿಂಗ್ ಕ್ರಮಾಂಕದಲ್ಲಿ ಪ್ರಮುಖ ಸ್ಥಾನಗಳಲ್ಲಿದ್ದರೂ, ಮಧ್ಯದ ಓವರ್‌ಗಳಲ್ಲಿ ನಿರೀಕ್ಷಿತ ವೇಗವನ್ನು ನೀಡುತ್ತಿಲ್ಲ. ಜುರೆಲ್ ಕೆಲವೊಮ್ಮೆ ರನ್ ಗಳಿಸಲು ಪರದಾಡುತ್ತಿದ್ದರೆ, ಪರಾಗ್ ಸ್ಥಿರ ಫಾರ್ಮ್‌ನ ಕೊರತೆ ಎದುರಿಸುತ್ತಿದ್ದಾರೆ.

ಟೀಮ್ ಇಂಡಿಯಾದ ಸ್ಟಾರ್ ಕ್ರಿಕೆಟಿಗರಾದ ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ ಮತ್ತು ತಿಲಕ್ ವರ್ಮಾ ಫಾರ್ಮ್ ಕಳೆದುಕೊಂಡಿರುವುದು ಮುಂಬಯಿ ತಂಡಕ್ಕೆ ಹಿನ್ನಡೆಯಾಗಿದೆ. ವಿಶೇಷವಾಗಿ ಬುಮ್ರಾ ಅವರು ಐಪಿಎಲ್ ಅಭಿಯಾನವನ್ನು ಗೆಲುವಿನೊಂದಿಗೆ ಕೊನೆಗೊಳಿಸಲು ಬದ್ಧರಾಗಿದ್ದಾರೆ. ಕಳೆದ ಆರು ತಿಂಗಳ ಸುದೀರ್ಘ ಬಿಡುವಿಲ್ಲದ ವೈಟ್-ಬಾಲ್ ಕ್ರಿಕೆಟ್‌ನ ನಂತರ, ಭಾರತೀಯ ವೇಗಿ ಬುಮ್ರಾ ವಿಶ್ರಾಂತಿ ಪಡೆಯಲಿಚ್ಛಿಸಿದ್ದಾರೆ.

ಪಂದ್ಯ: ವಾಂಖೆಡೆ ಕ್ರೀಡಾಂಗಣ, ಮುಂಬಯಿ
ಸಮಯ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಎರಡನೇ ಪಂದ್ಯ

ಕೋಲ್ಕೊತಾ VS ಡೆಲ್ಲಿ ಕ್ಯಾಪಿಟಲ್ಸ್
ಪಂದ್ಯ: ಈಡನ್ ಗಾರ್ಡನ್ಸ್, ಕೋಲ್ಕೊತಾ
ಸಮಯ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಗಂಭೀರ್ ಕೈಯಲ್ಲಿ ಸೂರ್ಯ ನಾಯಕತ್ವ ಭವಿಷ್ಯ



ಹೊಸದಿಲ್ಲಿ: ಭಾರತ ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರ ಭವಿಷ್ಯದ ಬಗ್ಗೆ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರ ತೀರ್ಮಾನವೇ ಅಂತಿಮ ನಿರ್ಧಾರವಾಗುವ ಸಾಧ್ಯತೆಯಿದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ. ಸೂರ್ಯಕುಮಾರ್ ಕಳೆದ ಒಂದು ವರ್ಷದಿಂದ ಫಾರ್ಮ್ ಕೊರತೆಯಿಂದ ಬಳಲುತ್ತಿದ್ದು, ಕೇವಲ ಬ್ಯಾಟರ್ ಆಗಿ ಅವರನ್ನು ತಂಡದಲ್ಲಿ ಉಳಿಸಿಕೊಳ್ಳಲು ಆಯ್ಕೆ ಸಮಿತಿಗೆ ಒಲವಿಲ್ಲ. 2028ರ ಒಲಿಂಪಿಕ್ಸ್ ಅನ್ನು ಗಮನದಲ್ಲಿಟ್ಟುಕೊಂಡು ಆಯ್ಕೆದಾರರು ಭವಿಷ್ಯದ ತಂಡದತ್ತ ಗಮನ ಹರಿಸಿದ್ದಾರೆ.

ಒಂದು ವೇಳೆ ಸೂರ್ಯಕುಮಾರ್‌ರನ್ನು ನಾಯಕತ್ವದಿಂದ ಕೆಳಗಿಳಿಸಿದರೆ, ಶ್ರೇಯಸ್ ಅಯ್ಯರ್, ಶುಬ್ಮನ್ ಗಿಲ್ ಅಥವಾ ಯುವ ಆಟಗಾರ ತಿಲಕ್ ವರ್ಮಾ ಅವರ ಹೆಸರುಗಳು ನಾಯಕತ್ವದ ರೇಸ್‌ನಲ್ಲಿ ಮುಂಚೂಣಿಯಲ್ಲಿ ಕೇಳಿಬಂದಿವೆ.

ಜಿನೇವಾ ಓಪನ್: ಭಾಂಬ್ರಿ-ವೀನಸ್ ಜೋಡಿ ರನ್ನರ್ಸ್ ಅಪ್

ಜಿನೇವಾ(ಸ್ವಿಟ್ಜರ್ಲೆಂಡ್): ಭಾರತದ ಯುಕಿ ಭಾಂಬ್ರಿ ಮತ್ತು ನ್ಯೂಜಿಲೆಂಡ್‌ನ ಮೈಕೆಲ್ ವೀನಸ್ ಜೋಡಿಯು ಜಿನೇವಾ ಓಪನ್ ಎಟಿಪಿ 250 ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ರನ್ನರ್ಸ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟಿದೆ. ಶನಿವಾರ ನಡೆದ ರೋಮಾಂಚಕ ಫೈನಲ್ ಪಂದ್ಯದಲ್ಲಿ, 3ನೇ ಶ್ರೇಯಾಂಕದ ಇಂಡೊ-ಕಿವೀಸ್ ಜೋಡಿಯು ಮೊನಾಕೊದ ರೊಮೈನ್ ಅರ್ನಿಯೊಡೊ ಮತ್ತು ಆಸ್ಟ್ರೇಲಿಯಾದ ಮಾರ್ಕ್ ಪೋಲ್ಮನ್ಸ್ ವಿರುದ್ಧ 6-3, 6-7(7), 7-10 ಸೆಟ್‌ಗಳಿಂದ ಹೋರಾಡಿ ಸೋಲು ಕಂಡಿತು.

2026ರ ಋತುವಿನಲ್ಲಿ ಭಾಂಬ್ರಿ ಮತ್ತು ವೀನಸ್ ಜೊತೆಯಾಗಿ ಆಡಿದ ಮೊದಲ ಫೈನಲ್ ಇದಾಗಿದೆ. ಮೊದಲ ಸೆಟ್ ಗೆದ್ದು ಉತ್ತಮ ಆರಂಭ ಪಡೆದರೂ, ಎದುರಾಳಿ ಜೋಡಿ ಭರ್ಜರಿ ಕಮ್‌ಬ್ಯಾಕ್ ಮಾಡಿತು.

ಏಷ್ಯನ್ ಗೇಮ್ಸ್ ಟ್ರಯಲ್ಸ್: ವಿನೇಶ್‌ಗೆ ಹೈಕೋರ್ಟ್ ಅನುಮತಿ

ಹೊಸದಿಲ್ಲಿ: ದೇಶದ ಖ್ಯಾತ ಮಹಿಳಾ ಕುಸ್ತಿಪಟು ವಿನೇಶ್ ಫೋಗಟ್ ಮುಂಬರುವ ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗವಹಿಸಲು ದಿಲ್ಲಿ ಹೈಕೋರ್ಟ್ ಹಸಿರು ನಿಶಾನೆ ನೀಡಿದೆ. ಹೆರಿಗೆ ರಜೆಯ ನಂತರ ಕಣಕ್ಕೆ ಮರಳುತ್ತಿರುವ ಅವರಂಥ ದಿಗ್ಗಜ ಆಟಗಾರ್ತಿಯನ್ನು ಪರಿಗಣಿಸದಿರುವ ಭಾರತೀಯ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ನೀತಿಯು ತಾರತಮ್ಯದಿಂದ ಕೂಡಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಮೇ 30 ಮತ್ತು 31ರಂದು ನಡೆಯಲಿರುವ ಟ್ರಯಲ್ಸ್ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ವಿಡಿಯೊ ರೆಕಾರ್ಡ್ ಮಾಡುವುದು ಮತ್ತು ಭಾರತೀಯ ಕ್ರೀಡಾ ಪ್ರಾಧಿಕಾರ ಹಾಗೂ ಐಒಎ (ಭಾರತೀಯ ಒಲಿಂಪಿಕ್ಸ್ ಸಮಿತಿ)ಯಿಂದ ಸ್ವತಂತ್ರ ವೀಕ್ಷಕರನ್ನು ನೇಮಿಸಲು ನ್ಯಾಯಾಲಯ ಆದೇಶಿಸಿದೆ.

ಪ್ರಜ್ಞಾನಂದ- ವಚಿಯರ್ ಡ್ರಾ

ಬುಕಾರೆಸ್ಟ್: ಸೂಪರ್‌ಚೆಸ್ ಕ್ಲಾಸಿಕ್‌ನ 8ನೇ ಸುತ್ತಿನಲ್ಲಿ, ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಫ್ರಾನ್ಸ್‌ನ ಮ್ಯಾಕ್ಸಿಮ್ ವಚಿಯರ್ ಲಗ್ರಾವ್ ವಿರುದ್ಧ ಡ್ರಾ ಸಾಧಿಸಿದರು. ಪ್ರಜ್ಞಾನಂದ ಅವರು ಗೆಲುವಿನ ಕೆಲವು ಉತ್ತಮ ಅವಕಾಶಗಳನ್ನು ಕೈಬಿಟ್ಟರು. ಒತ್ತಡದ ನಡುವೆಯೂ 139 ನಡೆಗಳವರೆಗೆ ಸಾಗಿದ ಈ ಪಂದ್ಯವು ಟೂರ್ನಿಯ ಅತ್ಯಂತ ದೀರ್ಘಾವಧಿಯ ಪಂದ್ಯವಾಗಿ ಡ್ರಾದಲ್ಲಿ ಕೊನೆಗೊಂಡಿತು. ಪ್ರಸ್ತುತ ಪ್ರಜ್ಞಾನಂದ 4 ಅಂಕಗಳೊಂದಿಗೆ ಜಂಟಿ 6ನೇ ಸ್ಥಾನದಲ್ಲಿದ್ದಾರೆ.

ಇತರ ಪಂದ್ಯಗಳಲ್ಲಿ, ಅಮೆರಿಕದ ಫ್ಯಾಬಿಯಾನೊ ಕಾರುವಾನಾ ಮತ್ತು ಜರ್ಮನಿಯ ವಿನ್ಸೆಂಟ್ ಕೇಮರ್ ನಡುವಿನ ಪಂದ್ಯ ಡ್ರಾ ಆಯಿತು. ಇಬ್ಬರೂ 5 ಅಂಕಗಳೊಂದಿಗೆ ಜಂಟಿ ಮುನ್ನಡೆಯಲ್ಲಿದ್ದಾರೆ. ಜವೋಖಿರ್ ಸಿಂಧರೊವ್ ಅವರು ಜೋರ್ಡನ್ ವ್ಯಾನ್ ಫಾರೆಸ್ಟ್ ವಿರುದ್ಧ ಗೆಲುವು ಸಾಧಿಸಿದರು. ಕೊನೆಯ ಸುತ್ತು ಬಾಕಿ ಇರುವಾಗ ಪ್ರಶಸ್ತಿ ರೇಸ್ ತೀವ್ರಗೊಂಡಿದ್ದು, ಐವರು ಆಟಗಾರರು ಪೈಪೋಟಿಯಲ್ಲಿದ್ದಾರೆ. ಒಟ್ಟು 3,75,000 ಯುಎಸ್ ಡಾಲರ್‌ಬಹುಮಾನದ ಮೊತ್ತವನ್ನು ಹೊಂದಿರುವ ಈ ಟೂರ್ನಿಯ ಅಂತಿಮ ಸುತ್ತಿನಲ್ಲಿ ಪ್ರಜ್ಞಾನಂದ ಅವರು ನೆದರ್ಲೆಂಡ್ಸ್‌ನ ಅನೀಶ್ ಗಿರಿ ಅವರನ್ನು ಎದುರಿಸಲಿದ್ದಾರೆ.

ಸೂಪರ್‌ಚೆಸ್ ಕ್ಲಾಸಿಕ್

ಫಿಫಾ ವಿಶ್ವಕಪ್ ಪ್ರಸಾರ ಹಕ್ಕು ಮಾರಾಟ ಮಾತುಕತೆ

ಹೊಸದಿಲ್ಲಿ: ಭಾರತವು 2026ರ ಫಿಫಾ ಫುಟ್‌ಬಾಲ್ ವಿಶ್ವಕಪ್‌ನ ಅಧಿಕೃತ ಪ್ರಸಾರ ಹಕ್ಕುಗಳನ್ನು ಪಡೆದುಕೊಳ್ಳಲು ಸಜ್ಜಾಗಿದೆ. ಸುಮಾರು 335 ಕೋಟಿ ರೂ. ಮೌಲ್ಯದ ಈ ಒಪ್ಪಂದದ ಮಾತುಕತೆ ಫಲಪ್ರದವಾಗಿರುವ ಬಗ್ಗೆ ಸುದ್ದಿ ಕೇಳಿಬಂದಿದೆ. ಯಾವ ವಾಹಿನಿ ಪ್ರಸಾರ ಹಕ್ಕು ಪಡೆದುಕೊಂಡಿದೆ ಎನ್ನುವುದರ ಅಧಿಕೃತ ಘೋಷಣೆ ಮುಂದಿನ ವಾರ ಹೊರಬೀಳುವ ನಿರೀಕ್ಷೆಯಿದೆ.

ಅಮೆರಿಕ, ಕೆನಡಾ ಮತ್ತು ಮೆಕ್ಸಿಕೊ ಜಂಟಿಯಾಗಿ ಆಯೋಜಿಸುತ್ತಿರುವ ಈ ಬಾರಿಯ ಫುಟ್‌ಬಾಲ್ ವಿಶ್ವಕಪ್‌ನಲ್ಲಿ ತಂಡಗಳ ಸಂಖ್ಯೆಯನ್ನು 48ಕ್ಕೆ ಹೆಚ್ಚಿಸಲಾಗಿದ್ದು, ಒಟ್ಟು 104 ಪಂದ್ಯಗಳು ನಡೆಯಲಿವೆ.

ಫಿಫಾ ಪಂದ್ಯಗಳು ಭಾರತೀಯ ಕಾಲಮಾನ ಪ್ರಕಾರ ಮಧ್ಯರಾತ್ರಿಯ ಆಸುಪಾಸಿನಲ್ಲಿ ನಡೆಯುವುದರಿಂದ ವೀಕ್ಷಕರಿಲ್ಲದೆ ಪ್ರಾಯೋಜಕರ ಕೊರತೆಯುಂಟಾಗುವ ಆತಂಕದ ಹಿನ್ನೆಲೆಯಲ್ಲಿ ಒಪ್ಪಂದ ಮುರಿದುಬೀಳುವ ಆತಂಕ ಎದುರಾಗಿತ್ತು. ಈಗ ಆ ಅನಿಶ್ಚಿತತೆಗೆ ಕೊನೆ ಬಿದ್ದಿದ್ದು ಭಾರತೀಯ ಫುಟ್‌ಬಾಲ್ ಅಭಿಮಾನಿಗಳಿಗೆ ಕೊನೆಗೂ ಸಿಹಿ ಸುದ್ದಿ ಸಿಕ್ಕಿದೆ.

1.5 ಕೋಟಿಗೂ ಹೆಚ್ಚು ಶ್ರಮಿಕರಿಗೆ ಪ್ರಯೋಜನ | ಕಾರ್ಮಿಕ ಇಲಾಖೆಯಿಂದ ಅಧಿಸೂಚನೆ ಪ್ರಕಟ

ಕಾರ್ಮಿಕರ ಕನಿಷ್ಠ ವೇತನ 60% ಹೆಚ್ಚಳ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದ 99 ಅಧಿಸೂಚಿತ ಉದ್ದಿಮೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಕನಿಷ್ಠ ವೇತನವನ್ನು ರಾಜ್ಯ ಸರಕಾರ ನಿಗದಿಪಡಿಸಿದ್ದು, ಸರಾಸರಿ ಶೇ.60ರಷ್ಟು ಹೆಚ್ಚಳ ಮಾಡಿ ಅಧಿಸೂಚನೆ ಹೊರಡಿಸಿದೆ.

ಇದರಿಂದಾಗಿ ಬೆಲೆ ಏರಿಕೆಗಳಿಂದ ತತ್ತರಿಸಿರುವ ರಾಜ್ಯದ ಸುಮಾರು ಒಂದೂವರೆ ಕೋಟಿಗೂ ಅಧಿಕ ಸಂಘಟಿತ, ಅಸಂಘಟಿತ ವಲಯಗಳ ಕಾರ್ಮಿಕರಿಗೆ ಬಂಪರ್ ಪ್ರಯೋಜನವಾಗಲಿದೆ.

ಕರಡು ಅಧಿಸೂಚನೆ ಹೊರಡಿಸಿ ಒಂದೂವರೆ ವರ್ಷ ಕಳೆದರೂ ಅಂತಿಮಗೊಳಿಸದೆ ಮೀನಮೇಷ ಎಣಿಸುತ್ತಿದ್ದ ಸರಕಾರ ಈಗ ಅದನ್ನು ಅಖೈರುಗೊಳಿಸಿ ಆದೇಶ ಹೊರಡಿಸಿದೆ. ಸುಪ್ರೀಂಕೋರ್ಟ್ ನಿರ್ದೇಶನದ ಅನ್ವಯ ರೆಪ್ಟೋಕೋಸ್ ಬ್ರೆಟ್ ಮಾನದಂಡ ಬಳಸಿ ವೈಜ್ಞಾನಿಕವಾಗಿ ವೇತನ ಪರಿಷ್ಕರಣೆ ಮಾಡಿರುವುದರಿಂದ ಕನಿಷ್ಠವೇತನವು ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗಿದೆ.

ಈ ಹಿಂದೆ ಕಾರ್ಮಿಕರ ಕನಿಷ್ಠ ವೇತನ ಪರಿಷ್ಕರಣೆಯಾಗಿದ್ದು 2016-17ರಲ್ಲಿ. ಅನಂತರ 2022ಕ್ಕೆ ಪರಿಷ್ಕರಣೆ ಆಗಬೇಕಿತ್ತು. ಆದರೆ ಆಗಲಿಲ್ಲ. ಚುನಾವಣೆ ಹೊಸ್ತಿಲಿನಲ್ಲಿ ಹಿಂದಿನ ಬಿಜೆಪಿ ಸರಕಾರ ಹಿಂದೆ ಇದ್ದ ವೇತನದ ಸರಾಸರಿ ಶೇ.10ರಷ್ಟನ್ನು ಹೆಚ್ಚಳ ಮಾಡಿತ್ತು. ಅದನ್ನು ಪ್ರಶ್ನಿಸಿ ಕಾರ್ಮಿಕ ಸಂಘಟನೆಗಳು ಹೈಕೋರ್ಟ್ ಮೊರೆ ಹೋಗಿದ್ದವು. ನ್ಯಾಯಾಲಯ ಎಲ್ಲಾ ಅಂಶಗಳನ್ನು ಪರಾಮರ್ಶಿಸಿ, ವೇತನ ನಿಗದಿಯನ್ನು ಪುನರ್ ಪರಿಶೀಲನೆ ಮಾಡುವಂತೆ ಸೂಚಿಸಿತ್ತು. ಅದರಂತೆ ಕಾರ್ಮಿಕ ಇಲಾಖೆ, ಕೈಗಾರಿಕೆಗಳು, ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಸೇರಿ ಎಲ್ಲರೊಂದಿಗೆ ಪ್ರತ್ಯೇಕ ಸಭೆಗಳನ್ನು ನಡೆಸಿ ವೇತನ ನಿಗದಿಪಡಿಸಿದೆ.

ಹಾಗೆಯೇ ಕಾರ್ಮಿಕ ವಲಯದ ಬೇಡಿಕೆಗೆ ಮಣಿದಿರುವ ಸರಕಾರ, ಇದೇ ಮೊದಲ ಬಾರಿಗೆ ಎಲ್ಲ ನಿಗದಿತ ಉದ್ಯೋಗಗಳನ್ನು ಒಂದೇ ಅಧಿಸೂಚನೆಯಡಿ ತಂದಿದೆ. ವೇತನ ಲೆಕ್ಕಾಚಾರಕ್ಕಾಗಿ ರಾಜ್ಯವನ್ನು ಮೂರು ವಲಯಗಳಾಗಿ ವಿಂಗಡಿಸಲಾಗಿದೆ. ಬೆಂಗಳೂರು ವಲಯ-1ರಡಿ ಬರುತ್ತದೆ. ಉಳಿದಂತೆ ವಲಯ-2ರಲ್ಲಿ ಜಿಲ್ಲಾ ಕೇಂದ್ರಗಳು ಮತ್ತು ವಲಯ-3ರಲ್ಲಿ ಉಳಿದ ಎಲ್ಲಾ ಪ್ರದೇಶಗಳು ಬರುತ್ತವೆ.

ಕೌಶಲ ಆಧರಿಸಿ ವೇತನ ನಿಗದಿ: ಕೌಶಲ ಆಧರಿಸಿ ವೇತನ ನಿಗದಿ ಮಾಡಲಾಗಿದೆ. ಕಾರ್ಮಿಕರನ್ನು ಅತಿ ಕುಶಲ, ಕುಶಲ, ಅರೆ ಕುಶಲ ಮತ್ತು ಅಕುಶಲ ಕಾರ್ಮಿಕರೆಂದು ವಿಂಗಡಿಸಲಾಗಿದೆ. ವೇತನ ಲೆಕ್ಕಾಚಾರ ಸುಲಭವಾಗಿಸಲು ಈ ಹಿಂದೆ ಇದ್ದ 4 ವಲಯಗಳ ವರ್ಗೀಕರಣವನ್ನು 3 ವಲಯಗಳಿಗೆ ಪರಿಷ್ಕರಿಸಲಾಗಿದೆ.

ಈ ಪರಿಷ್ಕೃತ ವೇತನ ಪಟ್ಟಿಯು ಅಧಿಸೂಚನೆಯು ರಾಜ್ಯದ ಒಟ್ಟು 99 ಅಧಿಸೂಚಿತ ಉದ್ಯಮಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಅನ್ವಯವಾಗಲಿದೆ. ವಲಯ-3ರ ಕುಶಲರಹಿತ ಕಾರ್ಮಿಕರ ಕನಿಷ್ಠ ಮಾಸಿಕ ವೇತನವನ್ನು 19,300 ರೂ., ವಲಯ-1ರ ಕೌಶಲಯುತ ಕಾರ್ಮಿಕರ ಕನಿಷ್ಠ ವೇತನವನ್ನು 31,100 ರೂ. ನಿಗದಿಪಡಿಸಲಾಗಿದೆ.

ವೇತನ ನಿಗದಿ ಪ್ರಕ್ರಿಯೆಯ ಭಾಗವಾಗಿ ಕಳೆದ ಎರಡು ವರ್ಷಗಳ ಕಾಲದ ವೇರಿಯಬಲ್ ಡಿಯರ್ನೆಸ್ ಅಲೋಯೆನ್ಸ್ (ವಿಡಿಎ), 1030 ರೂ.ಗಳನ್ನು ವೇತನಕ್ಕೆ ಸೇರಿಸುವ ಕಾರ್ಯವನ್ನು ಕಾರ್ಮಿಕ ಇಲಾಖೆ ಮಾಡಿದೆ. ಜತೆಗೆ ಕನಿಷ್ಠ ವೇತನ ಕಾಯಿದೆ 1948ರ ಕಲಂ 3(1)(ಬಿ) ಮತ್ತು 5(1)(ಬಿ)ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಕೌಶಲ್ಯವಾರು ಮತ್ತು ವಲಯವಾರು ವೇತನ ದರಗಳಲ್ಲಿನ ವ್ಯತ್ಯಾಸ ಸರಿಪಡಿಸಿ ಅಂತಿಮ ಅಧಿಸೂಚನೆ ಹೊರಡಿಸಿದೆ. ಪರಿಷ್ಕೃತ ಮಾಸಿಕ ಕನಿಷ್ಠ ವೇತನವು ಈಗ ಕಾರ್ಮಿಕರ ಕೌಶಲ ಮಟ್ಟ ಮತ್ತು ನಿರ್ದಿಷ್ಟ ಉದ್ಯಮವನ್ನು ಅವಲಂಬಿಸಿ ಸುಮಾರು 19,300 ರಿಂದ 31,100 ರೂ. ರವರೆಗೆ ಇರಲಿದೆ.

18 ಹೊಸ ಉದ್ದಿಮೆ ಸೇರ್ಪಡೆ

ಹಾಲಿ ಇದ್ದ 81 ಅಧಿಸೂಚಿತ ಉದ್ದಿಮೆಗಳ ಪಟ್ಟಿಗೆ ಹೊಸದಾಗಿ 18 ಉದ್ದಿಮೆಗಳನ್ನು ಸೇರ್ಪಡೆ ಮಾಡಲಾಗಿದೆ. ಅದರಲ್ಲಿ ಖಾಸಗಿ ಶಾಲೆ- ಕಾಲೇಜುಗಳ ಬೋಧಕೇತರ ಸಿಬ್ಬಂದಿ, ಇ-ಕಾಮರ್ಸ್ ಮತ್ತು ಕೊರಿಯರ್ ಸಂಸ್ಥೆಗಳ ನೌಕರರು ಹಾಗೂ ಧಾರ್ಮಿಕ ಸಂಸ್ಥೆಗಳಲ್ಲಿ ದುಡಿಯುವ ಸಿಬ್ಬಂದಿ, ಸೈಬರ್ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುವವರು, ಮೊಬೈಲ್ ಗೋಪುರಗಳ ನಿರ್ವಹಣೆ, ಟಿ.ವಿ ಕೇಬಲ್ ಜಾಲದಲ್ಲಿ ಕೆಲಸ ಮಾಡುವವರು, ಎಂ-ಸ್ಯಾಂಡ್ ಸಂಸ್ಥೆಗಳಲ್ಲಿ ಹಾಗೂ ರೆಡಿಮಿಕ್ಸ್ ಕಾಂಕ್ರೀಟ್ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರನ್ನೂ ಸೇರಿಸಲಾಗಿದೆ.

ಕಾರ್ಮಿಕರ ದೀರ್ಘಕಾಲದ ಬೇಡಿಕೆಗೆ ಸ್ಪಂದಿಸಿ ಕನಿಷ್ಠ ವೇತನ ನಿಗದಿಪಡಿಸಿ ಅಂತಿಮ ಅಧಿಸೂಚನೆ ಹೊರಡಿಸಿರುವುದು ಸ್ವಾಗತಾರ್ಹ. ಆದರೆ ಸರಕಾರ ತಕ್ಷಣದಿಂದಲೇ ಅಧಿಸೂಚನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕ್ರಮ ಕೈಗೊಳ್ಳುವ ಮೂಲಕ ಅದರ ಪ್ರಯೋಜನ ಕಾರ್ಮಿಕರಿಗೆ ಲಭ್ಯವಾಗುವಂತೆ ಮಾಡಬೇಕು.

-ಡಿ.ಎ.ವಿಜಯಭಾಸ್ಕರ್ ಪ್ರಧಾನ ಕಾರ್ಯದರ್ಶಿ, ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್

ಕನಿಷ್ಠ ವೇತನ ಹೆಚ್ಚಳವು ರಾಜ್ಯದ ಆರ್ಥಿಕತೆಗೆ ಮಹತ್ತರ ಉತ್ತೇಜನ ನೀಡಲಿದೆ. ಇದರಿಂದ ಕಾರ್ಮಿಕರ ವೆಚ್ಚದ ಸಾಮರ್ಥ್ಯ ಹೆಚ್ಚಾಗಿ, ಒಟ್ಟು ಬೇಡಿಕೆ ವೃದ್ಧಿಯಾಗುತ್ತದೆ. ಜತೆಗೆ ಸರಕು ಮತ್ತು ಸೇವೆಗಳ ಪೂರೈಕೆ ಹೆಚ್ಚಳದಿಂದ ಹೆಚ್ಚಿನ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ.

-ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ

ಯಾವ ವಲಯಕ್ಕೆ ಎಷ್ಟು ವೇತನ?

■ **ಶೌಚಾಲಯ, ಸ್ನಾನಗೃಹ, ಒಳಚರಂಡಿ ಸ್ವಚ್ಛ ಕಾರ್ಮಿಕರು**
ವಲಯ-1: 25,714 ರೂ.(ಮಾಸಿಕ),
ವಲಯ-2: 23,376 ರೂ.,
ವಲಯ-3: 21,251 ರೂ.

■ **ಉಷ್ಣವಿದ್ಯುತ್ ಉತ್ಪಾದನಾ ಘಟಕಗಳ ಕಾರ್ಮಿಕರು**
ಅತಿ ಕುಶಲ-34,225 ರೂ.(ಮಾಸಿಕ),
ಕುಶಲ- 31,114 ರೂ.
ಅರೆಕುಶಲ: 28,285 ರೂ.,
ಅಕುಶಲ- 25,714 ರೂ.

■ **ಹೋಟೆಲ್ ಮತ್ತು ಬೇಕರಿಗಳು, ಫೌಂಡ್ರಿಗಳಲ್ಲಿ ಹಾಗೂ ರಾಸಾಯನಿಕ ರಸಗೊಬ್ಬರ ಕೀಟನಾಶಕ ಉದ್ದಿಮೆಗಳಲ್ಲಿ ಕೆಲಸ ಮಾಡುವವರು**
ವಲಯ-1:
ಅತಿ ಕುಶಲ-34,225 ರೂ.(ಮಾಸಿಕ),
ಕುಶಲ-31,114 ರೂ.,
ಅರೆಕುಶಲ-28,285 ರೂ.,
ಅಕುಶಲ- 25,714 ರೂ.

■ **ವಲಯ-2**
ಅತಿ ಕುಶಲ-31,114 ರೂ.(ಮಾಸಿಕ),
ಕುಶಲ-28,285 ರೂ.,
ಅರೆಕುಶಲ-25,714 ರೂ.,
ಅಕುಶಲ- 23,376 ರೂ.

■ **ವಲಯ-3:**
ಅತಿ ಕುಶಲ-28,285 ರೂ.(ಮಾಸಿಕ),
ಕುಶಲ-25,714 ರೂ.,
ಅರೆಕುಶಲ- 23,376 ರೂ.,
ಅಕುಶಲ- 21,251 ರೂ.

ನುಸುಳುಕೋರರೆಂಬ ಶಂಕೆ, ತಪಾಸಣೆ

■ **ವಿಕ ಸುದ್ದಿಲೋಕ** ಬೆಳಗಾವಿ

ಬಾಂಗ್ಲಾದೇಶದ ನಿವಾಸಿಗಳು ಅಕ್ರಮವಾಗಿ ನಗರಕ್ಕೆ ಆಗಮಿಸುತ್ತಿದ್ದಾರೆ ಎಂಬ ಶಂಕೆ ಹಿನ್ನೆಲೆಯಲ್ಲಿ ಇಲ್ಲಿನ ಕೇಂದ್ರ ಬಸ್ ನಿಲ್ದಾಣದಲ್ಲಿ ಶನಿವಾರ ಮಧ್ಯಾಹ್ನ ಪೊಲೀಸರು ಮೂರು ಬಸ್‌ಗಳನ್ನು ತಪಾಸಣೆ ನಡೆಸಿ 20ಕ್ಕೂ ಹೆಚ್ಚು ಶಂಕಿತ ಪ್ರಯಾಣಿಕರ ದಾಖಲೆ ಪರಿಶೀಲಿಸಿದರು.

ಹುಬ್ಬಳ್ಳಿಯಿಂದ ಬೆಳಗಾವಿಗೆ ಬರುತ್ತಿರುವ ಬಸ್‌ಗಳಲ್ಲಿ ಬಾಂಗ್ಲಾ ನಿವಾಸಿಗಳು ಪ್ರಯಾಣಿಸುತ್ತಿದ್ದಾರೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಹಿಂದೂ ಸಂಘಟನೆ ಕಾರ್ಯಕರ್ತರಾದ ರವಿಕುಮಾರ ಕೋಕಿತ್ಕರ್ ಹಾಗೂ ಇತರರು ನಗರ ಕೇಂದ್ರ ಬಸ್ ನಿಲ್ದಾಣಕ್ಕೆ ಆಗಮಿಸಿ ಪೊಲೀಸ್ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಬೆಳಗಾವಿ ನಗರ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ನಾರಾಯಣ ಬರಮನಿ ನೇತೃತ್ವದ ತಂಡ ಅನುಮಾನಾಸ್ಪದ ವ್ಯಕ್ತಿಗಳ ಆಧಾರ್ ಕಾರ್ಡ್ ಸೇರಿದಂತೆ ಇತರೆ ದಾಖಲೆ ಪರಿಶೀಲಿಸಿದರು.

ಪಶ್ಚಿಮ ಬಂಗಾಳದ ಕಾರ್ಮಿಕರು: ಪೊಲೀಸರ ಪರಿಶೀಲನೆ ಮತ್ತು ವಿಚಾರಣೆ ವೇಳೆ ಇವರ್‍ಯಾರೂ ಬಾಂಗ್ಲಾದೇಶದವರಲ್ಲ, ಬದಲಿಗೆ ಪಶ್ಚಿಮ ಬಂಗಾಳ ಮೂಲದವರು ಎಂಬುದು ಪತ್ತೆಯಾಯಿತು. ಏಳೆಂಟು ವರ್ಷಗಳಿಂದ ಬೆಳಗಾವಿ ನಗರದ ಶಹಾಪುರ ಪ್ರದೇಶದಲ್ಲಿ ಬಾಡಿಗೆ ಮನೆಗಳಲ್ಲಿ ವಾಸವಿದ್ದು, ಅಕ್ಕಸಾಲಿಗರ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂಬುದು ತನಿಖೆಯಿಂದ ತಿಳಿದುಬಂದಿದೆ. ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೆಯಲ್ಲಿ ಮತದಾನ ಮಾಡಲು ಊರಿಗೆ ತೆರಳಿದ್ದ ಇವರು, ಮರಳಿ ಬೆಳಗಾವಿಗೆ ಕೆಲಸಕ್ಕೆ ವಾಪಸ್ಸಾಗುತ್ತಿದ್ದರು ಎಂಬುದು ದೃಢಪಟ್ಟ ಹಿನ್ನೆಲೆಯಲ್ಲಿ ಪೊಲೀಸರು ಎಲ್ಲರನ್ನೂ ಬಿಟ್ಟು ಕಳುಹಿಸಿದರು.

ಬೆಂಗಳೂರು ಆಟಗಾರರ ಪ್ರಾಬಲ್ಯ

ರಾಜ್ಯಮಟ್ಟದ ಬ್ಯಾಡ್ಮಿಂಟನ್ ಟೂರ್ನಿ

ವಿಜಯಪುರ: ಬೆಂಗಳೂರಿನ ಗೌತಮ್ ಎಸ್. ನಾಯರ್, ಪಿಯೂಷ್ ತ್ರಿಪಾಠಿ, ಮಹಿತಾ ನಾಯ್ಡು ಸುರಿಸೆಟ್ಟಿ ಹಾಗೂ ಆದಿತಿ ಸುಶಾಂತ ಅವರು ನಗರದಲ್ಲಿ ನಡೆದ ರಾಜ್ಯಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಕ್ರಮವಾಗಿ ಬಾಲಕರ ಹಾಗೂ ಬಾಲಕಿಯರ ವಿಭಾಗದ 15 ಹಾಗೂ 17 ವರ್ಷ ವಯೋಮಿತಿಯ ಸಿಂಗಲ್ಸ್‌ನಲ್ಲಿ ಗೆದ್ದು ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ.

ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್‌ನಿಂದ ಯೊನೆಕ್ಸ್ ಸನ್ ರೈಸ್ ಪ್ರಾಯೋಜಕತ್ವದಲ್ಲಿ ವಿಜಯಪುರದಲ್ಲಿ ಇದೇ ಮೊದಲ ಬಾರಿಗೆ ಆಯೋಜಿಸಿದ್ದ ರಾಜ್ಯಮಟ್ಟದ ಸಬ್ ಜೂನಿಯರ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ 750ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು.

7 ದಿನಗಳವರೆಗೆ ನಡೆದ ಪಂದ್ಯಾವಳಿಯಲ್ಲಿ ಉತ್ತರ ಕರ್ನಾಟಕದ ಪ್ರತಿಭೆಗಳಿಗೆ ಪ್ರೋತ್ಸಾಹ ದೊರೆತರೂ ದಕ್ಷಿಣ ಕರ್ನಾಟಕದ ಬಾಲಕ-ಬಾಲಕಿಯರೇ ಅತ್ಯುತ್ತಮ ಆಟದೊಂದಿಗೆ ಪ್ರಶಸ್ತಿ ಗಿಟ್ಟಿಸಿಕೊಂಡರು. ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಕುಮಾರ್ ಬಂಗಾರಪ್ಪ ಹಾಗೂ ಗಣ್ಯರು ವಿಜೇತರಿಗೆ ಪ್ರಶಸ್ತಿ ವಿತರಿಸಿದರು.

ಹಾರ್ಸ್ ಪವರ್
ಬೆಂಗಳೂರು ರೇಸ್ ■ ಅಶ್ವಬಂಧು

ಗೆಲುವಿನ ವಿಶ್ವಾಸದಲ್ಲಿ ಝುಕ್ಕಾರೊ

ಪೆಸಿ ಶ್ರಾಫ್ ತರಬೇತಿಯಲ್ಲಿ ಪಳಗಿರುವ ಝುಕ್ಕಾರೊ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆ ಎಚ್.ಎಚ್ ಜಯಚಾಮರಾಜ ಒಡೆಯರ್ ಕಪ್ ಗೆಲ್ಲುವ ವಿಶ್ವಾಸದಲ್ಲಿದೆ. ಎಂಟು ರೇಸ್‌ಗಳನ್ನು ಏರ್ಪಡಿಸಿದ್ದು, ಮೊದಲನೇ ರೇಸ್ ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾಗಲಿದೆ.

ನಮ್ಮ ಆಯ್ಕೆ
- 1ನೇ ರೇಸ್: ಸ್ಟಡ್ ಪೋಕರ್ 4, ಐಬಾದತ್ 2, ನೈಟ್ಸ್‌ಬ್ರಿಡ್ಜ್ 3
- 2ನೇ ರೇಸ್: ಅಟ್ಮಾನ್ 2, ನಿಂಬಸ್ ಸ್ಪೀಡ್ 3, ಎವರಿನ್ 4
- 3ನೇ ರೇಸ್: ಝೆಫಿರಿನ್ 1, ಅನ್ನಬೆಲ್ 5, ಎಲ್‌ಜೀಸ್ ಸ್ಟಾರ್ 3
- 4ನೇ ರೇಸ್: ಗ್ಲೋರಿಯಸ್ ಸ್ಟ್ರೈಡ್ಸ್ 2, ಸ್ಟಾರ್ ಆಫ್ ಇಂಡಿಯಾ 1, ಅಜಾಲಿಯಾ 7
- 5ನೇ ರೇಸ್: ಫೋರ್ಟಿಸ್ 6, ಸ್ಮಾಲ್ ಡ್ರೀಮ್ಸ್ 4, ವಿನ್ ವಿನ್ 5
- 6ನೇ ರೇಸ್: ಝುಕ್ಕಾರೊ 4, ಡ್ಯೂಕ್ ಆಫ್ ಟಸ್ಕನಿ 1, ಸೀಝರ್ ಕರೇಜಿಯಸ್ 5
- 7ನೇ ರೇಸ್: ಮಿಸ್ಟಿಕೋಸ್ 2, ಸದರ್ನ್ ಫೋರ್ಸ್ 1, ಬ್ರೀಝ್ ಬ್ಲಸ್ಟರ್ 8
- 8ನೇ ರೇಸ್: ಸೆಂಟ್ ಆಫ್ ರೈನ್ 7, ಜೇಡ್ ಮೌಂಟೇನ್ 2, ಗ್ಲೋರಿಯಸ್‌ನೆಸ್ 1

ಮಲ್ಟಿಲೆಗ್ ಪೂಲ್ಸ್:
- ಜಾಕ್‌ಪಾಟ್: 4, 5, 6, 7, 8; 1ನೇ ಟ್ರೆಬಲ್: 3, 4, 5; 2ನೇ ಟ್ರೆಬಲ್: 6, 7, 8

ಅತ್ಯುತ್ತಮ ಬೆಟ್: ಅಟ್ಮಾನ್

ಆರೋಪಿ ಪತ್ನಿಗೆ ಜಾಮೀನು ನಿರಾಕರಣೆ

ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಗಂಡನ ಕೊಲೆ

■ **ವಿಕ ಸುದ್ದಿಲೋಕ** ಬೆಂಗಳೂರು

ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಪತಿಯನ್ನು ಪ್ರಿಯಕರನೊಂದಿಗೆ ಸೇರಿ ಕೊಲೆ ಮಾಡಿರುವ ಆರೋಪ ಹೊತ್ತಿರುವ ಮಹಿಳೆಗೆ ಹೈಕೋರ್ಟ್ ಜಾಮೀನು ನೀಡಲು ನಿರಾಕರಿಸಿದೆ.

ಪ್ರಕರಣದ 2ನೇ ಆರೋಪಿಯಾಗಿರುವ ಚಿತ್ರದುರ್ಗದ ಸುನೀತಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ. ಶ್ರೀಷಾನಂದ ಅವರಿದ್ದ ರಜಾಕಾಲದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯ, ''ಘಟನೆಯ ವಾಸ್ತವಾಂಶಗಳನ್ನು ಪರಿಶೀಲಿಸಿದರೆ, ಮೊದಲ ಆರೋಪಿ ಮತ್ತು ಅರ್ಜಿದಾರ ಮಹಿಳೆ (ಎರಡನೇ ಆರೋಪಿ) ನಡುವಿನ ಅಕ್ರಮ ಸಂಬಂಧ ದೃಢವಾಗುತ್ತದೆ. ಹಾಗಾಗಿ, ಪ್ರಕರಣದ ಮುಖ್ಯ ಸಾಕ್ಷಿದಾರರ ವಿಚಾರಣೆ ಇನ್ನೂ ಬಾಕಿ ಇರುವುದರಿಂದ ಈ ಹಂತದಲ್ಲಿ ಆರೋಪಿಗೆ ಜಾಮೀನು ನೀಡಿದರೆ ಸಾಕ್ಷ್ಯಗಳನ್ನು ನಾಶಪಡಿಸುವ ಅಥವಾ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಹೆಚ್ಚಿದೆ. ಆದ್ದರಿಂದ ಜಾಮೀನು ನಿರಾಕರಿಸಲಾಗುತ್ತಿದೆ,'' ಎಂದು ಹೇಳಿದೆ.

ಅರ್ಜಿದಾರರ ಪರ ವಕೀಲರ ವಾದ ತಳ್ಳಿಹಾಕಿರುವ ಹೈಕೋರ್ಟ್, ಕೇವಲ ಮಹಿಳೆ ಎಂಬ ಕಾರಣಕ್ಕೆ ಅಥವಾ ಆರೋಪಪಟ್ಟಿ ಸಲ್ಲಿಕೆಯಾಗಿದೆಯೆಂಬ ಕಾರಣಕ್ಕೆ ಜಾಮೀನು ನೀಡಲು ಸಾಧ್ಯವಿಲ್ಲ. ಆದರೆ, ಪ್ರಕರಣದ ಪ್ರಮುಖ ಸಾಕ್ಷಿಗಳ ವಿಚಾರಣೆ ಮುಗಿದ ನಂತರ ಪರಿಸ್ಥಿತಿಯಲ್ಲಿ ಸಕಾರಾತ್ಮಕ ಬದಲಾವಣೆಗಳಿದ್ದಲ್ಲಿ ಮತ್ತೊಮ್ಮೆ ಜಾಮೀನು ಕೋರಿ ಅರ್ಜಿ ಸಲ್ಲಿಸಬಹುದು ಎಂದು ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಅರ್ಜಿದಾರರ ಪರ ವಕೀಲರು, ''ಪ್ರಕರಣವು ಸಂಪೂರ್ಣವಾಗಿ ಸಾಂದರ್ಭಿಕ ಸಾಕ್ಷ್ಯಗಳ ಆಧಾರದ ಮೇಲಿದ್ದು, ಅರ್ಜಿದಾರರನ್ನು ಅನಗತ್ಯವಾಗಿ ಪ್ರಕರಣದಲ್ಲಿ ಸಿಲುಕಿಸಲಾಗಿದೆ. ಅಲ್ಲದೆ, ಅರ್ಜಿದಾರರು ಮಹಿಳೆಯಾಗಿರುವುದರಿಂದ ಜಾಮೀನು ನೀಡಬೇಕು,'' ಎಂದು ಕೋರಿದ್ದರು.

ಪ್ರಕರಣದ ಹಿನ್ನೆಲೆ: ಆಟೊ ಚಾಲಕರಾಗಿದ್ದ ರವಿಕುಮಾರ್ ಎಂಬುವರ ಮೃತದೇಹವು 2025ರ ಜು.20ರಂದು ಚಿತ್ರದುರ್ಗದ ಶಿವಮೂರ್ತಿ ಬಡಾವಣೆಯಲ್ಲಿ ಪತ್ತೆಯಾಗಿತ್ತು. ಮೃತರ ತಲೆ ಮತ್ತು ಗುಪ್ತಾಂಗದ ಭಾಗಕ್ಕೆ ತೀವ್ರ ಗಾಯಗಳಾಗಿದ್ದವು. ಪ್ರಕರಣ ಸಂಬಂಧ ಮೃತರ ಪುತ್ರ ವಿಷ್ಣು ಚಿತ್ರದುರ್ಗದ ಗ್ರಾಮೀಣ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಪಪೂ ಇಲಾಖೆಗೆ ನೋಡಲ್ ಸಂಸ್ಥೆಗಳ ನೇಮಕ

■ **ವಿಕ ಸುದ್ದಿಲೋಕ** ಬೆಂಗಳೂರು

ಶೈಕ್ಷಣಿಕ ನಿರಂತರತೆ ಹಾಗೂ ಸಂಸ್ಥಾತ್ಮಕ ಸಾಮರ್ಥ್ಯವನ್ನು ಬಲಪಡಿಸಲು 2026-27ನೇ ಶೈಕ್ಷಣಿಕ ವರ್ಷದಿಂದ ಪದವಿಪೂರ್ವ ಶಿಕ್ಷಣ ಇಲಾಖೆಗೆ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ(ಡಿಎಸ್‌ಇಆರ್‌ಟಿ) ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯನ್ನು (ಡಯಟ್) ನೋಡಲ್ ಸಂಸ್ಥೆಗಳಾಗಿ ನೇಮಿಸಿ ಸರಕಾರ ಆದೇಶ ಹೊರಡಿಸಿದೆ.

ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರು, ಪ್ರಾಂಶುಪಾಲರು ಹಾಗೂ ಬೋಧಕೇತರ ಸಿಬ್ಬಂದಿ ಸೇರಿದಂತೆ ಎಲ್ಲಾ ವೃಂದದ ಸಿಬ್ಬಂದಿಗೆ ತರಬೇತಿ, ಶೈಕ್ಷಣಿಕ ಸಂಶೋಧನೆ, ಪಠ್ಯಕ್ರಮ ಅಭಿವೃದ್ಧಿ ಹಾಗೂ ಮೌಲ್ಯಮಾಪನ ಚಟುವಟಿಕೆಗಳಲ್ಲಿ ಅಗತ್ಯ ಬೆಂಬಲ ನೀಡಲು ಈ ಕ್ರಮ ಕೈಗೊಳ್ಳಲಾಗಿದೆ.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಪದವಿಪೂರ್ವ ಶಿಕ್ಷಣ ಇಲಾಖೆಯ ಅಗತ್ಯಗಳನ್ನು ಒಳಗೊಂಡ ಸಮಗ್ರ ವಾರ್ಷಿಕ ಕ್ರಿಯಾ ಯೋಜನೆ ತಯಾರಿಸಬೇಕು. ರಾಜ್ಯ ಮತ್ತು ಕೇಂದ್ರ ಸರಕಾರ ಸಂಬಂಧಿತ ಯೋಜನೆಗಳಲ್ಲಿ ಪದವಿಪೂರ್ವ ಶಿಕ್ಷಣದ ಅಂಶಗಳನ್ನು ಸಮನ್ವಯಗೊಳಿಸಬೇಕು. ಪ್ರತಿ ವರ್ಷ ಶೈಕ್ಷಣಿಕ ವರ್ಷದ ಆರಂಭದಲ್ಲಿ ಶಾಲಾ ಶಿಕ್ಷಣ ಇಲಾಖೆ(ಪದವಿಪೂರ್ವ) ಜತೆಗೆ ಚರ್ಚಿಸಿ ಡಿಎಸ್‌ಇಆರ್‌ಟಿ ಶಾಲಾ ಶಿಕ್ಷಣ ಇಲಾಖೆ(ಪದವಿಪೂರ್ವ)ದಲ್ಲಿ ವರ್ಷವಿಡೀ ನಡೆಯುವ ಚಟುವಟಿಕೆಗಳನ್ನು ಪ್ರಕಟಿಸಬೇಕು ಎಂದು ನಿರ್ದೇಶಿಸಲಾಗಿದೆ.

ಶಾಲಾ ಶಿಕ್ಷಣ ಇಲಾಖೆ(ಪದವಿಪೂರ್ವ)ದಲ್ಲಿ ಶೈಕ್ಷಣಿಕ ಮತ್ತು ತರಬೇತಿ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ಸಮರ್ಥ ಸಿಬ್ಬಂದಿ ಕೊರತೆಯಿದೆ. ತರಬೇತಿ ಕಾರ್ಯಕ್ರಮಗಳ ಯೋಜನೆ ಮತ್ತು ಅನುಷ್ಠಾನದಲ್ಲಿ ಏಕೀಕೃತ ಸಮ್ಮಿಲನದ ಕೊರತೆ ಉಂಟಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಆಯುಕ್ತರು ಪ್ರಸ್ತಾವನೆ ಸಲ್ಲಿಸಿದ ಹಿನ್ನೆಲೆಯಲ್ಲಿ ಸರಕಾರ ಈ ಆದೇಶ ಹೊರಡಿಸಿದೆ.